ಶನಿವಾರ, ಫೆಬ್ರುವರಿ 19, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ

ಮುಂಬೈನಲ್ಲಿ ಶುಕ್ರವಾರ 'ಗೆಹರಾಯಿಯಾ' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ

ಹಿಜಾಬ್ ವಿವಾದ: ತುಮಕೂರಿನ ಜೈನ್ ಪದವಿಪೂರ್ವ ಕಾಲೇಜಿನ ಅತಿಥಿ ಉಪನ್ಯಾಸಕಿ ರಾಜೀನಾಮೆ

ವಿದ್ಯಾರ್ಥಿನಿಯರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಧರಿಸಿ ತರಗತಿಗೆ ಹಾಜರಾಗಲು ಅವಕಾಶ ನೀಡುವಂತೆ ಆಗ್ರಹಿಸಿ ವಿವಿಧ ಜಿಲ್ಲೆಗಳಲ್ಲಿ ವಿದ್ಯಾರ್ಥಿನಿಯರು ಶುಕ್ರವಾರವೂ ಪ್ರತಿಭಟನೆ ನಡೆಸಿದ್ದಾರೆ. ಕೆಲವೆಡೆ ಕಾಲೇಜು ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಯಾಗಿದ್ದು ಪೊಲೀಸ್ ಭದ್ರತೆಯಲ್ಲಿ ತರಗತಿಗಳು ನಡೆದವು. ಪ್ರಮುಖ ಕಾಲೇಜುಗಳ ಎದುರು ಪೊಲೀಸರ ತಂಡ ಬೀಡುಬಿಟ್ಟಿತ್ತು.

ಹಿಜಾಬ್ ಧರಿಸಿ ತರಗತಿಗೆ ಹಾಜರಾಗಲು ಅವಕಾಶ ನೀಡುವಂತೆ ಆಗ್ರಹಿಸಿ ತುಮಕೂರು ನಗರದ ಬಿಜಿಎಸ್ ವೃತ್ತದಲ್ಲಿ ಪ್ರತಿಭಟನೆಗೆ ಮುಂದಾಗಿದ್ದ ಎಂಪ್ರೆಸ್ ಕರ್ನಾಟಕ ಪಬ್ಲಿಕ್ ಶಾಲೆಯ 10ಕ್ಕೂ ಹೆಚ್ಚು ವಿದ್ಯಾರ್ಥಿನಿಯರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಹಿಜಾಬ್ ಧರಿಸಿ ಕಾಲೇಜಿಗೆ ಬರಲು ಅವಕಾಶ ನೀಡದಿರುವುದನ್ನು ಪ್ರತಿಭಟಿಸಿ ತುಮಕೂರಿನ ಜೈನ್ ಪದವಿಪೂರ್ವ ಕಾಲೇಜಿನ ಅತಿಥಿ ಉಪನ್ಯಾಸಕಿ ರಾಜೀನಾಮೆ ನೀಡಿದ್ದಾರೆ.

ವಿಜಯಪುರ ಜಿಲ್ಲೆ ಇಂಡಿ ಪಟ್ಟಣದ ಸರ್ಕಾರಿ ಪದವಿ ಕಾಲೇಜಿನಲ್ಲಿ, ಹಣೆಗೆ ತಿಲಕವಿಟ್ಟುಕೊಂಡ ಬಂದ ವಿದ್ಯಾರ್ಥಿಗೆ ತರಗತಿ ಪ್ರವೇಶಕ್ಕೆ ಉಪನ್ಯಾಸಕರು ಅವಕಾಶ ನೀಡಲಿಲ್ಲ. ಹೀಗಾಗಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿ ನಡುವೆ ವಾಗ್ವಾದ ನಡೆದಿದೆ. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಇಬ್ಬರನ್ನೂ ಸಮಾಧಾನ ಪಡಿಸಿದರು.

ಬೆಳಗಾವಿಯ ಸದಾಶಿವ ನಗರದ ವಿಜಯಾ ಅರೆವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು, ಗೋಕಾಕದ ಫಾಲ್ಸ್ ರಸ್ತೆಯ ಜಿಎಸ್‌ಎಸ್ ಪಿಯು ಕಾಲೇಜು ಹಾಗೂ ಹಾವೇರಿ ಜಿಲ್ಲೆಯ ಹಿರೇಕೆರೂರು ಪಟ್ಟಣದ ಕೆ.ಎಚ್. ಪಾಟೀಲ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ, ತರಗತಿಗೆ ಹಾಜರಾಗಲು ಅನುಮತಿಗೆ ಪಟ್ಟು ಹಿಡಿದರು. ಆದರೆ, ಅವಕಾಶ ನೀಡಲಿಲ್ಲ.

ಶಿವಮೊಗ್ಗದ ದೇಶಿಯ ವಿದ್ಯಾಶಾಲಾ ಸಮಿತಿ ಪದವಿ ಪೂರ್ವ ಕಾಲೇಜಿಗೆ ಶುಕ್ರವಾರ ತನ್ನ ಗೆಳತಿಯೊಂದಿಗೆ ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿ —ಪಿಟಿಐ ಚಿತ್ರ

ಖಾನಾಪುರ ತಾಲ್ಲೂಕಿನ ನಂದಗಡ ಪದವಿ ಕಾಲೇಜು, ಅಥಣಿ ಪಟ್ಟಣದ ಕೆ.ಎ. ಲೋಕಾಪೂರ ಕಾಲೇಜಿನಲ್ಲಿ ಕೆಲವು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬಂದಿದ್ದರು.

ಚಿತ್ರದುರ್ಗ ನಗರದ ಎಸ್‌ಆರ್‌ಎಸ್ ಶಿಕ್ಷಣ ಸಂಸ್ಥೆಯ ಪದವಿ ವಿದ್ಯಾರ್ಥಿಗಳು 'ಹಿಜಾಬ್ ನಮ್ಮ ಹಕ್ಕು' ಎಂದು ಪಟ್ಟುಹಿಡಿದು ಪ್ರತಿಭಟನೆ ನಡೆಸಿದರು.

ಈ ವೇಳೆ ಕಾಲೇಜಿನ ಒಳಾಂಗಣದಲ್ಲಿದ್ದ ವಿದ್ಯಾರ್ಥಿಗಳು 'ಜೈ ಶ್ರೀರಾಮ್' ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಪ್ರತಿಭಟನನಿರತ ವಿದ್ಯಾರ್ಥಿನಿಯರು, 'ನಾವೂ ಅಲ್ಲಾ...' ಎಂದು ಕೂಗಿದರೆ ಏನಾಗುತ್ತದೆ ಎಂದು ಪೊಲೀಸರ ಜತೆ ವಾಗ್ವಾದ ನಡೆಸಿದರು.

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರಿನಲ್ಲಿ ಹಿಜಾಬ್ ಧರಿಸಲು ಅವಕಾಶ ನಿರಾಕರಿಸಿದ್ದರಿಂದ ವಿದ್ಯಾರ್ಥಿನಿಯರು ಮನೆಗೆ ವಾಪಸಾದರು.

ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್‌ಗಾಗಿ ಕಾನೂನು ಹೋರಾಟ ನಡೆಸುತ್ತಿರುವ ವಿದ್ಯಾರ್ಥಿನಿಯರು ಶುಕ್ರವಾರವೂ ಗೈರಾಗಿದ್ದರು. ಉಳಿದ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಇಲ್ಲದೆ ತರಗತಿಗೆ ಹಾಜರಾದರು.

ಕೋರ್ಟ್‌ಗೆ ದಾಖಲೆ: 'ಉಡುಪಿ ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿನಿಯರ ವೈಯಕ್ತಿಕ ದಾಖಲೆಗಳನ್ನು ಬಹಿರಂಗಪಡಿಸಿಲ್ಲ' ಎಂದು ಶಾಸಕ ರಘುಪತಿ ಭಟ್ ಸ್ಪಷ್ಟಪಡಿಸಿದರು.

'ಪ್ರತಿಭಟನನಿರತ ವಿದ್ಯಾರ್ಥಿನಿಯರು ಹಿಂದೆಯೂ ಹಿಜಾಬ್ ಧರಿಸುತ್ತಿದ್ದೆವು ಎಂದು ಸುಳ್ಳು ಹೇಳಿದ್ದರು. ತರಗತಿಯಲ್ಲಿ ಹಿಜಾಬ್ ಧರಿಸದೆ ಪಾಠ ಕೇಳುತ್ತಿದ್ದ ಸಿಸಿಟಿವಿ ಕ್ಯಾಮೆರಾ ಸಾಕ್ಷ್ಯಗಳಿದ್ದು, ಅವುಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿಲ್ಲ. ಕೋರ್ಟ್‌ಗೆ ಮಾತ್ರ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಎಫ್‌ಐಆರ್: ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಶಾಲಾ– ಕಾಲೇಜುಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ತುಮಕೂರು ಜಿಲ್ಲಾಧಿಕಾರಿ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಇದನ್ನು ಉಲ್ಲಂಘಿಸಿ ಪ್ರತಿಭಟನೆಗೆ ಮುಂದಾದ ವಿದ್ಯಾರ್ಥಿನಿಯರ ಮೇಲೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ರಾಜೀನಾಮೆ: ಹಿಜಾಬ್ ಧರಿಸಿ ಕಾಲೇಜಿಗೆ ಬರಲು ಅವಕಾಶ ನೀಡದಿರುವುದನ್ನು ಪ್ರತಿಭಟಿಸಿ ನಗರದ ಜೈನ್ ಪದವಿಪೂರ್ವ ಕಾಲೇಜಿನ ಇಂಗ್ಲಿಷ್ ವಿಷಯದ ಅತಿಥಿ ಉಪನ್ಯಾಸಕಿ ಚಾಂದಿನಿ ರಾಜೀನಾಮೆ ಸಲ್ಲಿಸಿದ್ದಾರೆ.

ಅಮಾನತು: ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದ ಕರ್ನಾಟಕ ಪಬ್ಲಿಕ್ ಶಾಲೆಯ 11 ಮತ್ತು 12ನೇ ತರಗತಿಯ 58 ವಿದ್ಯಾರ್ಥಿನಿಯರನ್ನು ಶಾಲಾ ಆಡಳಿತ ಮಂಡಳಿ ಅಮಾನತು ಮಾಡಿದೆ.

ಶಿವಮೊಗ್ಗ ನಗರದ ಸಹ್ಯಾದ್ರಿ ಕಾಲೇಜು, ಡಿವಿಎಸ್, ಕಸ್ತೂರಬಾ ಕಾಲೇಜು, ಭದ್ರಾವತಿಯ ಸಂಚಿಹೊನ್ನಮ್ಮ ಕಾಲೇಜಿನ ಮಕ್ಕಳು ತರಗತಿ ಬಹಿಷ್ಕರಿಸಿ ಮನೆಗೆ ಮರಳಿದರು. ಗುಂಡ್ಲುಪೇಟೆಯ ಗೌತಮ ಪ್ರೌಢಶಾಲೆಯಲ್ಲಿ ಹಿಜಾಬ್ ಧರಿಸಿ ಬಂದಿದ್ದ ಇಬ್ಬರು ವಿದ್ಯಾರ್ಥಿನಿಯರು ತರಗತಿಗೆ ಪ್ರವೇಶ ದೊರಕದೆ ಹೊರಗಡೆಯೇ ಉಳಿದರು. ಹಾಸನದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಹಾಗೂ ಅರಸೀಕೆರೆಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ಪ್ರತಿಭಟಿಸಿದರು.

ಮಾಗಡಿ ತಾಲ್ಲೂಕಿನ ಕುದೂರಿನಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯ ಪಿ.ಯು ವಿಭಾಗದ ವಿದ್ಯಾರ್ಥಿನಿಯರು ಶುಕ್ರವಾರವೂ ಪ್ರತಿಭಟನೆ ನಡೆಸಿದರು.

ದಾವಣಗೆರೆ ಜಿಲ್ಲೆಯ ಹರಿಹರ, ಮಲೇಬೆನ್ನೂರು, ಸಾಸ್ವೇಹಳ್ಳಿಯಲ್ಲಿ ಹಿಜಾಬ್ ಧರಿಸಿ ಬಂದ ಕಾರಣ ತರಗತಿಯೊಳಗೆ ಪ್ರವೇಶಿಸಲು ಅನುಮತಿ ಸಿಗದೆ ವಿದ್ಯಾರ್ಥಿನಿಯರು ಹೊರಗಡೆ ಕಾದು ಕುಳಿತು ಮನೆಗಳಿಗೆ ಮರಳಿದರು.

'ವಿಷ ಕೊಡಲಿ, ಕುಡಿದು ಸಾಯುತ್ತೇವೆ'

ಮೈಸೂರು: ಹಿಜಾಬ್ ನಿಷೇಧ ವಿರೋಧಿಸಿ ಮೈಸೂರು ಭಾಗದಲ್ಲಿ ವಿದ್ಯಾರ್ಥಿನಿಯರ ಆಕ್ರೋಶ ಶುಕ್ರವಾರವೂ ಮುಂದುವರಿಯಿತು.

ಹಾಸನದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಯರು, 'ವಿಷ ಕೊಡಲಿ, ಕುಡಿದು ಸಾಯುತ್ತೇವೆ. ಆದರೆ, ಸಮಸ್ಯೆ ಇಂದೇ ಇತ್ಯರ್ಥ ಆಗಬೇಕು' ಎಂದು ಪಟ್ಟು ಹಿಡಿದರೆ, ಮಡಿಕೇರಿಯ ಜೂನಿಯರ್ ಕಾಲೇಜಿನಲ್ಲಿ ಪ್ರತಿಭಟಿಸಿದ ವಿದ್ಯಾರ್ಥಿನಿಯರನ್ನು ಬಂಧಿಸುವಂತೆ ಪ್ರಾಂಶುಪಾಲರು ಸ್ಥಳದಲ್ಲಿದ್ದ ಪೊಲೀಸರಿಗೆ ಹೇಳಿದ ಘಟನೆ ನಡೆಯಿತು.

'ನ್ಯಾಯಾಲಯದ ನಿರ್ದೇಶನದಂತೆ ಹಿಜಾಬ್ ತೆಗೆದಿಟ್ಟು ಬನ್ನಿ' ಎಂಬ ಸೂಚನೆ ಒಪ್ಪದ ವಿದ್ಯಾರ್ಥಿನಿಯರು, ತರಗತಿಗೆ ಪ್ರವೇಶಿಸಲು ಅವಕಾಶ ನೀಡುವಂತೆ ಪಟ್ಟು ಹಿಡಿದರು. ಆಗ ಸಿಟ್ಟಾದ ಪ್ರಾಂಶುಪಾಲ ವಿಜಯ್, 'ನಾನೇ ಇವರ ವಿರುದ್ಧ ದೂರು ಕೊಡುವೆ, ಬಂಧಿಸಿ ಕ್ರಮ ಕೈಗೊಳ್ಳಿ' ಎಂದು ಸ್ಥಳದಲ್ಲಿದ್ದ ಪೊಲೀಸರಲ್ಲಿ ಮನವಿ ಮಾಡಿದರು.

ಎಸ್‌ಡಿಪಿಐ ಮಧ್ಯಪ್ರವೇಶ

ಮೈಸೂರು: ಹುಣಸೂರು ನಗರದ ಸರ್ಕಾರಿ ಮಹಿಳಾ ಪ್ರಥಮದರ್ಜೆ ಕಾಲೇಜಿನಲ್ಲಿ ಹಿಜಾಬ್ ಧರಿಸಿ ಬಂದು ಪ್ರವೇಶ ನೀಡುವಂತೆ ಪ್ರತಿಭಟಿಸಿದ 35 ವಿದ್ಯಾರ್ಥಿನಿಯರಿಗೆ ಎಸ್‌ಡಿಪಿಐ ಸಂಘಟನೆಯ ಸದಸ್ಯರು ಬೆಂಬಲ ನೀಡಿ, ಸಿಬ್ಬಂದಿಯೊಂದಿಗೆ ವಾಗ್ವಾದ ಆರಂಭಿಸಿದರು. ಮಧ್ಯಪ್ರವೇಶಿಸಿದ ಪೊಲೀಸರು, 'ನಿಷೇಧಾಜ್ಞೆ ಜಾರಿಯಲ್ಲಿದ್ದು, ವಾಪಸ್ ತೆರಳಿ' ಎಂದು ಸೂಚಿಸಿದರು.

ಹಿಜಾಬ್ ಕಳಚಿ ತರಗತಿಗೆ ಹಾಜರಾಗಲು ನಿರಾಕರಿಸಿದ ಮೈಸೂರು ನಗರದ ರಾಜೀವ್ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳನ್ನು ಆರಂಭಿಸಲಾಗಿದೆ.

ಅಭಿಯಾನ:ಕೋಮು ಸಾಮರಸ್ಯ ಕುರಿತು ಸ್ವಾಮಿ ವಿವೇಕಾನಂದ, ಕುವೆಂಪು, ಭಗತ್ ಸಿಂಗ್, ಸುಭಾಷ್ ಚಂದ್ರಬೋಸ್ ಅವರ ಸೂಕ್ತಿಗಳನ್ನು ಗೋಡೆಗಳ ಮೇಲೆ ಬರೆಯುವ ಅಭಿಯಾನಕ್ಕೆ ಎಐಡಿಎಸ್‌ಒ ಚಾಲನೆ ನೀಡಿದೆ.

ಸುದ್ದಿ 2 ನಿಮಿಷ

ಒದ್ದು ಒಳಗೆ ಹಾಕಿ: ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ವಿದ್ಯಾರ್ಥಿಗಳಿಗೆ ಹಿಜಾಬ್ ಹಾಕಿಸಲು ಅಥವಾ ತೆಗೆಸಲು ಕಾಲೇಜು ಬಳಿ ಯಾರು ಬರುತ್ತಾರೋ, ಅವರನ್ನು ಒದ್ದು ಒಳಗೆ ಹಾಕಬೇಕು' ಎಂದು ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಲಹೆ ಮಾಡಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಲ್ಲವನ್ನೂ ಸಹಿಸಿಕೊಂಡು ಸುಮ್ಮನೆ ಕೂರಲು ಆಗುವುದಿಲ್ಲ. ಎಷ್ಟು ದಿನ ಸಂಭಾಳಿಸುವುದು? ನ್ಯಾಯಾಲಯದ ಆದೇಶ ಉಲ್ಲಂಘನೆಗೆ ವಿದ್ಯಾರ್ಥಿಗಳನ್ನು ಉತ್ತೇಜಿಸುವವರ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದರು.



'ನ್ಯಾಯಾಲಯದ ಮಧ್ಯಂತರ ಆದೇಶ ಪಾಲಿಸಬೇಕು. ಈಗ ಇದನ್ನು ಪಾಲಿಸದವರು ಮುಂದೆ ಅಂತಿಮ ಆದೇಶವನ್ನೂ ಪಾಲಿಸುವುದಿಲ್ಲ ಎಂದು ಹೇಳಬಹುದು. ಅಂಥವರ ವಿರುದ್ಧ ಕಠಿಣ ಕ್ರಮಕ್ಕೆ ರಾಜ್ಯ ಸರ್ಕಾರ ಮುಂದಾಗಬೇಕು' ಎಂದರು.

ಕಾಂಗ್ರೆಸ್‌ಗೆ ಧರಣಿ ಮಾಡುವುದೇ ಕೆಲಸವಾಗಿದೆ. ಮುಂದಿನ ಐದು–ಹತ್ತು ವರ್ಷ ಧರಣಿ ಮಾಡುವಂತೆಯೇ ದೇವರು ಅವರಿಗೆ ಆಶೀರ್ವಾದ ಮಾಡಲಿ ಎಂದು ವ್ಯಂಗ್ಯವಾಡಿದರು.

'ಬಟ್ಟೆಗಳಿಗಿಂತ ಬದುಕು ಮುಖ್ಯ'

ದಾವಣಗೆರೆ: 'ನಾವು ತೊಡುವ ಬಟ್ಟೆಗಳಿಗಿಂತ ಬದುಕು ಮುಖ್ಯ. ಜಾತಿ ಮನೋಭಾವವನ್ನು ತಳ್ಳಿಹಾಕಿ ಮನುಕುಲ ಒಂದು ಎನ್ನುವ ಭಾವನೆ ಮೂಡಿಸಬೇಕಿದೆ' ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

'ಹಿಜಾಬ್–ಕೇಸರಿ ಶಾಲು ವಿವಾದ' ಕುರಿತು ಶುಕ್ರವಾರ ಇಲ್ಲಿ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಸ್ವಾಮೀಜಿ ಈ ರೀತಿ ಉತ್ತರಿಸಿದರು.

'ಇವತ್ತಿನ ದಿನಮಾನಗಳಲ್ಲಿ ಸಾಮರಸ್ಯ ಕದಡುವಂತಹ ಅನೇಕ ಕಹಿ ಘಟನೆಗಳನ್ನು ನಾವು ನೋಡುತ್ತಿದ್ದೇವೆ. ಅದರಲ್ಲೂ ವಿದ್ಯಾರ್ಥಿ ವರ್ಗವನ್ನು ಗಮನದಲ್ಲಿಟ್ಟುಕೊಂಡು ಅವರಲ್ಲಿ ಜಾತಿಯ ಮನೋಭಾವವನ್ನು ಬಿತ್ತುತ್ತಿರುವುದು ತುಂಬ ದುರದೃಷ್ಟಕರ' ಎಂದು ವಿಷಾದಿಸಿದರು.

'ಶರಣರು ಹೇಳಿರುವಂತೆ ಇವನಾರವ, ಇವನಾರವ ಎನ್ನದೇ, ಇವ ನಮ್ಮವ ಇವ ನಮ್ಮವ ಎಂಬಂತೆ ಎಲ್ಲರನ್ನೂ ಒಪ್ಪಿಕೊಳ್ಳಬೇಕು. ಇಂತಹ ಸಂದೇಶಗಳನ್ನು ಎಲ್ಲಾ ಮಕ್ಕಳು, ಸಾರ್ವಜನಿಕರು, ರಾಜಕೀಯ ನೇತಾರರಲ್ಲಿ ಬೆಳೆಸಿದರೆ ಸಮಾಜದಲ್ಲಿರುವ ಅನಿಷ್ಟಗಳನ್ನು ಹೋಗಲಾಡಿಸಲು ಸಾಧ್ಯ. ಅಂತಹ ಧೀಶಕ್ತಿಯನ್ನು ಶರಣರು ಎಲ್ಲರಿಗೂ ಕರುಣಿಸಲಿ' ಎಂದು ಹಾರೈಸಿದರು.

ಹಿಜಾಬ್: ಸರ್ಕಾರಕ್ಕೆ ಹೈಕೋರ್ಟ್ 'ಛೂ ಬಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೈಕ್ಷಣಿಕ ಸಂಸ್ಥೆಗಳಲ್ಲಿನ ಸಮವಸ್ತ್ರಕ್ಕೆ ಸಂಬಂಧಿಸಿದಂತೆ ಸರ್ಕಾರ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ಈ ಕುರಿತಂತೆ ಉನ್ನತ ಮಟ್ಟದ ಸಮಿತಿಯ ಕುರಿತಾಗಿ ಸರ್ಕಾರದ ಮನಸ್ಸಿನಲ್ಲಿ ಏನಿದೆ ಎಂಬುದು ನನಗೆ ಗೊತ್ತಿಲ್ಲ' ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದ್ದಾರೆ.

ಹಿಜಾಬ್ ಧರಿಸಿ ತರಗತಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ-ಕಾಲೇಜುಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಮತ್ತು ಖಾಜಿ ಜೈಬುನ್ನಿಸಾ ಮೊಹಿಯುದ್ದೀನ್ ಅವರಿದ್ದ ಮೂವರು ಸದಸ್ಯರ ಸಾಂವಿಧಾನಿಕ ನ್ಯಾಯಪೀಠ ಶುಕ್ರವಾರ ಮುಂದುವರಿಸಿತು.

ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, 'ಅರ್ಜಿದಾರರಾದ ಆರು ವಿದ್ಯಾರ್ಥಿನಿಯರು 2021ರ ಡಿಸೆಂಬರ್‌ನಲ್ಲಿ ತಮ್ಮ ಕಾಲೇಜು ಪ್ರಾಂಶುಪಾಲರ ಬಳಿ ತೆರಳಿ ಹಿಜಾಬ್ ಧರಿಸಿ ಬರಲು ಅವಕಾಶ ನೀಡಬೇಕು ಎಂಬ ಬೇಡಿಕೆ ಇಟ್ಟರು. ಆಗಿನಿಂದಲೇ ಈ ಪ್ರಕರಣ ಬೆಳೆಯಿತು. ಅಂತಿಮವಾಗಿ ಸರ್ಕಾರ ಇದೇ 5ರಂದು, ಕರ್ನಾಟಕ ಶಿಕ್ಷಣ ಕಾಯ್ದೆ–1983 ರ ಕಲಂ 133 (2)ರ ಅನುಸಾರ ಸಮವಸ್ತ್ರ ಕುರಿತಂತೆ ಆದೇಶ ಹೊರಡಿಸಿದೆ. ಇದನ್ನೇ ಈಗ ಪ್ರಶ್ನಿಸಲಾಗಿದೆ' ಎಂದರು.

'ಮೂಲಭೂತ ಹಕ್ಕು ಪರಿಪೂರ್ಣ ಹಕ್ಕಲ್ಲ'

'ಮೂಲಭೂತ ಹಕ್ಕು ಪರಿಪೂರ್ಣ ಹಕ್ಕಲ್ಲ. ಹಾಗೆ ನೋಡುವುದಾದರೆ, ಕೋವಿಡ್–19ರ ಸಂದರ್ಭದಲ್ಲಿ ದೇವಸ್ಥಾನ, ಚರ್ಚ್, ಮಸೀದಿಗಳೆಲ್ಲವನ್ನೂ ಮುಚ್ಚಲಾಗಿತ್ತು. ಅಲ್ಲಿಗೆ ತೆರಳಿ ಪ್ರಾರ್ಥನೆ ಸಲ್ಲಿಸುವುದನ್ನೂ ನಿರ್ಬಂಧಿಸಲಾಗಿತ್ತು. ಆರೋಗ್ಯದ ಕಾರಣಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿತ್ತು. ಇದರರ್ಥ ಅಗತ್ಯ ಸಂದರ್ಭಗಳಲ್ಲಿ ಮೂಲಭೂತ ಹಕ್ಕುಗಳ ಚಲಾವಣೆಯನ್ನು ಸರ್ಕಾರ ನಿರ್ಬಂಧಿಸಬಹುದು. ಹೀಗಾಗಿ ಅರ್ಜಿದಾರರು ಆರೋಪಿಸಿರುವಂತೆ ಸಂವಿಧಾನದ ವಿಧಿ 25(1) ಎಲ್ಲೂ ಉಲ್ಲಂಘನೆಯಾಗಿಲ್ಲ' ಎಂದು ನಾವದಗಿ ನ್ಯಾಯಪೀಠಕ್ಕೆ ಅರುಹಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಹಾಗಾದರೆ, ಸರ್ಕಾರದ ಆದೇಶ ಅಕಾಲಿಕವಾಗಿದೆಯೇ' ಎಂದು ಪ್ರಶ್ನಿಸಿತಲ್ಲದೆ, 'ಒಂದು ಕಡೆ ಉನ್ನತ ಮಟ್ಟದ ಸಮಿತಿ ಸಮಸ್ಯೆಯನ್ನು ಪರಿಶೀಲಿಸುತ್ತಿದೆ ಎಂದು ಹೇಳುತ್ತೀರಿ. ಮತ್ತೊಂದು ಕಡೆ ನಿರ್ಧಾರದ ಬಗ್ಗೆಯೂ ಹೇಳುತ್ತಿದ್ದೀರಿ. ಇದು ಸರ್ಕಾರದ ವ್ಯತಿರಿಕ್ತ ನಿಲುವು ಆಗುವುದಿಲ್ಲವೇ. ಸಮವಸ್ತ್ರಕ್ಕೆ ಸಂಬಂಧಿಸಿದ ಆದೇಶದಲ್ಲಿ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ತೀರ್ಪುಗಳನ್ನು ಏಕೆ ಉಲ್ಲೇಖಿಸಿದ್ದೀರಿ, ಹಾಗಾದರೆ ಸರ್ಕಾರದ ಉದ್ದೇಶವೇನು, ಹಿಜಾಬ್ ಅಗತ್ಯವಲ್ಲ ಎಂದು ಆದೇಶದಲ್ಲಿ ಹೇಳಿರುವುದೇಕೆ' ಎಂದು ಕುಟುಕಿತು.

'ಸಮವಸ್ತ್ರ ನಿರ್ಣಯಿಸುವ ಅಧಿಕಾರವನ್ನು ಕಾಲೇಜು ಆಡಳಿತ ಮಂಡಳಿಗಳಿಗೆ (ಸಿಡಿಸಿ) ನೀಡಿದ್ದೀರಿ. ಒಂದು ವೇಳೆ ಸಿಡಿಸಿಗಳು ಹಿಜಾಬ್ ಧರಿಸಿ ಬರಲು ಅವಕಾಶ ನೀಡಿದರೆ ಸರ್ಕಾರ ಸಮ್ಮತಿಸುತ್ತದೆಯೇ, ಸಿಡಿಸಿಗಳಲ್ಲಿ ಶಾಸಕರನ್ನು ಯಾರು ನೇಮಿಸುತ್ತಾರೆ, ಅವರೇ ಸಮಿತಿ ಅಧ್ಯಕ್ಷರಾದರೆ ಉಳಿದವರ ಕಥೆಯೇನು, ಯಾವುದೇ ಪಕ್ಷದ ಶಾಸಕರಾದರೂ ಅವರು ರಾಜಕೀಯವಾಗಿ ನಡೆದುಕೊಳ್ಳುತ್ತಾರೆ. ಅವರ ಚಿಂತನೆಗಳು ಶಿಕ್ಷಣ ಸಂಸ್ಥೆಗಳ ಮೇಲೆ ಪರಿಣಾಮ ಬೀರುವುದಿಲ್ಲವೇ, ಅಂತಹವರನ್ನು ಸಮಿತಿ ಅಧ್ಯಕ್ಷರನ್ನಾಗಿ ಮಾಡಬಹುದೇ' ಎಂದು ಪ್ರಶ್ನೆಗಳ ಸರಮಾಲೆಯನ್ನೇ ಎಸೆಯಿತು.

ಈ ಪ್ರಶ್ನೆಗಳಿಗೆ ನಾವದಗಿ, 'ಶಾಸಕರ ಇಚ್ಛೆಯಂತೆ ಸಿಡಿಸಿ ನಡೆಯುವುದಿಲ್ಲ. 2013ರಲ್ಲಿಯೇ ಸಮವಸ್ತ್ರದ ಕುರಿತು ನಿರ್ಣಯವೊಂದನ್ನು ಅಂಗೀಕರಿಸಲಾಗಿದೆ. 2014ರಿಂದಲೂ ಕಾಲೇಜು ಅಭಿವೃದ್ಧಿ ಸಮಿತಿಗಳು ಅಸ್ತಿತ್ವದಲ್ಲಿವೆ. ಶಾಲೆಗಳಲ್ಲಿ ನಿರ್ವಹಣಾ ಸಮಿತಿಗಳಿವೆ. ಈವರೆಗೂ ಈ ಸಮಿತಿಗಳನ್ನು ಪ್ರಶ್ನೆ ಮಾಡಿರಲಿಲ್ಲ. ಆದರೆ ಈಗ ಪ್ರಶ್ನಿಸಲಾಗುತ್ತಿದೆ. ಕಾಲೇಜು ಅಭಿವೃದ್ಧಿ ಸಮಿತಿಗೆ ಕಾನೂನಿನ ಮಾನ್ಯತೆ ಇದೆ. ಈ ಸಮಿತಿಯಲ್ಲಿ ಹಲವು ಗಣ್ಯ ವ್ಯಕ್ತಿಗಳಿರುತ್ತಾರೆ. ಶಾಸಕರಲ್ಲದೇ, ಉಪನ್ಯಾಸಕರು, ವಿದ್ಯಾರ್ಥಿಗಳು, ಪೋಷಕರು, ಪರಿಶಿಷ್ಟ ಜಾತಿ ಪಂಗಡಗಳ ಸದಸ್ಯರು ಇರುತ್ತಾರೆ' ಎಂದು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.

ಕುವೈತ್‌ಗೆ ಪ್ರವೇಶ: ವಕೀಲರ ಟ್ವೀಟ್‌ಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬಿಜೆಪಿ ಜೊತೆಗೆ ಗುರುತಿಸಿಕೊಂಡಿರುವ ಯಾರೊಬ್ಬರಿಗೂ ದೇಶವನ್ನು ಪ್ರವೇಶಿಸಲು ಅವಕಾಶ ನೀಡಬಾರದು ಎಂದು ಕುವೈತ್‌ನ 22 ಸಂಸದರು ಒತ್ತಾಯಿಸಿದ್ದಾರೆ' ಎಂದು ಅಲ್ಲಿನ ವಕೀಲರೊಬ್ಬರು ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಅನ್ನು ಕಾಂಗ್ರೆಸ್‌ನ ಸಂಸದ ಶಶಿ ತರೂರ್ ಮರುಟ್ವೀಟ್ ಮಾಡಿದ್ದಾರೆ. ಇದರ ಹಿಂದೆಯೇ, ಕುವೈತ್ ವಕೀಲರ ಟ್ವೀಟ್‌ಗೆ ಅಲ್ಲಿನ ಭಾರತದ ರಾಯಭಾರ ಕಚೇರಿಯು ಬೇಸರ ವ್ಯಕ್ತಪಡಿಸಿದೆ.

ವೆಸ್ಟ್ ಏಷಿಯನ್‌ನ ವಕೀಲ ಮೆಜ್‌ಬೆಲ್ ಅಲ್ ಶರಿಕಾ ಅವರು ಟ್ವೀಟ್ ಮಾಡಿದ್ದಾರೆ. ಈತ ಪಾಕಿಸ್ತಾನದ ಏಜೆಂಟ್ ಆಗಿದ್ದಾರೆ ಎಂದು ಕುವೈತ್‌ನಲ್ಲಿ ಇರುವ ಭಾರತದ ರಾಯಭಾರ ಕಚೇರಿಯು ಆರೋಪಿಸಿದೆ.

ಕುವೈತ್‌ನ ಸಂಸತ್‌ನ 22 ಸದಸ್ಯರು ಸಹಿ ಹಾಕಿದ್ದಾರೆ ಎನ್ನಲಾದ ತಿರುಚಲಾದ ಪತ್ರವನ್ನು ಶರಿಕಾ ಟ್ವೀಟ್ ಮಾಡಿದ್ದಾರೆ. 'ಬಿಜೆಪಿ ಜೊತೆಗೆ ಗುರುತಿಸಿಕೊಂಡಿರುವ ಯಾವುದೇ ಸದಸ್ಯರಿಗೆ ದೇಶ ಪ್ರವೇಶಿಸಲು ಅವಕಾಶ ನೀಡಬಾರದು ಎಂದು ಈ ಎಲ್ಲ ಸದಸ್ಯರು ಆಗ್ರಹಿಸಿದ್ದಾರೆ' ಎಂದು ಬರೆದುಕೊಂಡಿದ್ದು, ಕರ್ನಾಟಕದಲ್ಲಿ ತಲೆದೋರಿರುವ ಹಿಜಾಬ್ ವಿವಾದವನ್ನೂ ಉಲ್ಲೇಖಿಸಿದ್ದರು.

ಸಂಸದ ಶಶಿ ತರೂರ್ ಅವರು ಇದೇ ಟ್ವೀಟ್ ಅನ್ನು ಮರುಟ್ವೀಟ್ ಮಾಡಿದ್ದರು. 'ಭಾರತ ಸಂಸತ್ತಿನ ಗೌರವಾನ್ವಿತ ಸದಸ್ಯರೊಬ್ಬರು, ಪಾಕಿಸ್ತಾನದ ಏಜೆಂಟ್‌ನ ದೇಶ ವಿರೋಧಿ ಟ್ವೀಟ್ ಅನ್ನು ಮರುಟ್ವೀಟ್ ಮಾಡಿರುವುದು ದುರದೃಷ್ಟಕರ' ಎಂದು ಕುವೈತ್‌ನ ಭಾರತದ ರಾಯಭಾರ ಕಚೇರಿ ಟ್ವೀಟ್ ಮೂಲಕವೇ ಇದಕ್ಕೆ ಪ್ರತಿಕ್ರಿಯಿಸಿತ್ತು. ಇಂಥ ಬೆಳವಣಿಗೆಗಳಿಗೆ ಉತ್ತೇಜನ ನೀಡಬಾರದು ಎಂದು ಕೋರಿತ್ತು.

ಮೆಜ್‌ಬೆಲ್ ಅಲ್ ಶರಿಕಾ ಅವರು ಕುವೈತ್ ವಕೀಲರ ಸಂಘದಲ್ಲಿ ಮಾನವ ಹಕ್ಕುಗಳ ಕೇಂದ್ರದ ನಿರ್ದೇಶಕರಾಗಿದ್ದಾರೆ. ಭಾರತದ ವಿರುದ್ಧವಾಗಿ ಪಾಕಿಸ್ತಾನವು ಆಯೋಜಿಸಿದ್ದ ವಿವಿಧ ಕಾರ್ಯಕ್ರಮಗಳಲ್ಲಿಯೂ ಈತ ಭಾಗವಹಿಸಿದ್ದ ಎಂದು ರಾಯಭಾರ ಕಚೇರಿಯು ತಿಳಿಸಿದೆ. ಕರ್ನಾಟಕದ ಶಿಕ್ಷಣ ಸಂಸ್ಥೆಯಲ್ಲಿ ಮಹಿಳೆಯೊಬ್ಬರಿಂದ ಬಲವಂತವಾಗಿ ಹಿಜಾಬ್ ತೆಗೆಸಲಾಗುತ್ತಿದೆ ಎಂಬ ವಿಡಿಯೊ ಅನ್ನು ಶರಿಕಾ ಹಂಚಿಕೊಂಡಿದ್ದರು.

ರಮೇಶ್ ಸಿ.ಡಿ. ಪ್ರಕರಣ: ವಿಚಾರಣೆ ನಡೆಸಲು ಸೂಚನೆ

ಎಸ್‌ಐಟಿ ವರದಿಗೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಿ.ಡಿ. ಪ್ರಕರಣದಲ್ಲಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಕ್ಲೀನ್ ಚಿಟ್ ನೀಡಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ)ದ ಅಂತಿಮ ವರದಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ರಮೇಶ ಜಾರಕಿಹೊಳಿ ವಿರುದ್ಧ ಅತ್ಯಾಚಾರದ ಆರೋಪ ಮಾಡಿದ್ದ ಸಂತ್ರಸ್ತ ಯುವತಿಯು ಎಸ್‌ಐಟಿ ರಚನೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಹಾಗೂ ಜೆ.ಕೆ. ಮಾಹೇಶ್ವರಿ ಅವರಿದ್ದ ಪೀಠವು, ತನಿಖಾ ವರದಿಯನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ಅಮಾನತಿನಲ್ಲಿರಿಸಿತು.

ಎಸ್‌ಐಟಿ ರಚನೆಯ ಸಿಂಧುತ್ವ ಪ್ರಶ್ನಿಸಲಾದ ಅರ್ಜಿಗಳ ವಿಚಾರಣೆಗೆ ನಿಗದಿಯಾಗಿರುವ ಮಾರ್ಚ್ 9ರಂದೇ ಪ್ರಕರಣದ ವಿಲೇವಾರಿ ಮಾಡಬೇಕು. ಯಾವುದೇ ಕಾರಣಕ್ಕೂ ವಿಚಾರಣೆ ಮುಂದೂಡಬಾರದು ಎಂದು ಪೀಠವು ಹೈಕೋರ್ಟ್‌ಗೆ ಸೂಚಿಸಿದೆ.

ರಮೇಶ ಜಾರಕಿಹೊಳಿ

ಪ್ರಕರಣದಲ್ಲಿ ಎಸ್‌ಐಟಿಯಿಂದ ಕ್ಲೀನ್ ಚಿಟ್ ಪಡೆದಿದ್ದ ರಮೇಶ ಜಾರಕಿಹೊಳಿಗೆ ಇದರಿಂದಾಗಿ ಮತ್ತೆ ಸಂಕಷ್ಟ ಎದುರಾದಂತಾಗಿದೆ.

'ತನಿಖೆ ನಡೆಸಿರುವ ಎಸ್‌ಐಟಿಯು ಅಂತಿಮ ವರದಿಯನ್ನು ಈಗಾಗಲೇ ಒಂದನೇ ಜೆಸಿಎಂಎಂ ನ್ಯಾಯಾಲಯಕ್ಕೆ ಸಲ್ಲಿಸಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೂ ಈ ಪ್ರಕರಣವನ್ನು ವಹಿಸಲಾಗಿದೆ. ಈ ಸಂಬಂಧ ದೂರುದಾರ ಯುವತಿಗೂ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಜಾರಕಿಹೊಳಿ ಪರ ವಕೀಲ ರಂಜಿತ್ ಕುಮಾರ್ ತಿಳಿಸಿದರು.

'ಇದು ಸಚಿವ ಸ್ಥಾನದಲ್ಲಿದ್ದವರ ವಿರುದ್ಧದ ಅತ್ಯಾಚಾರ ಆರೋಪ. ಆರೋಪಿಯೇ ಸಲ್ಲಿಸಿದ್ದ ದೂರಿನನ್ವಯ ಮುಖ್ಯಮಂತ್ರಿಯವರೇ ತನಿಖೆಗಾಗಿ ಎಸ್‌ಐಟಿ ರಚಿಸಿದ್ದಾರೆ. ಸಂತ್ರಸ್ತ ಯುವತಿ ಬೆಂಗಳೂರಿನ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ನೀಡಿದ್ದ ದೂರಿನ ತನಿಖೆಯನ್ನೂ ಅದೇ ಎಸ್‌ಐಟಿಗೆ ವಹಿಸಲಾಗಿದೆ' ಎಂದು ಅರ್ಜಿದಾರ ಯುವತಿ ಪರ ವಕೀಲ ವಿಕಾಸ್ ಸಿಂಗ್ ಹೇಳಿದರು.

'ಯಾರು ತನಿಖೆ ನಡೆಸಬೇಕು ಎಂಬುದನ್ನು ಆರೋಪಿಯೇ ನಿರ್ಧರಿಸಿದಂತಾಗಿದೆ. ಅಲ್ಲದೆ, ಎಸ್‌ಐಟಿ ರಚನೆಯ ಸಿಂಧುತ್ವವನ್ನು ಪ್ರಶ್ನಿಸಲಾದ ಅರ್ಜಿಯ ವಿಚಾರಣೆಯು ಹೈಕೋರ್ಟ್‌ನಲ್ಲಿ ಬಾಕಿ ಇದೆ. ಆದರೂ, ತನಿಖೆ ಪೂರ್ಣಗೊಳಿಸಿರುವ ಎಸ್‌ಐಟಿಯು ಸಾಕ್ಷ್ಯಾಧಾರಗಳ ಕೊರತೆ ಇದೆ ಎಂಬ ಕಾರಣ ಮುಂದಿರಿಸಿ, ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದೆ' ಎಂದು ಅವರು ವಿವರಿಸಿದರು.

'ಸಮಾಜದ ಹಿತದೃಷ್ಟಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಹೈಕೋರ್ಟ್ ಈ ಪ್ರಕರಣದ ವಿಚಾರಣೆ ನಡೆಸಿ ತೀರ್ಪು ಪ್ರಕಟಿಸಲಿ. ಅಲ್ಲಿಯವರೆಗೆ ಎಸ್‌ಐಟಿ ಸಲ್ಲಿಸಿರುವ ವರದಿಯ ಕುರಿತು ಯಾವುದೇ ಕ್ರಮ ಕೈಗೊಳ್ಳುವುದು ಬೇಡ' ಎಂದು ಪೀಠ ಆದೇಶಿಸಿತು.

ಕಲಾಪದಲ್ಲೂ ಖುಷಿ...

ವಿಧಾನಪರಿಷತ್ ಕಲಾಪದಲ್ಲಿ ಶುಕ್ರವಾರ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ ಮತ್ತು ಕಾನೂನು ಸಚಿವ ಜೆ.ಸಿ ಮಾಧುಸ್ವಾಮಿ ಅವರೊಂದಿಗೆ ಶಾಸಕರು ಸಮಾಲೋಚನೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

ಸಿಎಎ ವಿರೋಧಿ ಪ್ರತಿಭಟನೆ: 'ಸುಪ್ರೀಂ' ನಿರ್ದೇಶನ

'ಜಪ್ತಿ ಮಾಡಿದ ಆಸ್ತಿ ಮರಳಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿ ಪ್ರತಿಭಟನಕಾರರಿಂದ ಸಾರ್ವಜನಿಕ ಆಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ವಸೂಲು ಮಾಡಿದ್ದ ಕೋಟ್ಯಂತರ ರೂಪಾಯಿ, ಜಪ್ತಿ ಮಾಡಿದ್ದ ಆಸ್ತಿಯನ್ನು ಮರಳಿಸಬೇಕು ಎಂದು ಸುಪ್ರೀಂ ಕೋರ್ಟ್, ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಿದೆ.

ಶುಕ್ರವಾರ ಪ್ರಕರಣದ ವಿಚಾರಣೆ ವೇಳೆ, 'ಸಿಎಎ ವಿರೋಧಿ ಹೋರಾಟಗಾರರಿಗೆ ಆಸ್ತಿ ನಷ್ಟದ ವಸೂಲಿ ಕುರಿತಂತೆ ನೀಡಲಾಗಿದ್ದ ಒಟ್ಟು 274 ನೋಟಿಸ್‌ಗಳನ್ನು ಹಿಂಪಡೆಯಲಾಗಿದೆ' ಎಂದು ಉತ್ತರ ಪ್ರದೇಶ ಸರ್ಕಾರವು ನ್ಯಾಯಪೀಠಕ್ಕೆ ಮಾಹಿತಿ ನೀಡಿತು.

ವಸೂಲಾಗಿರುವ ಹಣದ ವಾಪಸಾತಿ ಬದಲಿಗೆ, ಕ್ಲೇಮು ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಲು ಪ್ರತಿಭಟನಕಾರರಿಗೆ ತಿಳಿಸಬಹುದು ಎಂದು ಉತ್ತರ ಪ್ರದೇಶ ಸರ್ಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಗರಿಮಾ ಪ್ರಸಾದ್ ಅವರು ಸಲಹೆ ಮಾಡಿದರು.

ಆದರೆ, ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರಿದ್ದ ಪೀಠವು ಇದನ್ನು ಸ್ಪಷ್ಟವಾಗಿ ತಳ್ಳಿಹಾಕಿತು.

ಈಗ ನಡೆಯುತ್ತಿರುವ ಚುನಾವಣೆಯ ಹಿನ್ನೆಲೆಯಲ್ಲಿ ನಿರ್ದೇಶನವನ್ನು ವಿಳಂಬವಾಗಿ ಜಾರಿಗೊಳಿಸುವ ಕುರಿತಂತೆ ಸರ್ಕಾರದ ಮನವಿಗೆ, ಎಲ್ಲ ಕ್ರಮಗಳು ಕಾಯ್ದೆಯ ಚೌಕಟ್ಟಿನಲ್ಲಿಯೇ ಇರಬೇಕು. ನೀವು ಸುಪ್ರೀಂ ಕೋರ್ಟ್ ಆದೇಶ ಜಾರಿಗೊಳಿಸುತ್ತಿದ್ದೀರಿ. ಇದು, ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಹೇಗಾಗುತ್ತದೆ ಎಂದು ಪೀಠವು ಪ್ರಶ್ನಿಸಿತು.

ಕೆಲವು ಆಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ ಎಂದು ಹೆಚ್ಚುವರಿ ಅಡ್ವೋಕೇಟ್ ಜನರಲ್ ಹೇಳಿದಾಗ, 'ಇದು ಕಾನೂನಿಗೆ ವಿರುದ್ಧವಾದುದು' ಎಂದು ಪೀಠ ಹೇಳಿತು.

2019ರ ಪ್ರತಿಭಟನೆಗೆ ಸಂಬಂಧಿಸಿ ಸಿಎಎ ವಿರೋಧಿ ಹೋರಾಟಗಾರರ ವಿರುದ್ಧದ ಕ್ರಮವು ಕಾನೂನಿಗೆ ವಿರುದ್ಧವಾದುದು. ಈ ಕ್ರಮವನ್ನು ಕೈಬಿಡಬೇಕು. ಇಲ್ಲದಿದ್ದರೆ, ತನಿಖೆಯನ್ನು ರದ್ದುಪಡಿಸುತ್ತೇವೆ' ಎಂದೂ ಪೀಠವು ಫೆಬ್ರುವರಿ 11ರಂದು ಸ್ಪಷ್ಟವಾಗಿ ಹೇಳಿತ್ತು. ಪ್ರತಿಭಟನಕಾರರಿಂದ ಆಸ್ತಿ ನಷ್ಟ ವಸೂಲಾತಿಗೆ ಮುಂದಾಗಿದ್ದ ಉತ್ತರ ಪ್ರದೇಶದ ಸರ್ಕಾರದ ನಿಲುವನ್ನೂ ಪೀಠವು ತರಾಟೆಗೆ ತೆಗೆದುಕೊಂಡಿತ್ತು.

ಇದೇ ಸಂದರ್ಭದಲ್ಲಿ ಪೀಠವು, 2020ರ ಆಗಸ್ಟ್ 31ರಲ್ಲಿ ಹೊರಡಿಸಿರುವ ಗೆಜೆಟ್ ಪ್ರಕಟಣೆಯಂತೆ, 'ಉತ್ತರ ಪ್ರದೇಶ ಸಾರ್ವಜನಿಕ ಮತ್ತು ಖಾಸಗಿ ಆಸ್ತಿ ನಷ್ಟ ವಸೂಲಾತಿ ಕಾಯ್ದೆ' ಅನ್ವಯ ತನಿಖೆ ನಡೆಸುವ ಸ್ವಾತಂತ್ರವನ್ನೂ ಸರ್ಕಾರಕ್ಕೆ ನೀಡಿತು.

ಆಸ್ತಿ ನಷ್ಟಕ್ಕೆ ಸಂಬಂಧಿಸಿ ಪರಿಹಾರ ವಸೂಲಿಗೆ ಜಿಲ್ಲಾಡಳಿತವು ನೀಡಿದ್ದ ನೋಟಿಸ್‌ಗಳನ್ನು ರದ್ದುಪಡಿಸಬೇಕು ಎಂದು ಮನವಿ ಮಾಡಿ ಪರ್ವೇಜ್ ಆರೀಫ್ ಟಿಟು ಅವರು ಅರ್ಜಿ ಸಲ್ಲಿಸಿದ್ದರು. ಆರು ವರ್ಷಗಳ ಹಿಂದೆ, 94ನೇ ವಯಸ್ಸಿನಲ್ಲಿ ಮೃತಪಟ್ಟಿರುವ ಹಾಗೂ 90 ವರ್ಷ ಮೀರಿದ ಇಬ್ಬರು ಸೇರಿದಂತೆ ಹಲವರಿಗೆ ಇದೇ ರೀತಿ ನೋಟಿಸ್ ಕಳುಹಿಸಲಾಗಿದೆ ಎಂದು ಅರ್ಜಿದಾರರು ತಿಳಿಸಿದ್ದರು.

ಕಾಂಗ್ರೆಸ್ ನೇತೃತ್ವದ ಮೇಕೆದಾಟು 2.0 ನಡಿಗೆಗೆ 27ರಂದು ಚಾಲನೆ

ಮೇಕೆದಾಟು: ಮತ್ತೆ ಪಾದಯಾತ್ರೆ

• ಆರ್. ಜಿತೇಂದ್ರ

ರಾಮನಗರ: ಮೇಕೆದಾಟು ಪಾದಯಾತ್ರೆಯ ಎರಡನೇ ಆವೃತ್ತಿಗೆ ಇದೇ 27ರಂದು ಚಾಲನೆ ದೊರೆಯುವುದು ನಿಶ್ಚಿತವಾಗಿದ್ದು, ನಡಿಗೆ ಮೊಟಕುಗೊಂಡ ಜಾಗದಿಂದಲೇ ಮತ್ತೆ ಆರಂಭ ಆಗಲಿರುವುದು ವಿಶೇಷ. ಪಾದಯಾತ್ರೆಯ ಐದನೇ ದಿನದಂದು ರಾಮನಗರ ಜಿಲ್ಲಾ ಕಾಂಗ್ರೆಸ್ ಕಚೇರಿ ಮುಂಭಾಗ ನೀರಿಗಾಗಿ ನಡಿಗೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲಾಗಿತ್ತು. ಇದೇ ನೆಲದಿಂದಲೇ ಮತ್ತೆ ನಡಿಗೆ ಆರಂಭಿಸುತ್ತೇವೆ ಎಂದು ಕಾಂಗ್ರೆಸ್ ನಾಯಕರು ಭರವಸೆ ನೀಡಿದ್ದರು. ಅದರಂತೆ ಕಾಂಗ್ರೆಸ್ ಕಚೇರಿ ಮುಂಭಾಗದಿಂದಲೇ ನಡಿಗೆಗೆ ಮತ್ತೆ ಚಾಲನೆ ದೊರೆಯಲಿದೆ.

ಒಂದು ದಿನ ಮೊಟಕು: ಜ. 9ರಂದು ಕನಕಪುರ ತಾಲ್ಲೂಕಿನ ಸಂಗಮದಲ್ಲಿ ಮೇಕೆದಾಟು ಪಾದಯಾತ್ರೆಗೆ ಚಾಲನೆ ದೊರೆತಿತ್ತು. ಕನಕಪುರ, ರಾಮನಗರ, ಬಿಡದಿ, ಕೆಂಗೇರಿ ಮೂಲಕ ಬೆಂಗಳೂರಿಗೆ ಒಟ್ಟು 11 ದಿನಗಳ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಸಂಗಮದಿಂದ ರಾಮನಗರದವರೆಗೆ 4 ದಿನಗಳ ನಡಿಗೆ ಸಂಪೂರ್ಣವಾಗಿತ್ತು.

ಇನ್ನುಳಿದಿರುವ 7 ದಿನಗಳ ಬದಲು 6 ದಿನಗಳಲ್ಲಿ ಪಾದಯಾತ್ರೆ ಮುಗಿಸಲು ಕಾಂಗ್ರೆಸ್ ತೀರ್ಮಾನಿಸಿದೆ. ಈ ಬಾರಿ ರಾಮನಗರದಿಂದ ಬಿಡದಿ, ಕೆಂಗೇರಿ ಮಾರ್ಗವಾಗಿ ಹೊರಟು ಬೆಂಗಳೂರಿನ ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸಂಚರಿಸಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸಮಾವೇಶಗೊಳ್ಳಲಿದೆ. ಭಾನುವಾರ ರಾಮನಗರದಲ್ಲಿ ಪಾದಯಾತ್ರೆಯ ಪೂರ್ವಭಾವಿ ಸಭೆ ನಡೆಯಲಿದ್ದು, ಅಲ್ಲಿ ಮಾರ್ಗದ ಬಗ್ಗೆ ಅಂತಿಮ ತೀರ್ಮಾನ ಆಗಲಿದೆ.

ನಾಲ್ಕು ದಿನಗಳ ಪಾದಯಾತ್ರೆಯಲ್ಲಿ ವಿವಿಧ ಜಿಲ್ಲೆಗಳ ಲಕ್ಷಾಂತರ ಮಂದಿ ಭಾಗಿಯಾಗಿದ್ದರು. ಅದರಲ್ಲೂ ಹಳೇ ಮೈಸೂರು ಭಾಗದ ಅಸಂಖ್ಯಾತ ಕಾರ್ಯಕರ್ತರು ಹೆಜ್ಜೆ ಹಾಕಿದ್ದರು. ಈ ಬಾರಿಯ ಯಾತ್ರೆಯಲ್ಲಿ ಮೊದಲ ದಿನ ರಾಮನಗರದಲ್ಲಿ ಸ್ಥಳೀಯರ ಜೊತೆಗೆ ಮಂಡ್ಯ ಜಿಲ್ಲೆಯ ಕಾರ್ಯಕರ್ತರನ್ನು ಆಹ್ವಾನಿಸಲಾಗುತ್ತಿದೆ.

ಬೃಹತ್ ಸಮಾವೇಶ ಆಯೋಜನೆ ಮೂಲಕ ಕಾರ್ಯಕ್ರಮಕ್ಕೆ ಮತ್ತೆ ಚಾಲನೆ ನೀಡಬೇಕೋ, ಇಲ್ಲವೇ ಮೊಟಕುಗೊಂಡ ಸ್ಥಳದಿಂದ ನಡಿಗೆ ಮುಂದುವರಿಸಬೇಕೋ ಎಂಬುದು ಸದ್ಯದಲ್ಲೇ ನಿರ್ಧಾರವಾಗಲಿದೆ. ಚುನಾವಣೆ ಹೊಸ್ತಿಲಲ್ಲಿ ನಡೆದಿರುವ ಈ ಕಾರ್ಯಕ್ರಮವು ಕಾಂಗ್ರೆಸ್‌ನ ಶಕ್ತಿ ಪ್ರದರ್ಶನಕ್ಕೂ ವೇದಿಕೆ ಆಗಲಿದೆ. ರಾಜ್ಯ ಬಜೆಟ್‌ಗೆ ಮುನ್ನ ನಡೆಯಲಿರುವ ಪಾದಯಾತ್ರೆಯನ್ನು ಹಿಂದಿಗಿಂತ ಅದ್ದೂರಿಯಾಗಿ ಸಂಘಟಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಉತ್ಸುಕರಾಗಿದ್ದಾರೆ.

ಸಿದ್ಧತೆಗೆ ಸೂಚನೆ

ಪಾದಯಾತ್ರೆಗೆ ಬೇಕಾದ ಸಿದ್ಧತೆ ಆರಂಭಿಸುವಂತೆ ಕಾಂಗ್ರೆಸ್ ಜಿಲ್ಲಾ ಘಟಕಕ್ಕೆ ಕೆಪಿಸಿಸಿಯಿಂದ ಈಗಾಗಲೇ ಸಂದೇಶ ರವಾನೆ ಆಗಿದೆ. ಮೊದಲ ದಿನ ರಾಮನಗರದಿಂದ ಬಿಡದಿವರೆಗೆ 15 ಕಿ.ಮೀ ನಡಿಗೆ ಹಾಗೂ ಎರಡನೇ ದಿನ ಬಿಡದಿಯಿಂದ ಕೆಂಗೇರಿವರೆಗೆ ನಡಿಗೆ ಮುಂದುವರಿಯಲಿದೆ. ಈ ಎರಡೂ ದಿನ ಗಣ್ಯರು ಹಾಗೂ ಪಾದಯಾತ್ರಿಗಳ ಊಟೋಪಚಾರ ಹಾಗೂ ವಸತಿಗೆ ಬೇಕಾದ ಸ್ಥಳಗಳ ಆಯ್ಕೆ ಈಗಾಗಲೇ ಅಂತಿಮಗೊಂಡಿದೆ.

ಸಮರ್ಪಕ ನೀರು ಹಂಚಿಕೆಗೆ ಕರ್ನಾಟಕದ ಪ್ರತಿಪಾದನೆ

'ನದಿ ಜೋಡಣೆಯ ವಿನ್ಯಾಸ ಬದಲಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸ್ತಾವಿತ ನದಿ ಜೋಡಣೆ ಯೋಜನೆ ಕೈಗೆತ್ತಿಕೊಳ್ಳುವ ಮೊದಲು ಆಯಾ ರಾಜ್ಯಗಳಿಗೆ ಸಮರ್ಪಕವಾಗಿ ನೀರನ್ನು ಹಂಚಿಕೆ ಮಾಡಬೇಕು ಎಂದು ಕರ್ನಾಟಕ ಪ್ರತಿಪಾದಿಸಿದೆ.

ಗೋದಾವರಿ– ಕೃಷ್ಣಾ, ಕೃಷ್ಣಾ– ಪೆನ್ನಾರ್ ಹಾಗೂ ಪೆನ್ನಾರ್– ಕಾವೇರಿ ನದಿಗಳ ಜೋಡಣೆ ಯೋಜನೆ ಕುರಿತು ಕಣಿವೆ ವ್ಯಾಪ್ತಿಯ ರಾಜ್ಯಗಳೊಂದಿಗೆ ಚರ್ಚಿಸಲು ಕೇಂದ್ರದ ಜಲಶಕ್ತಿ ಸಚಿವಾಲಯ ಶುಕ್ರವಾರ ಮಧ್ಯಾಹ್ನ ಆಯೋಜಿಸಿದ್ದ ಸಭೆಯಲ್ಲಿ ರಾಜ್ಯ ಸರ್ಕಾರ ಈ ಬೇಡಿಕೆ ಇರಿಸಿದೆ.

ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ಪಂಕಜ್ ಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಪುದುಚೇರಿ ರಾಜ್ಯಗಳ ಅಧಿಕಾರಿಗಳು, ರಾಷ್ಟ್ರೀಯ ಜಲ ಅಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ಭಾಗವಹಿಸಿದ್ದರು.

ಕೃಷ್ಣಾ– ಪೆನ್ನಾರ್ ಮತ್ತು ಪೆನ್ನಾರ್– ಕಾವೇರಿ ಜೋಡಣೆ ಯೋಜನೆ ಅಡಿ ಲಭ್ಯ ನೀರಿನಲ್ಲಿ ರಾಜ್ಯದ ಬರಪೀಡಿತ ಪ್ರದೇಶಗಳ ಜನರ ಕುಡಿಯುವ ನೀರಿನ ಅಗತ್ಯವನ್ನು ಗಣನೆಗೆ ತೆಗೆದುಕೊಂಡು, ಮುಂಚಿತವಾಗಿಯೇ ನೀರು ಹಂಚಿಕೆ ಮಾಡಬೇಕು ಎಂದು ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಜಯಪ್ರಕಾಶ್ ಮನವಿ ಸಲ್ಲಿಸಿದರು.

ಗೋದಾವರಿ– ಕೃಷ್ಣಾ ಜೋಡಣೆ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ತೆಲಂಗಾಣ, ಗೋದಾವರಿ ನದಿಯಲ್ಲಿ ಕಳೆದ 50 ವರ್ಷ ಲಭ್ಯವಾಗಿರುವ ನೀರಿನ ಕುರಿತು ಅಧ್ಯಯನ ನಡೆಸಿ ಯೋಜನೆ ಕೈಗೆತ್ತಿಕೊಳ್ಳಬೇಕು. ಗೋದಾವರಿ ತಿರುವಿನಿಂದ ಲಭ್ಯವಾಗುವ ಶೇ 50ರಷ್ಟು ನೀರನ್ನು ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ರಾಜ್ಯಕ್ಕೆ ನೀರನ್ನು ಹಂಚಿಕೆ ಮಾಡಬೇಕು ಎಂಬ ಬೇಡಿಕೆ ಇರಿಸಿತು.

ಗೋದಾವರಿ ಮತ್ತು ಕೃಷ್ಣಾ ಕಣಿವೆಯ ಕೆಳಹಂತದ ರಾಜ್ಯಕ್ಕೆ ಅಗತ್ಯ ಪ್ರಮಾಣದ ನೀರನ್ನು ಹಂಚಿಕೆ ಮಾಡುವಂತೆ ಆಂಧ್ರಪ್ರದೇಶ ಆಗ್ರಹಿಸಿದರೆ, ನದಿ ಜೋಡಣೆಯಿಂದ ಲಭ್ಯವಾಗುವ 247 ಟಿಎಂಸಿ ಅಡಿ ನೀರಿನ ಪೈಕಿ 200 ಟಿಎಂಸಿ ಅಡಿ ನೀರನ್ನು ಹಂಚಿಕೆ ಮಾಡುವಂತೆ ತಮಿಳುನಾಡು ಕೋರಿತು.

'ಕೇಂದ್ರ ಬಜೆಟ್‌ನಲ್ಲಿ ಘೋಷಿಸಿರುವ ಈ ಪ್ರಸ್ತಾವಿತ ಯೋಜನೆ ಜಾರಿಗೆ ಮುನ್ನ ಕಣಿವೆ ವ್ಯಾಪ್ತಿಯ ಎಲ್ಲ ರಾಜ್ಯಗಳ ಒಪ್ಪಿಗೆ ಪಡೆಯುವ ಅಗತ್ಯವಿದೆ. ಮೊದಲ ಬಾರಿ ನಡೆದ ಔಪಚಾರಿಕ ಸಭೆಯಲ್ಲಿ ಆಯಾ ರಾಜ್ಯ ಸರ್ಕಾರಗಳು ತಮ್ಮ ಬೇಡಿಕೆಯ ಕುರಿತು ಪ್ರಸ್ತಾಪಿಸಿವೆ. ಈ ಸಂಬಂಧ ಪರಿಶೀಲನೆ ನಡೆಸಲಾಗುತ್ತದೆ ಎಂದು ಜಲಶಕ್ತಿ ಸಚಿವಾಲಯದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕೃಷ್ಣಾ: ಪೀಠ ರಚನೆಗೆ 'ಸುಪ್ರೀಂ'ಗೆ ಮನವಿ

ಕೃಷ್ಣಾ ನದಿ ನೀರು ಹಂಚಿಕೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಳ್ಳಲು ಶೀಘ್ರವೇ ಪೀಠ ರಚಿಸುವಂತೆ ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ಮನವಿ ಸಲ್ಲಿಸಲಾಗಿದೆ.

ಕೃಷ್ಣಾ ಜಲವಿವಾದ ನ್ಯಾಯಮಂಡಳಿ ನೀಡಿರುವ ಐ ತೀರ್ಪಿನ ವಿರುದ್ಧ ಸಲ್ಲಿಸಲಾದ ಮೇಲ್ಮನವಿಯ ವಿಚಾರಣೆ ಬಾಕಿ ಇದ್ದು, ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್. ಬೋಪಣ್ಣ ಅವರು ಜನವರಿಯಲ್ಲಿ ವಿಚಾರಣೆಯಿಂದ ಹಿಂದಕ್ಕೆ ಸರಿದಿದ್ದಾರೆ.

ಶನಿವಾರ, ಫೆಬ್ರುವರಿ 19, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 50 | ಪುಟ 16
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪರಿಮಳ ಪಸರಿಸುವ ತೈಲಗಳಿಗೆ, ನೋವು ಮರೆಸುವ ಗುಣವಿದೆ. ಹೀಗೆ ಮನಸ್ಸನ್ನು ಉಲ್ಲಸಿತವಾಗಿಡುವ ಸುಗಂಧ ದ್ರವ್ಯ/ತೈಲಗಳ ಕುರಿತ ಮಾಹಿತಿ ಇಲ್ಲಿದೆ...



ಚರ್ಚೆ
ಕನ್ನಡ ಸಾಹಿತ್ಯ ಪರಿಷತ್‌ನ ಬೈಲಾ ತಿದ್ದುಪಡಿ ಅಗತ್ಯ ಇದೆಯೇ? 9

ಟ್ವೆಂಟಿ20 ಕ್ರಿಕೆಟ್: ಭಾರತಕ್ಕೆ ಸರಣಿ ಜಯ 11

ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ವರ್ಗಾವಣೆ 3

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,833 ▼	17,276 ▼	₹51,640 (ಬೆಂಗಳೂರು)	₹65,600 (ಬೆಂಗಳೂರು)	74.66 ▲

ಕೆಪಿಎಸ್‌ಸಿ ಆಯ್ಕೆಪಟ್ಟಿ ಊರ್ಜಿತಕ್ಕೆ ವಿಧಾನಸಭೆಯಲ್ಲಿ ಮಸೂದೆ ಮಂಡನೆ

ಸಂದರ್ಶನ ಅಂಕ 25ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ (ಗ್ರೂಪ್ ‘ಎ’ ಮತ್ತು ‘ಬಿ’) ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) ಅಂಕಗಳನ್ನು 50 ರಿಂದ 25 ಕ್ಕೆ ಇಳಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

200 ಅಂಕಗಳಿಗೆ ನಡೆಯುತ್ತಿದ್ದ ವ್ಯಕ್ತಿತ್ವ ಪರೀಕ್ಷೆಯನ್ನು ಈ ಹಿಂದೆ 50 ಅಂಕಗಳಿಗೂ ಮತ್ತು ಮುಖ್ಯ ಪರೀಕ್ಷೆಯ ಅಂಕಗಳನ್ನು 1,250 ಕ್ಕೆ ಇಳಿಸಲಾಗಿತ್ತು. ಇದೀಗ ಸಚಿವ ಸಂಪುಟದ ನಿರ್ಧಾರದಿಂದ ಸಂದರ್ಶನದ ಅಂಕ 25 ಕ್ಕೆ ನಿಗದಿಯಾಗಲಿದೆ. ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿ ಗಳಿಸಿದ ಅಂಕ ಶೇಕಡ 80 ದಾಟಿದರೆ ಅಥವಾ ಶೇ 40 ಕ್ಕಿಂತ ಕಡಿಮೆಯಾದರೆ ಸಂದರ್ಶನ ಮಂಡಳಿ ಸದಸ್ಯರು ಕಾರಣಗಳನ್ನು ದಾಖಲಿಸಬೇಕು ಎಂದೂ ನಿಯಮಕ್ಕೆ ಈ ಹಿಂದೆ ತಿದ್ದುಪಡಿ ತರಲಾಗಿತ್ತು.

ಹಿಂದೆ ಎರಡು ಐಚ್ಛಿಕ ವಿಷಯಗಳೂ (ಪತ್ರಿಕೆ 6 ಮತ್ತು 7) ಸೇರಿ ಏಳು ವಿಷಯಗಳಲ್ಲಿ ಮುಖ್ಯ ಪರೀಕ್ಷೆ ನಡೆಯುತ್ತಿತ್ತು. ಆ ಬಳಿಕ ಐದು ವಿಷಯಗಳಿಗೆ ಪರೀಕ್ಷೆ ನಡೆಸಲಾಗುತ್ತಿತ್ತು. ಐಚ್ಛಿಕ ವಿಷಯಗಳನ್ನು (ತಲಾ 250 ಅಂಕಗಳ 2 ಪತ್ರಿಕೆ) ಕೈಬಿಡಲು ನಿರ್ಧರಿಸಲಾಯಿತು. ಹೀಗಾಗಿ ಒಟ್ಟು 1,750 ಅಂಕಗಳಿಗೆ ನಡೆಯುತ್ತಿದ್ದ ಮುಖ್ಯ ಪರೀಕ್ಷೆಯಲ್ಲಿ 500 ಅಂಕಗಳು ಕಡಿತಗೊಂಡಂತಾಗಿದೆ.

11ನೇ ಪುಟ ನೋಡಿ

362 ಅಭ್ಯರ್ಥಿಗಳಿಗೆ ಜ್ಯೇಷ್ಠತೆ ಪೂರ್ವಾನ್ವಯ ಇಲ್ಲ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗಾಗಿ ಕೆಪಿಎಸ್‌ಸಿ 2011 ರಲ್ಲಿ ನಡೆಸಿದ್ದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ 362 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದಕ್ಕೆ ಪೂರಕವಾಗಿ ರೂಪಿಸಿರುವ ‘ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ಮಸೂದೆ– 2022’ ಅನ್ನು ವಿಧಾನ ಸಭೆಯಲ್ಲಿ ಶುಕ್ರವಾರ ಮಂಡಿಸಲಾಯಿತು.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ವಜಾಗೊಳಿಸಬೇಕು ಎಂದು ಕಾಂಗ್ರೆಸ್ ಸದಸ್ಯರು ಧರಣಿ ನಡೆಸುತ್ತಿದ್ದ ವೇಳೆಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಮಸೂದೆ ಮಂಡಿಸಿದರು.

ಈ ಮಸೂದೆಯ ಉಪಬಂಧಗಳನ್ನು ರಚಿಸುವ ವೇಳೆ ಯಾವುದೇ ತೊಂದರೆಗಳು ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಉಪಬಂಧಗಳನ್ನು ರಚಿಸಬಹುದು ಎಂದು ಮಸೂದೆಯಲ್ಲಿ ತಿಳಿಸಲಾಗಿದೆ.

362 ಅಭ್ಯರ್ಥಿಗಳ ಬಗ್ಗೆ ಸಿಐಡಿ ವರದಿಯಲ್ಲಿ ಯಾವುದೇ ಆಕ್ಷೇಪಣೆ ವ್ಯಕ್ತವಾಗಿಲ್ಲ. ಅವರ ವಿರುದ್ಧ ಯಾವುದೇ ಆಪಾದನೆಗಳಿಲ್ಲ. ಹೀಗಾಗಿ, ಅವರದಲ್ಲದ ತಪ್ಪಿಗೆ ಅವರನ್ನು ದಂಡಿಸುವುದು ಸರಿಯಲ್ಲ. ಈ ಅಭ್ಯರ್ಥಿಗಳು ಕೆಪಿಎಸ್‌ಸಿ ಸದಸ್ಯರಿಗೆ ಅಥವಾ ಮಧ್ಯವರ್ತಿಗಳಿಗೆ ಕಾನೂನುಬಾಹಿರವಾಗಿ ಹಣ ಪಾವತಿ ಮಾಡಿರುವುದು ದೋಷಾರೋಪಣಾ ಪಟ್ಟಿಯಲ್ಲಿ ಸ್ಪಷ್ಟವಾಗಿ ತೋರಿಸಿಲ್ಲ ಎಂದೂ ಮಸೂದೆಯಲ್ಲಿ ಹೇಳಲಾಗಿದೆ.

ಇಂಗಾಲ ಹೊರಸೂಸುವಿಕೆ ತಡೆಗೆ ನೀತಿ 5

2008ರ ಅಹಮದಾಬಾದ್ ಸರಣಿ ಸ್ಫೋಟ ಪ್ರಕರಣದ ತೀರ್ಪು

38 ಜನರಿಗೆ ಗಲ್ಲು, 11 ಜನರಿಗೆ ಜೀವಾವಧಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಅಹಮದಾಬಾದ್‌ನಲ್ಲಿ 2008ರಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ 38 ಜನರಿಗೆ ಗಲ್ಲುಶಿಕ್ಷೆ ಮತ್ತು 11 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಇಲ್ಲಿನ ವಿಶೇಷ ನ್ಯಾಯಾಲಯವು ಆದೇಶ ಹೊರಡಿಸಿದೆ. ನಗರದ ಹಲವೆಡೆ ನಡೆದಿದ್ದ ಬಾಂಬ್ ಸ್ಫೋಟದಲ್ಲಿ 56 ಜನರು ಮೃತಪಟ್ಟಿದ್ದರು ಮತ್ತು 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.

2008ರ ಜುಲೈ 26ರಂದು ಸರಣಿ ಸ್ಫೋಟ ಸಂಭವಿಸಿತ್ತು. ಪ್ರಕರಣದ ವಿಚಾರಣೆಯನ್ನು 2009ರಲ್ಲಿ ಆರಂಭಿಸಲಾಗಿತ್ತು. 78 ಆರೋಪಿಗಳ ವಿರುದ್ಧ ಅಹಮದಾಬಾದ್ ವಿಶೇಷ ನ್ಯಾಯಾಲಯವು ವಿಚಾರಣೆ ಆರಂಭಿಸಿತ್ತು. ಇವರಲ್ಲಿ ಒಬ್ಬ ಮಾಫಿ ಸಾಕ್ಷಿಯಾಗಿ ಬದಲಾಗಿದ್ದರು.

> **ಈ ಹಿಂದೆ ಒಂದು ಪ್ರಕರಣದಲ್ಲಿ 28 ಜನರಿಗೆ ಗಲ್ಲುಶಿಕ್ಷೆ ಘೋಷಿಸಲಾಗಿತ್ತು. 38 ಜನರಿಗೆ ಗಲ್ಲು ಶಿಕ್ಷೆ ಘೋಷಿಸಿದ್ದು ಇದೇ ಮೊದಲು**
> **ಅರವಿಂದ ಪಟೇಲ್,** ಸರ್ಕಾರಿ ವಕೀಲ

ನಂತರದ ದಿನಗಳಲ್ಲಿ ಇನ್ನೂ ನಾಲ್ವರನ್ನು ಬಂಧಿಸಲಾಗಿತ್ತು. ಆ ನಾಲ್ವರ ವಿರುದ್ಧ ಇನ್ನೂ ವಿಚಾರಣೆ ಆರಂಭವಾಗಿಲ್ಲ.

13 ವರ್ಷಗಳ ದೀರ್ಘಾವಧಿಯವರೆಗೆ ನಡೆದ ವಿಚಾರಣೆ 2021ರ ಸೆಪ್ಟೆಂಬರ್‌ನಲ್ಲಿ ಪೂರ್ಣಗೊಂಡಿತ್ತು. ಪ್ರಕರಣದಲ್ಲಿ 49 ಜನರು ತಪ್ಪಿತಸ್ಥರು ಎಂದು ಇದೇ 8ರಂದು ವಿಶೇಷ ನ್ಯಾಯಾಲಯವು ತೀರ್ಪು ನೀಡಿತ್ತು. 28 ಜನರನ್ನು ಖುಲಾಸೆ ಮಾಡಿತ್ತು.

‘ಇದು ಅತ್ಯಂತ ಅಪರೂಪದ ಪ್ರಕರಣವಾಗಿದೆ. ಹೀಗಾಗಿ ತಪ್ಪಿತಸ್ಥರಿಗೆ ಮರಣದಂಡನೆ ವಿಧಿಸಬೇಕು’ ಎಂದು ಸರ್ಕಾರಿ ವಕೀಲ ಅರವಿಂದ್ ಪಟೇಲ್ ವಾದಿಸಿದ್ದರು. ಇದನ್ನು ಪರಿಗಣಿಸಿರುವ ನ್ಯಾಯಾಲಯವು 38 ಜನರಿಗೆ ಗಲ್ಲುಶಿಕ್ಷೆ ಮತ್ತು 11 ಜನರಿಗೆ ಜೀವಾವಧಿ ಶಿಕ್ಷೆ ಘೋಷಿಸಿದೆ. ಶಿಕ್ಷೆಗೆ ಗುರಿಯಾದವರೆಲ್ಲರೂ ಉಗ್ರ ಸಂಘಟನೆ ಇಂಡಿಯನ್ ಮುಜಾಹಿದೀನ್ ಸದಸ್ಯರು’ ಎಂದು ಅರವಿಂದ ಪಟೇಲ್ ಹೇಳಿದ್ದಾರೆ.

‘ವಿಚಾರಣೆ ಆರಂಭವಾದಾಗಿನಿಂದ ಎಲ್ಲರೂ 14 ವರ್ಷ ಜೈಲಿನಲ್ಲಿ ಕಳೆದಿದ್ದಾರೆ. ಹೀಗಾಗಿ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂದು ಕೋರಿದ್ದೆವು. ಆದರೆ ನಮ್ಮ ಕೋರಿಕೆಯನ್ನು ನ್ಯಾಯಾಲಯವು ತಿರಸ್ಕರಿಸಿದೆ. ಈ ತೀರ್ಪನ್ನು ನಾವು ಮೇಲಿನ ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ’ ಎಂದು ತಪ್ಪಿತಸ್ಥರ ಪರ ವಕೀಲರು ಹೇಳಿದ್ದಾರೆ.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹ 4615 /-gm
ಬೆಳ್ಳಿ ₹ 60,000/- *CA
ಚಿಕ್ಕಪೇಟೆ: 41300355

ಎಲ್ಐಸಿ ಐಪಿಒ

ಪಾಲಿಸಿದಾರಕರ ಮೀಸಲಾತಿ (ರಿಸರ್ವೇಶನ್)

ಇದರಲ್ಲಿ ಭಾಗವಹಿಸಲು ಪಾಲಿಸಿದಾರರು ಕೆಳಗಿನ ಮಾನದಂಡಗಳನ್ನು ಪೂರ್ತಿಯಾಗಿಸಬೇಕು

- ಫೆಬ್ರವರಿ 13, 2022 ರಂತೆ ನಿಗಮದ ಒಂದು ಅಥವಾ ಹೆಚ್ಚಿನ ಪಾಲಿಸಿಗಳನ್ನು ಹೊಂದಿರುವ ನಿಗಮದ ನಿವಾಸಿ ವೈಯಕ್ತಿಕ ಪಾಲಿಸಿದಾರರು ಮತ್ತು ಬಿಡ್/ಆಫರ್ ತೆರೆಯುವ ದಿನಾಂಕಕ್ಕೆ ಅರ್ಹರು*
- ಪಾಲಿಸಿದಾರರ ಪ್ಯಾನ್ ವಿವರಗಳನ್ನು ಫೆಬ್ರವರಿ 28, 2022 ರಂದು ಅಥವಾ ಮೊದಲು ನಿಗಮದೊಂದಿಗೆ ನವೀಕರಿಸಬೇಕು

*ದಯವಿಟ್ಟು ಫೆಬ್ರವರಿ 13, 2022 ರ ಡ್ರಾಫ್ಟ್ ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್ ಅನ್ನು ಸಹ ನೋಡಿ

ಡಿಮ್ಯಾಟ್ ಖಾತೆ ತೆರೆಯುವ ಪ್ರಕ್ರಿಯೆ

- ಹತ್ತಿರದ ಕಾಮನ್ ಸರ್ವೀಸ್ ಸೆಂಟರ್ (ಸಿಎಸ್‌ಸಿ) ನಲ್ಲಿ ಹೋಗಿ ಡಿಮ್ಯಾಟ್ ಖಾತೆ ತೆರೆದುಕೊಳ್ಳಿ

ಅಥವಾ

- ಡಿಮ್ಯಾಟ್ ಖಾತೆ ತೆರೆಯಲು ಈ ವೆಬ್‌ಸೈಟ್‌ಗೆ ಭೇಟಿಕೊಡಿ ಇಲ್ಲಿ ನಿಮಗೆ ರಿಜಿಸ್ಟರ್ಡ್ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ ಅವರ ಲಿಸ್ಟ್ (ಡಿಪಿ) ಸಿಗಲಿದೆ

ಎನ್‌ಎಸ್‌ಡಿಎಲ್: https://nsdl.co.in/Open_NSDL_Demat_Account.php
ಸಿಡಿಎಸ್‌ಎಲ್ : https://www.cdslindia.com/DP/dplist.aspx

LIFE INSURANCE CORPORATION OF INDIA is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offer of its Equity Shares and has filed the draft red herring prospectus dated February 13, 2022 ("DRHP") read with the corrigendum dated February 15, 2022. The DRHP is available on the websites of SEBI at www.sebi.gov.in, websites of the Stock Exchanges i.e., BSE at www.bseindia.com and NSE at www.nseindia.com, respectively and is also available on the websites of the BRLMs, i.e. Kotak Mahindra Capital Company Limited at https://investmentbank.kotak.com, Axis Capital Limited at www.axiscapital.co.in, BofA Securities India Limited at www.ml-india.com, Citigroup Global Markets India Private Limited at www.online.citibank.co.in/rhtm/citigroupglobalscreen1.htm, Goldman Sachs (India) Securities Private Limited at www.goldmansachs.com, ICICI Securities Limited at www.icicisecurities.com, JM Financial Limited at www.jmfl.com, J.P. Morgan India Private Limited at www.jpmipl.com, Nomura Financial Advisory and Securities (India) Private Limited at www.nomuraholdings.com/company/group/asia/india/index.html and SBI Capital Markets Limited at www.sbicaps.com. Potential investors should note that investment in equity shares involves a high degree of risk and for details relating to such risk, please see the section titled 'Risk Factors' of the RHP, when filed. Potential investors should not rely on the DRHP filed with SEBI for making any investment decision. Specific attention of the investors is invited to "Risk Factors" beginning on page 23 of the DRHP.

This announcement does not constitute an offer of securities for sale in any jurisdiction, including the United States, and any securities described in this announcement may not be offered or sold in the United States absent registration under the U.S. Securities Act of 1933, as amended, or an exemption from such registration. No public offering or sale of securities in the United States is contemplated.

LIC ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ LIFE INSURANCE CORPORATION OF INDIA
LIC/RKS/2021-22/48/KAN

ನಮ್ಮನ್ನು ಫಾಲೋ ಮಾಡಿರಿ: YouTube LIC India Forever | IRDAI Regn No.: 512
ಪ್ರತಿ ಕ್ಷಣವೂ ನಿಮ್ಮೊಂದಿಗೆ

ಪಾವತಿಯಾಗದ ಬಿಲ್: ಕಸ ವಿಲೇವಾರಿ ಸ್ಥಗಿತ

ಪ್ರಜಾವಾಣಿ ವಾರ್ತೆ

ವಿದ್ಯಾಪೀಠ ಲೇಔಟ್ ಮುಖ್ಯರಸ್ತೆಯಲ್ಲಿ ಕಸ ರಾಶಿ ಬಿದ್ದಿರುವುದು (ಎಡ ಚಿತ್ರ) ಬಿಬಿಎಂಪಿ ಕಚೇರಿ ಎದುರು ಧರಣಿ ನಡೆಸಿದ ಕಸ ವಿಲೇವಾರಿ ಗುತ್ತಿಗೆದಾರರು ಮತ್ತು ಕಾರ್ಮಿಕರು –ಪ್ರಜಾವಾಣಿ ಚಿತ್ರಗಳು

ಬೆಂಗಳೂರು: ಎಂಟು ತಿಂಗಳಿಂದ ಕಸ ವಿಲೇವಾರಿ ಮಾಡಿರುವ ಬಿಲ್ ಬಾಕಿ ಉಳಿಸಿಕೊಂಡಿರುವ ಬಿಬಿಎಂಪಿ ವಿಶೇಷ ಆಯುಕ್ತೆ(ಹಣಕಾಸು) ತುಳಸಿ ಮದ್ದಿನೇನಿ ಅವರ ಧೋರಣೆ ಖಂಡಿಸಿ ಕಸ ವಿಲೇವಾರಿ ಸ್ಥಗಿತಗೊಳಿಸಿ ಗುತ್ತಿಗೆದಾರರು ಮತ್ತು ಕಾರ್ಮಿಕರು ಪ್ರತಿಭಟನೆ ನಡೆಸಿದರು. ಇದರಿಂದಾಗಿ ನಗರದಲ್ಲಿ ಕಸ ವಿಲೇವಾರಿಯಾಗದೆ ಎಲ್ಲೆಂದರಲ್ಲಿ ಬೀಳುವಂತಾಯಿತು.

ಬಿಬಿಎಂಪಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿರುವ ಗುತ್ತಿಗೆದಾರರು ಮತ್ತು ಕಾರ್ಮಿಕರು, ತುಳಸಿ ಮದ್ದಿನೇನಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಎನ್. ಬಾಲಸುಬ್ರಹ್ಮಣ್ಯ, 'ಮನೆ–ಮನೆಯಿಂದ ಕಸ ಸಂಗ್ರಹ ಮಾಡಿ ವಿಲೇವಾರಿ ಮಾಡುವ ಮೂಲಕ ಬೆಂಗಳೂರು ನಗರದ ಜನರ ಕೆಲಸಗಳಲ್ಲಿ ನಾವು ನಿತ್ಯ ಪ್ರತ್ಯಕ್ಷವಾಗಿ ಪಾಲ್ಗೊಳ್ಳುತ್ತಿದ್ದೇವೆ. ನಾವು ಮಾಡಿದ ಕೆಲಸಕ್ಕೆ ತಕ್ಕಂತೆ ನೀಡಬೇಕಾದ ಹಣವನ್ನು ಬಿಬಿಎಂಪಿ ಬಿಡುಗಡೆ ಮಾಡದಿದ್ದರೆ ಹೇಗೆ' ಎಂದು ಪ್ರಶ್ನಿಸಿದರು.

'ಗುತ್ತಿಗೆದಾರರು ಎಲ್ಲರಂತೆ ಮನುಷ್ಯರು ಎಂಬುದನ್ನು ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು. ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆ ಮಾಡದಿದ್ದರೆ ಸಾವಿರಾರು ಕುಟುಂಬಗಳು ಬೀದಿಗೆ ಬೀಳುತ್ತದೆ' ಎಂದು ಹೇಳಿದರು.

'ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ ಅವರ ಮೊಂಡತನ, ಸರ್ವಾಧಿಕಾರಿ ಧೋರಣೆಯಿಂದ ಈ ಸಂಕಷ್ಟ ಬಂದಿದೆ. ಕಸ ವಿಲೇವಾರಿ ಜತೆಗೆ ಬಿಬಿಎಂಪಿಯ ಕಲ್ಯಾಣ ಕಾರ್ಯಕ್ರಮಗಳು, ಕಾಮಗಾರಿ ಬಿಲ್ಲುಗಳು ಕೂಡ ಪಾವತಿಯಾಗಿಲ್ಲ. ಇದರಿಂದ ಬೆಂಗಳೂರಿನ ಅಭಿವೃದ್ಧಿಗೆ ಕುಂಠಿತವಾಗಲಿದೆ' ಎಂದರು.

'ಮುಖ್ಯ ಆಯುಕ್ತರು ಆದೇಶ ನೀಡಿದ್ದರೂ ತುಳಸಿ ಮದ್ದಿನೇನಿ ಅವರು ಯಾವುದೇ ಕ್ರಮ ಕೈಗೊಳ್ಳದೆ ಸತಾಯಿಸುತ್ತಿದ್ದಾರೆ. ಆದ್ದರಿಂದ ಕಸ ವಿಲೇವಾರಿ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ರಾಶಿ ಬಿದ್ದ ಕಸ, ಶನಿವಾರವೂ ವಿಲೇವಾರಿ ಇಲ್ಲ

ಕಸ ವಿಲೇವಾರಿ ಸ್ಥಗಿತ ಆಗಿರುವುದರಿಂದ ನಗರದಲ್ಲಿ ಅಲ್ಲಲ್ಲಿ ಕಸ ವಿಲೇವಾರಿಯಾಗದೆ ರಾಶಿ ಬಿದ್ದಿದ್ದು, ನಾಗರಿಕರಿಗೆ ಕಿರಿಕಿರಿ ಉಂಟು ಮಾಡಿದೆ.

ಕೆ.ಆರ್.ಮಾರುಕಟ್ಟೆ, ಎಸ್‌ಪಿ ರಸ್ತೆ, ಬನಶಂಕರಿ ಬಳಿ ಕನಕಪುರ ಮುಖ್ಯ ರಸ್ತೆ, ರಿಂಗ್ ರಸ್ತೆ, ಕತ್ರಿಗುಪ್ಪೆ, ರಾಜಾಜಿನಗರ, ಜಯನಗರ ಸೇರಿ ನಗರದ ಹಲವೆಡೆ ಕಸದ ರಾಶಿ ರಸ್ತೆ ಬದಿಯಲ್ಲಿ ಬಿದ್ದಿರುವುದು ಶುಕ್ರವಾರ ಕಂಡು ಬಂತು. ಕಸದ ಟಿಪ್ಪರ್‌ಗಳು ಅಲ್ಲಲ್ಲಿ ಸಾಲುಗಟ್ಟಿ ನಿಂತಿದ್ದು, ಡೈರಿ ವೃತ್ತದಲ್ಲಿ ನಿಂತಿರುವ ಟಿಪ್ಪರ್‌ಗಳಿಗೆ ನಿವಾಸಿಗಳೇ ಕಸ ತಂದು ಸುರಿದಿರುವುದು ಕಂಡು ಬಂತು. 'ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಶನಿವಾರ ಬೆಳಿಗ್ಗೆ 10.30ಕ್ಕೆ ಸಭೆ ಕರೆದಿದ್ದಾರೆ. ಅಲ್ಲಿ ಏನು ನಿರ್ಧಾರ ಆಗಲಿದೆ ಎಂಬುದನ್ನು ನೋಡಿಕೊಂಡು ಮುಂದಿನ ಹೆಜ್ಜೆ ಇಡಲಾಗುವುದು. ಆ ತನಕ ಕಸ ವಿಲೇವಾರಿ ನಿರ್ವಹಿಸುವುದಿಲ್ಲ' ಎಂದು ಬಾಲಸುಬ್ರಹ್ಮಣ್ಯ 'ಪ್ರಜಾವಾಣಿ'ಗೆ ತಿಳಿಸಿದರು.

'ಕಸ ವಿಲೇವಾರಿ ಗುತ್ತಿಗೆದಾರರು 12 ಸಾವಿರ ಕಾರ್ಮಿಕರಿಗೆ ವೇತನ ಕೊಡಬೇಕಿದೆ. 8 ತಿಂಗಳಿಂದ ಬಾಕಿ ಬಿಡುಗಡೆ ಮಾಡದಿದ್ದರೆ ಯಾವ ಹಣದಲ್ಲಿ ವೇತನ ನೀಡಬೇಕು' ಎಂದು ಅವರು ಪ್ರಶ್ನಿಸಿದರು.

ವಿವಿಧೆಡೆ ಇಂದು, ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಕಾರ್ಯ, ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಇಂದು ಮತ್ತು ನಾಳೆ ನಗರದ ವಿವಿಧೆಡೆ ಬೆಳಿಗ್ಗೆ 10ರಿಂದ ಸಂಜೆ 5ರ ಅವಧಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಲಕ್ಷ್ಮಣನಗರ, ಹರ್ಷ ಬಡಾವಣೆ, ವಿದ್ಯಾಪೀಠ ರಸ್ತೆ, ಬಿಜಿಎಸ್ ಆಸ್ಪತ್ರೆ ರಸ್ತೆ, ಮೈಸೂರು ಹೆದ್ದಾರಿ, ಸಿಂಡಿಕೇಟ್ ಬ್ಯಾಂಕ್ ಬಡಾವಣೆ, ಹೊಸಹಳ್ಳಿ ರಸ್ತೆ, ತರಳು ಎಸ್ಟೇಟ್, ವಾಸುದೇವಪುರ, ರೈಲ್ವೆ ನಿಲ್ದಾಣ ರಸ್ತೆ, ಉಲ್ಲಾಳ ನಗರ, ಮಾರುತಿ ನಗರ, ಬಿಇಎಲ್ 1ಮತ್ತು 2ನೇ ಹಂತ, ಗಾಂಧಿ ಪಾರ್ಕ್–1, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ, ಬಿಡಿಎ ಕಾಲೋನಿ, ಕಮ್ಮಗೊಂಡನಹಳ್ಳಿ, ರಾಘವೇಂದ್ರ ಬಡಾವಣೆ, ಲಕ್ಷ್ಮೀಪುರ, ವಡೇರಹಳ್ಳಿ, ಅಬ್ಬಿಗೆರೆ ಕೈಗಾರಿಕೆ ಪ್ರದೇಶ, ಸಿಂಗಪುರ, ಅಬ್ಬಿಗೆರೆ ಗ್ರಾಮ, ನಿಸರ್ಗ ಬಡಾವಣೆ, ಕೆಂಪೇಗೌಡ ಬಡಾವಣೆ, ಕಲಾನಗರ ಮುಖ್ಯ ರಸ್ತೆ, ವರದರಾಜ ನಗರ, ವಿನಾಯಕನಗರ, ಅರೇಹಳ್ಳಿ, ಇಟ್ಟಮಡು, ಎಜಿಎಸ್ ಬಡಾವಣೆ, ಚಿಕ್ಕಲ್ಲಸಂದ್ರ, ಭುವನೇಶ್ವರಿ ನಗರ ಪ್ರದೇಶಗಳು

20ಕ್ಕೆ: ಬೊಮ್ಮಸಂದ್ರ ಕೈಗಾರಿಕೆ ಪ್ರದೇಶ 1,2, 3 ಹಂತ, ಆರ್.ಕೆ. ಲೇಕ್ ವೀವ್, ಶ್ರೀರಾಮಪುರ ಸುತ್ತಮುತ್ತ ಪ್ರದೇಶ.

ಬಹುಮಹಡಿ ಕಟ್ಟಡ ಬಿಲ್ ಪಾವತಿಸಲು ವರ್ಚುವಲ್ ಖಾತೆ

ಬೆಂಗಳೂರು: ಬಹುಮಹಡಿ ಕಟ್ಟಡಗಳ ನೀರಿನ ಬಿಲ್‌ಗಳನ್ನು ಆರ್‌ಟಿಜಿಎಸ್, ಎನ್‌ಇಎಫ್‌ಟಿ ಮೂಲಕ ಪಾವತಿಸಲು ಜಲಮಂಡಳಿ ಅನುಕೂಲ ಕಲ್ಪಿಸಿದೆ.

ನಗದುರಹಿತಪಾವತಿಹಾಗೂಡಿಜಿಟಲೀಕರಣ ಪಾವತಿ ಉತ್ತೇಜಿಸುವ ನಿಟ್ಟಿನಲ್ಲಿ ಈ ಕ್ರಮಕೈಗೊಳ್ಳಲಾಗಿದೆ. ಕೋಟಕ್ ಮಹಿಂದ್ರ ಬ್ಯಾಂಕ್ ವತಿಯಿಂದ ಆರ್.ಆರ್. ಸಂಖ್ಯೆಗಳಿಗೆ ಅನುಗುಣವಾಗಿ ವರ್ಚುವಲ್ ಖಾತೆ ಸಂಖ್ಯೆಗಳನ್ನು ಸೃಷ್ಟಿಸಲಾಗಿದೆ. ಗ್ರಾಹಕರು ಈ ವರ್ಚುವಲ್ ಖಾತೆ ಸಂಖ್ಯೆಗಳ ಮೂಲಕ ನೀರಿನ ಬಿಲ್ ಅನ್ನು ಪಾವತಿಸಬಹುದಾಗಿದೆ.

ಪ್ರಸ್ತುತ ಜಾರಿಯಲ್ಲಿರುವ ಬಹುಮಹಡಿ ಕಟ್ಟಡಗಳ ಆರ್.ಆರ್.ಸಂಖ್ಯೆಗಳಿಗೆ ವರ್ಚುವಲ್ ಖಾತೆ ಸಂಖ್ಯೆ ರಚಿಸಿದ ಉಪವಿಭಾಗವಾರು ಪಟ್ಟಿಯನ್ನು ಮಂಡಳಿ ಅಧಿಕೃತ ವೆಬ್‌ಸೈಟ್‌ನಲ್ಲಿ (bwssb.karnataka.gov.in) ಪ್ರಕಟಿಸಲಾಗಿದೆ. ಈ ಪಟ್ಟಿಯಲ್ಲಿ ಸೇರಿರದವರು ಆರ್.ಆರ್. ಸಂಖ್ಯೆಗಳಿದ್ದಲ್ಲಿ ಉಪವಿಭಾಗ ಸಂಪರ್ಕಿಸಬಹುದು ಅಥವಾ ಗ್ರಾಹಕರ ಕೋರಿಕೆ ಮೇರೆಗೆ ವರ್ಚುವಲ್ ಖಾತೆ ಸಂಖ್ಯೆ ರಚಿಸಲು fa@bwssb.gov.in ಮೂಲಕ ಕೋರಿದ್ದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಜಲಮಂಡಳಿ ತಿಳಿಸಿದೆ.

ವರ್ಚುವಲ್ ಖಾತೆ ಸಂಖ್ಯೆಗಳ ಮೂಲಕ ಬಿಲ್ ಪಾವತಿಸಲು ಇಚ್ಛಿಸುವ ಗ್ರಾಹಕರು ಆರ್‌ಟಿಜಿಎಸ್ ನಮೂನೆಯಲ್ಲಿ ಈ ಕೆಳಕಂಡ ವಿವರಗಳನ್ನು ಭರ್ತಿ ಮಾಡಬೇಕು ಎಂದು ತಿಳಿಸಿದ್ದಾರೆ.

ಖಾತೆದಾರರ ಹೆಸರು: ಬಿಡಬ್ಲ್ಯೂಎಸ್‌ಎಸ್‌ಬಿ ಅಧ್ಯಕ್ಷರು, ಬ್ಯಾಂಕ್: ಕೋಟಕ್ ಮಹಿಂದ್ರ ಬ್ಯಾಂಕ್, ಶಾಖೆ: ಕೆ.ಜಿ. ರಸ್ತೆ. ಐಎಫ್‌ಎಸ್‌ಸಿ ಕೋಡ್: KKBK0000958.

ಮಂಗಳೂರು: ಹಾರುವ ಮೀನು ಬಲೆಗೆ

ಮಂಗಳೂರು: ನಗರದ ದಕ್ಕೆಗೆ ಮರಳಿರುವ ಮೀನುಗಾರಿಕೆ ಬೋಟ್‌ನಲ್ಲಿ, ಎರಡು ಅಪರೂಪದ ಹಾರುವ ಮೀನುಗಳು ಬಲೆಗೆ ಬಿದ್ದಿವೆ ಎಂದು ಮೀನುಗಾರ ಲೋಕೇಶ್ ಬೆಂಗ್ರೆ ತಿಳಿಸಿದ್ದಾರೆ.

ಇಂಗ್ಲಿಷ್‌ನಲ್ಲಿ ಇವುಗಳನ್ನು ಫ್ಲೈಯಿಂಗ್ ಫಿಶ್ ಎನ್ನುತ್ತಾರೆ. ಇವು ಆಳ ಸಮುದ್ರದಲ್ಲಿರುವ ಮೀನಿನ ಪ್ರಭೇದಕ್ಕೆ ಸೇರಿದವು. ರೆಕ್ಕೆ, ದೇಹದ ಎಲುಬುಗಳ ಭಿನ್ನ ರಚನೆಯಿಂದ ನೀರಿನಿಂದ ಮೇಲೆ, ಕೆಲ ಹೊತ್ತು ಹಕ್ಕಿಗಳಂತೆಯೇ ಹಾರುವ ಸಾಮರ್ಥ್ಯ ಹೊಂದಿವೆ.

ಸುದ್ದಿ 2 ನಿಮಿಷ

ಇಂದು 'ಜಲ ಸ್ಪಂದನ' ಕಾರ್ಯಕ್ರಮ

ಬೆಂಗಳೂರು: ಜಲಮಂಡಳಿಯು ನೀರು ಮತ್ತು ಒಳಚರಂಡಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಲು ಫೆ.19ರಂದು 'ಜಲ ಸ್ಪಂದನ' ಕಾರ್ಯಕ್ರಮ ಆಯೋಜಿಸಿದೆ.

ದೂರವಾಣಿ ಮೂಲಕ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ 16 ವಿವಿಧ ಸ್ಥಳಗಳಲ್ಲಿ ಮುಖ್ಯ ಎಂಜಿನಿಯರ್‌ಗಳು ಮತ್ತು ಹೆಚ್ಚುವರಿ ಮುಖ್ಯ ಎಂಜಿನಿಯರ್‌ಗಳ ಸಮ್ಮುಖದಲ್ಲಿ 'ಜಲ ಸ್ಪಂದನ' ಕಾರ್ಯಕ್ರಮ ನಡೆಯಲಿದೆ.

ಪ್ರತಿ ಮೂರನೇ ಶನಿವಾರ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಳನ್ನು www.bwssb.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ ದೂರು ನಿರ್ವಹಣಾ ಕೇಂದ್ರ ಸಹಾಯವಾಣಿ 1916ಕ್ಕೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು ಹಾಗೂ ವಾಟ್ಸ್‌ಆ್ಯಪ್ ಸಂಖ್ಯೆ:8762228888 ಗೆ ಸಂದೇಶದ ಮೂಲಕ ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ: ಚುನಾವಣೆ ನಿಗದಿಗೆ 28ಕ್ಕೆ ಸಭೆ

ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಪದಾಧಿಕಾರಿಗಳ ಸ್ಥಾನಕ್ಕೆ ಚುನಾವಣೆ ನಡೆಸುವ ಸಂಬಂಧ ಫೆ. 28ಕ್ಕೆ ಕಾರ್ಯಕಾರಿ ಸಮಿತಿಯ ಸಭೆ ನಿಗದಿಯಾಗಿದೆ. ವಾಣಿಜ್ಯ ಮಂಡಳಿಗೆ ಶೀಘ್ರವೇ ಚುನಾವಣೆ ನಡೆಸಬೇಕು ಎಂಬ ಒತ್ತಾಯ ಸದಸ್ಯರ ವಲಯದಿಂದಲೇ ದೀರ್ಘ ಕಾಲದಿಂದ ಕೇಳಿಬಂದಿತ್ತು. ಕೋವಿಡ್, ಲೆಕ್ಕಪತ್ರಗಳ ನಿರ್ವಹಣೆ, ಕೆಲವು ಪ್ರಕರಣಗಳ ವಿಚಾರಣೆ ಸಂಬಂಧಿಸಿ ಹಲವಾರು ಕಾರಣಗಳಿಂದ ಚುನಾವಣೆ ಮುಂದಕ್ಕೆ ಹೋಗಿತ್ತು.

'ಹೊಸ ಆಡಳಿತ ಮಂಡಳಿಯನ್ನು ರಚಿಸುವ ಸಂಬಂಧ ಮುಹೂರ್ತ ನಿಗದಿಗೆ ಈ ಸಭೆ ನಡೆಸಲಾಗುತ್ತಿದೆ. ಈಗಾಗಲೇ ಸದಸ್ಯರಿಗೆ ಸಭೆಯ ಸೂಚನೆಯನ್ನು ಕಾರ್ಯಕಾರಿ ಸಮಿತಿ ಸದಸ್ಯರಿಗೆ ಕಳುಹಿಸಲಾಗಿದೆ' ಎಂದು ಮಂಡಳಿಯ ಗೌರವ ಕಾರ್ಯದರ್ಶಿ ಎನ್.ಎಂ. ಸುರೇಶ್ ಮಾಹಿತಿ ನೀಡಿದರು.

ಚುನಾವಣೆ ನಡೆಸದ ಬಗ್ಗೆ ಮಂಡಳಿಯ ಕೆಲವು ಸದಸ್ಯರು ಸಹಕಾರ ಸಂಘಗಳ ಉಪನಿಬಂಧಕರಿಗೆ ದೂರು ಸಲ್ಲಿಸಿದ್ದರು. ಆ ದೂರನ್ನು ಉಲ್ಲೇಖಿಸಿ ಸಂಘಗಳ ಜಿಲ್ಲಾ ನೋಂದಣಾಧಿಕಾರಿ ಎಸ್.ಜಿ. ಮಂಜುನಾಥ್ ಅವರು, ಕೂಡಲೇ ಚುನಾವಣಾ ಪ್ರಕ್ರಿಯೆ ಕೈಗೊಳ್ಳುವಂತೆ ಸೂಚಿಸಿದ್ದರು.

ಉದ್ಯಾನಗಳ ಅಭಿವೃದ್ಧಿ ಹೆಸರಿನಲ್ಲಿ ಹಣ ಪೋಲು: ಬಿಎನ್‌ಪಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಾನಗಳ ಅಭಿವೃದ್ಧಿ ಹೆಸರಿನಲ್ಲಿ ಅನಗತ್ಯವಾಗಿ ಬಿಬಿಎಂಪಿ ಹೆಚ್ಚಿನ ಅನುದಾನ ನಿಗದಿಪಡಿಸಿ ತೆರಿಗೆದಾರರ ಹಣವನ್ನು ಪೋಲು ಮಾಡುತ್ತಿದೆ ಎಂದು ಬೆಂಗಳೂರು ನವನಿರ್ಮಾಣ ಪಕ್ಷ (ಬಿಎನ್‌ಪಿ) ಆರೋಪಿಸಿದೆ.

'ಲೆಕ್ಕ ಬೇಕು' ಕುರಿತು ಬಿಎನ್‌ಪಿ ಆರಂಭಿಸಿರುವ ಅಭಿಯಾನದ ಅಂಗವಾಗಿ ಉದ್ಯಾನಗಳ ಅಭಿವೃದ್ಧಿಗೆ ಬಿಬಿಎಂಪಿ ಖರ್ಚು ಮಾಡಿರುವ ವಿವರಗಳನ್ನು ನೀಡಿದೆ. ಅತ್ಯಂತ ಚಿಕ್ಕದಾಗಿರುವ ನಿಮ್ಹಾನ್ಸ್ ಪಾರ್ಕ್ ಅಭಿವೃದ್ಧಿಗೆ ಸುಮಾರು ₹ 3 ಕೋಟಿ ವೆಚ್ಚ ಮಾಡಲಾಗಿದೆ ಎಂದು ಅದು ದೂರಿದೆ.

ಜಯನಗರ ಪೂರ್ವದಲ್ಲಿರುವ ಉದ್ಯಾನಗಳ ವಾಸ್ತವ ಅಭಿವೃದ್ಧಿ ಮತ್ತು ವೆಚ್ಚಕ್ಕೆ ಹೋಲಿಸಿದರೆ ಹಣ ವ್ಯರ್ಥವಾಗಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದು ತಿಳಿಸಿದೆ.

ಜಯನಗರದ ಪೂರ್ವ ವಾರ್ಡ್ -170ರಲ್ಲಿ ಉದ್ಯಾನಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸುಧಾರಣೆಗೆ ಸಂಬಂಧಿಸಿದಂತೆ ₹ 6.55 ಕೋಟಿ ವೆಚ್ಚದಲ್ಲಿ ಒಟ್ಟು 37 ಯೋಜನೆಗಳನ್ನು ಬಿಬಿಎಂಪಿ ಮಂಜೂರು ಮಾಡಿತ್ತು. ಆದರೆ, ಇವುಗಳಲ್ಲಿ ಆರು ಯೋಜನೆಗಳನ್ನು ಮಾತ್ರ ಕಳೆದ ಐದು ವರ್ಷಗಳಲ್ಲಿ ಕೈಗೊಂಡಿದ್ದು, ₹5.57 ಕೋಟಿ ಮೊತ್ತವನ್ನು ಬಳಸಲಾಗಿದೆ ಎಂದು ತಿಳಿಸಿದೆ.

ನಿಮ್ಹಾನ್ಸ್ ಪಾರ್ಕ್‌ಗೆ ಅಲಂಕಾರಿಕ ಗ್ರಿಲ್‌ಗಳು ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳಿಗೆ ₹1.5 ಕೋಟಿ ವೆಚ್ಚ ಮಾಡಲಾಗಿದೆ. ಜತೆಗೆ, ₹99 ಲಕ್ಷ ಮೊತ್ತವನ್ನು ಉದ್ಯಾನ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸುಧಾರಣೆಗೆ ಖರ್ಚು ಮಾಡಲಾಗಿದೆ. ₹30 ಲಕ್ಷಗಳಲ್ಲಿ ಅಲಂಕಾರಿಕ ಮಾರ್ಗದ ಬೆಳಕಿನ ವ್ಯವಸ್ಥೆ ಕಲ್ಪಿಸಲು ಖರ್ಚು ಮಾಡಲಾಗಿದೆ. ಬಿಎನ್‌ಪಿ ಪೋರ್ಟಲ್‌ನಲ್ಲಿ ಈ ಬಗ್ಗೆ ಎಲ್ಲ ವಿವರಗಳನ್ನು ನೀಡಲಾಗಿದೆ ಎಂದು ತಿಳಿಸಿದೆ.

ಅದೇ ರೀತಿ ₹1.3 ಕೋಟಿ ಮೊತ್ತವನ್ನು ಎಂಇಡಬ್ಲ್ಯೂಎ ಸ್ಕೂಲ್ ಪಾರ್ಕ್‌ಗೆ ಅಲಂಕಾರಿಕ ಗ್ರಿಲ್ ಮಾರ್ಗಗಳು ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ಒದಗಿಸಲು ಮತ್ತು ಸರಿಪಡಿಸಲು ಖರ್ಚು ಮಾಡಲಾಗಿದೆ. ವಾರ್ಡ್ ಸಂಖ್ಯೆ 170ರಲ್ಲಿ ಎನ್‌ಎಎಲ್ ಲೇಔಟ್ ಪಾರ್ಕ್ ಮತ್ತು ಸುತ್ತಮುತ್ತಲಿನ ಪ್ರದೇಶದ ಸುಧಾರಣೆಗೆ ₹1 ಕೋಟಿ ಬಳಸಲಾಗಿದೆ. ಹೆಚ್ಚುವರಿಯಾಗಿ, ವಾರ್ಡ್ ಸಂಖ್ಯೆ 170ರ ಉದ್ಯಾನಗಳಲ್ಲಿ ಹಿರಿಯ ನಾಗರಿಕರಿಗೆ ಜಿಮ್ ಉಪಕರಣಗಳನ್ನು ಒದಗಿಸಲು ಮತ್ತು ದುರಸ್ತಿ ಕೆಲಸಕ್ಕೆ ₹50 ಲಕ್ಷಗಳನ್ನು ಖರ್ಚು ಮಾಡಲಾಗಿದೆ ಎಂದು ವಿವರಿಸಿದೆ.

ಉದ್ಯಾನದಲ್ಲಿರುವ ಉಪಕರಣಗಳು ಈಗಾಗಲೇ ಮುರಿದಿವೆ. ಕೆಲವು ಉಪಕರಣಗಳು ತುಕ್ಕು ಹಿಡಿದಿವೆ. ಇವುಗಳನ್ನು ನಿಯಮಿತವಾಗಿ ಪರಿಶೀಲಿಸುವುದಿಲ್ಲ. ಉದ್ಯಾನವನಗಳ ಸಂಪೂರ್ಣ ಸದುಪಯೋಗವಾಗುತ್ತಿಲ್ಲ ಎಂದು ನಿವಾಸಿಗಳು ದೂರಿದ್ದಾರೆ ಎಂದು ಬಿಎನ್‌ಪಿ ತಿಳಿಸಿದೆ.

'ಬಿಬಿಎಂಪಿ ನಿರರ್ಥಕ ಕಾಮಗಾರಿಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದೆ. ಹಣ ಖರ್ಚು ಮಾಡಿದರೂ ಉದ್ಯಾನಗಳ ನಿರ್ವಹಣೆ ಸರಿಯಾಗಿಲ್ಲ' ಎಂದು ಬಿಎನ್‌ಪಿಯ ಜಯನಗರ ವಾರ್ಡ್‌ನ ಮನ್ಸೂರ್ ತಿಳಿಸಿದ್ದಾರೆ

ಬಿಎನ್‌ಪಿ ನಾಗರಿಕ ಪೋರ್ಟಲ್ ವಿವರಗಳ ಪ್ರಕಾರ ಒಟ್ಟು ₹100 ಕೋಟಿ ಮೊತ್ತವನ್ನು ಜಯನಗರದ ಏಳು ವಾರ್ಡ್‌ಗಳಿಗೆ ಮಂಜೂರು ಮಾಡಲಾಗಿದೆ. ಇದರಲ್ಲಿ ಅಂದಾಜು ₹35 ಕೋಟಿ ಮೊತ್ತವನ್ನು ಉದ್ಯಾನಗಳ ದುರಸ್ತಿ, ನಿರ್ವಹಣೆಗೆ ಖರ್ಚು ಮಾಡಲಾಗಿದೆ.

'ಬಿಬಿಎಂಪಿ ವಾರ್ಡ್ ಮಟ್ಟದಲ್ಲಿ ಬಜೆಟ್ ರೂಪಿಸಬೇಕು. ಸರಳ ಯೋಜನೆಗಳಿಗೆ ಕೋಟ್ಯಂತರ ರೂಪಾಯಿ ತೆರಿಗೆದಾರರ ಹಣವನ್ನು ಖರ್ಚು ಮಾಡುವಲ್ಲಿ ನಗರ ಪಾಲಿಕೆ ಪಾರದರ್ಶಕತೆಯನ್ನು ಕಾಪಾಡುತ್ತಿಲ್ಲ' ಎಂದು ಪಕ್ಷದ ಕಾರ್ಯಕರ್ತ ಎಂ. ಚೇತನ್ ದೂರಿದ್ದಾರೆ.

ನಗರದಲ್ಲಿ ಇಂದು

ರಕ್ತದಾನ ಶಿಬಿರ: ಉದ್ಘಾಟನೆ–ನಾರಾಯಣ ರಾವ್ ಆರ್.ಮಾನೆ, ಅತಿಥಿ–ರಾಮಮೂರ್ತಿ, ಆಯೋಜನೆ–ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎನ್‌ಎಂಐಟಿ), ಲಯನ್ಸ್ ಕ್ಲಬ್, ಸ್ಥಳ–ಬಿಎನ್‌ಎಂಐಟಿ ಕಾಲೇಜು ಸಭಾಂಗಣ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9

ಶಿವಾಜಿ ಜಯಂತಿ: ಆಶೀರ್ವಚನ–ಮಂಜುನಾಥ ಸ್ವಾಮೀಜಿ, ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿದ್ಯಾರ್ಥಿವೇತನ ವಿತರಣೆ–ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಪಿ.ಜಿ.ಆರ್.ಸಿಂಧ್ಯ, ಅಧ್ಯಕ್ಷತೆ–ಎಸ್.ಮನೋಜ್ ಕುಮಾರ್ ರಣ್ಣೋರೆ, ಆಯೋಜನೆ–ಕರ್ನಾಟಕ ಮರಾಠ ಕ್ಷೇಮಾಭಿವೃದ್ಧಿ ಸಂಘ, ಸ್ಥಳ–ಛತ್ರಪತಿ ಶಿವಾಜಿ ಸ್ಮಾರಕ, ಸದಾಶಿವನಗರ, ಬೆಳಿಗ್ಗೆ 9

ಪತ್ರಿಕಾ ವಿತರಕರು ಮತ್ತು ಪತ್ರಿಕೆ ಹಂಚುವ ಹುಡುಗರಿಗೆ ಇ–ಶ್ರಮ ಕಾರ್ಡ್ ವಿತರಣೆ: ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್, ನೇತೃತ್ವ–ಅಬಕಾರಿ ಸಚಿವ ಕೆ.ಗೋಪಾಲಯ್ಯ, ಆಯೋಜನೆ–ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ಸ್ಥಳ–ಮಹಾಲಕ್ಷ್ಮೀ ಬಡಾವಣೆ ಶಾಸಕರ ಭವನ, ನಾಗಪುರ, ಬೆಳಿಗ್ಗೆ 9.30

'ಸಂವಿಧಾನದ ಹಕ್ಕುಗಳು ಮತ್ತು ಮುಸ್ಲಿಂ ಮಹಿಳೆಯರ ಶಿಕ್ಷಣ' ಸಂವಾದ: ಆಯೋಜನೆ–ರೋಶನಿ ಫೌಂಡೇಷನ್ ಮತ್ತು ಪ್ರಗತಿಪರ ಚಿಂತಕರ ವೇದಿಕೆ, ಸ್ಥಳ–ಗಾಂಧಿಭವನ, ಬೆಳಿಗ್ಗೆ 11

ಮನೆಯಂಗಳದಲ್ಲಿ ಮಾತುಕತೆ: ಅತಿಥಿ–ಮಹಾದೇವ ಶಂಕನಪುರ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 4

ಸಂಭ್ರಮ–ಕಲೆ ಮತ್ತು ಸಂಸ್ಕೃತಿ ಉತ್ಸವ: ಅತಿಥಿ–ಎಂ.ಆರ್. ದೊರೆಸ್ವಾಮಿ, ಡಿ.ಜವಾಹರ್, ಜೆ.ಸೂರ್ಯಪ್ರಸಾದ್, ಆಯೋಜನೆ–ಪಿಇಎಸ್ ವಿಶ್ವವಿದ್ಯಾಲಯ, ಸ್ಥಳ–ಸಭಾಂಗಣ, ವಿಶ್ವವಿದ್ಯಾಲಯದ ಆವರಣ, ಆರ್.ಆರ್.ಕ್ಯಾಂಪಸ್, ಸಂಜೆ 4.30

'ಉತ್ತರ್ ದಕ್ಷಿಣ್'–ಜುಗಲ್‌ಬಂದಿ ಸಂಗೀತ ಕಾರ್ಯಕ್ರಮ: ತಾಜೇಂದ್ರ ನಾರಾಯಣ್ ಮತ್ತು ಆರ್.ಕುಮಾರೇಶ್, ಜಯಚಂದ್ರ ರಾವ್, ಒಜಾಸ್ ಅಧಿಯಾ, ಆಯೋಜನೆ–ವಿವಿಧ್ ಆರ್ಟ್ಸ್ ಆ್ಯಂಡ್ ಎಂಟರ್‌ಟೈನ್‌ಮೆಂಟ್, ಪಯೋನೀರ್ ಆರ್ಟ್ಸ್ ಎಜುಕೇಷನ್ ಸೊಸೈಟಿ, ಸ್ಥಳ–ಚೌಡಯ್ಯ ಸ್ಮಾರಕ ಭವನ, ಸಂಜೆ 6

ಭರತನಾಟ್ಯ ರಂಗಪ್ರವೇಶ: ಸಂಯುಕ್ತಾ ರಾಮಕೃಷ್ಣನ್ ಮತ್ತು ಶ್ರುತಿ ರಂಗನಾಥನ್, ಅತಿಥಿಗಳು–ವೀಣಾ ಭಟ್, ವೈ.ಕೆ.ಸಂಧ್ಯಶರ್ಮಾ, ಬಿ.ಪಿ.ರೇಖಾ ರಾವ್, ಆಯೋಜನೆ–ಶಿವಾನುಗ್ರಹ ಲಲಿತಕಲಾ ಟ್ರಸ್ಟ್, ಸ್ಥಳ–ಪ್ರಭಾತ್ ಕಲಾದ್ವಾರಕ (ಕೋರಮಂಗಲ ಕ್ಲಬ್), ಕೋರಮಂಗಲ 6ನೇ ಬ್ಲಾಕ್, ಸಂಜೆ 5

ಸಂಯುಕ್ತಾ ರಾಮಕೃಷ್ಣನ್ ಮತ್ತು ಶ್ರುತಿ ರಂಗನಾಥನ್

'ಬಸವನ ಬೆಳಕು–ಜಂಬೆ ಝೇಂಕಾರ' ಹಾಗೂ ಭೂಮಿ ಗೀತೆಗಳು ಸಂಗೀತ ಕಾರ್ಯಕ್ರಮ: ಅತಿಥಿಗಳು–ನಟ ಚೇತನ್, ನಂದೀಶ್ ವಿ.ಹಿರೇಮಠ್, ಲಕ್ಷ್ಮೀ ನಾರಾಯಣ, ಆಯೋಜನೆ–ಕಾಡುಮಲ್ಲೇಶ್ವರ ಗೆಳೆಯರ ಬಳಗ, ಇಂಡಿಯನ್ ಫೋಕ್ ಬ್ಯಾಂಡ್, ಸ್ಥಳ–ಕಾಡುಮಲ್ಲೇಶ್ವರ ಬಯಲು ರಂಗಮಂದಿರ, ಮಲ್ಲೇಶ್ವರ, ಸಂಜೆ 6.30

'ಪ್ರಾಜೆಕ್ಟ್ ನಗ್ನ' ನಾಟಕ ಪ್ರದರ್ಶನ: ಪ್ರಸ್ತುತಿ–ಅಂತರಂಗ ತಂಡ, ಸ್ಥಳ–ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ನಿಧನ ವಾರ್ತೆ

ಎನ್. ಲಕ್ಷ್ಮಿಕಾಂತ್

ದಾಬಸ್ ಪೇಟೆ: ಇಲ್ಲಿನ ಜಿನ್ನಯ್ಯನಪಾಳ್ಯದ ಎನ್. ಲಕ್ಷ್ಮಿಕಾಂತ್ (42) ಹೃದಯಾಘಾತದಿಂದ ಶುಕ್ರವಾರ ನಿಧನರಾಗಿದ್ದಾರೆ.

ಅವರು ತಮ್ಮ ಎರಡು ಕಣ್ಣುಗಳನ್ನು ದಾನ ಮಾಡಿದ್ದಾರೆ. ಅವರಿಗೆ ಮೂವರು ಸಹೋದರರು, ಪತ್ನಿ ಹಾಗೂ ಇಬ್ಬರು ಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮ ಜಿನ್ನಯನಪಾಳ್ಯದಲ್ಲಿ ನೆರವೇರಿತು.

ಪುರಸಭಾ ಕಾರ್ಯಾಲಯ
ಆನೇಕಲ್–562106, ಬೆಂಗಳೂರು ನಗರ ಜಿಲ್ಲೆ.
ಫೋನ್: 080–27830092, ಫ್ಯಾಕ್ಸ್ :080–27829225 ಇಮೇಲ್: itstaff_ulb_anekal@yahoo.co.in
ವೆಬ್‌ಸೈಟ್: www.anekaltown.mrc.gov.in
ಸಂಖ್ಯೆ: ಪು.ಕಾ.ಆ/ಜೆ.ಇ/ಮ್ಯಾ.ಟೆಂಡರ್/02/2021–22 ದಿನಾಂಕ: 18/02/2022

ಟೆಂಡರ್ ಪ್ರಕಟಣೆ
(ಮ್ಯಾನುಯಲ್ ಪದ್ಧತಿಯಡಿ)

ಆನೇಕಲ್ ಪುರಸಭಾ ವ್ಯಾಪ್ತಿಯ 2021–22ನೇ ಸಾಲಿನ ಪುರಸಭಾ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಡಾಕ್ಯುಮೆಂಟ್ KW-1ರ ನಿಬಂಧನೆಗಳೊಳಪಟ್ಟಂತೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿ ಹಾಗೂ ನಿಬಂಧನೆಗಳಿಗೆ ಕಛೇರಿ ವೇಳೆಯಯಿಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯುವುದು.

ವೇಳಾಪಟ್ಟಿ:
1. ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಿ ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ: 19/02/2022 ರಿಂದ 04/03/2022 ಸಂಜೆ 4–30 ಘಂಟೆಯವರೆಗೆ.
2. ಭರ್ತಿ ಮಾಡಿ ಮೊಹರು ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 04/03/2022 ಸಂಜೆ 5–00 ಘಂಟೆಯೊಳಗೆ.
3. ಟೆಂಡರ್ ತೆರೆಯುವ ದಿನಾಂಕ: 05/03/2022 ಸಂಜೆ 5–30 ಘಂಟೆಗೆ ತೆರೆಯಲಾಗುವುದು.

ಕ್ರ. ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂ	ಖಾಲಿ ಟೆಂಡರ್ ಫಾರಂ ರೂ.	ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ (ರಹಿತ)
1	ಆನೇಕಲ್ ಪಟ್ಟಣದ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಪಟ್ಟಣದ ಮುಖ್ಯ ರಸ್ತೆಗಳಿಗೆ ಥರ್ಮೋಪ್ಲಾಸ್ಟಿಕ್ ಮಾರ್ಕಿಂಗ್ ಮಾಡುವ ಕಾಮಗಾರಿ.	3.92	9800/–	500	90 ದಿನಗಳು

ಸಹಿ/– ಅಧ್ಯಕ್ಷರು ಪುರಸಭೆ, ಆನೇಕಲ್. ಸಹಿ/– ಉಪಾಧ್ಯಕ್ಷರು ಪುರಸಭೆ, ಆನೇಕಲ್. ಸಹಿ/– ಮುಖ್ಯಾಧಿಕಾರಿ ಪುರಸಭೆ, ಆನೇಕಲ್.

ನಗರಸಭಾ ಕಾರ್ಯಾಲಯ, ಮುಳಬಾಗಿಲು
CITY MUNICIPAL COUNCIL MULBAGAL, KOLAR DISTRICT-563 131
Phone No.08159-242044 E-mail:itstaff_ulb_mulabagal@yahoo.co.in
website:www.mulbagalcity.mrc.gov.in
ಸಂಖ್ಯೆ: ನಸಮು/ತಾಂತ್ರಿಕ/ಇತರೆ/ಸಿಆರ್/19/2021–22 ದಿನಾಂಕ: 16.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಿಸಲಾಗಿದೆ.)
ಮುಳಬಾಗಿಲು ನಗರಸಭೆ 2019–20ನೇ ಸಾಲಿನ 14ನೇ ಹಣಕಾಸು ಸಾಮಾನ್ಯ ಮೂಲ ಅನುದಾನ, 2019–20, 2020–21 & 2021–22ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ, 2020–21 15ನೇ ಹಣಕಾಸು ಯೋಜನೆಯಡಿ, 2017–18ನೇ ಸಾಲಿನ 14ನೇ ಹಣಕಾಸು ಆಯೋಗದ ಪರ್‌ಫಾರ್ಮೆನ್ಸ್ ಅನುದಾನ ಮತ್ತು ನಗರಸಭಾ ನಿಧಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಆಧ್ಯಾದ್ಯೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರುಗಳನ್ನು ಮತ್ತು ವಾಹನವನ್ನು ಪಡೆಯಲು ಅರ್ಹ ಏಜೆನ್ಸಿದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in ಮೂಲಕ ಈ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರವಾಗಿರುತ್ತದೆ. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕ್ರ.ಸಂ.	ಕಾಮಗಾರಿಯ ಇಂಡೆಂಟ್ ನಂಬರ್ (ರೂ.ಗಳಲ್ಲಿ)	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	Category
1.	DMA/2021-22/IND13303	41.00	Others
2.	DMA/2021-22/OW/WORK_INDENT128299	37.40	SC
3.	DMA/2021-22/RD/WORK_INDENT128300	27.00	Others
4.	DMA/2021-22/OW/WORK_INDENT128301	14.00	Others
5.	DMA/2021-22/OW/WORK_INDENT128303	3.00	Others
6.	DMA/2021-22/OW/WORK_INDENT128305	8.72	Others
7.	DMA/2021-22/OW/WORK_INDENT128306	10.24	Others
8.	DMA/2021-22/WS/WORK_INDENT128307	21.53	ST
9.	DMA/2021-22/OW/WORK_INDENT128308	9.05	SC
10.	CMC/MBL/TECH/CR/17/2021-22/Call-2	12.08	Others
11.	DMA/2021-22/IND12746/Call-2	18.35	Others
12.	DMA/2021-22/OW/WORK_INDENT128338	1.40	Others
13.	DMA/2021-22/IND13471	7.50	Others
14.	CMC/MBL/SHI/CR/01/2021-22	5.00	Others

(1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ:28.02.2022ರ ಸಮಯ: 17.00 ಗಂಟೆಯವರೆಗೆ.** (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ:02.03.2022ರ ಸಮಯ: 17.30ಗಂಟೆಗೆ.** (3) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ:05.03.2022ರ ಸಮಯ: 11.00 ಗಂಟೆಗೆ.**

ಸಹಿ/– ಪೌರಾಯುಕ್ತರು, ನಗರಸಭೆ, ಮುಳಬಾಗಿಲು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ387/ಎಂ.ಸಿ.ಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101 ದೂರವಾಣಿ ಸಂಖ್ಯೆ: ಕಛೇರಿ: 08156–270427 ಫ್ಯಾಕ್ಸ್: 08156 –270427 ಇಮೇಲ್-eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ
ಸಂಖ್ಯೆ : ಕಾಸಬ/ತಾಂಸ/ಸ.ಇಂ–1/ ಟೆಂಡರ್ ಪ್ರಕಟಣೆ ಸಂಖ್ಯೆ: 15/2021–22, ದಿನಾಂಕ : 15/02/2022
4702 ಪ್ರಧಾನ ಕಾಮಗಾರಿಗಳು, ಕೆರೆಗಳ ಆಧುನೀಕರಣ ಯೋಜನೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲೂ 3 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 02/03/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 05/03/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–270427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು – 560083. ದೂರವಾಣಿ ಸಂಖ್ಯೆ: 080–29755405
ಇ–ಮೇಲ್: dcfbnp83@gmail.com
ಸಂಖ್ಯೆ: ಎ3/ಸಿಆರ್–45/2020–21 ದಿನಾಂಕ: 18–02–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ಆನೇಕಲ್ ವನ್ಯಜೀವಿ ವಲಯದಲ್ಲಿನ ಕೆಂಚಮಲ್ಲಯ್ಯನಕೆರೆ ಇಲ್ಲಿ ಹೊಸ ಸ್ಟೀಲ್ ಫೈರ್ ವಾಚ್ ಟವರ್ಸ್ ನಿರ್ಮಿಸುವುದು.

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಸ್ತಾವೇಜು ಮಾರಾಟದ ಅವಧಿ ದಿನಾಂಕ: **17–02–2022 ರಿಂದ 25–02–2022.** 2) ಟೆಂಡರ್‌ಗಳ ಮೊದಲ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ: **26–02–2022ರಂದು ಬೆಳಿಗ್ಗೆ 11.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಿ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು.
ವಾಸಾಸಂಇ/ಬೆಂ.ನ/ಅಡ್ವರ್ಟೋ/3436/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲೋಕೋಪಯೋಗಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ,
ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 44/2021–22, ದಿನಾಂಕ: 17.02.2022

(ಕಟ್ಟಡ ಕಾಮಗಾರಿಗಾಗಿ--ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ಕೆ.ಡಬ್ಲ್ಯು–2 ರಂತೆ ಏಕ-ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ-ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **ದಿನಾಂಕ: 21.02.2022ರಿಂದ 02.03.2022ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **22.02.2022 (ಮಧ್ಯಾಹ್ನ 3.00 ಘಂಟೆಗೆ ಕಛೇರಿ ವೇಳೆಯಲ್ಲಿ).** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **02.03.2022 (ಸಂಜೆ 4.00 ಘಂಟೆಯವರೆಗೆ).** (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **04.03.2022 ಬೆಳಿಗ್ಗೆ 11.00 ಘಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಶ್ರೀ ತಿಮ್ಮರಾಯಪ್ಪ ಬಿ., ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 378/ಎಂಸಿಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ವರ್ಗಾವಣೆ

ಮಲ್ಲಿಕಾರ್ಜುನ ಗೌಡ

ಬೆಂಗಳೂರು: ಗಣರಾಜ್ಯೋತ್ಸವ ಆಚರಣೆ ವೇಳೆ ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಭಾವಚಿತ್ರ ತೆರವು ಮಾಡಿಸಿದ ಆರೋಪಕ್ಕೆ ಗುರಿಯಾಗಿದ್ದ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು ವರ್ಗಾವಣೆ ಮಾಡಲಾಗಿದೆ.

'ರಾಯಚೂರು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು, ಬೆಂಗಳೂರಿನಲ್ಲಿರುವ, ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ನ್ಯಾಯ ಮಂಡಳಿ ಅಧ್ಯಕ್ಷರನ್ನಾಗಿ ವರ್ಗಾವಣೆ ಮಾಡಲಾಗಿದೆ' ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಶುಕ್ರವಾರ ಅಧಿಸೂಚನೆ ಹೊರಡಿಸಿದ್ದಾರೆ. 'ತಕ್ಷಣದಿಂದಲೇ ಈ ಆದೇಶ ಜಾರಿಗೆ ಬರಲಿದೆ' ಎಂದು ತಿಳಿಸಲಾಗಿದೆ.

ಟಿಎಂಸಿ: ಮತ್ತೆ ಅಭಿಷೇಕ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಕೋಲ್ಕತ್ತ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯನ್ನಾಗಿ ತನ್ನ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರನ್ನೇ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮರುನೇಮಕ ಮಾಡಿದ್ದಾರೆ. ಮಮತಾ, ಅಭಿಷೇಕ್ ಮಧ್ಯೆ ಬಿರುಕು ಮೂಡಿದೆ ಎಂಬ ಊಹಾಪೋಹಗಳಿಗೆ ತೆರೆಬಿದ್ದಿದೆ.

ಹೊಸದಾಗಿ ಸಮಿತಿ ರಚಿಸುವುದಾಗಿ ಮಮತಾ ಅವರು ಕಳೆದ ವಾರವಷ್ಟೇ ಹೇಳಿದ್ದರು. ಅದರಂತೆ ಸಮಿತಿ ರಚಿಸಲಾಗಿದೆ.

ಸಂಪುಟದಿಂದ ಸಚಿವ ಈಶ್ವರಪ್ಪ ವಜಾಕ್ಕೆ ಬಿಗಿ ಪಟ್ಟು

21ರವರೆಗೂ ಅಹೋರಾತ್ರಿ ಧರಣಿ: 'ಕೈ' ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಧ್ವಜವನ್ನು ಅವಮಾನಿಸುವ ರೀತಿಯಲ್ಲಿ ಹೇಳಿಕೆ ನೀಡಿರುವ ಆರೋಪ ಎದುರಿಸುತ್ತಿರುವ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ವಜಾ ಮಾಡಬೇಕು ಎಂದು ಬಿಗಿ ಪಟ್ಟು ಹಿಡಿದಿರುವ ಕಾಂಗ್ರೆಸ್, ಉಭಯ ಸದನಗಳಲ್ಲಿ ಸೋಮವಾರದವರೆಗೂ (ಇದೇ 21) ಧರಣಿ ಮುಂದುವರಿಸಲು ತೀರ್ಮಾನಿಸಿದೆ.

ಈ ಸಂಬಂಧ ಕಾಂಗ್ರೆಸ್ ಶಾಸಕರಿಗೆ ವಿಪ್ ನೀಡಿರುವ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ಡಾ. ಅಜಯ್ ಸಿಂಗ್, 'ಸೋಮವಾರ ರಾತ್ರಿಯವರೆಗೆ ಧರಣಿ ಮುಂದುವರಿಸಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೂಚಿಸಿದ್ದಾರೆ. ಹೀಗಾಗಿ, ಎಲ್ಲ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಮುಂದೂಡಿ ಕಡ್ಡಾಯವಾಗಿ ಧರಣಿಯಲ್ಲಿ ಪಾಲ್ಗೊಳ್ಳಬೇಕು' ಎಂದು ಸೂಚಿಸಿದ್ದಾರೆ.

ಗುರುವಾರದಿಂದ ಅಹೋರಾತ್ರಿ ಧರಣಿ ಆರಂಭಿಸಿರುವ ಕಾಂಗ್ರೆಸ್ ಸದಸ್ಯರು ಶುಕ್ರವಾರವೂ ಪ್ರತಿಭಟನೆ ಮುಂದುವರಿಸಿದರು. ಕಲಾಪ ಸೋಮವಾರಕ್ಕೆ ಮುಂದೂಡಿಕೆಯಾಗಿದ್ದು, ಉಭಯ ಸದನಗಳಲ್ಲಿ ಕಾಂಗ್ರೆಸ್ ಸದಸ್ಯರು ಧರಣಿ ಮುಂದುವರಿಸಿದ್ದಾರೆ.

ಧರಣಿ ಹಾಗೂ ಗದ್ದಲದ ನಡುವೆಯೇ ವಿಧಾನಸಭೆಯಲ್ಲಿ ಪ್ರಶ್ನೋತ್ತರ, ಮಸೂದೆ ಹಾಗೂ ವರದಿ ಮಂಡನೆ ಮಾಡಲಾಯಿತು. ಧರಣಿ ಕೈಬಿಡುವಂತೆ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮನವಿ ಮಾಡಿದರು. ಅದಕ್ಕೆ ಕಾಂಗ್ರೆಸ್ ಸದಸ್ಯರು ಒಪ್ಪಲಿಲ್ಲ. ಜನರ ಸಮಸ್ಯೆಗಳನ್ನು ಚರ್ಚೆ ಮಾಡಲು ಕಾಂಗ್ರೆಸ್‌ಗೆ ಇಷ್ಟ ಇಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ಧರಣಿ ಕೈ ಬಿಡಲು ಕಾಂಗ್ರೆಸ್ ಸದಸ್ಯರು ಒಪ್ಪದ ಕಾರಣಕ್ಕೆ ಕಲಾಪವನ್ನು ಸೋಮವಾರ ಬೆಳಿಗ್ಗೆ 11 ಗಂಟೆಗೆ ಮುಂದೂಡಿದರು. ಮುಕ್ಕಾಲು ಗಂಟೆಯಷ್ಟೇ ಕಲಾಪ ನಡೆಯಿತು. ಪಕ್ಷದ ಎಲ್ಲ ಸದಸ್ಯರು ಸೋಮವಾರದವರೆಗೆ ಇಲ್ಲೇ ಉಳಿಯಬೇಕು ಎಂದು ಸಿದ್ದರಾಮಯ್ಯ ಹಾಗೂ ಶಾಸಕ ಡಿ.ಕೆ. ಶಿವಕುಮಾರ್ ಸೂಚಿಸಿದರು.

ಸಚಿವ ಕೆ.ಎಸ್. ಈಶ್ವರಪ್ಪ ವಜಾಕ್ಕೆ ಆಗ್ರಹಿಸಿ ವಿಧಾನಸಭೆಯಲ್ಲಿ ಶುಕ್ರವಾರ ಕಾಂಗ್ರೆಸ್ ಸದಸ್ಯರು ನಡೆಸಿದ ಧರಣಿಯ ನಡುವೆಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು

'ರಾಜ್ಯದ ಮಕ್ಕಳಿಗೆ ಕಾಂಗ್ರೆಸ್ ದ್ರೋಹ'

'ರಾಜ್ಯದ ಮಕ್ಕಳಿಗೆ ಕಾಂಗ್ರೆಸ್ ದ್ರೋಹ ಬಗೆಯುತ್ತಿದೆ. ಶಾಲಾ- ಕಾಲೇಜುಗಳಲ್ಲಿ ಕೆಲವು ಗೊಂದಲ ಸೃಷ್ಟಿಯಾಗಿದೆ. ಈ ವಿಷಯದ ಬಗ್ಗೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಸಮಸ್ಯೆ ಬಗ್ಗೆ ಸದನದಲ್ಲಿ ಚರ್ಚೆ ನಡೆಸಿ ಒಂದು ತೀರ್ಮಾನಕ್ಕೆ ಬರಬೇಕಿತ್ತು. ಸದನದಲ್ಲಿ ಚರ್ಚೆ ನಡೆದು ಸಮಸ್ಯೆ ಇತ್ಯರ್ಥವಾಗಲಿದೆ ಎಂದು ಪೋಷಕರೂ ಕಾಯುತ್ತಿದ್ದರು. ಆದರೆ, ಕಾಂಗ್ರೆಸ್ ಪಕ್ಷ ಆ ವಿಚಾರದ ಬಗ್ಗೆ ಪ್ರಸ್ತಾಪ ಮಾಡದೆ ವಿಷಯಾಂತರ ಮಾಡಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು. 'ಜನರ ಸಮಸ್ಯೆಗಳ ಬಗ್ಗೆ ಧರಣಿ, ಸಭಾತ್ಯಾಗ ನಡೆಸುವುದನ್ನು ನೋಡಿದ್ದೇನೆ. ಆದರೆ, ಇಂತಹ ವಿಚಾರಕ್ಕೆ ಹಠ ಹಿಡಿದು ಕಲಾಪಕ್ಕೆ ಅಡ್ಡಿಪಡಿಸಿದ್ದನ್ನು ಇಲ್ಲಿಯವರೆಗೆ ನೋಡಿಲ್ಲ. ಇಂತಹ ವರ್ತನೆಗಳಿಂದಲೇ ಕಾಂಗ್ರೆಸ್ ಎಲ್ಲ ಕಡೆ ಜನರ ತಿರಸ್ಕಾರಕ್ಕೆ ಒಳಗಾಗಿದೆ. ರಾಜ್ಯದಲ್ಲೂ ಮುಂದಿನ ದಿನಗಳಲ್ಲಿ ಇನ್ನಷ್ಟು ಪತನ ಕಾಣಲಿದೆ' ಎಂದು ಟೀಕಿಸಿದರು.

ಸದನದಲ್ಲಿ ನಾಡಿನ ಅಭಿವೃದ್ಧಿ ಬಗ್ಗೆ ಚರ್ಚೆ ಆಗಬೇಕಿತ್ತು. ಅದಕ್ಕೆ ಕಾಂಗ್ರೆಸ್ ಸದಸ್ಯರು ಅವಕಾಶ ಮಾಡಿಕೊಡುತ್ತಿಲ್ಲ

ವಿಶ್ವೇಶ್ವರ ಹೆಗಡೆ ಕಾಗೇರಿ
ವಿಧಾನಸಭಾಧ್ಯಕ್ಷ

ನಿಲುವಳಿ ಸೂಚನೆಯನ್ನು ಸಭಾಧ್ಯಕ್ಷರು ತಿರಸ್ಕರಿಸಿ ಆದೇಶ ನೀಡಿದ್ದಾರೆ. ಅದರ ಬಳಿಕವೂ ಧರಣಿ ನಡೆಸಿ ಕಲಾಪಕ್ಕೆ ಅಡ್ಡಿ ಪಡಿಸುವುದು ಸರಿಯಲ್ಲ

ಜೆ.ಸಿ.ಮಾಧುಸ್ವಾಮಿ
ಸಂಸದೀಯ ವ್ಯವಹಾರಗಳ ಸಚಿವ

'ಚೆನ್ನವೀರ ಕಣವಿ ಮೃದು ಮಾತಿನ ಕವಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚೆನ್ನವೀರ ಕಣವಿಯವರು ಸೌಮ್ಯ ಸ್ವಭಾವದ ಹಾಗೂ ಮೃದು ಮಾತಿನ ಕವಿಯಾಗಿದ್ದರು. ಅವರು ನವ್ಯ ಮತ್ತು ನವೋದಯದ ಯಾವುದೇ ಗುಂಪಿನ ಕವಿಯಾಗದೆ, ಹಿರಿ-ಕಿರಿಯರ ಜೊತೆ ಆತ್ಮೀಯವಾಗಿ ಬೆರೆತು ಪ್ರೋತ್ಸಾಹಿಸುತ್ತಿದ್ದರು' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಹೇಳಿದರು.

ಸೆಂಟ್ರಲ್ ಕಾಲೇಜು ಆವರಣದ ಸಾಹಿತ್ಯ ಅಕಾಡೆಮಿ ಕಚೇರಿಯಲ್ಲಿ ನಡೆದ ಚೆನ್ನವೀರ ಕಣವಿ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಣವಿ ಅವರ ವಿಚಾರಗಳು ಕನ್ನಡದ ಮಾರ್ಗದರ್ಶಿ ಸೂತ್ರಗಳಾಗಿರುತ್ತವೆ. ನಾನು ಧಾರವಾಡದಲ್ಲಿ ಶಿಕ್ಷಣ ಪಡೆದ ಸಂದರ್ಭದಲ್ಲಿ ಅವರ ಪ್ರೀತಿ ಹಾಗೂ ಪ್ರೋತ್ಸಾಹ ಪಡೆದಿದ್ದೇನೆ. ಅವರ ಅಗಲಿಕೆ ನನಗೆ ವೈಯಕ್ತಿಕವಾಗಿ ಬಹಳ ಬೇಸರ ತಂದಿದೆ' ಎಂದರು.

ವಿಮರ್ಶಕ ಎಸ್.ಆರ್. ವಿಜಯಶಂಕರ್, 'ಕಣವಿಯವರ ಸಾಹಿತ್ಯ ಹಾಗೂ ವ್ಯಕ್ತಿತ್ವ ಮೃದುವಚನ ಹಾಗೂ ಹಿತವಚನದಂತೆ ಎಲ್ಲರನ್ನೂ ಒಳಗೊಳ್ಳುತ್ತಿತ್ತು. ಅವರ ಜೊತೆಗಿನ ಬಾಂಧವ್ಯ ಮೂರು ದಶಕಗಳಿಗೂ ಮೀರಿದ್ದು' ಎಂದರು.

ಅಕಾಡೆಮಿಯ ಪ್ರಾದೇಶಿಕ ಕಾರ್ಯದರ್ಶಿ ಎಸ್.ಪಿ.ಮಹಾಲಿಂಗೇಶ್ವರ ಇದ್ದರು.

ಬಿ.ಕೆ. ಹರಿಪ್ರಸಾದ್‌ಗೆ ಅಭಿನಂದನಾ ಸಮಾರಂಭ

'ರಾಷ್ಟ್ರ ರಾಜಕಾರಣದ ಆಹ್ವಾನ ಬಂದಿತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರ ರಾಜಕಾರಣಕ್ಕೆ ಬನ್ನಿ ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ನನಗೆ ಆಹ್ವಾನ ನೀಡಿದ್ದರು. ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗುವಂತೆ ಕೇಳಿದ್ದರು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಶುಕ್ರವಾರ ನಡೆದ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ರಾಷ್ಟ್ರ ರಾಜಕಾರಣದ ಸಹವಾಸವೇ ನನಗೆ ಬೇಡ. ರಾಜ್ಯ ರಾಜಕಾರಣವೇ ಸಾಕು ಎಂದು ಆಹ್ವಾನ ತಿರಸ್ಕರಿಸಿದೆ' ಎಂದರು.

'ಆರ್‌ಎಸ್‌ಎಸ್ ಮತ್ತು ಬಿಜೆಪಿ ದೇಶದ ಯುವ ಜನರಲ್ಲಿ ಕೋಮುವಾದದ ಅಮಲು ಬಿತ್ತುತ್ತಿದೆ. ಈ ಹಿಂದೆಯೂ ಆರ್‌ಎಸ್‌ಎಸ್ ಮತ್ತು ಬಿಜೆಪಿ ಇತ್ತು. ಆದರೆ, ಇಷ್ಟು ಮತೀಯವಾದಿ ಆಗಿರಲಿಲ್ಲ. ನರೇಂದ್ರ ಮೋದಿ ಪ್ರಧಾನಿ ಆದ ಬಳಿಕ ದೇಶ ಕೋಮುವಾದದಿಂದ ತತ್ತರಿಸಿ ಹೋಗಿದೆ. ತಮ್ಮ ವೈಫಲ್ಯಗಳನ್ನು ಮರೆಮಾಚಲು ಕೋಮುವಾದವನ್ನು ಬಿಜೆಪಿ ಬಳಸಿಕೊಳ್ಳುತ್ತಿದೆ. ಇದು ಭವಿಷ್ಯದ ದೃಷ್ಟಿಯಿಂದ ಅಪಾಯಕಾರಿ ಬೆಳವಣಿಗೆ' ಎಂದು ಹೇಳಿದರು.

'ಬಿ.ಕೆ. ಹರಿಪ್ರಸಾದ್ ಅವರು ಅಪಾರ ಅನುಭವ ಉಳ್ಳ ರಾಜಕಾರಣಿ. ರಾಜ್ಯ, ರಾಷ್ಟ್ರ ರಾಜಕಾರಣ ಅಷ್ಟೇ ಅಲ್ಲ, ವಿದೇಶದ ರಾಜಕಾರಣದ ಬಗ್ಗೆಯೂ ಅವರಿಗೆ ಅರಿವಿದೆ. ಇಂದಿರಾಗಾಂಧಿ ಅವರಿಂದ ಪ್ರಿಯಾಂಕಾ ಗಾಂಧಿ ತನಕ ಕಾಂಗ್ರೆಸ್ ನಾಯಕರ ಜತೆ ಒಡನಾಟ ಹೊಂದಿದ್ದ ರಾಜ್ಯದ ಏಕೈಕ ನಾಯಕ' ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಹರಿಪ್ರಸಾದ್ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾಡಿದ್ದು ನಾನಲ್ಲ. ಅವಕಾಶವೇ ಅವರನ್ನು ಹುಡುಕಿಕೊಂಡು ಬಂದಿದೆ. ಸರಿಯಾದ ಸಮಯಕ್ಕೆ ಸರಿಯಾದ ವ್ಯಕ್ತಿ ಬಂದು ಕುಳಿತಿದ್ದಾರೆ' ಎಂದರು.

ಬಿ.ಕೆ. ಹರಿಪ್ರಸಾದ್ ಅವರನ್ನು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅಭಿನಂದಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಮುಖಂಡ ಕೆ.ಎಚ್. ಮುನಿಯಪ್ಪ, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಇದ್ದರು –ಪ್ರಜಾವಾಣಿ ಚಿತ್ರ

ಬಿಜೆಪಿಗೆ ಪಾಲಿಕೆ ಮಾಜಿ ಸದಸ್ಯ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಸುಬ್ರಹ್ಮಣ್ಯನಗರ ವಾರ್ಡ್‌ನ ಪಾಲಿಕೆಯ ಮಾಜಿ ಸದಸ್ಯ ಮಂಜುನಾಥ್ ಅವರು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಸಮ್ಮುಖದಲ್ಲಿ ಶುಕ್ರವಾರ ಬಿಜೆಪಿ ಸೇರಿದರು.

ಮಂಜುನಾಥ್ ಅವರು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಟ್ಟಾ ಅನುಯಾಯಿಯಾಗಿದ್ದರು.

ಬೆಂಗಳೂರು ನಗರ ಘಟಕದ ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಂಜುನಾಥ್ ಅವರಿಗೆ ಪಕ್ಷದ ಬಾವುಟವನ್ನು ಹಸ್ತಾಂತರಿಸಿ, ಬರಮಾಡಿಕೊಳ್ಳಲಾಯಿತು.

ಬಿಜೆಪಿ ನಗರ ಜಿಲ್ಲಾ ಘಟಕದ ಅಧ್ಯಕ್ಷ ನಾರಾಯಣಗೌಡ, ಉತ್ತರ ಜಿಲ್ಲೆ ಕಾರ್ಯದರ್ಶಿ ಗಂಗಹನುಮಯ್ಯ, ಮಲ್ಲೇಶ್ವರ ಮಂಡಲ ಅಧ್ಯಕ್ಷ ಕಾವೇರಿ ಕೇದಾರನಾಥ ಇದ್ದರು.

'ಮಧ್ಯಂತರ ಆದೇಶ ತಪ್ಪಾಗಿ ಅರ್ಥೈಸಿ ಅಗೌರವ'

ಬೆಂಗಳೂರು: ಹಿಜಾಬ್‌ಗೆ ಸಂಬಂಧಿಸಿ ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶವನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ ಎಂದು ಮುಖ್ಯ ನ್ಯಾಯಮೂರ್ತಿ ಅವರಿಗೆ 'ಬಹುತ್ವ ಕರ್ನಾಟಕ' ಹೆಸರಿನಲ್ಲಿ ಪತ್ರ ಬರೆಯಲಾಗಿದೆ.

ಸುಮಾರು 900 ಮಂದಿ ಹೆಸರುಗಳು ಈ ಪತ್ರದಲ್ಲಿವೆ. ರಾಜ್ಯದ ವಿವಿಧ ಜಿಲ್ಲೆಗಳ ಶಾಲೆಗಳಲ್ಲಿ ಹಿಜಾಬ್ ಹಾಗೂ ಬುರ್ಖಾಗಳನ್ನು ಧರಿಸಿ ಬರುವ ಶಿಕ್ಷಕಿಯರು ಹಾಗೂ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಲಾಗುತ್ತಿದ್ದು ಬಹಿರಂಗವಾಗಿ ಎಲ್ಲರ ಎದುರಿಗೆ ತೆಗೆಯುವಂತೆ ಸೂಚಿಸಲಾಗುತ್ತಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಿದ್ಯಾರ್ಥಿಗಳ ಸಮವಸ್ತ್ರ ನೀತಿ ಅಥವಾ ಸಂಹಿತೆಯನ್ನು ಕಾಲೇಜು ಆಡಳಿತ ನಿಗದಿಪಡಿಸಿರುವ ಸಂಸ್ಥೆಗಳಲ್ಲಿ ಮಾತ್ರ ಈ ಆದೇಶ ಅನ್ವಯಿಸುತ್ತದೆ ಎಂದು ಮಧ್ಯಂತರ ಆದೇಶ ಸ್ಪಷ್ಟವಾಗಿ ತಿಳಿಸುತ್ತದೆ. ಆದರೆ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಹಿಜಾಬ್ ನಿರ್ಬಂಧಿಸಲಾಗಿದೆ ಎಂದು ವಿವರಿಸಿದ್ದಾರೆ.

ಅವನಿ ಚೋಕ್ಸಿ, ಪ್ರಜ್ವಲ್ ಶಾಸ್ತ್ರಿ, ಅಶೋಕ್ ಮದರಿದಾಸ್, ಅಬ್ದುಲ್ ಜಮೀರ್, ಮಮತಾ ರಾವ್, ಅಭಯ್ ಪಾಟೀಲ್ ಈ ಪತ್ರ ಬರೆದಿದ್ದಾರೆ.

ಜೀವಕ್ಕೆ ಬೆದರಿಕೆ ಇದೆ: ಹರಿಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನನ್ನ ವಿರುದ್ಧ ಅವರ ಪಕ್ಷದ ಕಾರ್ಯಕರ್ತರನ್ನು ಪ್ರಚೋದಿಸಿದ್ದಾರೆ. ಇದರಿಂದಾಗಿ ನನ್ನ ಜೀವಕ್ಕೆ ಬೆದರಿಕೆ ಇದೆ' ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಹೇಳಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಳಿನ್ ಕುಮಾರ್ ಕಟೀಲ್ ನನ್ನ ವಿರುದ್ಧ ಪ್ರಚೋದನಕಾರಿಯಾಗಿ ಮಾತನಾಡಿದ್ದಾರೆ. ಅವರ ಮಾತಿನಿಂದ ಪ್ರಚೋದನೆಗೆ ಒಳಗಾಗಿರುವ ಬಿಜೆಪಿ ಕಾರ್ಯಕರ್ತರು ನನಗೆ ಅಪಾಯ ಉಂಟುಮಾಡಬಹುದು ಎಂಬ ಮಾಹಿತಿ ಲಭಿಸಿದೆ' ಎಂದರು.

'ವಿಧಾನ ಪರಿಷತ್‌ನ ಸಭಾಪತಿ ನಮ್ಮ ರಕ್ಷಕರು. ಅವರನ್ನು ಭೇಟಿಮಾಡಿ ಮೌಖಿಕವಾಗಿ ವಿಷಯ ತಿಳಿಸಿದ್ದೇನೆ' ಎಂದು ತಿಳಿಸಿದರು.

ಮತಾಂತರದ ಮೂಲಕ ಆಕ್ರಮಣ: ಸಾಹಿತಿ ಕೆ.ಷರೀಫಾ

ಬಹುತ್ವ ಭಾರತದ 'ಕೇಸರೀಕರಣ' ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಹುತ್ವ ಭಾರತವನ್ನು ವ್ಯವಸ್ಥಿತವಾಗಿ ಕೇಸರೀಕರಣ ಮಾಡಲಾಗುತ್ತಿದೆ. ಪ್ರಭುತ್ವವು ಮತಾಂತರವನ್ನು ಮುಂದಿಟ್ಟುಕೊಂಡು ಆಕ್ರಮಣ ಮಾಡುತ್ತಿದ್ದು, ಧಾರ್ಮಿಕ ಭಯೋತ್ಪಾದನೆ ಹುಟ್ಟು ಹಾಕುತ್ತಿದೆ' ಎಂದು ಸಾಹಿತಿ ಕೆ.ಷರೀಫಾ ಹೇಳಿದರು.

ಸಂವಿಧಾನ ಸಂರಕ್ಷಣಾ ಚಳವಳಿ ಸಂಘಟನೆಯು ಪ್ರೆಸ್‌ಕ್ಲಬ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ 'ಕರ್ನಾಟಕದಲ್ಲಿ ನಂಬಿಕೆಯ ಆಚರಣೆಯನ್ನು ಅಪರಾಧೀಕರಿಸುವ ಕುರಿತು ಸಾರ್ವಜನಿಕ ವಿಚಾರಣೆ'ಯಲ್ಲಿ ಅವರು ಮಾತನಾಡಿದರು.

'ಸಂವಿಧಾನದ ಮೂರು ಅಂಗಗಳೂ ಭ್ರಷ್ಟವಾಗಿ, ಕೇಸರೀಕರಣಕ್ಕೆ ಒಳಗಾಗುತ್ತಿವೆ. ಕಾನೂನುಗಳೂ ಜನಪರವಾಗಿಲ್ಲ. ಅಲ್ಲಿಯೂ ಭ್ರಷ್ಟಾಚಾರ ನಡೆಯುತ್ತಿದೆ. ನ್ಯಾಯಾಧೀಶರಿಗೆ ಆಮಿಷಗಳನ್ನು ಒಡ್ಡುತ್ತಿದ್ದು, ನಿವೃತ್ತಿ ನಂತರ ಉನ್ನತ ಸ್ಥಾನಗಳನ್ನು ನೀಡಲಾಗುತ್ತಿದೆ. ಪ್ರಜಾಪ್ರಭುತ್ವವನ್ನು ರಾಜಾರೋಷವಾಗಿ ಕೊಲೆ ಮಾಡಲಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಸಾಮಾಜಿಕ ಕಾರ್ಯಕರ್ತೆ ಅಕ್ಕೈ ಪದ್ಮಶಾಲಿ, 'ಭಾರತ ಇಂದು ಜಾಗತಿಕ ಮಟ್ಟದಲ್ಲಿ ತಲೆ ತಗ್ಗಿಸುವಂತಾಗಿದೆ. ನಮ್ಮ ವೈಯಕ್ತಿಕ ವಿಚಾರಗಳಲ್ಲಿ ಬೇರೆಯವರು ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ. ನ್ಯಾಯ ಕೇಳಿ ಹೊರಟವರ ಮೇಲೆ ಪೊಲೀಸರು ದೌರ್ಜನ್ಯ ಮಿತಿಮೀರಿದೆ. ಮೇಲಧಿಕಾರಿಗಳ ಒತ್ತಡ ಇದ್ದರೆ, ಸಮವಸ್ತ್ರ ಏಕೆ ಧರಿಸಿದ್ದೀರ' ಎಂದು ಪ್ರಶ್ನಿಸಿದರು.

ಸಾರ್ವಜನಿಕ ಆರೋಗ್ಯ ವೈದ್ಯೆ ಸಿಲ್ವಿಯಾ ಕರ್ಪಾಗಂ, 'ವೈಯಕ್ತಿಕ ಆಯ್ಕೆಗಳ ಮೇಲೆ ನಿರ್ಬಂಧ ಮತ್ತು ದಾಳಿ ಖಂಡನೀಯ. ಪೊಲೀಸರ ಬಳಿ ಹೋದರೂ ನ್ಯಾಯ ಸಿಗುತ್ತಿಲ್ಲ. ಆಧ್ಯಾತ್ಮಿಕ ಆರೋಗ್ಯದಿಂದ ಸಮುದಾಯದ ಆರೋಗ್ಯ ಸಾಧ್ಯ. ಆದರೆ, ಆ ಹಕ್ಕಿನ ಮೇಲೆ ದಬ್ಬಾಳಿಕೆ ನಡೆಯುತ್ತಿದೆ' ಎಂದರು.

ವಕೀಲ ಸಿ.ಎಸ್.ದ್ವಾರಕಾನಾಥ್, 'ಪೊಲೀಸ್ ಠಾಣೆಗಳು ಈಗ ಆರ್‌ಎಸ್‌ಎಸ್ ಕಚೇರಿಗಳಾಗಿ ಬದಲಾಗಿವೆ. ಪ್ರತಿ ಮಂತ್ರಿಯ ಬಳಿಯೂ ಒಬ್ಬ ಆರ್‌ಎಸ್‌ಎಸ್‌ನ ಪ್ರತಿನಿಧಿ ಇರುತ್ತಾನೆ. ಆ ವ್ಯಕ್ತಿಯ ನಿರ್ಣಯವೇ ಅಂತಿಮವಾಗಿದ್ದು, ಸರ್ಕಾರವನ್ನು ನೇರವಾಗಿ ಆರ್‌ಎಸ್‌ಎಸ್ ನಿಯಂತ್ರಿಸುತ್ತಿದೆ' ಎಂದು ಹೇಳಿದರು.

ಪಿಯುಸಿಎಲ್ ರಾಜ್ಯ ಘಟಕದ ಅಧ್ಯಕ್ಷ ಅರವಿಂದ್ ನರೈನ್ ಮಾತನಾಡಿದರು. ರಾಜ್ಯದ ವಿವಿಧೆಡೆ ಮುಸ್ಲಿಂ, ಕ್ರೈಸ್ತರು ಸೇರಿದಂತೆ ವಿವಿಧ ಸಮುದಾಯಗಳ ಜನರು ಎದುರಿಸಿರುವ ಧಾರ್ಮಿಕ ದಾಳಿಗಳು ಮತ್ತು ಘಟನೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಪಿಯುಸಿಎಲ್ ಸಂಘಟನೆಯ ರಾಷ್ಟ್ರೀಯ ಕಾರ್ಯದರ್ಶಿ ವೈ.ಜೆ.ರಾಜೇಂದ್ರ ಮಾತನಾಡಿದರು. (ಕುಳಿತವರು ಎಡದಿಂದ) ಸಿಲ್ವಿಯಾ ಕರ್ಪಾಗಂ, ಅಕ್ಕೈ ಪದ್ಮಶಾಲಿ, ಅರವಿಂದ್ ನರೈನ್ ಇದ್ದಾರೆ –ಪ್ರಜಾವಾಣಿ ಚಿತ್ರ

ನಿಧಾನಗತಿಯಲ್ಲಿ ಕಾಮಗಾರಿ ● ಅತಿಕ್ರಮಣ ಜಾಗದಲ್ಲಿ ವ್ಯಾಪಾರ ● ದೂರು ನೀಡಿದರೂ ಸಿಗದ ಸ್ಪಂದನೆ

‘ಅವೆನ್ಯೂ’: ಫುಟ್‌ಪಾತ್ ಮಾಯ, ಕಿರಿಕಿರಿ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದ ಕೇಂದ್ರ ಭಾಗದಲ್ಲಿರುವ ಅವೆನ್ಯೂ ರಸ್ತೆಯಲ್ಲಿ ‘ಸ್ಮಾರ್ಟ್ ಸಿಟಿ’ ಹಾಗೂ ‘ಟೆಂಡರ್ ಶ್ಯೂರ್’ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದ್ದು, ಜನ ಹಾಗೂ ವಾಹನಗಳ ಓಡಾಟಕ್ಕೆ ತೊಂದರೆ ಉಂಟಾಗುತ್ತಿದೆ. ರಸ್ತೆ ಜಾಗವನ್ನು ಕೆಲವರು ಅತಿಕ್ರಮಣ ಮಾಡಿಕೊಂಡು ವ್ಯಾಪಾರ ಮಳಿಗೆಗಳನ್ನು ತೆರೆದಿದ್ದು, ಜನರ ಸಂಚಾರಕ್ಕೆ ಕಿರಿಕಿರಿ ಆಗುತ್ತಿದೆ.

ಪ್ರಯಾಣ ಪ್ರಯಾಸ

ಕೆ.ಆರ್. ಮಾರುಕಟ್ಟೆಯಿಂದ ಚಿಕ್ಕಪೇಟೆ ವೃತ್ತದ ಮೂಲಕ ಮೈಸೂರು ಬ್ಯಾಂಕ್ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಅವೆನ್ಯೂ ರಸ್ತೆಯಲ್ಲಿ ನಿತ್ಯವೂ ಸಾವಿರಾರು ಮಂದಿ ಓಡಾಡುತ್ತಾರೆ. ಏಕಮುಖ ರಸ್ತೆಯಲ್ಲಿ ದ್ವಿಚಕ್ರ ವಾಹನ, ಗೂಡ್ಸ್ ವಾಹನ ಹಾಗೂ ಕಾರುಗಳ ಓಡಾಟವೂ ಇರುತ್ತದೆ.

ಬಿ.ವಿ.ಕೆ. ಅಯ್ಯಂಗಾರ್ ರಸ್ತೆ ಮೂಲಕ ಬರುವ ವಾಹನಗಳು, ಆಸ್ಪತ್ರೆ ರಸ್ತೆಯಲ್ಲಿ ತಿರುವು ಪಡೆದುಕೊಂಡು ಅವೆನ್ಯೂ ರಸ್ತೆಗೆ ಸೇರುತ್ತದೆ. ನಂತರ ಮೈಸೂರು ಬ್ಯಾಂಕ್ ವೃತ್ತದ ಮೂಲಕ ಕೆಂಪೇಗೌಡ ರಸ್ತೆಗೆ ಸೇರಿ ಗಾಂಧಿನಗರ ಹಾಗೂ ಮೆಜೆಸ್ಟಿಕ್‌ನತ್ತ ತೆರಳುತ್ತವೆ. ವಾಹನದ ಜೊತೆಯಲ್ಲಿ ಜನರ ಸುತ್ತಾಟವೂ ಹೆಚ್ಚಿರುವ ರಸ್ತೆ ಇದಾಗಿದೆ.

ಹೆಚ್ಚು ಪುಸ್ತಕಗಳ ಮಾರಾಟ ಮಳಿಗೆಗಳನ್ನು ಹೊಂದಿರುವ ರಸ್ತೆಯಲ್ಲಿ ಇದೀಗ ತರಹೇವಾರಿ ವ್ಯಾಪಾರ ಆರಂಭವಾಗಿದೆ. ರಸ್ತೆ ಅಕ್ಕ- ಪಕ್ಕದ ಖಾಸಗಿ ಜಾಗಗಳಲ್ಲಿ ಅಂಗಡಿಗಳನ್ನು ನಿರ್ಮಿಸಲಾಗಿದ್ದು, ವ್ಯಾಪಾರ ಜೋರಾಗಿದೆ. ಇದರ ನಡುವೆ ಹಲವರು, ರಸ್ತೆ ಜಾಗವನ್ನು ಅತಿಕ್ರಮಣ ಮಾಡಿಕೊಂಡು ಶೆಡ್ ಹಾಗೂ ಮಳಿಗೆ ನಿರ್ಮಿಸಿದ್ದಾರೆ. ಅವರಿಂದ ‘ಮಾಮೂಲಿ’ ಪಡೆದುಕೊಂಡು ಬಿಬಿಎಂಪಿ ಅಧಿಕಾರಿಗಳು ಹಾಗೂ ಪೊಲೀಸರು ಮೌನವಾಗಿರುವ ಆರೋಪಗಳೂ ಕೇಳಿಬರುತ್ತಿವೆ.

ಫುಟ್‌ಪಾತ್ ಮಾಯ: ‘ರಸ್ತೆಯ ಅಕ್ಕ- ಪಕ್ಕದಲ್ಲಿ ಜನರ ಓಡಾಟಕ್ಕೆ ಮೀಸಲಿದ್ದ ಪಾದಚಾರಿ ಮಾರ್ಗ (ಫುಟ್‌ಪಾತ್) ಇದೀಗ ಮಾಯವಾಗಿದೆ. ಈ ಜಾಗವನ್ನು ಅತಿಕ್ರಮಣ ಮಾಡಿಕೊಂಡಿರುವ ಹಲವರು, ರಾಜಾರೋಷವಾಗಿ ವ್ಯಾಪಾರ ಮಾಡುತ್ತಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಲು ಬಿಬಿಎಂಪಿ ಅಧಿಕಾರಿಗಳು ಹಾಗೂ ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ’ ಎಂದು ಪುಸ್ತಕ ಮಳಿಗೆಯೊಂದರ ಉದ್ಯೋಗಿ ಗಿರೀಶ್ ಹೇಳಿದರು.

‘ಪಾದಚಾರಿ ಮಾರ್ಗದಲ್ಲೇ ಪುಸ್ತಕ, ತರಕಾರಿ, ಹಣ್ಣು, ಹೂವು, ತಿಂಡಿ-ತಿನಿಸು, ಬಟ್ಟೆ ಹಾಗೂ ಇತರೆ ವಸ್ತುಗಳನ್ನು ಇರಿಸಿಕೊಂಡು ಮಾರುತ್ತಿದ್ದಾರೆ. ಇಲ್ಲೆಲ್ಲ ಜನರ ಓಡಾಟಕ್ಕೂ ಜಾಗವಿಲ್ಲದಂತಾಗಿದೆ. ಕಾಮಗಾರಿಗಾಗಿ ರಸ್ತೆಯನ್ನು ಎಲ್ಲೆಂ- ದರಲ್ಲಿ ಅಗೆಯಲಾಗಿದ್ದು, ಇದರಿಂದ ಪಾದಚಾರಿಗಳಿಗೆ ಮತ್ತಷ್ಟು ತೊಂದರೆ ಆಗುತ್ತಿದೆ’ ಎಂದೂ ತಿಳಿಸಿದರು.

‘ಕೆಲ ಆಟೊ ಹಾಗೂ ಗೂಡ್ಸ್ ವಾಹನಗಳನ್ನು ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗುತ್ತಿದ್ದು, ದಟ್ಟಣೆಯೂ ಉಂಟಾಗುತ್ತಿದೆ. ಜಾಗ ಅತಿಕ್ರಮಣದಿಂದ ರಸ್ತೆ ಇಕ್ಕಟ್ಟಾಗುತ್ತಿದ್ದು, ಕೆಲ ಪಾದಚಾರಿಗಳು ನಡೆದಾಡುವ ವೇಳೆ ಆಯತಪ್ಪಿ ಬಿದ್ದ ಘಟನೆಗಳೂ ನಡೆದಿವೆ’ ಎಂದೂ ಹೇಳಿದರು.

ದೂರು ನೀಡಿದರೂ ಸಿಗದ ಸ್ಪಂದನೆ: ‘ಅವೆನ್ಯೂ ರಸ್ತೆಯಲ್ಲಿ ಆರಂಭವಾಗಿರುವ ಕಾಮಗಾರಿ ಮುಗಿಯುವ ಲಕ್ಷಣವೇ ಕಾಣುತ್ತಿಲ್ಲ. ದಾರಿಹೋಕರಿಗೆ ನಿತ್ಯವೂ ದೂಳಿನ ಮಜ್ಜನವಾಗುತ್ತಿದ್ದು, ರಸ್ತೆಗೆ ನೀರು ಸಿಂಪಡಿಸಬೇಕೆಂಬ ಸಣ್ಣ ಕಾಳಜಿಯೂ ಗುತ್ತಿಗೆದಾರನಿಗೆ ಇಲ್ಲ’ ಎಂದು ಅವೆನ್ಯೂ ರಸ್ತೆ ವ್ಯಾಪಾರಿಗಳ ಒಕ್ಕೂಟದ ಉಪಾಧ್ಯಕ್ಷ ಕಿಶೋರ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

‘ಸಾರ್ವಜನಿಕ ರಸ್ತೆಯನ್ನು ಅತಿಕ್ರಮಣ ಮಾಡಿಕೊಂಡು ಕೆಲವರು ಅಂಗಡಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಇದರಿಂದ ಜಾಗ ಇಕ್ಕಟ್ಟಾಗಿ, ಜನರು ಹಾಗೂ ವಾಹನಗಳ ಓಡಾಟಕ್ಕೆ ತೊಂದರೆ ಆಗಿದೆ. ಅವೆನ್ಯೂ ರಸ್ತೆಯಲ್ಲಿ ನಾನಾ ಸಮಸ್ಯೆಗಳಿದ್ದು, ಅವುಗಳಿಗೆ ಪರಿಹಾರ ಸೂಚಿಸುವಂತೆ ಕೋರಿ ಬಿಬಿಎಂಪಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಹಲವು ವರ್ಷಗಳಿಂದ ಮನವಿ ಸಲ್ಲಿಸಲಾಗುತ್ತಿದೆ. ಯಾವುದೇ ಸ್ಪಂದನೆ ಸಿಗುತ್ತಿಲ್ಲ’ ಎಂದೂ ಬೇಸರ ವ್ಯಕ್ತಪಡಿಸಿದರು.

ನಗರದ ಅವೆನ್ಯೂ ರಸ್ತೆಯಲ್ಲಿ ಜನರ ಓಡಾಟ ಹೆಚ್ಚಿರುವುದು – ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.



ಅವೆನ್ಯೂ ರಸ್ತೆಯ ಬದಿಯಲ್ಲಿ ತಳ್ಳುಗಾಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದು

‘ಅತಿಕ್ರಮಣ ಪ್ರಶ್ನಿಸಿದರೆ ಗಲಾಟೆ’

‘ರಸ್ತೆ ಅತಿಕ್ರಮಣ ಪ್ರಶ್ನಿಸುವವರೊಂದಿಗೆ ಗಲಾಟೆ ಮಾಡುವ ಗುಂಪು ಅವೆನ್ಯೂ ರಸ್ತೆಯಲ್ಲಿದೆ. ಇದಕ್ಕೆ ಕೆಲ ಜನಪ್ರತಿನಿಧಿಗಳು ಹಾಗೂ ಕೆಲ ಪೊಲೀಸರ ಸಹಕಾರವೂ ಇದೆ’ ಎಂದು ಕಿಶೋರ್ ಕುಮಾರ್ ಆರೋಪಿಸಿದರು.

‘ಅವೆನ್ಯೂ ರಸ್ತೆ ರಾಜಧಾನಿಯ ಕಿರೀಟದಂತೆ. ಕಾಮಗಾರಿಗಾಗಿ ರಸ್ತೆ ಅಗೆದಿದ್ದರಿಂದ, ಕಿರೀಟಕ್ಕೆ ರಂಧ್ರಗಳು ಬಿದ್ದಂತಾಗಿದೆ. ಇನ್ನಾದರೂ ಕಾಮಗಾರಿಯನ್ನು ತ್ವರಿತವಾಗಿ ಮುಗಿಸುವತ್ತ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕು. ಅತಿಕ್ರಮಣ ಮಾಡಿರುವವರನ್ನು ತೆರವು ಮಾಡಿಸಬೇಕು’ ಎಂದು ಅವರು ಒತ್ತಾಯಿಸಿದರು.

‘ತಳ್ಳುಗಾಡಿ ವ್ಯಾಪಾರ ಜೋರು’

ಅವೆನ್ಯೂ ರಸ್ತೆಯಲ್ಲಿ ತಳ್ಳುಗಾಡಿ ವ್ಯಾಪಾರವೂ ಇತ್ತೀಚಿನ ದಿನಗಳಲ್ಲಿ ಜೋರಾಗಿದೆ. ತರಕಾರಿ, ಹಣ್ಣು, ಮೊಬೈಲ್ ಬಿಡಿಭಾಗ, ಪುಸ್ತಕ ಹಾಗೂ ಇತರೆ ವಸ್ತುಗಳನ್ನು ತಳ್ಳುಗಾಡಿಯಲ್ಲಿ ಮಾರುವ ವ್ಯಾಪಾರಿಗಳ ಸಂಖ್ಯೆ ಹೆಚ್ಚಿದೆ. ಎಲ್ಲೆಂದರಲ್ಲಿ ತಳ್ಳುಗಾಡಿಗಳನ್ನು ನಿಲ್ಲಿಸಿ, ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಾರೆಂಬ ಆರೋಪವು ಇದೆ.

ತಳ್ಳುಗಾಡಿ ವ್ಯಾಪಾರಿಯೊಬ್ಬರು, ‘ದಿನದ ದುಡಿಮೆ ನಂಬಿ ಬದುಕುತ್ತಿದ್ದೇವೆ. ಒಂದು ಕಡೆ ತಳ್ಳುಗಾಡಿ ನಿಲ್ಲಿಸಿ ವ್ಯಾಪಾರ ಶುರು ಮಾಡಿದರೆ, ಬೇರೆ ಕಡೆ ಹೋಗಿ ಎಂದು ಸ್ಥಳೀಯರು ಹೇಳುತ್ತಾರೆ. ಅಲ್ಲೀಗೆ ಹೋದರೆ, ಮತ್ತೊಂದು ಕಡೆ ಹೋಗಿ ಎನ್ನುತ್ತಾರೆ. ಇದರಿಂದ ನಿತ್ಯವೂ ಅಲೆಯುತ್ತಲೇ ವ್ಯಾಪಾರ ಮಾಡುತ್ತಿದ್ದೇವೆ’ ಎಂದರು.

ಸುದ್ದಿ 2 ನಿಮಿಷ

ನಕಲಿ ಪಹಣಿ ನೀಡಿ ಜಾಮೀನು: ರೌಡಿ ಸೇರಿ ಇಬ್ಬರ ಬಂಧನ

ಬೆಂಗಳೂರು: ಅಪರಾಧ ಪ್ರಕರಣ- ಗಳಲ್ಲಿ ಆರೋಪಿಗಳು ಜಾಮೀನು ಪಡೆಯಲು ನಕಲಿ ಪಹಣಿ ಹಾಜರುಪಡಿಸಿ ವಂಚಿಸುತ್ತಿದ್ದ ಆರೋಪದಡಿ ರೌಡಿ ಸೇರಿ ಇಬ್ಬರನ್ನು ಉತ್ತರ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ರೌಡಿ ಕೆಂಪಯ್ಯ ಹಾಗೂ ಯುವರಾಜ್ ಬಂಧಿತರು. ಇವರಿಬ್ಬರು ಹಲವು ಪ್ರಕರಣಗಳಲ್ಲಿ ಪೊಲೀಸರು ಹಾಗೂ ನ್ಯಾಯಾಲಯವನ್ನು ವಂಚಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಅಪರಾಧ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗುತ್ತಿತ್ತು. ಅಂಥ ಆರೋಪಿಗಳಿಗೆ ಜಾಮೀನು ಕೊಡಿಸಲು ಮುಂದಾಗುತ್ತಿದ್ದ ಕೆಂಪಯ್ಯ ಹಾಗೂ ಯುವರಾಜ್, ಅಪರಿಚಿತರ ಪಹಣಿ ಪತ್ರಗಳನ್ನು ತಿದ್ದಿ ನಕಲಿ ಪಹಣಿ ಪತ್ರ ಸಿದ್ಧಪಡಿಸುತ್ತಿದ್ದರು. ಅದನ್ನು ನ್ಯಾಯಾಲಯಕ್ಕೆ ನೀಡಿ, ಜಾಮೀನು ಕೊಡಿಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ತಿಳಿಸಿದರು.

ಬೆಂಕಿ: 20 ಹೆಕ್ಟೇರ್ ಅರಣ್ಯ ನಾಶ

ಬಸವಾಪಟ್ಟಣ(ದಾವಣಗೆರೆ ಜಿಲ್ಲೆ): ಸಮೀಪದ ಸೂಳೆಕೆರೆಯ ಸುತ್ತಲಿನ ಅರಣ್ಯ ಪ್ರದೇಶಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿರುವ ಕಾರಣ 20 ಹೆಕ್ಟೇರ್ ಅರಣ್ಯ ಪ್ರದೇಶ ಸುಟ್ಟುಹೋಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ್ದಾರೆ.

ಸೂಳೆಕೆರೆಯ ನೂತನ ಪ್ರವಾಸಿ ಮಂದಿರದ ಕಡೆಯಿಂದ ಹತ್ತಿದ ಬೆಂಕಿಯು ಸಿದ್ದೇಶ್ವರಸ್ವಾಮಿ ದೇಗುಲದವರೆಗೂ ವ್ಯಾಪಿಸಿತ್ತು. ಇಲ್ಲಿ 140 ಎಕರೆ ಪ್ರದೇಶದಲ್ಲಿ ಅರಣ್ಯವಿದೆ. ಚಳಿಗಾಲಕ್ಕೆ ಹುಲ್ಲು ಒಣಗಿ ನಿಂತಿರುತ್ತದೆ. ಇದಕ್ಕೆ ಒಂದು ಕಡೆ ಬೆಂಕಿ ಕಿಡಿ ತಾಗಿದರೂ ಇಡೀ ಪ್ರದೇಶಕ್ಕೆ ಬೆಂಕಿ ಆವರಿ- ಸಿಕೊಳ್ಳುತ್ತದೆ. ಸೂಳೆಕೆರೆ ಗುಡ್ಡದ ಅರಣ್ಯವು ಪ್ರತಿ ವರ್ಷ ಕಿಡಿಗೇಡಿಗಳಿಂದ ಬೆಂಕಿಗೆ ಆಹುತಿ ಆಗುತ್ತಿದೆ.

ಹಳಿ ಮೇಲೆ ಬಾಲಕಿ ಮೃತದೇಹ: ಆತ್ಮಹತ್ಯೆ ಶಂಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಶೆಟ್ಟಿಹಳ್ಳಿ ಬಳಿಯ ರೈಲು ಹಳಿ ಮೇಲೆ ರಮ್ಯಾ (17) ಎಂಬಾಕೆಯ ಮೃತದೇಹ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

‘ಟಿ.ದಾಸರಹಳ್ಳಿಯಲ್ಲಿ ಪೋಷಕರ ಜೊತೆ ವಾಸವಿದ್ದ ರಮ್ಯಾ, ನಗರದ ಶಾಲೆಯೊಂದರಲ್ಲಿ 9ನೇ ತರಗತಿಯಲ್ಲಿ ಓದುತ್ತಿದ್ದಳು. ಸಾವಿನ ಸಂಬಂಧ ಯಶವಂತಪುರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಗುರುವಾರ ಬೆಳಿಗ್ಗೆ 6.30ರ ಸುಮಾರಿಗೆ ವಾಯುವಿಹಾರಕ್ಕೆ ಹೋಗುವುದಾಗಿ ಹೇಳಿ ರಮ್ಯಾ ಮನೆಯಿಂದ ಹೊರಟಿದ್ದಳು. ಒಂದು ಕಿ.ಮೀ ದೂರದಲ್ಲಿರುವ ಹಳಿ ಬಳಿ ತೆರಳಿದ್ದಳು. ಅಲ್ಲಿ ರೈಲಿಗೆ ತಲೆಕೊಟ್ಟು ಆಕೆ ಆತ್ಮಹತ್ಯೆಗೆ ಶರಣಾಗಿದ್ದಾಳೆ’ ಎಂದೂ ತಿಳಿಸಿದರು.

ಮರಣಪತ್ರ ಪತ್ತೆ: ‘ಮೃತದೇಹ ಸಿಕ್ಕ ಜಾಗದಲ್ಲಿ ಮರಣಪತ್ರ ಪತ್ತೆಯಾಗಿದೆ. ಅದರಲ್ಲಿರುವುದು ರಮ್ಯಾಳ ಕೈಬರಹವೇ? ಎಂಬುದನ್ನು ತಿಳಿಯಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಅಧಿಕಾರಿ ಹೇಳಿದರು.

‘ಪ್ರಾಂಶುಪಾಲರನ್ನು ನಾನು ವಿರೋಧಿಸುತ್ತೇನೆ’ ಎಂಬುದಾಗಿ ಮರಣಪತ್ರದಲ್ಲಿ ಬರೆದಿರುವುದಾಗಿ ಗೊತ್ತಾಗಿದೆ. ಶಾಲೆ ಪ್ರಾಂಶುಪಾಲ, ಶಿಕ್ಷಕರು ಹಾಗೂ ಆಡಳಿತ ಮಂಡಳಿ ಸದಸ್ಯರನ್ನು ವಿಚಾರಣೆ ನಡೆಸಬೇಕಿದೆ. ಬಾಲಕಿ ಪೋಷಕರು ಸದ್ಯ ದುಃಖದಲ್ಲಿದ್ದಾರೆ. ಸ್ವಲ್ಪ ದಿನದ ಬಳಿಕ ಅವರ ಹೇಳಿಕೆ ಪಡೆದು, ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು’ ಎಂದೂ ಅವರು ತಿಳಿಸಿದರು.

ಘಾಟು ವಾಸನೆ: ಅನಿಲ ಸೋರಿಕೆ ಭೀತಿ

ಮಂಗಳೂರು: ನಗರದ ಹಲವು ಕಡೆ ಗುರುವಾರ ರಾತ್ರಿ 10 ಗಂಟೆಯಿಂದ ಅನಿಲ ಸೋರಿಕೆಯಾಗಿದೆ ಎಂಬ ಶಂಕೆ ವ್ಯಕ್ತವಾಗಿದ್ದು, ವಾಸನೆಯಿಂದ ಸಾರ್ವಜನಿಕರು ಆತಂಕಕ್ಕೆ ಒಳಗಾಗಿದ್ದರು.

ನಗರದ ಹಂಪನಕಟ್ಟೆ, ಪಾಂಡೇಶ್ವರ, ರಥಬೀದಿ, ಕುದ್ರೋಳಿ, ಕೊಟ್ಟಾರ, ಬಿಜೈ, ಕದ್ರಿ, ಮಂದಾರಬೈಲ್, ಕೊಂಚಾಡಿ ಸೇರಿದಂತೆ ಹಲವೆಡೆ ಗ್ಯಾಸ್ ಸೋರಿಕೆಯ ವಾಸನೆ ಹರಡಿತ್ತು. ಆದರೆ ಈ ಗ್ಯಾಸ್ ಸೋರಿಕೆಯು ಎಲ್ಲಿಂದ ಆಗಿದೆ ಎಂಬುದು ತಿಳಿದು ಬಂದಿಲ್ಲ. ಹಿರಿಯ ಅಧಿಕಾರಿಗಳಿಗೂ ಈ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

ಮಾಹಿತಿ ನೀಡಿ: ಗ್ಯಾಸ್ ಸೋರಿಕೆಯ ಬಗ್ಗೆ ದೂರುಗಳು ಬಂದಿದ್ದು, ಕೂಡಲೇ ಪೊಲೀಸ್, ಅಗ್ನಿಶಾಮಕ ಇಲಾಖೆ, ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಯ ಉಪನಿರ್ದೇಶಕರಿಗೆ ಮಾಹಿತಿ ನೀಡಲಾಗಿದೆ. ಗ್ಯಾಸ್ ಸೋರಿಕೆಯ ಮೂಲದ ಪತ್ತೆಗೆ ಕಾರ್ಯಾಚರಣೆ ಪ್ರಗತಿಯಲ್ಲಿದೆ.

ಗ್ಯಾಸ್ ಸೋರಿಕೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಮಾಹಿತಿ ಅಥವಾ ದೂರುಗಳಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ನಿಯಂತ್ರಣ ಕೊಠಡಿಯ ಟೋಲ್ ಫ್ರೀ ಸಂಖ್ಯೆ: 1077ಗೆ ಕರೆ ಮಾಡಿ ತಿಳಿಸುವಂತೆ ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಧರಣಿಗಳು ಶುಕ್ರವಾರವೂ ಮುಂದುವರಿದವು.

ಅತಿಥಿ ಉಪನ್ಯಾಸಕರ ಧರಣಿ ಐದನೇ ದಿನಕ್ಕೆ: ‘ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಿ, ಸೇವಾ ಭದ್ರತೆ ಒದಗಿಸಬೇಕು’ ಎಂದು ಒತ್ತಾಯಿಸಿ ‘ರಾಜ್ಯ ಅತಿಥಿ ಉಪನ್ಯಾಸಕರ ಒಕ್ಕೂಟ’ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಉಪನ್ಯಾಸಕರು ನಡೆಸುತ್ತಿರುವ ಧರಣಿ ಶುಕ್ರವಾರ ಐದನೇ ದಿನ ಪೂರೈಸಿದೆ.

ಕನ್ನಡ ಶಾಲೆ ಉಳಿಸಿ ಹೋರಾಟ ನಾಲ್ಕನೇ ದಿನಕ್ಕೆ: ‘1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮ ಶಾಲಾ- ಕಾಲೇಜುಗಳನ್ನೂ ವೇತನಾನುದಾನಕ್ಕೆ ಒಳಪಡಿಸಬೇಕು’ ಎಂದು ಒತ್ತಾಯಿಸಿ ‘ರಾಜ್ಯ ಅನುದಾನ ರಹಿತ ಶಾಲಾ-ಕಾಲೇಜು ಆಡಳಿತ ಮಂಡಳಿ ಮತ್ತು ನೌಕರರ ಒಕ್ಕೂಟ’ ಪದಾಧಿಕಾರಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಶುಕ್ರವಾರ ನಾಲ್ಕನೇ ದಿನಕ್ಕೆ ಪೂರೈಸಿದೆ.

ವಾಲ್ಮೀಕಿ ಶ್ರೀ ಧರಣಿ ಒಂಬತ್ತನೇ ದಿನಕ್ಕೆ: ‘ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ7.5ಕ್ಕೆ ಹೆಚ್ಚಿಸಬೇಕು. ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಬೇಕು’ ಎಂದು ಒತ್ತಾಯಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಸ್ವಾತಂತ್ರ್ಯ ಉದ್ಯಾನದಲ್ಲಿ ಆರಂಭಿಸಿರುವ ಅನಿರ್ದಿಷ್ಟಾವಧಿ ಧರಣಿ ಶುಕ್ರವಾರ ಒಂಬತ್ತನೇ ದಿನ ಪೂರೈಸಿದೆ.

ಸಿಪಿಐ ಪ್ರತಿಭಟನೆ

ಸರ್ಕಾರದ ಗೋಮಾಳ ಭೂಮಿಯನ್ನು ಖಾಸಗಿ ಕ್ಷೇತ್ರಕ್ಕೆ ಪರಭಾರೆ ಮಾಡುತ್ತಿರುವುದನ್ನು ಖಂಡಿಸಿ ‘ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ)’ ಕಾರ್ಯಕರ್ತರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಪಕ್ಷದ ಬೆಂಗಳೂರು ಘಟಕದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

‘ತಲೆ ಮೇಲೆ ಸೂರಿಲ್ಲದ ಲಕ್ಷಾಂತರ ಜನರಿಗೆ ನಿವೇಶನ ಭೂಮಿ ಒದಗಿಸಬೇಕು. ಬೆಂಗಳೂರಿನಲ್ಲಿ ಸರ್ಕಾರಿ ಭೂಮಿ ಕಬಳಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಇಗ್ನೊ: ವಿವಿಧ ಕೋರ್ಸ್‌ಗಳಿಗೆ ಆನ್‌ಲೈನ್ ಪ್ರವೇಶಾತಿ

ಬೆಂಗಳೂರು: ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (ಇಗ್ನೊ) ವಿವಿಧ ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಪ್ರವೇಶ ಆರಂಭಿಸಿದೆ.

ಪದವಿ, ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ, ಡಿಪ್ಲೊಮಾ, ಸ್ನಾತಕೋತ್ತರ ಸರ್ಟಿಫಿಕೇಟ್ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ ಎಂದು ಪ್ರಾದೇಶಿಕ ನಿರ್ದೇಶಕಿ ಎಸ್. ರಾಧಾ ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

‘ವಿಶ್ವವಿದ್ಯಾಲಯದ ವಿವಿಧ ಕೋರ್ಸ್‌ಗಳಿಗೆ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಅಭ್ಯರ್ಥಿಗಳು ಮುದ್ರಿತ ಅಧ್ಯಯನ ಸಾಮಾಗ್ರಿಗಳ ಬದಲಿಗೆ ಡಿಜಿಟಲ್ ಆಯ್ಕೆ ಮಾಡಿಕೊಂಡರೆ ಪ್ರೋತ್ಸಾಹಧನವಾಗಿ ಶೇ 15ರಷ್ಟು ರಿಯಾಯಿತಿ ನೀಡಲಾಗುವುದು’ ಎಂದು ವಿವರಿಸಿದರು.

ಡಾ.ಎಸ್ ರಾಧಾ

‘ಉದ್ಯಮ ಶೀಲತೆ, ಸಂಸ್ಕೃತ, ಉರ್ದು, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ, ನಗರ ಅಧ್ಯಯನ ವಿಷಯದ ಕುರಿತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಸಹ ಆರಂಭಿಸಲಾಗಿದೆ. ಜತೆಗೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ನಿರ್ವಹಣೆ ಕುರಿತು ಎಂ.ಎಸ್ಸಿ. ಕೋರ್ಸ್, ಡಿಜಿಟಲ್ ಮಾಧ್ಯಮದ ಕುರಿತಾದ ಸ್ನಾತಕೋತ್ತರ ಡಿಪ್ಲೊಮಾ, ತೋಟಗಾರಿಕೆಯಲ್ಲಿ ಡಿಪ್ಲೊಮಾ ಕೋರ್ಸ್‌ಗಳನ್ನು ಸಹ ಆರಂಭಿಸಲಾಗಿದೆ’ ಎಂದು ವಿವರಿಸಿದರು.

‘ಯಾವುದೇ ಕೋರ್ಸ್‌ಗೆ ಅಭ್ಯರ್ಥಿಗೆ ಕನಿಷ್ಠ 18 ವರ್ಷಗಳಾಗಿರಬೇಕು. ಗರಿಷ್ಠ ವಯೋಮಿತಿಯ ನಿರ್ಬಂಧ ಇಲ್ಲ. ಹಿರಿಯ ನಾಗರಿಕರು ಸಹ ಅಧ್ಯಯನ ಮಾಡಬಹುದು. ಬೆಂಗಳೂರು ಪ್ರಾದೇಶಿಕ ಕೇಂದ್ರದಲ್ಲಿ ಸದ್ಯ 18,051 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಬೆಂಗಳೂರು ಮತ್ತು ವಿಜಯಪುರದಲ್ಲಿ ಪ್ರಾದೇಶಿಕ ಕೇಂದ್ರಗಳಿದ್ದು, 46 ಅಧ್ಯಯನ ಕೇಂದ್ರಗಳಿವೆ. ಬೆಂಗಳೂರು ಕೇಂದ್ರದ ವ್ಯಾಪ್ತಿಯಲ್ಲಿ 17 ಜಿಲ್ಲೆಗಳಿವೆ’ ಎಂದು ವಿವರಿಸಿದರು.

ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಲು ಆಸಕ್ತ ವಿದ್ಯಾರ್ಥಿಗಳು https://ignouadmission.samarth.edu.in/ಗೆ ಭೇಟಿ ನೀಡಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಲು ಆಸಕ್ತ ವಿದ್ಯಾರ್ಥಿಗಳು https://ignouadmission.samarth.edu.in/ಗೆ ಭೇಟಿ ನೀಡಬಹುದು. ಅಗತ್ಯ ದಾಖಲೆಗಳು ಮತ್ತು ಅಧ್ಯಯನ ಕೇಂದ್ರದ ಆಯ್ಕೆಯೊಂದಿಗೆ ಫೆ.21ರ ಒಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಬೆಂಗಳೂರು ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಬಹುದು ಹೆಚ್ಚಿನ ಮಾಹಿತಿಗೆ **ಸಂಪರ್ಕಿಸಿ:**080-29607272, 9449337272

ಕೋವಿಡ್: 8 ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಪ್ರಕರಣ

ಬೆಂಗಳೂರು: ರಾಜ್ಯದ ಎಂಟು ಜಿಲ್ಲೆಗಳಲ್ಲಿ ಶುಕ್ರವಾರ ಕೋವಿಡ್ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆ ವರದಿಯಾಗಿವೆ.

ಬೀದರ್‌ನಲ್ಲಿ 9, ದಾವಣಗೆರೆಯಲ್ಲಿ 7, ಯಾದಗಿರಿಯಲ್ಲಿ 2, ವಿಜಯಪುರದಲ್ಲಿ 5, ಗದಗ ಮತ್ತು ಚಿಕ್ಕಬಳ್ಳಾಪುರದಲ್ಲಿ ತಲಾ 6, ರಾಯಚೂರು ಮತ್ತು ಕೊಪ್ಪಳದಲ್ಲಿ ತಲಾ 3 ಪ್ರಕರಣಗಳು ದೃಢಪಟ್ಟಿವೆ.

ಸೋಂಕು ದೃಢ ಪ್ರಮಾಣ ಸಹ ಶೇ 1.59ಕ್ಕೆ ಇಳಿಕೆಯಾಗಿದ್ದು, 1,333 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

17,74,696 ▲ ಒಟ್ಟು ಸೋಂಕಿತರು (17,73,991 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,661 ▼	17,50,234 ▲	16,800 ▲

ದಿನದ ಏರಿಕೆ

ಹೊಸ ಪ್ರಕರಣ	705 ▼
ಗುಣಮುಖ	1,863 ▼
ಸಾವು	09 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	42.11 ಕೋಟಿ ▲	4.27 ಕೋಟಿ
ಸಕ್ರಿಯ ಪ್ರಕರಣ	6.97 ಕೋಟಿ ▼	2.92 ಲಕ್ಷ ▼
ಗುಣಮುಖ	34.55 ಕೋಟಿ ▲	4.19 ಕೋಟಿ
ಸಾವು	58.85 ಲಕ್ಷ ▲	5.10 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	20.38 ಲಕ್ಷ ▼	25,920 ▼
ಗುಣಮುಖ	25.24 ಲಕ್ಷ ▼	66,254 ▲
ಸಾವು	11,440 ▼	492 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಫ್ರಾನ್ಸ್
1.03ಲಕ್ಷ ▼	51,899 ▼	92,345 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಬ್ರಿಟನ್	ಫ್ರಾನ್ಸ್
2.79 ಕೋಟಿ ▼	18.76 ಲಕ್ಷ ▼	35.92 ಲಕ್ಷ ▼

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.43 ಲಕ್ಷ
ಕೇರಳ	63,338 ▲
ತಮಿಳುನಾಡು	37,962 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	78.53 ▲
ಕೇರಳ	64.49 ▲
ತಮಿಳುನಾಡು	34.41 ▲

ಭಾರತದ ಕೋವಿಡ್ ಸಂಖ್ಯೆ ವಿವರ: ಶುಕ್ರವಾರ ಬೆಳಿಗ್ಗೆ 8ರವರೆಗಿನ ಮಾಹಿತಿ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯದ ಕೋವಿಡ್ ಅಂಕಿ–ಅಂಶ

39,34,448 ▲ ಒಟ್ಟು ಪ್ರಕರಣಗಳು (39,33,115 ನಿನ್ನೆಯ ವಿವರ)

16,184 ▼ ಸಕ್ರಿಯ ಪ್ರಕರಣಗಳು

38,78,470 ▲ ಗುಣಮುಖರಾದವರು

39,757 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,333 ▼
ಗುಣಮುಖ	4,890 ▼
ಸಾವು	19 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಾಕುವಿನಿಂದ ಇರಿದು ಸುಲಿಗೆ: ಬಂಧನ

ಬೆಂಗಳೂರು: ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರಿಗೆ ಚಾಕುವಿನಿಂದ ಇರಿದು ಸುಲಿಗೆ ಮಾಡಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಎಸ್.ಆರ್.ಕೆ ನಗರದ ಸೈಯದ್ ಇಮ್ರಾನ್ ಅಲಿಯಾಸ್ ಕುಂಟ (28) ಹಾಗೂ ಕೆ.ಜಿ.ಹಳ್ಳಿಯ ಅಪ್ಸರ್ ಬೇಗ್ (19) ಬಂಧಿತರು. ಅವರಿಂದ ₹ 2,500 ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಟಿ. ಸತೀಶ್ ಎಂಬುವರು ಫೆ. 7ರಂದು ಕಣ್ಣೂರು- ಬೆಳ್ಳಹಳ್ಳಿ ರಸ್ತೆಯಲ್ಲಿ ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು, ಬ್ಯಾಗ್ ಕಿತ್ತುಕೊಳ್ಳಲು ಯತ್ನಿಸಿದ್ದರು. ಸತೀಶ್ ಬ್ಯಾಗ್ ಬಿಗಿಯಾಗಿ ಹಿಡಿದಿದ್ದರು. ಅದೇ ವೇಳೆ ಆರೋಪಿಗಳು, ಚಾಕುವಿನಿಂದ ಇರಿದು ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದರು.’

‘ಘಟನಾ ಸ್ಥಳ, ಸಿ.ಸಿ.ಟಿ.ವಿ ಪರಿಶೀಲಿಸಿದಾಗ ಆರೋಪಿಗಳ ಸುಳಿವು ಸಿಕ್ಕಿತು. ಸಂಪಿಗೆಹಳ್ಳಿ, ಕೆ.ಜಿ.ಹಳ್ಳಿ, ಯಲಹಂಕ ಹಾಗೂ ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಗಳಲ್ಲೂ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ’ ಎಂದೂ ತಿಳಿಸಿದರು.

ಅಂಕಪಟ್ಟಿ ತಿದ್ದಿದ್ದ ಪ್ರಕರಣ; ಏಜೆನ್ಸಿ ಉದ್ಯೋಗಿ ಬಂಧನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಅಂಕಪಟ್ಟಿಗಳನ್ನು ತಿದ್ದಿ ಅಕ್ರಮ ಎಸಗಿದ್ದ ಪ್ರಕರಣದಲ್ಲಿ, ಏಜೆನ್ಸಿಯೊಂದರ ಉದ್ಯೋಗಿ ಚರಣ್ ಎಂಬಾತನನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತ ಚರಣ್, ಖಾಸಗಿ ಏಜೆನ್ಸಿ ಪರವಾಗಿ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ಕೃತ್ಯದಲ್ಲಿ ಆತನ ಪಾತ್ರವಿರುವ ಮಾಹಿತಿ ಲಭ್ಯವಾಗಿತ್ತು. ಹೀಗಾಗಿ, ಆತನನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು’ ಎಂದು ಸಿಐಡಿ ಮೂಲಗಳು ಹೇಳಿವೆ.

‘2019 ಮತ್ತು 2020ನೇ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದ 804 ವಿದ್ಯಾರ್ಥಿಗಳ ಅಂಕಗಳನ್ನು ತಿದ್ದಿ ಅಕ್ರಮ ಎಸಗಲಾಗಿತ್ತು. ಅದು ಗಮನಕ್ಕೆ ಬರುತ್ತಿದ್ದಂತೆ, 804 ವಿದ್ಯಾರ್ಥಿಗಳ ಫಲಿತಾಂಶವನ್ನು ಹಿಂಪಡೆಯಲಾಗಿತ್ತು. ಅಕ್ರಮದ ಬಗ್ಗೆ ವಿಶ್ವವಿದ್ಯಾಲಯದ ಹಿಂದಿನ ಕುಲಸಚಿವರಾಗಿದ್ದ ಕೆ. ಜ್ಯೋತಿ, ಜ್ಞಾನಭಾರತಿ ಠಾಣೆಗೆ ದೂರು ನೀಡಿದ್ದರು. ಅದೇ ಪ್ರಕರಣದ ತನಿಖೆ ಜವಾಬ್ದಾರಿಯನ್ನು ಸಿಐಡಿಯ ಆರ್ಥಿಕ ವಿಭಾಗಕ್ಕೆ ವಹಿಸಲಾಗಿತ್ತು’ ಎಂದೂ ತಿಳಿಸಿವೆ.

ಏಜೆನ್ಸಿ ಸಿಬ್ಬಂದಿ ಮೇಲೆ ಅನುಮಾನ: ‘ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವವರು, ಅಂಕ ನಮೂದಿಸಿ, ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ, ಅಂಕಪಟ್ಟಿ ಸಿದ್ಧಪಡಿಸಿ ಸಿ.ಡಿ, ಇ-ಮೇಲ್ ಮೂಲಕ ಕುಲಸಚಿವರಿಗೆ ಕಳುಹಿಸಬೇಕೆಂಬ ನಿಯಮವಿದೆ’ ಎಂದು ಹೇಳಿವೆ.

‘ಉತ್ತರ ಪತ್ರಿಕೆ ಸ್ಕ್ಯಾನ್ ಮಾಡುವ ಸಂದರ್ಭದಲ್ಲೇ ಅಂಕಗಳನ್ನು ತಿದ್ದಲಾಗಿತ್ತು. ಸ್ಕ್ಯಾನಿಂಗ್ ಜವಾಬ್ದಾರಿ ವಹಿಸಿಕೊಂಡಿರುವ ತಮಿಳುನಾಡಿನ ಏಜೆನ್ಸಿ ಉದ್ಯೋಗಿ ಚರಣ್ ಮೇಲೆ ಅನುಮಾನ ವ್ಯಕ್ತವಾಗಿತ್ತು.’ ಎಂದೂ ತಿಳಿಸಿವೆ.

ಕಿರುಕುಳ: ಅಧಿಕಾರಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಇಲಾಖೆಯ ಮಹಿಳಾ ಸಿಬ್ಬಂದಿ ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ.

‘ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕ (ಆಡಳಿತ) ಎನ್.ಚಂದ್ರಶೇಖರ್ ಅವರು ಮಹಿಳಾ ಸಿಬ್ಬಂದಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಕಚೇರಿಯಲ್ಲಿನ ತಮ್ಮ ಕ್ಯಾಬಿನ್‌ಗೆ ಕರೆದು ಮೈಕೈ ಮುಟ್ಟುತ್ತಾರೆ’ ಎಂದು ಆಯೋಗಕ್ಕೆ ನೀಡಿರುವ ದೂರಿನಲ್ಲಿ ಮಹಿಳಾ ಸಿಬ್ಬಂದಿ ಆರೋಪಿಸಿದ್ದಾರೆ.

‘ಇವರ ಕಾಟ ತಡೆಯಲಾರದೆ ಅನೇಕರು ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಇದರಿಂದ ಹಾಲಿ ಇರುವ ಸಿಬ್ಬಂದಿಗೆ ಕೆಲಸದ ಒತ್ತಡವೂ ಹೆಚ್ಚಾಗಿದೆ. ಈ ಬಗ್ಗೆ ಇಲಾಖೆಯ ಪ್ರತಿ ಮಹಿಳಾ ಸಿಬ್ಬಂದಿಯಿಂದ ವಾಸ್ತವ ತಿಳಿದು, ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದೂ ಕೋರಿದ್ದಾರೆ.

‘ಚಂದ್ರಶೇಖರ್ ಅವರು ಐಎಎಸ್ ಹುದ್ದೆಗೆ ಪದೋನ್ನತಿ ಪಡೆದವರು. ಇವರು ಕಚೇರಿಗೆ ಮೊದಲು ಬಂದಾಗ ಸಿಬ್ಬಂದಿಯ ಜಾತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಜಾತಿ ಆಧಾರದಲ್ಲಿ ಸಿಬ್ಬಂದಿಯನ್ನು ಒಡೆಯುವ ಕೆಲಸ ಮಾಡಿದರು. ತಮ್ಮ ಮಾತು ಕೇಳದವರಿಗೆ ಕಿರುಕುಳ ನೀಡುತ್ತಿದ್ದರು’ ಎಂದು ಹೆಸರು ಹೇಳಲು ಇಚ್ಛಿಸಿದ ಸಿಬ್ಬಂದಿಯೊಬ್ಬರು ದೂರಿದ್ದರು.

‘ಈ ಕಿರುಕುಳದಿಂದ ಬೇಸತ್ತು ದೂರು ನೀಡಿದ್ದೇವೆ’ ಎಂದರು.

‘ಚಂದ್ರಶೇಖರ್ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹಿಸಿ ಲಾಲ್‌ಬಾಗ್‌ನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದ್ದೇವೆ. ತೋಟಗಾರಿಕೆ ಇಲಾಖೆ ಸಚಿವ ಮುನಿರತ್ನ ಅವರಿಗೂ ಮನವಿ ಸಲ್ಲಿಸಿದ್ದೇವೆ. ಅವರನ್ನು ಕೂಡಲೇ ಬೇರೆ ಕಡೆಗೆ ವರ್ಗಾಯಿಸಿ, ಕಿರುಕುಳದಿಂದ ಮುಕ್ತಿ ನೀಡಬೇಕು. ನಮ್ಮ ಸಮಸ್ಯೆಗೆ ಪರಿಹಾರ ಸಿಗದಿದ್ದರೆ, ಧರಣಿ ಕೂರಲಿದ್ದೇವೆ’ ಎಂದೂ ಎಚ್ಚರಿಸಿದರು.

ಈ ಬಗ್ಗೆ ಮಾಹಿತಿ ಪಡೆಯಲು ಸಚಿವ ಮುನಿರತ್ನ ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

‘ಬೇರೆಡೆಗೆ ವರ್ಗಾವಣೆ ಮಾಡಿಸಲು ಷಡ್ಯಂತ್ರ’

‘ನನ್ನ ಮೇಲೆ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದದ್ದು. ನನ್ನನ್ನು ಈಗಿನ ಹುದ್ದೆಯಿಂದ ಬೇರೆ ಕಡೆಗೆ ವರ್ಗಾವಣೆ ಮಾಡಿಸಬೇಕೆಂಬ ದುರುದ್ದೇಶದಿಂದ ಷಡ್ಯಂತ್ರ ನಡೆಸಿದ್ದಾರೆ. ನನ್ನ ಮೇಲೆ ಈವರೆಗೆ ಯಾವುದೇ ಭ್ರಷ್ಟಾಚಾರದ ಆರೋಪಗಳಿಲ್ಲ. ಕೆಲವರು ನನ್ನ ಗೌರವಕ್ಕೆ ಧಕ್ಕೆ ತರಲು ಈ ರೀತಿಯ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಅವರ ಮೇಲೆ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ’ ಎಂದು ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕ (ಆಡಳಿತ) ಎನ್.ಚಂದ್ರಶೇಖರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಮಹಿಳೆಯರಿಗೆ ಅಶ್ಲೀಲ ವಿಡಿಯೊ ಕಳುಹಿಸಿ ಬೆದರಿಕೆ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಮೊಬೈಲ್‌ಗೆ ಅಶ್ಲೀಲ ವಿಡಿಯೊ ಹಾಗೂ ಫೋಟೊ ಕಳುಹಿಸುತ್ತಿದ್ದ ಆರೋಪದಡಿ ಹರೀಶ್ ಎಂಬಾತನನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

‘ಅರಕಲಗೂಡಿನ ಕಂಚೇನಹಳ್ಳಿಯ ಹರೀಶ್, ನಗರದ ಮಹಿಳೆಯೊಬ್ಬರಿಗೆ ಮೂರು ತಿಂಗಳಿನಿಂದ ಕಿರುಕುಳ ನೀಡುತ್ತಿದ್ದ. ಈ ಬಗ್ಗೆ ಮಹಿಳೆಯ ಪತಿ ದೂರು ನೀಡಿದ್ದರು. ಅದರನ್ವಯ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಹಾಗೂ ಇತರೆ ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಿ ಖಾತೆ ತೆರೆದಿದ್ದ. ಅವುಗಳ ಮೂಲಕ ಮಹಿಳೆಯರ ಖಾತೆಗಳಿಗೆ ರಿಕ್ವೆಸ್ಟ್ ಕಳುಹಿಸುತ್ತಿದ್ದ. ಅದನ್ನು ಸ್ವೀಕರಿಸುತ್ತಿದ್ದ ಮಹಿಳೆಯರ ಜೊತೆ ಚಾಟಿಂಗ್ ಮಾಡಲಾರಂಭಿಸುತ್ತಿದ್ದ. ಮೊಬೈಲ್ ನಂಬರ್ ಪಡೆದು, ವಾಟ್ಸ್‌ಆ್ಯಪ್‌ಗೂ ಸಂದೇಶ ಕಳುಹಿಸುತ್ತಿದ್ದ’ ಎಂದೂ ತಿಳಿಸಿದರು.

‘ಆನ್‌ಲೈನ್ ಮೂಲಕ ಅಶ್ಲೀಲ ವಿಡಿಯೊ ಹಾಗೂ ಫೋಟೊಗಳನ್ನು ಡೌನ್‌ಲೋಡ್ ಮಾಡುತ್ತಿದ್ದ ಆರೋಪಿ, ಅವುಗಳನ್ನು ಮಹಿಳೆಯರ ಮೊಬೈಲ್‌ಗೆ ಕಳುಹಿಸುತ್ತಿದ್ದ. ಲೈಂಗಿಕವಾಗಿ ಪ್ರಚೋದಿಸಲು ಯತ್ನಿಸುತ್ತಿದ್ದನೆಂದು ಗೊತ್ತಾಗಿದೆ.’

‘ಆರೋಪಿ 10 ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿರುವ ಮಾಹಿತಿ ಇದೆ. ಅಂಥ ಮಹಿಳೆಯರಿಂದ ಹೇಳಿಕೆ ಪಡೆಯಲಾಗುತ್ತಿದೆ’ ಎಂದೂ ಪೊಲೀಸರು ಹೇಳಿದರು.

ಲಂಚ: ಹೊರ ಗುತ್ತಿಗೆ ನೌಕರನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ರೈತರೊಬ್ಬರಿಂದ ರಾಗಿ ಖರೀದಿಸಲು ₹ 1,500 ಲಂಚ ಪಡೆಯುತ್ತಿದ್ದ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ (ಕೆಎಫ್‌ಸಿಎಸ್‌ಸಿ) ಕೆಂಗೇರಿ ಖರೀದಿ ಕೇಂದ್ರದಲ್ಲಿ ಹೊರ ಗುತ್ತಿಗೆ ನೌಕರರಾಗಿರುವ ಲಿಂಗಯ್ಯ ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಂಧಿಸಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಅರಳಿಮರಪಾಳ್ಯದ ನಿವಾಸಿಯೊಬ್ಬರು ನಾಗದೇವನಹಳ್ಳಿಯಲ್ಲಿರುವ ಕೆಂಗೇರಿ ಹೋಬಳಿ ಮಟ್ಟದ ಕೆಎಫ್‌ಸಿಎಸ್‌ಸಿ ಎಂಎಸ್‌ಪಿ ರಾಗಿ ಖರೀದಿ ಕೇಂದ್ರಕ್ಕೆ ರಾಗಿಯನ್ನು ತೆಗೆದುಕೊಂಡು ಹೋಗಿದ್ದರು. 20 ಕ್ವಿಂಟಲ್ ರಾಗಿ ಖರೀದಿಗೆ ₹ 1,500 ಲಂಚ ನೀಡುವಂತೆ ಅಲ್ಲಿನ ಹೊರ ಗುತ್ತಿಗೆ ನೌಕರ ಬೇಡಿಕೆ ಇಟ್ಟಿದ್ದರು.

ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ರೈತ ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ಸಲ್ಲಿಸಿದ್ದರು. ಶುಕ್ರವಾರ ಕಾರ್ಯಾಚರಣೆ ನಡೆಸಿ, ಲಂಚದ ಹಣದ ಸಮೇತ ಆರೋಪಿಯನ್ನು ಬಂಧಿಸಲಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಯಲಹಂಕ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್: ಶ್ರೀನಿವಾಸ್ ಅಧ್ಯಕ್ಷ


ಶ್ರೀನಿವಾಸ್

ಯಲಹಂಕ: ಯಲಹಂಕ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಎನ್.ಎಂ.ಶ್ರೀನಿವಾಸ್ ಅವರನ್ನು ನೇಮಕ ಮಾಡಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಎನ್‌ಐಎಯಿಂದ ಐಪಿಎಸ್ ಅಧಿಕಾರಿ ನೇಗಿ ಬಂಧನ

ನವದೆಹಲಿ (ಪಿಟಿಐ): ನಿಷೇಧಿತ ಲಷ್ಕರ್ ಎತಯಬಾ (ಎಲ್ಇಟಿ) ಭಯೋತ್ಪಾದಕ ಸಂಘಟನೆಯ ಸದಸ್ಯರಿಗೆ ರಹಸ್ಯ ದಾಖಲೆಗಳನ್ನು ಸೋರಿಕೆ ಮಾಡಿದ ಆರೋಪ ಎದುರಿಸುತ್ತಿರುವ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಮಾಜಿ ಎಸ್‌ಪಿ, ಐಪಿಎಸ್ ಅಧಿಕಾರಿ ಅರವಿಂದ್ ದಿಗ್ವಿಜಯ್ ನೇಗಿ ಅವರನ್ನು ಎನ್‌ಐಎ ಶುಕ್ರವಾರ ಬಂಧಿಸಿದೆ.

ಪೋರ್ಷೆ, ಬೆಂಟ್ಲೆ ಕಾರು ಸಾಗಿಸುತ್ತಿದ್ದ ಹಡಗಿಗೆ ಬೆಂಕಿ

ಬರ್ಲಿನ್/ಲಿಸ್ಬನ್ (ರಾಯಿಟರ್ಸ್): ಜರ್ಮನಿಯಿಂದ ಪೋರ್ಷೆ, ಔಡಿ ಮತ್ತು ಬೆಂಟ್ಲೆ ಕಾರುಗಳನ್ನು ಅಮೆರಿಕಕ್ಕೆ ಸಾಗಿಸುತ್ತಿದ್ದ ಹಡಗಿಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಫೋಕ್ಸ್‌ವ್ಯಾಗನ್ ಕಂಪನಿಯ ವಕ್ತಾರರೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಪೋರ್ಚುಗಲ್‌ನ ಅಜೋರ್ಸ್ ದ್ವೀಪಗಳ ಕರಾವಳಿ ಬಳಿ ಈ ಘಟನೆ ಸಂಭವಿಸಿದೆ. ಕಾರುಗಳಿಗೆ ಹಾನಿ ಆಗಿದೆಯೇ ಎನ್ನುವುದು ಸ್ಪಷ್ಟವಾಗಿಲ್ಲ.

PUBLIC NOTICE

This is to notify the general public that our client intends to purchase immovable agricultural property bearing Survey No. 225/1, 225/2 and 225/3, situated at Huilmangala village, Jiganihobli, Anekal Taluk, which is morefully described in the Schedule hereunder and hereinafter referred to as "Schedule Properties" from **Mr. K. R. SRIDHARA.**

Any person having any right, title, interest or claim in the Schedule Property or having any objection to the purchase must notify the undersigned with documentary proof thereof.

SCHEDULE PROPERTIES

Item No.1 : All that piece and parcel of immovable agricultural property bearing Survey No.225/1, measuring 4 Acres 39 Guntas, and 2 Guntas of A kharab, situated at Huilmangala village, Jiganihobli, Anekal Taluk, Bangalore and bounded on: **East by :** Survey No.155; **West by :** Survey No.225/2, 225/3, 225/4 and 225/5; **North by :** Road and Kaluve; **South by :** Survey No. 226.

Item No.2: All that piece and parcel of immovable agricultural property bearing Survey No.225/2, measuring 1 Acre, and 1 Gunta of A kharab, situated at Huilmangala village, Jiganihobli, Anekal Taluk, Bangalore and bounded on: **East by** :Survey No.225/1; **West by** : Survey No. 227; **North by :** Kaluve; **South by :** Survey No. 225/3.

Item No.3: All that piece and parcel of immovable agricultural property bearing Survey No. 225/3, measuring 20 Guntas, situated at Huilmangala village, Jiganihobli, Anekal Taluk, Bangalore and bounded on: **East by :** Survey No. 225/1; **West by**: Survey No. 227; **North by** : Survey No. 225/2; **South by :** Survey No. 225/4.

"ABHIJIT ATUR, Advocate
AGRAA LEGAL, Advocates and Consultants
Address: 2nd Floor, Shivashankar Plaza, 19, Lal Bagh Road, Richmond Circle, Bangalore – 560027; Ph: 080-41680004
E-mail ID: admin@agraalegal.com

Place: Bangalore, Date: 19.02.2022

IN THE COURT OF 1ST ADDL CIVIL JUDGE & JMFC AT ANEKAL O.S.No.39/201 9

BETWEEN
Amruthraj, S/o.late T.Anandraj. Aged about 46 years, Working as Revenue Assessor, Office of ARO Hebbal Sub-Division, J.C.Nagar, Munireddy Palya, BBMP, Bangalore,
Permanent resident
Mirza Road, Newpet, Behind Anekal Milk Dairy, Anekal Town, Bengaluru Urban District — Plaintiff
AND
Smt.Uma Devi — Defendant

NOTICES TO DEFENDANT

Smt.Uma Devi, First Division Assistant Office of the executive Engineer Hebbal Division, Munireddy Palya, J.C.Nagar, Bangalore. whereas, the plaintiff here by instituted the above suit against you for the relief of Damages 1or Rs.5,00,000-00 for spoiling his status and reputation in the offcial Circle and as well as in the social life. You are here by summoned to appear before this Hon'ble court in person or by a pleader on 11/04/2022 at 11.00 am to answer the same, failing Which the suit will be disposed off ex-parte. Given under my hand and seal of the court ont his **18/02/2022**

Advocate for Plaintiff
V.Ravish Kumar, Advocate
STB Complex, Attibele Road,Anekal Town, Bengaluru Urban District.

ಭಾರತ ಸರ್ಕಾರ
ಅಪರ ನಿರ್ದೇಶಕರ ಕಚೇರಿ, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ

ಇ-ವಿಂಗ್, 3ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-34.

ಪ್ರಸ್ತುತ ಬನಶಂಕರಿ, ಹೆಚ್‌ಬಿಆರ್ ಲೇಔಟ್, ಜಯನಗರ ಮತ್ತು ಗಂಗಾನಗರದಲ್ಲಿರುವ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್‌ಗಳನ್ನು ಹೊಸ ಸ್ಥಳಗಳಲ್ಲಿ ನೆಲೆಗೊಳಿಸಲು ವಸತಿ ಪ್ರದೇಶ/ ವಾಣಿಜ್ಯ ಪ್ರದೇಶದಲ್ಲಿ ಸ್ಥಳಾವಕಾಶ ಬೇಕಾಗಿದೆ.

ತಿದ್ದುಪಡಿ

ಡೆಕ್ಕನ್ ಹೆರಾಲ್ಡ್ / ಪ್ರಜಾವಾಣಿ ದಿನಪತ್ರಿಕೆಗಳಲ್ಲಿ ದಿನಾಂಕ: 16.02.2022ರಂದು ಜಾಹೀರಾತುಗೊಂಡ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾದ ವಿವರಗಳನ್ನು ವೆಬ್‌ಸೈಟ್: **cghs.nic.in** ಬದಲಿಗೆ **https://cghs.gov.in** ಅಥವಾ **https://cghsbng.gov.in** ನಿಂದ ಪಡೆಯಬಹುದು.

ಸಹಿ/- ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, (**'ಕಕ್ಷಿದಾರ'**) ಈ ಕೆಳಕಂಡ "ಷೆಡ್ಯೂಲ್" ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿ ಸ್ವತ್ತುಗಳ ಸಂಬಂಧ ವ್ಯವಹರಿಸಲು ಮುಂದಾಗಿದ್ದು ಪ್ರಸ್ತುತ ಮಾಲೀಕರಾದ **ಕೃಷ್ಣ ಪ್ರಿಯ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್**, ಈ ಕಂಪನಿ 2013 ರ ಕಂಪನಿಗಳ ಕಾಯ್ದೆಯ ಅಡಿಯಲ್ಲಿ ಸ್ಥಾಪನೆಯಾಗಿದೆ. ಇದರ ನೊಂದಾಯಿತ ಕಛೇರಿ ವಿಳಾಸ: ನಂ.100/1, ಸಿಟಿ ಸೆಂಟರ್, ಟೌನ್ ಹಾಲ್ ಎದುರು, ಜೆ.ಸಿ. ರಸ್ತೆ, ಬೆಂಗಳೂರು–560002. (**"ಪ್ರಸ್ತುತ ಮಾಲೀಕರು"**)

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಪ್ರಸ್ತುತ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ ಅಥವಾ ಮತ್ತಾವುದೇ ಕ್ಲೇಮ್‌ಗಳನ್ನು ಸದರಿ ಉದ್ದೇಶಿತ ವ್ಯವಹಾರಗಳಲ್ಲಿ ಹೊಂದಿದ್ದಲ್ಲಿ, ಸದರಿ ಕ್ಲೇಮುಗಳು / ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲೇ ಸಲ್ಲಿಸಬೇಕು. ಇದರೊಂದಿಗೆ ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ತಮ್ಮ ಕ್ಲೇಮುಗಳನ್ನು ಮತ್ತು ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **10 (ಹತ್ತು) ದಿನಗಳ** ಅವಧಿಯೊಳಗೆ ಈ ಕೆಳಕಂಡವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಮೇಲ್ಕಂಡ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಪ್ರಸ್ತುತ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಅಧಿಕಾರ, ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಸಂಬಂಧ ವ್ಯವಹಾರಗಳನ್ನು ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಲಕ್ಷ್ಮೀಪುರ ಗ್ರಾಮದಲ್ಲಿರುವ ಒಟ್ಟಾರೆ ವಿಸ್ತೀರ್ಣ 64 ಎಕರೆ 17 ಗುಂಟೆಗಳ ಸಂಪೂರ್ಣ ಜಮೀನುಗಳ ವಿವರಗಳನ್ನು ಈ ಕೆಳಗಿನ ಟೇಬಲ್‌ನಲ್ಲಿ ತಿಳಿಸಲಾಗಿದೆ.

ಕ್ರಮ ಸಂಖ್ಯೆ	ಸ್ವತ್ತುಗಳ ವಿವರಗಳು		ವಿಸ್ತೀರ್ಣ		ಚಕ್ಕುಬಂದಿಗಳು:
	ಪ್ಲಾಟ್ ಸಂಖ್ಯೆ.	ಸರ್ವೆ ನಂ.	ಎಕರೆ	ಗುಂಟೆ	
1	ಪ್ಲಾಟ್ ಸಂಖ್ಯೆ.4	27/ 2 (2 ಎಕರೆ 10 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.27 ರ ಜಮೀನು; ಪಶ್ಚಿಮಕ್ಕೆ : ಸರ್ವೆ ನಂ.2 ಮತ್ತು ಸರ್ವೆ ನಂ.1 ಮತ್ತು ಗ್ರಾಮದ ಗಡಿ; ಉತ್ತರಕ್ಕೆ : ಸರ್ವೆ ನಂ.27 ಮತ್ತು ಸರ್ವೆ ನಂ.2 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.28 ಮತ್ತು ದೇವಸ್ಥಾನದ ಸ್ವತ್ತು.
2	ಪ್ಲಾಟ್ ಸಂಖ್ಯೆ.5	4/ 6 (2 ಎಕರೆ 10 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.4 ರ ಜಮೀನು; ಪಶ್ಚಿಮಕ್ಕೆ : ಗ್ರಾಮದ ಗಡಿ ಮತ್ತು ಖಾಸಗಿ ಸ್ವತ್ತು; ಉತ್ತರಕ್ಕೆ : ಸರ್ವೆ ನಂ.4 ರ ಜಮೀನು; ಮತ್ತು ದಕ್ಷಿಣಕ್ಕೆ : ಖಾಸಗಿ ಸ್ವತ್ತು (ಸರ್ವೆ ನಂ.56).
3	ಪ್ಲಾಟ್ ಸಂಖ್ಯೆ.6	4/ 5 (2 ಎಕರೆ 10 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.4 ರ ಉಳಿಕೆ ಭಾಗದ ಜಮೀನು; ಪಶ್ಚಿಮಕ್ಕೆ : ಗಡಿ ಮತ್ತು ಖಾಸಗಿ ಸ್ವತ್ತು; ಉತ್ತರಕ್ಕೆ : ಸರ್ವೆ ನಂ.4 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.4 ರ ಉಳಿಕೆ ಭಾಗದ ಜಮೀನು.
4	ಪ್ಲಾಟ್ ಸಂಖ್ಯೆ.7	4/ 4 (1 ಎಕರೆ 13 ಗುಂಟೆಗಳು) 5/ 6 (34 ಗುಂಟೆಗಳು) 6/ 13 (3 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.6 ರ ಜಮೀನು; ಪಶ್ಚಿಮಕ್ಕೆ : ಖಾಸಗಿ ಸ್ವತ್ತು; ಉತ್ತರಕ್ಕೆ : ಸರ್ವೆ ನಂ.4, 5 ಮತ್ತು 6 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.4 ರ ಜಮೀನು.
5	ಪ್ಲಾಟ್ ಸಂಖ್ಯೆ.8	4/ 3 (1 ಎಕರೆ 3 ಗುಂಟೆಗಳು) 5/ 5 (1 ಎಕರೆ 2 ಗುಂಟೆಗಳು) 6/ 5 (5 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.6 ರ ಜಮೀನು; ಪಶ್ಚಿಮಕ್ಕೆ : ಗ್ರಾಮದ ಗಡಿ; ಉತ್ತರಕ್ಕೆ : ಸರ್ವೆ ನಂ.4, 5 ಮತ್ತು 6 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.4, 5 ಮತ್ತು 6 ರ ಉಳಿಕೆ ಭಾಗದ ಜಮೀನು.
6	ಪ್ಲಾಟ್ ಸಂಖ್ಯೆ.9	4/ 2 (27 ಗುಂಟೆಗಳು) 5/ 4 (1 ಎಕರೆ 11 ಗುಂಟೆಗಳು) 6/ 4 (12 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.6 ರ ಜಮೀನು; ಪಶ್ಚಿಮಕ್ಕೆ : ಖಾಸಗಿ ಸ್ವತ್ತು; ಉತ್ತರಕ್ಕೆ : ಸರ್ವೆ ನಂ.4, 5 ಮತ್ತು 6 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.4, 5 ಮತ್ತು 6 ರ ಉಳಿಕೆ ಭಾಗದ ಜಮೀನು.
7	ಪ್ಲಾಟ್ ಸಂಖ್ಯೆ.10	4/ 1 (9 ಗುಂಟೆಗಳು) 5/ 3 (1 ಎಕರೆ 23 ಗುಂಟೆಗಳು) 6/ 3 (18 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.6 ರ ಉಳಿಕೆ ಭಾಗದ ಜಮೀನು; ಪಶ್ಚಿಮಕ್ಕೆ : ಖಾಸಗಿ ಸ್ವತ್ತು; ಉತ್ತರಕ್ಕೆ : ಸರ್ವೆ ನಂ.5 ಮತ್ತು 6 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.4, 5 ಮತ್ತು 6 ರ ಉಳಿಕೆ ಭಾಗದ ಜಮೀನು.
8	ಪ್ಲಾಟ್ ಸಂಖ್ಯೆ.11	5/ 2 (1 ಎಕರೆ 21 ಗುಂಟೆಗಳು) 6/ 2 (29 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.6 ರ ಉಳಿಕೆ ಭಾಗದ ಜಮೀನು; ಪಶ್ಚಿಮಕ್ಕೆ : ಖಾಸಗಿ ಸ್ವತ್ತು; ಉತ್ತರಕ್ಕೆ : ಸರ್ವೆ ನಂ.5 ಮತ್ತು 6 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.5 ಮತ್ತು 6 ರ ಉಳಿಕೆ ಭಾಗದ ಜಮೀನು.
9	ಪ್ಲಾಟ್ ಸಂಖ್ಯೆ.12	5/ 1 (9 ಗುಂಟೆಗಳು) 6/ 1 (13 ಗುಂಟೆಗಳು) 8/ 1 (1 ಎಕರೆ 28 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.8 ಮತ್ತು 6 ರ ಉಳಿಕೆ ಭಾಗದ ಜಮೀನು; ಪಶ್ಚಿಮಕ್ಕೆ : ಖಾಸಗಿ ಸ್ವತ್ತು; ಉತ್ತರಕ್ಕೆ : ಖಾಸಗಿ ಸ್ವತ್ತು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.5 ಮತ್ತು 6 ರ ಉಳಿಕೆ ಭಾಗದ ಜಮೀನು.
10	ಪ್ಲಾಟ್ ಸಂಖ್ಯೆ.13	8/ 2 (1 ಎಕರೆ 6 ಗುಂಟೆಗಳು) 9/ 1 (1 ಎಕರೆ 4 ಗುಂಟೆಗಳು)	02	10	ಪೂರ್ವಕ್ಕೆ : ಖಾಸಗಿ ಸ್ವತ್ತು; ಪಶ್ಚಿಮಕ್ಕೆ : ಸರ್ವೆ ನಂ.8 ರ ಉಳಿಕೆ ಭಾಗದ ಜಮೀನು; ಉತ್ತರಕ್ಕೆ : ಖಾಸಗಿ ಸ್ವತ್ತು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.8 ಮತ್ತು 9 ರ ಉಳಿಕೆ ಭಾಗದ ಜಮೀನು.
11	ಪ್ಲಾಟ್ ಸಂಖ್ಯೆ.14	8/ 3 (33 ಗುಂಟೆಗಳು) 9/ 2 (1 ಎಕರೆ 17 ಗುಂಟೆಗಳು)	02	10	ಪೂರ್ವಕ್ಕೆ : ಖಾಸಗಿ ಸ್ವತ್ತು; ಪಶ್ಚಿಮಕ್ಕೆ : ಸರ್ವೆ ನಂ.8 ರ ಉಳಿಕೆ ಭಾಗದ ಜಮೀನು; ಉತ್ತರಕ್ಕೆ : ಸರ್ವೆ ನಂ.8 ಮತ್ತು 9 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.8 ಮತ್ತು 9 ರ ಉಳಿಕೆ ಭಾಗದ ಜಮೀನು.
12	ಪ್ಲಾಟ್ ಸಂಖ್ಯೆ.15	6/ 6 (3 ಗುಂಟೆಗಳು) 7/ 1 (9 ಗುಂಟೆಗಳು) 8/ 4 (13 ಗುಂಟೆಗಳು) 9/ 3 (1 ಎಕರೆ 25 ಗುಂಟೆಗಳು)	02	10	ಪೂರ್ವಕ್ಕೆ : ಖಾಸಗಿ ಸ್ವತ್ತು; ಪಶ್ಚಿಮಕ್ಕೆ : ಸರ್ವೆ ನಂ.6 ಮತ್ತು 8 ರ ಉಳಿಕೆ ಭಾಗದ ಜಮೀನು; ಉತ್ತರಕ್ಕೆ : ಸರ್ವೆ ನಂ.8 ಮತ್ತು 9 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.6, 7 ಮತ್ತು 9 ರ ಉಳಿಕೆ ಭಾಗದ ಜಮೀನು.
13	ಪ್ಲಾಟ್ ಸಂಖ್ಯೆ.16	6/ 12 (12 ಗುಂಟೆಗಳು) 9/ 4 (34 ಗುಂಟೆಗಳು) 7/ 2 (1 ಎಕರೆ 4 ಗುಂಟೆಗಳು)	02	10	ಪೂರ್ವಕ್ಕೆ : ಖಾಸಗಿ ಸ್ವತ್ತು; ಪಶ್ಚಿಮಕ್ಕೆ : ಸರ್ವೆ ನಂ.6 ರ ಉಳಿಕೆ ಭಾಗದ ಜಮೀನು; ಉತ್ತರಕ್ಕೆ : ಸರ್ವೆ ನಂ.6,7 ಮತ್ತು 9 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.6 ಮತ್ತು 7 ರ ಉಳಿಕೆ ಭಾಗದ ಜಮೀನು.
14	ಪ್ಲಾಟ್ ಸಂಖ್ಯೆ.17	7/ 3 (1 ಎಕರೆ)	01	00	ಪೂರ್ವಕ್ಕೆ : ಸರ್ವೆ ನಂ.11 ರ ಉಳಿಕೆ ಭಾಗದ ಜಮೀನು; ಪಶ್ಚಿಮಕ್ಕೆ : ಸರ್ವೆ ನಂ.6 ರ ಉಳಿಕೆ ಭಾಗದ ಜಮೀನು; ಉತ್ತರಕ್ಕೆ : ಸರ್ವೆ ನಂ.6 ಮತ್ತು 7 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.6, 7 ಮತ್ತು 11 ರ ಉಳಿಕೆ ಭಾಗದ ಜಮೀನು.
15	ಪ್ಲಾಟ್ ಸಂಖ್ಯೆ.18	6/ 10 (21 ಗುಂಟೆಗಳು) 7/ 4 (1 ಎಕರೆ 29 ಗುಂಟೆಗಳು)	02	10	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.6 ರ ಉಳಿಕೆ ಭಾಗದ ಜಮೀನು; ಉತ್ತರಕ್ಕೆ : ಸರ್ವೆ ನಂ.6 ಮತ್ತು 7 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.6 ಮತ್ತು 7 ರ ಉಳಿಕೆ ಭಾಗದ ಜಮೀನು.
16	ಪ್ಲಾಟ್ ಸಂಖ್ಯೆ.19	6/ 9 (25 ಗುಂಟೆಗಳು) 7/ 5 (1 ಎಕರೆ 25 ಗುಂಟೆಗಳು)	02	10	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.6 ರ ಜಮೀನು; ಉತ್ತರಕ್ಕೆ : ಸರ್ವೆ ನಂ.6 ಮತ್ತು 7 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.6 ಮತ್ತು 7 ರ ಜಮೀನು.
17	ಪ್ಲಾಟ್ ಸಂಖ್ಯೆ.20	7/ 6 (1 ಎಕರೆ 13 ಗುಂಟೆಗಳು) 6/ 8 (37 ಗುಂಟೆಗಳು)	02	10	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.6 ರ ಜಮೀನು; ಉತ್ತರಕ್ಕೆ : ಸರ್ವೆ ನಂ.6 ಮತ್ತು 7 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.6 ಮತ್ತು 7 ರ ಜಮೀನು.
18	ಪ್ಲಾಟ್ ಸಂಖ್ಯೆ.21	2/ 3 (1 ಎಕರೆ 27 ಗುಂಟೆಗಳು) 27/ 1 (23 ಗುಂಟೆಗಳು)	02	10	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.27 ರ ಉಳಿಕೆ ಭಾಗದ ಜಮೀನು; ಉತ್ತರಕ್ಕೆ : ಸರ್ವೆ ನಂ.27 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.28 ರ ಜಮೀನು.
19	ಪ್ಲಾಟ್ ಸಂಖ್ಯೆ.23	2/ 2 (2 ಎಕರೆ 10 ಗುಂಟೆಗಳು)	02	10	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.4 ರ ಜಮೀನು; ಉತ್ತರಕ್ಕೆ : ಸರ್ವೆ ನಂ.26 ಮತ್ತು 27 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.26, 27 ಮತ್ತು 31 ರ ಜಮೀನು.
20	ಪ್ಲಾಟ್ ಸಂಖ್ಯೆ.24	26/ 5 (18 ಗುಂಟೆಗಳು) 27/ 3 (1 ಎಕರೆ 32 ಗುಂಟೆಗಳು)	02	10	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.4 ರ ಜಮೀನು; ಉತ್ತರಕ್ಕೆ : ಸರ್ವೆ ನಂ.2 ಮತ್ತು 27 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.26, 27 ಮತ್ತು 31 ರ ಜಮೀನು.
21	ಪ್ಲಾಟ್ ಸಂಖ್ಯೆ.25	31/ 10 (2 ಗುಂಟೆಗಳು) 27/ 4 (1 ಎಕರೆ 26 ಗುಂಟೆಗಳು) 26/ 7 (22 ಗುಂಟೆಗಳು)	02	10	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.4 ರ ಜಮೀನು; ಉತ್ತರಕ್ಕೆ : ಸರ್ವೆ ನಂ.26 ಮತ್ತು 27 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.26, 27 ಮತ್ತು 31 ರ ಜಮೀನು.
22	ಪ್ಲಾಟ್ ಸಂಖ್ಯೆ.26	26/ 10 (20 ಗುಂಟೆಗಳು) 27/ 5 (1 ಎಕರೆ 20 ಗುಂಟೆಗಳು) 31/ 9 (16 ಗುಂಟೆಗಳು)	02	16	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.2 ರ ಉಳಿಕೆ ಭಾಗದ ಜಮೀನು; ಉತ್ತರಕ್ಕೆ : ಸರ್ವೆ ನಂ.2 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.27 ರ ಜಮೀನು.
23	ಪ್ಲಾಟ್ ಸಂಖ್ಯೆ.86	2/ 5 (31 ಗುಂಟೆಗಳು) 3/ 3 (1 ಎಕರೆ 19 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.27 ರ ಜಮೀನು; ಪಶ್ಚಿಮಕ್ಕೆ : ಸರ್ವೆ ನಂ.56 ರ ಜಮೀನು; ಉತ್ತರಕ್ಕೆ : ಸರ್ವೆ ನಂ.2 ಮತ್ತು 3 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.1 ರ ಜಮೀನು (ಖಾಸಗಿ ಸ್ವತ್ತು).
24	ಪ್ಲಾಟ್ ಸಂಖ್ಯೆ.87	2/ 4 (1 ಎಕರೆ 4 ಗುಂಟೆಗಳು) 3/ 2 (1 ಎಕರೆ 6 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.2 ಮತ್ತು 27 ರ ಜಮೀನು; ಪಶ್ಚಿಮಕ್ಕೆ : ಸರ್ವೆ ನಂ.4, 56 ರ ಜಮೀನು ಮತ್ತು ಖಾಸಗಿ ಸ್ವತ್ತು; ಉತ್ತರಕ್ಕೆ : ಸರ್ವೆ ನಂ.2 ಮತ್ತು 3 ರ ಉಳಿಕೆ ಭಾಗದ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.2 ಮತ್ತು 3 ರ ಉಳಿಕೆ ಭಾಗದ ಜಮೀನು.
25	ಪ್ಲಾಟ್ ಸಂಖ್ಯೆ.88	4/ 7 (4 ಗುಂಟೆಗಳು) 3/ 1 (2 ಎಕರೆ 6 ಗುಂಟೆಗಳು)	02	10	ಪೂರ್ವಕ್ಕೆ : ಸರ್ವೆ ನಂ.2 ರ ಜಮೀನು; ಪಶ್ಚಿಮಕ್ಕೆ : ಸರ್ವೆ ನಂ.4 ರ ಜಮೀನು; ಉತ್ತರಕ್ಕೆ : ಸರ್ವೆ ನಂ.4, 5 ಮತ್ತು 6 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.2 ಮತ್ತು 3ರ ಜಮೀನು.
26	ಪ್ಲಾಟ್ ಸಂಖ್ಯೆ.90	30/ 1 (1 ಎಕರೆ 11 ಗುಂಟೆಗಳು)	01	11	ಪೂರ್ವಕ್ಕೆ : ನಾಲೆ; ಪಶ್ಚಿಮಕ್ಕೆ : ಸರ್ವೆ ನಂ.28 ಮತ್ತು 29 ರ ಜಮೀನು; ಉತ್ತರಕ್ಕೆ : ಸರ್ವೆ ನಂ.31 ರ ಜಮೀನು; ಮತ್ತು ದಕ್ಷಿಣಕ್ಕೆ : ರಸ್ತೆ.
27	ಸರ್ವೆ ನಂ.60		02	00	ಪೂರ್ವಕ್ಕೆ : ಸರ್ವೆ ನಂ.15 ರ ಜಮೀನು; ಪಶ್ಚಿಮಕ್ಕೆ : ಸರ್ವೆ ನಂ.9 ಮತ್ತು 2 ರ ಜಮೀನು; ಉತ್ತರಕ್ಕೆ : ಸರ್ವೆ ನಂ.10 ರ ಜಮೀನು; ಮತ್ತು ದಕ್ಷಿಣಕ್ಕೆ : ಸರ್ವೆ ನಂ.11, 12 ಮತ್ತು 13 ರ ಜಮೀನು.
28	ಸರ್ವೆ ನಂ.61		02	00	
29	ಸರ್ವೆ ನಂ.62		02	00	
30	ಸರ್ವೆ ನಂ.63		02	00	

ಸಹಿ/–
ಶ್ರೀನಿವಾಸ್ ಬಿ.ಆರ್. ಮತ್ತು ಬ್ರಿಜಿತ ಪ್ರಕಾಶ್
ಪಾಲುದಾರರು
ದುಆ ಅಸೋಸಿಯೇಟ್ಸ್,
ಅಡ್ವೋಕೇಟ್ಸ್ ಮತ್ತು ಸಾಲಿಸಿಟರ್ಸ್,
130/1, ಎರಡನೇ ಅಂತಸ್ತು, ಅಲಸೂರು ರಸ್ತೆ, ಬೆಂಗಳೂರು–560 042.
ದೂ. ಸಂ. 91–80–25588799/ 25589909, ಫ್ಯಾಕ್ಸ್ : 91–80–25588801.

ದಿನಾಂಕ: 19.02.2022
ಸ್ಥಳ : ಬೆಂಗಳೂರು

ಫಿಪ್ಪೋಲ®
ದಿ ಮೀಟ್ ಸೂಪರ್‌ಸ್ಟೋರ್

ಫಿಪೋಲ ನಿಮಗಾಗಿ ನೀಡುತ್ತಿದೆ

ತಾಜಾ ಮಾಂಸ

ಬೆಂಗಳೂರಿನಲ್ಲಿ.

ಫಿಪೋಲ ಬೆಂಗಳೂರಿನಲ್ಲಿ ನಿಮಗಾಗಿ ತಾಜಾ ಮಾಂಸವನ್ನು ಒದಗಿಸಲಿದೆ. ಇದು ವ್ಯಾಪಕ ರೀತಿಯ ಚಿಕನ್, ಮಟನ್, ಸೀಫುಡ್, ಮ್ಯಾರಿನೇಡ್ಸ್, ಕೋಲ್ಡ್ ಕಟ್ಸ್ ಮತ್ತು ಇನ್ನೂ ಹಲವಾರನ್ನು ಒಳಗೊಂಡಿದೆ! ಸುರಕ್ಷಿತ ಮತ್ತು ಸ್ವಚ್ಛ ಪರಿಸರದಲ್ಲಿ ವೃತ್ತಿಪರರಿಂದ ಎಲ್ಲವನ್ನೂ ಕತ್ತರಿಸಿ ಸಂಗ್ರಹಿಸಲಾಗುತ್ತದೆ.

ಉದ್ಘಾಟನಾ ಕೊಡುಗೆಗಳು*

ಚಿಕನ್ ~~₹199/-~~ ₹169/- ಪ್ರತಿ ಕೆಜಿ
ಮಟನ್ ~~₹789/-~~ ₹699/- ಪ್ರತಿ ಕೆಜಿ
ಸೀಫುಡ್ ಫ್ಲಾಟ್ 20% ಆಫ್
ಮ್ಯಾರಿನೇಡ್ ಮಾಂಸಗಳು ಫ್ಲಾಟ್ 50% ಆಫ್

ತಾಜಾ. ಫ್ರೋಜನ್ ಅಲ್ಲ | ನೀವು ಆರ್ಡರ್ ಮಾಡಿದ ನಂತರ ಆಗಷ್ಟೇ ಕತ್ತರಿಸಲಾಗುವುದು | ಆ್ಯಂಟಿಬಯೋಟಿಕ್ ಮತ್ತು ಪ್ರಿಸರ್ವೇಟಿವ್ ಮುಕ್ತ ಮಾಂಸ | ಬೆಂಗಳೂರಿನಾದ್ಯಂತ 90 ನಿಮಿಷಗಳಲ್ಲಿ ಡೆಲಿವರಿ

90 ನಿಮಿಷಗಳು ಡೆಲಿವರಿ | Halal | 26 ಅಂಗಡಿಗಳು ಬೆಂಗಳೂರಿನಾದ್ಯಂತ! | ಡೆಲಿವರಿ ಶುಲ್ಕಗಳಿಲ್ಲ

ಚಿಕನ್, ಮಟನ್, ಸೀಫುಡ್, ಮ್ಯಾರಿನೇಟೆಡ್ ಮಾಂಸಗಳು, ರೆಡಿ–ಟು–ಫ್ರೈ, ಪರ್ಯಾಯ ಮಾಂಸಗಳು.

ಫಿಪೋಲಾ ಅಂಗಡಿಗಳು: ಎಇಸಿಎಸ್ ಲೇಔಟ್ | ಬನಶಂಕರಿ | ಬಿಟಿಎಂ ಲೇಔಟ್ | ಎಲೆಕ್ಟ್ರಾನಿಕ್ ನಗರ | ಹೆಚ್‌ಎಸ್‌ಆರ್ ಲೈಔಟ್ | ಇಂದಿರಾ ನಗರ್ | ಕೆ.ಆರ್ ಪುರಂ | ವರ್ತೂರ್ ರೋಡ್ | ಯಲಹಂಕ/ ಯಶವಂತಪುರ | ಫ್ರೇಜರ್ ಟೌನ್ | ಕಮ್ಮನಹಳ್ಳಿ | ಜಯನಗರ್ | ರಾಜರಾಜೇಶ್ವರಿ ನಗರ್

ಶೀಘ್ರದಲ್ಲೇ ತೆರೆಯಲಿರುವುದು: ಬನ್ನೇರಘಟ್ಟ ರೋಡ್ | ಬೇಗೂರ್ ಮುಖ್ಯ ರಸ್ತೆ | ಚಂದ್ರ ಲೇಔಟ್ | ಹೆಣ್ಣೂರು ಮುಖ್ಯ ರಸ್ತೆ | ಜೆ.ಪಿ.ನಗರ್ | ಕಗ್ಗದಾಸಪುರ | ನಾಗರಬಾವಿ | ಆರ್‌ಟಿ ನಗರ | ಶಿವಾಜಿ ನಗರ್ | ಸರ್ಜಾಪುರ್ ರೋಡ್ | ವೈಟ್‌ಫೀಲ್ಡ್

ಫಿಪೋಲ ಎಕ್ಸ್‌ಕ್ಲೂಸೀವ್ ಸ್ಟೋರ್: ಕೋರಮಂಗಲದಲ್ಲಿ ಶೀಘ್ರದಲ್ಲೇ ತೆರೆಯಲಾಗುತ್ತದೆ

ಚೆನ್ನೈ | ಕೊಯಂಬತ್ತೂರು | ಪುದುಚೇರಿ | ವೆಲ್ಲೂರು | ತಿರುಪುರ್ | ಹೈದರಾಬಾದ್
ಕೊಚಿನ್, ತಿರುವನಂತಪುರಂ ಮತ್ತು ಪುಣೆಯಲ್ಲಿ ಶೀಘ್ರದಲ್ಲೇ ತೆರೆಯಲಾಗುತ್ತದೆ

WWW.FIPOLA.IN
ಈ ವಿಳಾಸಕ್ಕೆ ಆನ್‌ಲೈನ್ ಮೂಲಕ ಆರ್ಡರ್ ಮಾಡಿ

ದಕ್ಷಿಣ ಭಾರತದಾದ್ಯಂತ 60 ಅಂಗಡಿಗಳು

ನಮ್ಮ ಆಪ್ ಡೌನ್‌ಲೋಡ್ ಮಾಡಿ ಕೊಳ್ಳಿ

ಈಗಲೇ ಆರ್ಡರ್ ಮಾಡಿ DUNZO SWIGGY ಕರೆ ಮಾಡಿ ಅಥವಾ 76672 76672

'ಈಡಿಗ ಅಭಿವೃದ್ಧಿ ನಿಗಮ ಘೋಷಿಸಿ'

ಕಲಬುರಗಿ: 'ಬಜೆಟ್ ಅಧಿವೇಶನದಲ್ಲಿ ಈಡಿಗ ಅಭಿವೃದ್ಧಿ ನಿಗಮ ಘೋಷಿಸಬೇಕು. ಇಲ್ಲದಿದ್ದರೆ ನಮ್ಮ ಸಮಾಜದ ಶಾಸಕರು, ಸಚಿವರ ಮನೆ ಎದುರು ಪ್ರತಿಭಟನೆ ನಡೆಸಲಾಗುವುದು' ಎಂದು ಆರ್ಯ ಈಡಿಗ ರಾಷ್ಟ್ರೀಯ ಮಹಾಮಂಡಳಿಯ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಎಚ್ಚರಿಸಿದರು. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಸಮುದಾಯದ 26 ಒಳಪಂಗಡಗಳ ಸೇರಿ 70 ಲಕ್ಷ ಜನಸಂಖ್ಯೆ ಇದೆ. ಸಣ್ಣ ಸಮುದಾಯಗಳಿಗೆ ನಿಗಮಗಳನ್ನು ರಚಿಸಿ ಸಾಕಷ್ಟು ಅನುದಾನ ನೀಡಲಾಗಿದೆ. ಆದರೆ, ಈಡಿಗ ಸಮುದಾಯಕ್ಕೆ ಅಭಿವೃದ್ಧಿ ನಿಗಮ ರಚಿಸಿಲ್ಲ' ಎಂದರು. 'ರಾಜ್ಯ ಸರ್ಕಾರವು ತಕ್ಷಣ ನಿಗಮ ಸ್ಥಾಪಿಸಿ, ₹ 500 ಕೋಟಿ ಅನುದಾನ ನೀಡಬೇಕು. ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳಲ್ಲಿ ಸೇಂದಿ ಇಳಿಸಲು ಅವಕಾಶ ನೀಡಬೇಕು' ಎಂದರು.

'ವಿಧಾನಸೌಧ ಚಲೋ ರದ್ದಾಗಲ್ಲ'

ರಾಯಚೂರು: ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು ಅಮಾನತುಗೊಳಿಸುವ ತನಕ ಪ್ರತಿಭಟನೆ ನಡೆಸಲಾಗುವುದು. ಫೆಬ್ರುವರಿ 19 ರಂದು 'ವಿಧಾನಸೌಧ ಚಲೋ' ಹೋರಾಟಕ್ಕೆ ಕರೆ ನೀಡಲಾಗಿದ್ದು, ವಿವಿಧ ಜಿಲ್ಲೆಗಳಿಂದ ಬೆಂಗಳೂರಿಗೆ ಹೋರಾಟಗಾರರು ಬರಲಿದ್ದಾರೆ ಎಂದು ದಲಿತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ತಿಳಿಸಿದ್ದಾರೆ.

ಆಡಳಿತ ಸುಧಾರಣಾ ಆಯೋಗದ ಎರಡು, ಮೂರನೇ ವರದಿ ಸಲ್ಲಿಕೆ

'ಹೊರ ಗುತ್ತಿಗೆಯಲ್ಲೂ ಮೀಸಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಿಸಿಕೊಳ್ಳುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೂಕ್ತ ಮೀಸಲಾತಿ ನೀಡಲು ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗ ಶಿಫಾರಸು ಮಾಡಿದೆ.

ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯ ಎರಡನೇ ಆಡಳಿತ ಸುಧಾರಣಾ ಆಯೋಗವು, ಎರಡು ಮತ್ತು ಮೂರನೇ ವರದಿಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಶುಕ್ರವಾರ ಸಲ್ಲಿಸಿತು. ಎಂಟು ಇಲಾಖೆಗಳಿಗೆ ಸಂಬಂಧಿಸಿದಂತೆ 1,165 ಶಿಫಾರಸುಗಳನ್ನು ಮಾಡಿದೆ.

ಹೊರ ಗುತ್ತಿಗೆ ನೌಕರರ ನೇಮಕದಲ್ಲಿ ಮೀಸಲಾತಿ ಕಲ್ಪಿಸದೇ ಇರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಅನಾನುಕೂಲವಾಗುತ್ತಿದೆ ಎಂದು ಆಯೋಗ ಹೇಳಿದೆ.

ಮುಖ್ಯಾಂಶಗಳು
- 8 ಇಲಾಖೆಗಳಿಗೆ ಸಂಬಂಧಿಸಿ 1,165 ಶಿಫಾರಸು
- ಸರ್ಕಾರಿ ಸೇವೆ ಒದಗಿಸಲು ಸೇವಾ ಕೇಂದ್ರಗಳ ಬಳಕೆ

ಕಡತಗಳ ಚಲನೆಯ ಹಂತವನ್ನು ನಾಲ್ಕಕ್ಕೆ ಇಳಿಕೆ ಮಾಡಬೇಕು. ಸರ್ಕಾರಿ ಸೇವೆಗಳನ್ನು ಒದಗಿಸಲು ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮ ಮಟ್ಟದ ಸಾಮಾನ್ಯ ಸೇವಾ ಕೇಂದ್ರಗಳನ್ನು ಬಳಸಿಕೊಳ್ಳಬೇಕು. ಸಾರ್ವಜನಿಕ ಉದ್ಯಮಗಳ ಇಲಾಖೆಯನ್ನು ಹಣಕಾಸು ಇಲಾಖೆಯಲ್ಲಿ ವಿಲೀನ ಮಾಡಬೇಕು ಎಂದು ಶಿಫಾರಸು ಮಾಡಲಾಗಿದೆ.

ಸಾರ್ವಜನಿಕ ಉದ್ದೇಶದ ಯೋಜನೆಗಳಿಗೆ ನಾಲ್ಕು ಹೆಕ್ಟೇರ್ ವಿಸ್ತೀರ್ಣದವರೆಗೆ, ₹ 5 ಕೋಟಿಗಿಂತ ಕಡಿಮೆ ಮೌಲ್ಯದ ಸರ್ಕಾರಿ ಜಮೀನನ್ನು ಭೂ ಪರಿವರ್ತನಾ ಶುಲ್ಕದ ವಿನಾಯಿತಿ ನೀಡಿ, ಮಂಜೂರು ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಬೇಕು ಎಂಬ ಶಿಫಾರಸು ವರದಿಯಲ್ಲಿದೆ.

ಪ್ರಮುಖ ಶಿಫಾರಸುಗಳು
- ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಗಮವನ್ನು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನ ಮಾಡಬೇಕು.
- ಜೈವಿಕ ಇಂಧನ ಅಭಿವೃದ್ಧಿ ಸಂಸ್ಥೆಯನ್ನು ಇಂಧನ ಇಲಾಖೆಯಲ್ಲಿ ವಿಲೀನಗೊಳಿಸಬೇಕು.
- ಗ್ರಾಮೀಣ ಪ್ರದೇಶದಲ್ಲೂ ಅಕ್ರಮ ನಿವೇಶನ ಮತ್ತು ಕಟ್ಟಡಗಳಿಗೆ ಎರಡು ಪಟ್ಟು ದಂಡ ವಿಧಿಸಬೇಕು.
- ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳ ಅರ್ಜಿಗಳನ್ನು ಪಡೆದು ಶಿಫಾರಸು ಮಾಡುವ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕು.
- ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಲೀನ ಮಾಡಬೇಕು.
- ಬಿಬಿಎಂಪಿ ಮುಖ್ಯ ಆಯುಕ್ತರ ಕೆಲವು ಅಧಿಕಾರಗಳನ್ನು ಕಿರಿಯ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬೇಕು.
- ಗಂಗಾ ಕಲ್ಯಾಣ ಯೋಜನೆಯಡಿ ಸಹಾಯಧನ ಹೆಚ್ಚಳ ಮಾಡಬೇಕು.
- ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕುಪತ್ರ ಪಡೆದ ಫಲಾನುಭವಿಗಳ ವಿವರಗಳನ್ನು ಪಹಣಿ ದಾಖಲೆಗಳಲ್ಲಿ ನಮೂದಿಸಬೇಕು.
- ಕಮತ ದಾಖಲಾತಿ ಇಲಾಖೆ ವಿದ್ಯುನ್ಮಾನೀಕರಣ ವಿಲೀನ.
- ತಾಲ್ಲೂಕು ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ವಿಲೀನ.
- ಪೊಲೀಸ್ ನೇಮಕಾತಿಯಲ್ಲಿ ಸಬ್ ಇನ್‌ಸ್ಪೆಕ್ಟರ್‌ವರೆಗಿನ ಹುದ್ದೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ.

ಬಲಿಜ ಜನಾಂಗದ ಮುಖಂಡರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ಸಂಸದ ಪಿ.ಸಿ.ಮೋಹನ್, ವಿಧಾನ ಪರಿಷತ್ ಸದಸ್ಯ ಲಕ್ಷಣ ಸವದಿ, ಮುಖಂಡರಾದ ಮನೋಹರ್ ಪಿ.ಎನ್.ಪ್ರಕಾಶ್, ಪುಟ್ಟಸಿದ್ದ ಶೆಟ್ಟಿ, ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಇದ್ದಾರೆ.

'ಕೈವಾರ ತಾತಯ್ಯ ಜಯಂತಿ ಆಚರಿಸಿ'

ಬೆಂಗಳೂರು: ಬಲಿಜ ಸಮುದಾಯದ ಕುಲಗುರು ಯೋಗಿ ನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಅವರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಬೇಕು' ಎಂದು ಕರ್ನಾಟಕ ಬಲಿಜ ಮಹಾಸಭಾ ಆಗ್ರಹಿಸಿದೆ.

ಈ ಸಂಬಂಧ ಸಂಸದ ಪಿ.ಸಿ. ಮೋಹನ್ ನೇತೃತ್ವದಲ್ಲಿ ಮಹಾಸಭಾದ ನಿಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಶುಕ್ರವಾರ ಭೇಟಿಯಾಗಿ ಮನವಿ ಸಲ್ಲಿಸಿತು. ಇದಕ್ಕೆ ಮುಖ್ಯಮಂತ್ರಿಗಳು ತಾತ್ವಿಕ ಸಮ್ಮತಿ ಸೂಚಿಸಿದ್ದಾರೆ ಎಂದು ಮಹಾಸಭಾ ತಿಳಿಸಿದೆ.

'ರಾಜ್ಯದಲ್ಲಿ 62 ಉಪ ಜಾತಿಗಳನ್ನು ಒಳಗೊಂಡಿರುವ ಬಲಿಜ ಸಮುದಾಯದಲ್ಲಿ 40 ಲಕ್ಷ ಜನರಿದ್ದಾರೆ. ಸಮುದಾಯದ ಜನ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಲು ಬಲಿಜ ಜನಾಂಗಕ್ಕೆ ಪ್ರವರ್ಗ–2 (ಎ) ಮೀಸಲಾತಿ ನೀಡಬೇಕು ಹಾಗೂ ಬಲಿಜ ಜನಾಂಗದ ಅಭಿವೃದ್ಧಿಗೆ ಈ ಬಜೆಟ್‌ನಲ್ಲಿ ನಿಗಮ ರಚಿಸಿ ಅನುದಾನ ಘೋಷಿಸಬೇಕು' ಎಂದು ಮುಖಂಡರು ಆಗ್ರಹಿಸಿದರು.

'ಸಮುದಾಯಕ್ಕಾಗಿ ಗುರುಪೀಠ ಸ್ಥಾಪಿಸಬೇಕು. ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಬೇಕು. ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಬೇಕು ಎಂದು ಮನವಿ ಸಲ್ಲಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್ ಯೂಟ್ಯೂಬ್ ಟ್ವಿಟರ್‌ನಲ್ಲಿ ವರದಿಗಳನ್ನು ನೇರಪ್ರಸಾರ
ಇಂದು
ಖ್ಯಾತ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ ಕೊಳಲದನಿಯ ಉಸಿರು
ಸೆಲೆಬ್ರಿಟಿ LIVE ಬೆಳಿಗ್ಗೆ 11ರಿಂದ 12
ಪಾಡ್‌ಕಾಸ್ಟ್: ಬೆಳಗ್ಗೆ 9 ಪ್ರಚಲಿತ, ಬೆಳಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ
ಕನ್ನಡ ಧ್ವನಿ

ಪಾರ್ತಿಸುಬ್ಬ ಪ್ರಶಸ್ತಿ ಪ್ರದಾನ ನಾಳೆ



ಡಾ.ಜಿ.ಎಲ್. ಹೆಗಡೆ

ಶಿರಸಿ: ಯಕ್ಷಗಾನ ಅಕಾಡೆಮಿಯ 2020ನೇ ಸಾಲಿನ 'ಪಾರ್ತಿಸುಬ್ಬ ಪ್ರಶಸ್ತಿ'ಯನ್ನು ಫೆ.20 ರಂದು ಶಿರಸಿಯ ಟಿ.ಆರ್.ಸಿ. ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಯಕ್ಷಗಾನ ಅರ್ಥಧಾರಿ ಡಿ.ಎಸ್.ಶ್ರೀಧರ ಅವರಿಗೆ ಪ್ರದಾನ ಮಾಡಲಾಗುವುದು' ಎಂದು ಅಕಾಡೆಮಿ ಅಧ್ಯಕ್ಷ ಡಾ.ಜಿ.ಎಲ್.ಹೆಗಡೆ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಈ ಪ್ರಶಸ್ತಿಯು ₹1 ಲಕ್ಷ ನಗದು, ಪಾರಿತೋಷಕ ಒಳಗೊಂಡಿದೆ. ಒಂದೂವರೆ ವರ್ಷದ ಹಿಂದೆಯೇ ಪ್ರಶಸ್ತಿ ಪ್ರಕಟವಾಗಿದೆ. ಕೋವಿಡ್ ಕಾರಣಕ್ಕೆ ಕಾರ್ಯಕ್ರಮ ನಡೆದಿರಲಿಲ್ಲ. ಅಂದು ಪ್ರಶಸ್ತಿ ಪ್ರದಾನದ ಜತೆಗೆ ಅಕಾಡೆಮಿ ಮಾಜಿ ಅಧ್ಯಕ್ಷ ದಿ.ಎಂ.ಎ.ಹೆಗಡೆ ಸಂಸ್ಮರಣೆ ಕಾರ್ಯಕ್ರಮವೂ ನಡೆಯಲಿದೆ' ಎಂದು ತಿಳಿಸಿದರು.

'ಗೌರವ ಪ್ರಶಸ್ತಿಗೆ ಉಡುಪಿಯ ಬಿ.ಸಂಜೀವ ಸುವರ್ಣ, ಶಿರಸಿಯ ಡಾ.ವಿಜಯ ನಳಿನಿ ರಮೇಶ್, ಬೆಂಗಳೂರಿನ ಡಾ.ಚಕ್ರೆ ಶಿವಶಂಕರ್, ಹರನಹಳ್ಳಿಯ ಬಿ.ಪರಶುರಾಮ್, ಮಂಗಳೂರಿನ ದಿ.ಕೆ. ತಿಮ್ಮಪ್ಪ ಗುಜರನ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ₹50 ಸಾವಿರ ನಗದು ಹೊಂದಿದೆ' ಎಂದರು.

'ಯಕ್ಷಸಿರಿ ವಾರ್ಷಿಕ ಪ್ರಶಸ್ತಿ'ಗೆ ಕುಂದಾಪುರದ ಗೋಪಾಲ ಆಚಾರ್ಯ, ಬೇಲ್ತೂರು ರಮೇಶ್, ಉಡುಪಿಯ ಅರ್ಜುನ ಶ್ರೀನಿವಾಸ ದುಡಿಪಾಕ, ಮಂಗಳೂರಿನ ಹರಿನಾರಾಯಣ ಬೈಪಾಡಿತ್ತಾಯ ಮತ್ತು ಸಂಜಯ್ ಕುಮಾರ್ ಶೆಟ್ಟಿ, ಕುಂದಾಪುರದ ಸುಬ್ರಹ್ಮಣ್ಯ ಧಾರೇಶ್ವರ, ಬಂಟ್ವಾಳದ ವಿಟ್ಲ ಶಂಭು ಶರ್ಮ, ಶಿರಸಿಯ ಎಂ.ಆರ್.ಹೆಗಡೆ ಕಾನಗೋಡ, ಶಿರಾ ತಾಲ್ಲೂಕಿನ ಸಣ್ಣಹೊನ್ನಮರಿಯಪ್ಪ, ಕೋಲಾರದ ಎ.ಎಂ.ಮುಳವಾಗಲಪ್ಪ ಭಾಜನರಾಗಿದ್ದಾರೆ. ಪ್ರಶಸ್ತಿ ತಲಾ ₹25 ಸಾವಿರ ನಗದು ಹೊಂದಿದೆ' ಎಂದರು.

ಅಕಾಡೆಮಿ ಸದಸ್ಯ ನಿರ್ಮಲಾ ಗೋಳಿಕೊಪ್ಪ, ರಿಜಿಸ್ಟ್ರಾರ್ ಎಸ್.ಎಚ್. ಶಿವರುದ್ರಪ್ಪ ಇದ್ದರು.

ಆರತಿ ಮಂಟಪ: ಶಿಲಾನ್ಯಾಸ ನಾಳೆ



ಚಂದ್ರಶೇಖರ್ ಪೂಜಾರ್

ಹರಿಹರ: 'ನಗರದ ನದಿ ದಡದಲ್ಲಿ ತುಂಗಭದ್ರಾ ಆರತಿ ಯೋಜನೆಗಾಗಿ ₹ 30 ಕೋಟಿ ವೆಚ್ಚದಲ್ಲಿ 108 ಯೋಗ ಮಂಟಪಗಳ ಕಾಮಗಾರಿಯ ಶಿಲಾನ್ಯಾಸಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫೆ.20ರಂದು ನಗರಕ್ಕೆ ಬರಲಿದ್ದಾರೆ' ಎಂದು ಹರಿಹರದ ಪಂಚಮಸಾಲಿ ಮಠದ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ ಹೇಳಿದರು.

'ಉತ್ತರ ಭಾರತದ ವಾರಾಣಸಿಯಲ್ಲಿ ನಡೆಯುವ ಗಂಗಾರತಿಯ ಮಾದರಿಯಲ್ಲೇ ತುಂಗಭದ್ರಾ ನದಿ ದಡದಲ್ಲಿ ತುಂಗಭದ್ರಾ ಆರತಿ ಮಂಟಪ ಯೋಜನೆ ಜಾರಿ ಮಾಡಬೇಕು ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಅವರು ಮುಖ್ಯಮಂತ್ರಿ ಪ್ರಸ್ತಾವ ಸಲ್ಲಿಸಿದ್ದರು. ₹ 30 ಕೋಟಿ ವೆಚ್ಚದಲ್ಲಿ ಉದ್ದೇಶಿತ ಯೋಜನೆಯ 108 ಯೋಗ ಮಂಟಪಗಳನ್ನು ನಿರ್ಮಾಣ ಮಾಡಲು ಮುಖ್ಯಮಂತ್ರಿ ಅನುಮೋದನೆ ನೀಡಿದ್ದಾರೆ. ಈಗಾಗಲೇ ₹ 10 ಕೋಟಿ ಬಿಡುಗಡೆಗೊಳಿಸಿದ್ದು, ಫೆ.20ರಂದು ನಗರದ ರಾಘವೇಂದ್ರ ಸ್ವಾಮಿ ಮಠದ ಹತ್ತಿರ ಬೆಳಿಗ್ಗೆ 10.20ಕ್ಕೆ ಶಿಲಾನ್ಯಾಸ ಮಾಡಲಿದ್ದಾರೆ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
Azadi Ka Amrit Mahotsav
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಸಂಖ್ಯೆ. ಬಿಎಂಆರ್‌ಸಿಎಲ್/ಡಬ್ಲ್ಯೂಹೆಚ್‌ಟಿಡಿ, ಹೆಚ್‌ಬಿಜಿಡಿ ಮತ್ತು ಕೆಟಿಎನ್‌ಡಿ/ಎಂ&ಪಿ–ಎಲ್22 ದಿನಾಂಕ: 17.02.2022
ತಿದ್ದುಪಡಿ–06
"ಬಿಎಂಆರ್‌ಸಿಎಲ್ ಫೇಸ್–II ಯೋಜನೆಯ ವೈಟ್‌ಫೀಲ್ಡ್, ಹೆಬ್ಬಗೋಡಿ ಮತ್ತು ಕೊತ್ತನೂರು ಡಿಪೋಗಳಿಗೆ ರೋಡ್ ಕಂ ರೈಲ್ ವೆಹಿಕಲ್ ಜೊತೆಗೆ ರೀ–ರೈಲಿಂಗ್ ಎಕ್ವೂಪ್‌ಮೆಂಟ್‌ನ ವಿನ್ಯಾಸ, ತಯಾರಿಕೆ, ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಕಾರ್ಯಾಚರಣೆ" ಗಾಗಿ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: **19.02.2022** ರಿಂದ **28.02.2022**ರ ಮಧ್ಯರಾತ್ರಿಯವರೆಗೆ ಮರುಮಾರಾಟ ಮಾಡಲಾಗುವುದು. ಟೆಂಡರ್ ಸಲ್ಲಿಸುವ ದಿನಾಂಕ: **10.03.2022, ಬೆಳಿಗ್ಗೆ 11.00** ಗಂಟೆಯಿಂದ ಮಧ್ಯಾಹ್ನ **3.00** ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ: **10.03.2022, ಮಧ್ಯಾಹ್ನ 3.30** ಗಂಟೆಗೆ. ಹೆಚ್ಚಿನ ಮಾಹಿತಿಗೆ ನಮ್ಮ ವೆಬ್‌ಸೈಟ್: www.bmrc.co.in ಸಂಪರ್ಕಿಸಿ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ, ಬೆಂಗಳೂರು – 560070.
ಸಂಖ್ಯೆ: ಕಾಅ/ಪಂರಾಇವಿ/ಬೆಂನ/ಎಇ–1/ಟೆಂಡರ್/53/2021–22 ದಿನಾಂಕ: 15.02.2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ನೋಟೀಸ್
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA and Rurban Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 02.03.2022 ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸ ಬಹುದಾಗಿರುತ್ತದೆ. ಕಾಮಗಾರಿಯ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಿ ಅಥವಾ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು,
ಪ.ರಾ.ಇ.ವಿಭಾಗ, ಬೆಂ.ನ, ಬೆಂಗಳೂರು
DIPR/DDU/Zen/RO-3441/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಪೋಡಿಯಂ ಬ್ಲಾಕ್, ವಿ. ವಿ. ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22866066, 22860907,
ಸಂ:ವಿಹಿನಿ/ಸಿಬ್ಬಂದಿ/ಸಿ1/14/2021–22 ದಿನಾಂಕ: 18.02.2022
ತಿದ್ದುಪಡಿ (ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ)
2021–22ನೇ ಸಾಲಿನಲ್ಲಿ ತೀವ್ರತೆರನಾದ ದೈಹಿಕ ವಿಕಲಚೇತನರಿಗೆ ನೀಡಲಾಗುವ 1500 ರೆಟ್ರೋಫಿಟೆಡ್ ಯಂತ್ರಚಾಲಿತ ದ್ವಿಚಕ್ರವಾಹನ 124 ಸಿಸಿ ಮತ್ತು ಅದಕ್ಕಿಂತ ಹೆಚ್ಚಿನ (ಗೇರು ರಹಿತ) ಗಳನ್ನು ಖರೀದಿಸಿ ವಿತರಿಸಲು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ದಿ: 19.01.2022ರಂದು ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ನ ಬಿಡ್‌ಗಳನ್ನು ವಾಹನಗಳ/ಸಲಕರಣೆಗಳ ಮೂಲ ತಯಾರಕರ ಅಥವಾ ಅಧಿಕೃತ ಡೀಲರ್‌ಗಳಿಂದ ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ 24.02.2022 ರಂದು ಅಪರಾಹ್ನ 04.00 ಗಂಟೆಯವರೆಗೆ, ದಿನಾಂಕ: 25.02.2022 ರಂದು ಅಪರಾಹ್ನ 04.30 ಗಂಟೆಗೆ** ತಾಂತ್ರಿಕ ಬಿಡ್ ಮತ್ತು **ದಿನಾಂಕ: 07.03.2022 ರಂದು ಬೆಳಗ್ಗೆ 11.00 ಗಂಟೆಗೆ** ಆರ್ಥಿಕ ಬಿಡ್‌ನ್ನು ತೆರೆಯಲು ದಿನಾಂಕ ಮತ್ತು ಸಮಯವನ್ನು ವಿಸ್ತರಿಸಲಾಗಿದೆ.
ವಿವರಗಳನ್ನು www.epro.karnataka.gov.in ಜಾಲತಾಣದಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿ. ವಿ. ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದಾಗಿದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–2286 6066, 2286 0907, ಇಲಾಖೆಯ ಜಾಲತಾಣ www.dwdsc.karnataka.gov.inನ್ನು ನೋಡಬಹುದಾಗಿದೆ.
ಸಹಿ/– ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
DIPR/DDU/AAPL/3447/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ
ಕ್ರ.ಸಂ:ಬಿಜಿಎಂ:ಡಿಯುಡಿಸಿ:4:ಸಿಆರ್–151:2016–17 ದಿನಾಂಕ:17.02.2022
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಬೆಳಗಾವಿ ಜಿಲ್ಲೆಯ ನಗರೋತ್ಥಾನ (ಮುನಿಸಿಪಾಲಿಟಿ) 3ನೇ ಹಂತದ ಯೋಜನೆಯ ಕಾಮಗಾರಿಗಳಿಗಾಗಿ ಕೆ.ಡಬ್ಲ್ಯೂ–3 & 4 ಡಾಕುಮೆಂಟ್ ಉಪಯೋಗಿಸಿ 1ನೇ ದರ್ಜೆ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿ ವಿವರ	ಟೆಂಡರ್ ಗಿಟ್ಟ ಮೊತ್ತ	ಇ.ಎಂ.ಡಿ ಮೊತ್ತ
1	ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ ಮತ್ತು ಒಳಚರಂಡಿ ನಿರ್ಮಿಸುವುದು. (Tender No. DMA/2021-22/OW/WORK_INDENT127899)	214.39	3.22
2	ಬೆಳಗಾವಿ ಜಿಲ್ಲೆಯ ಹುಕ್ಕೇರಿ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ ನಿರ್ಮಾಣ ಮತ್ತು ಸ್ಮಶಾನ ಸುಧಾರಣೆ ಮಾಡುವುದು. (Tender No.DMA/2021-22/OW/WORK_INDENT128102)	57.26	1.15

ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ	ಕ್ರ.ಸಂ.01 – 09 ತಿಂಗಳು ಕ್ರ.ಸಂ.02 – 06 ತಿಂಗಳು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	05–03–2022 ರಂದು 17.00 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	07–03–2022ರಂದು 11.00 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/–ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/BGM/RO-NO-1571/MCA/2021-21

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ ಕನೀನಿನಿ, ಮಬದಕಾನಿ ವಿಭಾಗ ನಂ 1, ನರಗುಂದ ಜಿಃ ಗದಗ
ದೂರವಾಣಿ ಸಂಖ್ಯೆ : 08377–244236 e-mail B knnlestablishment@gmail.com
ಸಂಃಕನೀನಿನಿಃಮಬದ1ಃಪಿಬಿಃಟೆಂಡರಃ2021–22ಃ 2436 ದಿನಾಂಕಃ 14.02.2022.
ಃಟೆಂಡರ ಪ್ರಕಟಣೆ ಃ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿ ಮಾಡಿದವರಿಂದ ಈ ಕೆಳಗಿನ ಕಾಮಗಾರಿಗಳಿಗೆ CEIG Class-II & above Electrical Contractor with Labour License Form-C ನೊಂದಾಯಿತರಾಗಿರುವ ಅರ್ಹ ಗುತ್ತಿಗೆದಾರರಿಂದ, ಶೇಕಡಾವಾರು ಇ–ಟೆಂಡರಗಳನ್ನು (ಕಾಮಗಾರಿವಾರು) ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ (Single-Cover System) ಕರೆಯಲಾಗಿದೆ.
1) ಒಟ್ಟು ಕಾಮಗಾರಿಗಳ ಸಂಖ್ಯೆ: 06 ಕಾಮಗಾರಿಗಳು
2) ಟೆಂಡರಗಿಟ್ಟ ಪ್ರತಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ:– ಕನಿಷ್ಟ ರೂ.17.25 ಲಕ್ಷಗಳು & ಗರಿಷ್ಠ ರೂ.19.25 ಲಕ್ಷಗಳು.
3)ಸಾಮಾನ್ಯ ವರ್ಗದವರ ಇಎಮ್‌ಡಿ ಮೊತ್ತ ರೂ.27000.00 ರಿಂದ ರೂ.30000.00 ಗಳು (ಪ್ರತಿ ಕಾಮಗಾರಿಗೆ)
4) ಪರಿಶಿಷ್ಟ ಜಾತಿಗೆ ಸೇರಿದ ಕಾಮಗಾರಿಗಳ ಸಂಖ್ಯೆ: 02 ಕಾಮಗಾರಿಗಳು ಇಎಮ್‌ಡಿ ಮೊತ್ತ ಪ.ಜಾ ರೂ.13500.00 & ರೂ.15000.00 ಗಳು ಪ್ರತಿ ಕಾಮಗಾರಿಗೆ.
5) ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾಮಗಾರಿಗಳ ಸಂಖ್ಯೆ: 01 ಕಾಮಗಾರಿ ಇಎಮ್‌ಡಿ ಮೊತ್ತ ರೂ.13500.00
6) ಇ–ಟೆಂಡರ್ ದಾಖಲೆಗಳನ್ನು ಡೌನಲೋಡ ಮಾಡಿಕೊಳ್ಳಲು ಹಾಗೂ ಭರ್ತಿ ಮಾಡಿದ ಇ–ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 28–02–2022 ಅಪರಾಹ್ನ 4–00 ಗಂಟೆ ವರೆಗೆ.
7) ಟೆಂಡರ್ ತೆರೆಯುವ ದಿನಾಂಕ: 02–03–2022 ರಂದು ಬೆಳಿಗ್ಗೆ 11.00 ಗಂಟೆಯ ನಂತರ.
ಗುತ್ತಿಗೆದಾರರ ಅರ್ಹತೆ/ಟೆಂಡರ ನಿಯಮಗಳು/ ಟೆಂಡರ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ವೆಬ್‌ಸೈಟ್ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆಃ 08377–244236 ಸಂಪರ್ಕಿಸಬಹುದು. ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿಮಾಡಿದವರು ಹೊಂದಿರುತ್ತಾರೆ.
ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆಃ 08377–244236 ರಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು
ವಾ.ಸಾ.ಇ./ಗದಗ/546/2021–22/ದೇಶಪಾಂಡೆಪಬ್ಲಿಸಿಟಿ ಕನೀನಿನಿ ಮಬದಕಾನಿ ವಿಭಾಗ ನಂ.01 ನರಗುಂದ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ – ಸಂಚಾರ ಇಂಜಿನಿಯರಿಂಗ್ ಸೆಲ್ ವಿಭಾಗ, ನೆಲಮಹಡಿ, # 09, ಅನೆಕ್–3 ಕಟ್ಟಡ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು – 560 002.
ಸಂ: ಕಾಪಾಅ/ಸಂಇಸೆ/ಟೆಂಡರ್/10/2021–22 ದಿನಾಂಕ: 18.02.2022
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ದ್ವಿ–ಲಕೋಟೆ ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು – ಸಂಚಾರ ಇಂಜಿನಿಯರಿಂಗ್ ಸೆಲ್ ವಿಭಾಗ ಇವರು ಮುಖ್ಯ ಆಯುಕ್ತರು, ಬಿಬಿಎಂಪಿ, ಬೆಂಗಳೂರು ಇವರ ಪರವಾಗಿ ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಕಣ್ಣೂರು ಡಾಂಬರ್ ಮಿಶ್ರಣ ಘಟಕದ ಬ್ಯಾಚ್‌ನಿಂದ ಬಿಬಿಎಂಪಿ ಖನಿಜ ಸಮುಚ್ಚಯಗಳಿಗೆ ಪಿಇಬಿ ಶೆಲ್ಟರ್ ನಿರ್ಮಾಣ ಮಾಡಲು.	79.64	1.60 ಲಕ್ಷ

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **21.02.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ **ಸಂಜೆ 4.00 ಗಂಟೆ**ಗೆ ಅಥವಾ ಮೊದಲು ಸಲ್ಲಿಸತಕ್ಕದ್ದು. ಟೆಂಡರ್‌ಗಳನ್ನು **08.03.2022**ರಂದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ತೆರೆಲಾಗುವುದು. (3) ಬಿಡ್‌ಗಳನ್ನು ದಿನಾಂಕ: **10.03.2022**ರ **ಸಂಜೆ 4.30 ಗಂಟೆ**ಗೆ ಕಾರ್ಯಪಾಲಕ ಅಭಿಯಂತರರು, ಸಂಚಾರ ಇಂಜಿನಿಯರಿಂಗ್ ಸೆಲ್ ವಿಭಾಗ ಕಛೇರಿಯಲ್ಲಿ https://eproc.karnataka.gov.in ವೆಬ್‌ಸೈಟ್‌ನಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಸಂಚಾರ ಇಂಜಿನಿಯರಿಂಗ್ ಸೆಲ್ ವಿಭಾಗ–ಆರ್‌ಐ, ಬಿಬಿಎಂಪಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ ಕೊಪ್ಪಳ
eepredkpl@gmail.com, eepredkpl1@gmail.com
ಸಂ.ಪಂರಾಇಂ/ವಿಕೊ/ತಾ.ಶಾ/ಸ.ಇಂ/ಟೆಂಡರ/2021–22/2448 ದಿನಾಂಕ:16.02.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಏಫ– 1, 2, 3 ಮತ್ತು 4ರ ಪಕಾರ ನಿಯಮ ಗಳನ್ವಯ ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "ಇ–ಪೋಕ್ಯೂರ್‌ಮೆಂಟ್ ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2021–22 ನೇ ಸಾಲಿನ 5054 ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅನುದಾನ ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು ಇ–ಪೋಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.
ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪಮಾಣ ಪತ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 08539–220845 ರಿಂದ ಮಾಹಿತಿ ಪಡೆಯುವುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ http://eproc.karnataka.gov.in ರಲ್ಲಿ ಪಡೆಯಬಹುದು.ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: 17.02.2022 ರ ನಂತರ ದಿಂದ Download ಮಾಡಿಕೊಳ್ಳಬಹುದಾಗಿದೆ.
ಟೆಂಡರ್ ಪೋಸೆಸಿಂಗ್ ಶುಲ್ಕ : ಇ–ಪೋಕ್ಯೂರ್‌ಮೆಂಟ್‌ನಲ್ಲಿರುವಂತೆ. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ: **12 ತಿಂಗಳು.** ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **17.02.2022 ಸಮಯ 10.00 ಗಂಟೆ ನಂತರ ದಿಂದ 10.03.2022 ಸಮಯ 16.00 ಗಂಟೆವರೆಗೆ.** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **18.02.2022 ಸಮಯ 11.00 ಗಂಟೆಯಿಂದ 10.03.2022 ಸಮಯ 16:30 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **11.03.2022 ಕಚೇರಿ ಸಮಯದಲ್ಲಿ.** ಕೆಡಬ್ಲ್ಯೂ 4 ರ ಆರ್ಥಿಕ ಬಿಡ್ ತೆರೆಯುವ ದಿನಾಂಕ: **ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು**
ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ.ವಿಭಾಗ,ಕೊಪ್ಪಳ
ಡಿಐಪಿಆರ್/ಕೊಪ್ಪಳ/543/ಎಂಸಿಎ/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು–2ರವರ ಕಛೇರಿ, ಘನ ತ್ಯಾಜ್ಯ ನಿರ್ವಹಣೆ, ನೆಲಮಹಡಿ, ದಾಸಪ್ಪ ಆಸ್ಪತ್ರೆ ಕಟ್ಟಡದ ಹಿಂಭಾಗ, ಬೆಂಗಳೂರು – 560 002.
ಸಂ: ಕಾಪಾಅ–2/ಘತ್ಯಾನಿ/ಟೆಂಡರ್/01/2019–20/ಕರೆ–2 ದಿನಾಂಕ: 18.02.2022
ಪೂರ್ವಾರ್ಹತೆಗಾಗಿ ಅಲ್ಪಾವಧಿ ಟೆಂಡರ್ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)
ಕಾರ್ಯಪಾಲಕ ಅಭಿಯಂತರರು–2 ಘನ ತ್ಯಾಜ್ಯ ನಿರ್ವಹಣಾ ವಿಭಾಗ, ಬಿಬಿಎಂಪಿ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಬಿಬಿಎಂಪಿ ವ್ಯಾಪ್ತಿಯ ಜಕ್ಕೂರಿನಲ್ಲಿ ಪುರಸಭೆಯ ಘನತ್ಯಾಜ್ಯವನ್ನು ಸಂಸ್ಕರಿಸಲು **50 ಟನ್ ಸಾಮರ್ಥ್ಯದ** 1 ಸಂಖ್ಯೆಯ ಹೊಸ ದೊಡ್ಡದಾದ ಜೈವಿಕ – ಮೆಥನೇಸನ್ ಘಟಕದ ನಿರ್ಮಾಣ ಮತ್ತು 15 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ಕಾಮಗಾರಿ.	25,00,00,000/-	25,00,000/-

ಪೂರ್ಣಗೊಳಿಸುವ ಕಾಲಾವಧಿ: **9 ತಿಂಗಳು.** 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ **ದಿನಾಂಕ: 21.02.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಬಗೆಗಿನ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **02.03.2022ರ ಅಪರಾಹ್ನ 3.00 ಗಂಟೆಯವರೆಗೆ.** 3) ಪೂರ್ವಭಾವಿ ಸಭೆ ದಿನಾಂಕ : **04.03.2022, ಅಪರಾಹ್ನ 4.00 ಗಂಟೆಗೆ.** 4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **21.03.2022ರ ಸಂಜೆ 4.00 ಗಂಟೆಯವರೆಗೆ.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23.03.2022ರ ಸಂಜೆ 4.00 ಗಂಟೆಯ ನಂತರ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಅಥವಾ ಹೆಚ್‌ಪಿ ಸಹಾಯವಾಣಿ : 080– 22441076 ನಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು–2, ಘನ ತ್ಯಾಜ್ಯ ನಿರ್ವಹಣಾ ವಿಭಾಗ.
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.
(ಜಿಲ್ಲಾ ನಗರಾಭಿವೃದ್ಧಿಕೋಶ)
e-mail: dudc_ctg@yahoo.co.in Ph./Fax: 08194-225713
ನಂ. ಜಿನಕೋ(2)3ನೇ ಏಜೆನ್ಸಿ/ಸಿಆರ್ 07/2021–22 ದಿನಾಂಕ: 15.02.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಂದ ಈ ಕೆಳಗೆ ನಮೂದಿಸಿದ ನಗರಾಭಿವೃದ್ಧಿ ಇಲಾಖೆಯ ಎಲ್ಲಾ ಯೋಜನೆಯಡಿಯಲ್ಲಿ ಎಸ್.ಎಫ್.ಸಿ, 14 & 15ನೇ ಹಣಕಾಸು ಯೋಜನೆ, ಬಿ.ಆರ್.ಜಿ.ಎಫ್ ಯೋಜನೆ, ಶೇಕಡ 24.10%, 7.25%. 5% ಬರಪರಿಹಾರ ಪ್ರಕೃತಿ ವಿಕೋಪ ಯೋಜನೆ ಹಾಗೂ ಸ್ಥಳೀಯ ಸಂಸ್ಥೆಯ ನಿಧಿಯಲ್ಲಿ ನಿರ್ವಹಿಸುವ ಕಾಮಗಾರಿಗಳನ್ನು ಹಾಗೂ ಸಾಮಾಗ್ರಿಗಳನ್ನು 3ನೇ ಪಾರ್ಟಿ ತಪಾಸಣೆ (Third Party Inspection) ಒಳಪಡಿಸುವ ಬಗ್ಗೆ ಅರ್ಹ ಕನ್ಸಲ್ಟೆಂಟ್ಸ್/ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಅಹ್ವಾನಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ.
ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂಬರ್: DUDC(2)3rdPI/CR-07/2021-22 Date: 17.01.2022. **ಕಾಮಗಾರಿಯ ಹೆಸರು:** ಚಿತ್ರದುರ್ಗ ಜಿಲ್ಲೆಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಚಿತ್ರದುರ್ಗ, ಪುರಸಭೆ, ಚಳ್ಳಕೆರೆ, ಹಿರಿಯೂರು, ಹೊಸದುರ್ಗ ಪುರಸಭೆ ಮತ್ತು ಹೊಳಲ್ಕೆರೆ, ಮೊಳಕಾಲ್ಮೂರು ಪಟ್ಟಣ ಪಂಚಾಯಿತಿ ನಗರಾಭಿವೃದ್ಧಿ ಇಲಾಖೆಯ ವಿವಿಧ ಯೋಜನೆ ಯಡಿಯಲ್ಲಿನ ಅಂದರೆ (ಎಸ್.ಎಫ್.ಸಿ, ಎಸ್‌ಎಫ್‌ಸಿ) ಎಸ್.ಸಿ.ಪಿ & ಟಿ.ಎಸ್.ಪಿ/ 14, 15ನೇ ಹಣಕಾಸು ಯೋಜನೆ ಬಿ.ಆರ್.ಜಿ.ಎಫ್. ಯೋಜನೆ, ಶೇಕಡ 24.10%, 7.25%, 5% ಬರಪರಿಹಾರ ಪ್ರಕೃತಿ ವಿಕೋಪ ಯೋಜನೆ ಹಾಗೂ ಸ್ಥಳೀಯ ಸಂಸ್ಥೆ ನಿಧಿಯಲ್ಲಿನ ಕಾಮಗಾರಿಗಳಾದ ರಸ್ತೆ, ಚರಂಡಿ, ಒಳಚರಂಡಿ, ನೀರು ಸರಬರಾಜು ವ್ಯವಸ್ಥೆ, ಪಾರ್ಕ್, ವಾಣಿಜ್ಯ ಮಳಿಗೆಗಳ ಸಂಕೀರ್ಣ ನಿರ್ಮಾಣ, ಒಳಾಂಗಣ ಹಾಗೂ ಹೊರಾಂಗಣ ವಿದ್ಯುತ್ ಕಾಮಗಾರಿಗಳು, ಕಟ್ಟಡ ಹಾಗೂ ನಿರ್ವಹಣೆ ಕಾಮಗಾರಿಗಳ ಕುರಿತು ಹಾಗೂ ಸಾಮಾಗ್ರಿಗಳ ಪರಿಶೀಲನೆ ಕುರಿತು ವರದಿಗಳನ್ನು ನಿಬಂಧನೆಗಳಂತೆ ತಪಾಸಣೆ ಮಾಡಿ ಸಲ್ಲಿಸಲು 3ನೇ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳುವ ಬಗ್ಗೆ. **ಅಂದಾಜು ಯೋಜನಾ ಮೊತ್ತ:** ರೂ. 102.00 ಕೋಟಿಗಳು. **ಇ.ಎಂ.ಡಿ. ಮೊತ್ತ:** ರೂ. 1,02,000/–. **ಗುತ್ತಿಗೆ ಅವಧಿ:** ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ.
ಅರ್ಹ ಏಜೆನ್ಸಿದಾರರು ವೆಬ್‌ಸೈಟ್ www.eproc.Karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.
ಟೆಂಡರ್ ಬಗ್ಗೆ ವಿಚಾರಿಸಲು ಮತ್ತು ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 03.03.2022 ವೇಳೆ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 03.03.2022 ವೇಳೆ 17:30. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ: 05.03.2022 ವೇಳೆ 11:00. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ನ್ನು ತೆರೆದು ಅನುಮೋದನೆ ನಂತರ ತೆರೆಯಲಾಗುವುದು.
ಅರ್ಹ ಏಜೆನ್ಸಿದಾರರು ಟೆಂಡರ್‌ನ ಮಾಹಿತಿಯನ್ನು ವೆಬ್‌ಸೈಟ್ www.eproc.Karnataka.gov.inನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ. ಹಾಗೂ ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶದಿಂದ ಮಾಹಿತಿ ಪಡೆಯಬಹುದು.
ಸಹಿ/– ಜಿಲ್ಲಾಧಿಕಾರಿಗಳು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
RO No. 939: DIPR/CTA/MCA/2019-20

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.gov.in
ಸಂಖ್ಯೆ: PCB/CNP/08/EPH/21/6099 ದಿನಾಂಕ: 11/02/2022
ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ
ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು ಬೂದಿಹಾಳ–ಪೀರಾಪುರ ಏತ ನೀರಾವರಿ ಯೋಜನೆಯ ವಿಸ್ತರಣೆಯನ್ನು ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲ್ಲೂಕುಗಳ ಬರ ಪೀಡಿತ ಪ್ರದೇಶಗಳಿಗೆ ನೀರಾವರಿ ಒದಗಿಸಲು ಪ್ರಸ್ತಾಪಿಸಿದೆ. ಬೂದಿಹಾಳ–ಪೀರಾಪುರ ಏತ ನೀರಾವರಿ ಯೋಜನೆಗೆ ಕೃಷ್ಣಾ ನದಿಯಿಂದ 2.22 ಟಿ.ಎಂ.ಸಿ. ನೀರನ್ನು ಏತ್ತಿ ಸುಮಾರು 25 ಹಳ್ಳಿಗಳ 17,805 ಹೇ. ಒಣ ಭೂಮಿಗೆ ನೀರಾವರಿ ಪದ್ಧತಿ ಮುಖೇನ ನೀರೊದಗಿಸಲು ಈ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯು **ಯಾದಗಿರಿ** ಜಿಲ್ಲೆಗೆ ಸಂಬಂಧಿಸಿದಂತೆ ಸಾರ್ವಜನಿಕ ಪರಿಸರ ಸಭೆ ನಡೆಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.9.2006ರ (ತಿದ್ದುಪಡಿ ದಿನಾಂಕ 1.12.2009) ಪ್ರಕಾರ ರಾಜ್ಯಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಾಗಿರುತ್ತದೆ.
ಈ ಹಿಂದೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯು ದಿನಾಂಕ **19.11.2021 ರಂದು ನಿಗದಿಯಾಗಿತ್ತು** ಮತ್ತು ಈ ಬಗ್ಗೆ ದಿನಾಂಕ 19.10.2021 ರಂದು ಪತ್ರಿಕಾ ಪ್ರಕಟಣೆಯು (ಕನ್ನಡ: ವಿಜಯ ಕರ್ನಾಟಕ ಮತ್ತು ಆಂಗ್ಲ: ಡೆಕ್ಕನ್ ಹೆರಾಲ್ಡ್) ಸಹ ನೀಡಲಾಗಿತ್ತು. ಆದರೆ, ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಆಲಿಕೆ ಸಭೆಯನ್ನು ಮುಂದೂಡಲಾಗಿತ್ತು. ಈಗ, ಪರಿಸರ ಸಾರ್ವಜನಿಕ ಆಲಿಕೆ ಸಭೆಯುನ್ನು **ದಿನಾಂಕ 21.03.2022 (ಸೋಮವಾರ) ರಂದು ಮರುನಿಗದಿಪಡಿಸಲಾಗಿದೆ.**
ಯೋಜನೆಯ ವಿವರಗಳು ಕಳಕಂಡಂತಿವೆ:

1.	**ಕಂಪನಿಯ ಹೆಸರು ಮತ್ತು ವಿಳಾಸ:** ಮುಖ್ಯ ಅಭಿಯಂತರರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, O & M Zone, ನಾರಾಯಣಪುರ – 585 219, ತಾಲ್ಲೂಕು: ಸುರಪುರ, ಜಿಲ್ಲೆ : ಯಾದಗಿರಿ.
2.	**ಉದ್ದೇಶಿತ ಯೋಜನೆಯ ಸ್ಥಳ:** ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು ಬೂದಿಹಾಳ –ಪೀರಾಪುರ ಏತ ನೀರಾವರಿ ಯೋಜನೆಯ ವಿಸ್ತರಣೆಯನ್ನು ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲ್ಲೂಕುಗಳ ಬರ ಪೀಡಿತ ಪ್ರದೇಶಗಳಿಗೆ ನೀರಾವರಿ ಒದಗಿಸಲು ಪ್ರಸ್ತಾಪಿಸಿದೆ. ಬೂದಿಹಾಳ–ಪೀರಾಪುರ ಏತ ನೀರಾವರಿ ಯೋಜನೆಗೆ ಕೃಷ್ಣಾ ನದಿಯಿಂದ 2.22 ಟಿ.ಎಂ.ಸಿ. ನೀರನ್ನು ಏತ್ತಿ ಸುಮಾರು 25 ಹಳ್ಳಿಗಳ 17,805 ಹೇ. ಒಣ ಭೂಮಿಗೆ ನೀರಾವರಿ ಪದ್ಧತಿ ಮುಖೇನ ನೀರೊದಗಿಸಲು ಈ ಯೋಜನೆಯನ್ನು ರೂಪಿಸಿದೆ.
3.	**ಯೋಜನೆಯ ಕಾರ್ಯಚಟುವಟಿಕೆ:** ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು ಬೂದಿಹಾಳ –ಪೀರಾಪುರ ಏತ ನೀರಾವರಿ ಯೋಜನೆಯ ವಿಸ್ತರಣೆಯನ್ನು ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲ್ಲೂಕುಗಳ ಬರ ಪೀಡಿತ ಪ್ರದೇಶಗಳಿಗೆ ನೀರಾವರಿ ಒದಗಿಸಲು ಪ್ರಸ್ತಾಪಿಸಿದೆ. ಬೂದಿಹಾಳ–ಪೀರಾಪುರ ಏತ ನೀರಾವರಿ ಯೋಜನೆಗೆ ಕೃಷ್ಣಾ ನದಿಯಿಂದ 2.22 ಟಿ.ಎಂ.ಸಿ. ನೀರನ್ನು ಏತ್ತಿ ಸುಮಾರು 25 ಹಳ್ಳಿಗಳ 17,805 ಹೇ. ಒಣ ಭೂಮಿಗೆ ನೀರಾವರಿ ಪದ್ಧತಿ ಮುಖೇನ ನೀರೊದಗಿಸಲು ಈ ಯೋಜನೆಯನ್ನು ರೂಪಿಸಿದೆ.
4.	**ಯೋಜನಾ ವೆಚ್ಚ:** ರೂ.697.50 ಕೋಟಿಗಳು. [ಪರಿಷ್ಕರಿಸಿದ ವೆಚ್ಚ (2018–19)]
5.	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: 21.03.2022 (ಸೋಮವಾರ) ಬೆಳಿಗ್ಗೆ 11.00 ಗಂಟೆಗೆ. ಯಾದಗಿರಿ ಜಿಲ್ಲೆ, ಹುಣಸಗಿ ತಾಲ್ಲೂಕು, ಬೂದಿಹಾಳ ಗ್ರಾಮದ ನಮ್ಮೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣ.**
6.	**ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ ಜಿಲ್ಲೆ, ಯಾದಗಿರಿ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಜಿಲ್ಲೆ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಯಾದಗಿರಿ ಜಿಲ್ಲೆ. (ಈ) ನಗರ ಸಭೆ, ಯಾದಗಿರಿ ಜಿಲ್ಲೆ. (ಉ) ತಹಶೀಲ್ದಾರ್‌ರವರ ಕಛೇರಿ, ಸುರಪುರ ತಾಲ್ಲೂಕು. (ಊ) ಗ್ರಾಮ ಪಂಚಾಯ್ತಿ, ಬೂದಿಹಾಳ ಗ್ರಾಮ. (ಋ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ಲಾಟ್ ನಂ. 01, ಅಮರ ರೆಜೆನ್ಸಿ, ಕೋರ್ಟ್ ಕಾಂಪ್ಲೆಕ್ಸ್ ಮುಂಭಾಗ, ಯಾದಗಿರಿ – 585 202. (ಎ) ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. (ಏ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲಾಧಿಕಾರಿಗಳು, ಯಾದಗಿರಿ ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in ನಲ್ಲಿ ಪಡೆಯಬಹುದು.**
ಸಹಿ/–
ಸದಸ್ಯ ಕಾರ್ಯದರ್ಶಿ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೆಡಿಕಲ್ ಗ್ಯಾಸ್ ಪೈಪ್‌ಲೈನ್ ಅಳವಡಿಕೆಗೆ ₹222.41 ಕೋಟಿ ಅನುದಾನಕ್ಕೆ ಸಂಪುಟ ಒಪ್ಪಿಗೆ

ಇಂಗಾಲ ಹೊರಸೂಸುವಿಕೆ ತಡೆಗೆ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇಂಧನ ದಕ್ಷತೆ ಮತ್ತು ಇಂಧನ ಸಂರಕ್ಷಣೆ ಮೂಲಕ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ತೀವ್ರತೆ ಕಡಿತಗೊಳಿಸಲು 'ಕರ್ನಾಟಕ ಇಂಧನ ಸಂರಕ್ಷಣೆ ಮತ್ತು ಇಂಧನ ದಕ್ಷತೆ ನೀತಿ 2021–2026'ಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈ ನೀತಿಯ ಕಾರ್ಯ ಯೋಜನೆ ಅನ್ವಯ ಇಂಧನ ದಕ್ಷತೆಯನ್ನು ಸುಧಾರಿಸಲು ಪುರಸಭೆ, ಗೃಹ, ಕೃಷಿ, ವಾಣಿಜ್ಯ ಮತ್ತು ಕೈಗಾರಿಕೆ ಅಂತಹ ಐದು ಪ್ರಮುಖ ಕ್ಷೇತ್ರ ಅಥವಾ ವಲಯಗಳ ಮೇಲೆ 74.4 ಕೋಟಿ ಯೂನಿಟ್‌ಗಳಷ್ಟು ಇಂಧನ ಉಳಿತಾಯ ಗುರಿ ಹೊಂದಲಾಗಿದೆ. ಸುಮಾರು 6,10,080 ಟನ್‌ಗಳಷ್ಟು ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ಕಡಿಮೆ ಮಾಡುವ ಮೂಲಕ ಎನ್‌ಡಿಸಿ ಗುರಿಯನ್ನು ತಲುಪಲು ಸಹಕಾರಿಯಾಗಲಿದೆ ಎಂದು ಮೂಲಗಳು ಹೇಳಿವೆ.

ಪುರಸಭೆ ವಲಯದಲ್ಲಿ 30.4 ಕೋಟಿ, ಗೃಹವಲಯ 11.7 ಕೋಟಿ, ಕೃಷಿ ವಲಯ 23.0 ಕೋಟಿ, ವಾಣಿಜ್ಯ ವಲಯ 7.9 ಕೋಟಿ ಮತ್ತು ಕೈಗಾರಿಕೆ ವಲಯದಲ್ಲಿ 1.4 ಕೋಟಿ ಯೂನಿಟ್‌ಗಳಷ್ಟು ಉಳಿತಾಯ ಮಾಡಲು ಗುರಿ ಹಾಕಿಕೊಳ್ಳಲಾಗಿದೆ. ಈ ನೀತಿಯ ಅವಧಿಯಲ್ಲಿ ನಿಗದಿಪಡಿಸಿದ ಗುರಿಯನ್ನು ಸಾಧಿಸಲು ಸುಮಾರು ₹372 ಕೋಟಿ ಬೇಕಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ನಂದಿಬೆಟ್ಟಕ್ಕೆ ರೋಪ್‌ವೇ ಟೆಂಡರ್‌ಗೆ ಒಪ್ಪಿಗೆ

ಚಿಕ್ಕಬಳ್ಳಾಪುರ ಜಿಲ್ಲೆ ಪ್ರವಾಸಿ ತಾಣ ನಂದಿಬೆಟ್ಟಕ್ಕೆ ರೋಪ್‌ವೇ ಅಳವಡಿಸುವ ₹93.40 ಕೋಟಿ ಅಂದಾಜು ವೆಚ್ಚದ ಕಾಮಗಾರಿಗೆ ಟೆಂಡರ್ ಕರೆಯಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ನಂದಿ ಬೆಟ್ಟದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಯೋಜನೆಯ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ ಆಧಾರದ ಮೇಲೆ ರೋಪ್ ವೇ ಅಭಿವೃದ್ಧಿ ಮತ್ತು ಕಾರ್ಯಾಚರಣೆಗಾಗಿ ಖಾಸಗಿ ಪಾಲುದಾರರ ಆಯ್ಕೆಗೆ ಟೆಂಡರ್ ಅನ್ನು ಆಹ್ವಾನಿಸಲಾಗುವುದು.

ಈ ಕುರಿತು ಪ್ರತಿಕ್ರಿಯಿಸಿದ ಸಚಿವ ಡಾ.ಕೆ.ಸುಧಾಕರ್, ನಂದಿ ಬೆಟ್ಟದ ತಪ್ಪಲಿನಿಂದ ಸುಮಾರು 2.93 ಕಿ.ಮೀ. ಅಂತರದ ಬೆಟ್ಟ ಪ್ರದೇಶಕ್ಕೆ ರೋಪ್‌-ವೇ ನಿರ್ಮಿಸಿ ಪ್ರವಾಸಿಗರನ್ನು ಕರೆದೊಯ್ಯಲು ಉದ್ದೇಶಿಸಿದ್ದು, ಲ್ಯಾಂಡಿಂಗ್ ಸ್ಟೇಷನ್ (ಇಳಿಯುವ ಸ್ಥಳ) ಬೆಟ್ಟದ ತಳಭಾಗ ಹಾಗೂ ಮೇಲ್ಭಾಗದ ಎರಡೂ ಕಡೆ ಇರುವಂತೆ ಯೋಜನೆ ರೂಪಿಸಲಾಗಿದೆ. ಇದರಲ್ಲಿ ಒಟ್ಟು 18 ಟವರ್‌ಗಳನ್ನು ನಿರ್ಮಿಸಲಾಗುತ್ತದೆ. ಇದರ ಜೊತೆಗೆ ರೆಸ್ಟೋರೆಂಟ್, ಕೆಫೆ, ಆಹಾರ ಮಳಿಗೆ, ಇತರ ಮಳಿಗೆಗಳನ್ನೂ ನಿರ್ಮಿಸಲು ಅವಕಾಶವಿರುತ್ತದೆ. ರೋಪ್‌-ವೇ ನಲ್ಲಿ 50 ಕ್ಯಾಬಿನ್‌ಗಳಿರಲಿದ್ದು, ಪ್ರತಿಯೊಂದರಲ್ಲೂ 10 ಮಂದಿ ಪ್ರಯಾಣಿಸಬಹುದು. ಒಟ್ಟು 28 ನಿಮಿಷಗಳಲ್ಲಿ ಕ್ರಮಿಸಬಹುದು ಎಂದು ಅವರು ವಿವರಿಸಿದ್ದಾರೆ.

'ಇಂಧನದ ಸಂರಕ್ಷಣೆ ಮತ್ತು ಇಂಧನ ದಕ್ಷತೆಯ ಕಾರ್ಯ ಯೋಜನೆಯಲ್ಲಿ ಗುರುತಿಸಲಾದ ಹಣದ ಅಗತ್ಯವನ್ನು ವಿವಿಧ ಇಲಾಖೆಗಳು, ಅನುದಾನ, ಸಬ್ಸಿಡಿ ಮತ್ತು ಖಾಸಗಿ ಸಹಭಾಗಿತ್ವದ ಮೂಲಕ ಭರಿಸಲು ಉದ್ದೇಶಿಸಲಾಗಿದೆ.

ಪ್ರಮುಖ ತೀರ್ಮಾನಗಳು:

- ಕರ್ನಾಟಕ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಮಟ್ಟದ ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಕೀಯ ಆಮ್ಲಜನಕ ಪೂರೈಕೆಗೆ ಪೈಪ್‌ಲೈನ್ ಅಳವಡಿಸಲು ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳಿಗೆ ಪರಿಷ್ಕೃತ ಅಂದಾಜು ಮೊತ್ತ ₹222.41 ಕೋಟಿ ನೀಡಲು ಆಡಳಿತಾತ್ಮಕ ಅನುಮೋದನೆ.
- 2021–22ನೇ ಸಾಲಿನಿಂದ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ –ಜಲಾನಯನ ಅಭಿವೃದ್ಧಿ ಘಟಕ 2.0 ಯೋಜನೆ ಅನುಷ್ಠಾನಗೊಳಿಸಲು ಅನುಮೋದನೆ.
- ಮೈಸೂರಿನ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ಆವರಣದಲ್ಲಿ ಕೈಗೊಂಡಿರುವ ಮೈಸೂರು ಜಿಲ್ಲಾ ಆಸ್ಪತ್ರೆ ನಿರ್ಮಾಣ ಕಾಮಗಾರಿಯ ₹96.66 ಕೋಟಿ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ.

ಮಾರ್ಚ್ ಮೊದಲ ವಾರ ಬಜೆಟ್

ಮಾರ್ಚ್ 4 ಅಥವಾ 7 ರಂದು ಬಜೆಟ್ ಮಂಡಿಸುವ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ನಡೆಯಿತು ಎಂದು ಮೂಲಗಳು ಹೇಳಿವೆ.

ಈ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಜೆಟ್ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳು, ಸಚಿವರು ಮತ್ತು ಸಂಘ ಸಂಸ್ಥೆಗಳ ಜತೆ ಸಭೆಗಳನ್ನು ನಡೆಸಲಾಗುತ್ತಿದೆ. ಬಜೆಟ್ ಮಂಡನೆಯ ದಿನಾಂಕ ಇನ್ನಷ್ಟೇ ನಿಗದಿ ಆಗಬೇಕಾಗಿದೆ ಎಂದರು.

- ದಕ್ಷಿಣಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಬಿ.ಮೂಡ ಗ್ರಾಮದ ಜಕ್ರಿಬೆಟ್ಟು ಎಂಬಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ ಸೇತುವೆ ಸಹಿತ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಗೆ ₹135 ಕೋಟಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ.
- ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರು ಮೈಸೂರು ರಾಷ್ಟ್ರೀಯ ಹೆದ್ದಾರಿ–275 ರಿಂದ ಕಂಬಿಪುರ ಕಾರುಬೆಲೆ ಜಿಲ್ಲಾ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಯ ₹13.88 ಕೋಟಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ (ಭೂಸ್ವಾಧೀನ ವೆಚ್ಚ ಸೇರಿ) ಅನುಮೋದನೆ.
- ರಾಯಚೂರು ಜಿಲ್ಲೆ ಬಿಜ್ಜಾಳಿ ಗ್ರಾಮ ದಲ್ಲಿ 2.33 ಎಕರೆ ಸರ್ಕಾರಿ ಜಮೀನು ರಾಘವೇಂದ್ರ ಸ್ವಾಮಿ ಮಠ, ನಂಜನ ಗೂಡು, ಮಂತ್ರಾಲಯ ಇವರಿಗೆ ಮಂಜೂರು ಮಾಡಲು ಒಪ್ಪಿಗೆ.
- ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಮಲ್ಲಪ್ಪನಹಳ್ಳಿ ಮತ್ತು ಇತರೆ 19 ಜನವಸತಿಗಳಿಗೆ ಜಲಜೀವನ್ ಮಿಷನ್ ಯೋಜನೆ ಅಡಿ ಬಹುಗ್ರಾಮ ಕುಡಿಯುವ ನೀರು ಸರಬರಾಜಿನ ₹10.74 ಕೋಟಿಗಳ ಮೊತ್ತದ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ.
- ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕು ಚಿಕ್ಕೊಟ್ಟಾ ಮತ್ತು ಇತರೆ 7 ಗ್ರಾಮಗಳಿಗೆ (17 ಜನವಸತಿಗಳು) ಜಲಜೀವನ್ ಮಿಷನ್ ಯೋಜನೆಯಡಿ ಬಹು ಗ್ರಾಮ ಕುಡಿಯುವ ನೀರು ಸರಬರಾಜಿನ ₹35 ಕೋಟಿಗಳ ಯೋಜನೆ ಅನುಷ್ಠಾನಕ್ಕೆ ಆಡಳಿತಾತ್ಮಕ ಅನುಮೋದನೆ.
- ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ಹಳೇಕೋಟೆ ಮತ್ತು ಇತರೆ 55 ಜನವಸತಿಗಳಿಗೆ ಜಲಜೀವನ್ ಮಿಷನ್ ಯೋಜನೆ ಯಡಿ ಬಹುಗ್ರಾಮ ಕುಡಿಯುವ ನೀರು ಸರಬರಾಜಿನ ₹30.23 ಕೋಟಿ ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.

'ಮಳೆ ಬೆಳೆ ಸಂಪಾಯಿತಲೇ ಪರಾಕ್'

ಡೆಂಕನಮರಡಿ: ಮೈಲಾರಲಿಂಗೇಶ್ವರ ಕಾರಣಿಕ ಮಹೋತ್ಸವ

ಪ್ರಜಾವಾಣಿ ವಾರ್ತೆ

ಮೈಲಾರದಲ್ಲಿ ಕಾರಣಿಕ ನುಡಿದ ಗೊರವಯ್ಯ ರಾಮಣ್ಣ

ಹೂವಿನಹಡಗಲಿ (ವಿಜಯನಗರ): 'ಮಳೆ ಬೆಳೆ ಸಂಪಾಯಿತಲೇ ಪರಾಕ್'... ಇದು ತಾಲ್ಲೂಕಿನ ಐತಿಹಾಸಿಕ ಪ್ರಸಿದ್ಧ ಧಾರ್ಮಿಕ ಸುಕ್ಷೇತ್ರ ಮೈಲಾರದಲ್ಲಿ ಮೊಳಗಿದ ಮೈಲಾರಲಿಂಗೇಶ್ವರ ಸ್ವಾಮಿಯ ಕಾರಣಿಕ ನುಡಿ.

ಮೈಲಾರದ ಡೆಂಕನಮರಡಿಯಲ್ಲಿ ಶುಕ್ರವಾರ ಸಂಜೆ ಅಪಾರ ಭಕ್ತರ ಜಯಘೋಷ, ಹರ್ಷೋದ್ಗಾರದ ನಡುವೆ ಪ್ರಸಕ್ತ ಸಾಲಿನ ಕಾರಣಿಕ ನುಡಿ ಮೊಳಗಿತು.

ಸುಕ್ಷೇತ್ರದ ಧರ್ಮಕರ್ತ ವೆಂಕಪ್ಪಯ್ಯ ಒಡೆಯರ್ ಅವರಿಂದ ಭಂಡಾರದ ಆಶೀರ್ವಾದ ಪಡೆದು ಸುಕ್ಷೇತ್ರ ಪರಂಪರೆಯ ಸಂಕೇತವಾಗಿರುವ ಬಿಲ್ಲು ಏರಿದ ಗೊರವಯ್ಯ ರಾಮಣ್ಣ, 'ಸದ್ದಲೇ' ಎಂದು ಕೂಗುತ್ತಿದ್ದಂತೆ ಡೆಂಕನ ಮರಡಿಯಲ್ಲಿ ಸೇರಿದ್ದ ಭಕ್ತ ಪರಿಷೆ, ಜೀವಸಂಕುಲ ಕ್ಷಣಕಾಲ ಸ್ತಬ್ಧವಾಯಿತು. ಆಗ ಗೊರವಯ್ಯ ಮೇಲಿನಂತೆ ಕಾರಣಿಕ ನುಡಿದು ಬಿಲ್ಲಿನಿಂದ ಕೆಳಗೆ ಜಿಗಿದರು. ನೆರೆದಿದ್ದ ಗೊರವ ಸಮೂಹ ಅವರನ್ನು ಕಂಬಳಿಯಲ್ಲಿ ಹಿಡಿಯಿತು.

'ಪ್ರಸಕ್ತ ವರ್ಷದ ಕಾರಣಿಕ ನುಡಿ ಶುಭ ಸೂಚಕ. ಈ ವರ್ಷ ಮಳೆ, ಬೆಳೆ ಸಮೃದ್ಧವಾಗಿ ರೈತರ ಬದುಕು ಹಸನಾಗಲಿದೆ. ಕೃಷಿ, ರಾಜಕೀಯ, ವಾಣಿಜ್ಯ ಸೇರಿದಂತೆ ಎಲ್ಲ ಕ್ಷೇತ್ರಕ್ಕೂ ಒಳಿತಾಗುವ ಸೂಚನೆ ಕಾಣಿಸುತ್ತದೆ' ಎಂದು ಭವಿಷ್ಯವಾಣಿಯ ವಿಶ್ಲೇಷಿಸಲಾಗಿದೆ.

ಶುಕ್ರವಾರ ಮುಂಜಾನೆಯಿಂದ ನಿರ್ಬಂಧ ತೆರವುಗೊಳಿಸಿದ್ದರಿಂದ ಲಕ್ಷಾಂತರ ಭಕ್ತರು ಸುಕ್ಷೇತ್ರಕ್ಕೆ ಆಗಮಿಸಿದ್ದರು. ಡೆಂಕನಮರಡಿ ತುಂಬ ಜನ ಸಾಗರ ಸೇರಿದ್ದರಿಂದ ಈ ಹಿಂದಿನ ಸಂಭ್ರಮ ಮರುಕಳಿಸಿತು.

ಈಶ್ವರಪ್ಪ ಪರ ವಕೀಲಿಕೆ ಮಾಡುತ್ತಿಲ್ಲ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಕೆ.ಎಸ್. ಈಶ್ವರಪ್ಪ ಪರ ನಾನೇನೂ ವಕೀಲಿಕೆ ಮಾಡುತ್ತಿಲ್ಲ. ಅವರು ಸಹಜವಾಗಿ ನೀಡಿದ್ದ ಹೇಳಿಕೆಯಲ್ಲಿ ತಪ್ಪೇನೂ ಇಲ್ಲ ಎಂದಷ್ಟೇ ಹೇಳಿದ್ದೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಈಶ್ವರಪ್ಪ, ಅವರ ಹೇಳಿಕೆಯಲ್ಲಿ ರಾಷ್ಟ್ರಧ್ವಜಕ್ಕೆ ಅವಮಾನ ಆಗುವಂತಹ ಮಾತಿಲ್ಲ. ಇರುವ ವಿಷಯವನ್ನು ಹಾಗೆಯೇ ನಾನು ಹೇಳಿದ್ದೇನೆ' ಎಂದರು.

'ಕಾಂಗ್ರೆಸ್ ಸದಸ್ಯರು ಸದನದಲ್ಲಿ ಸಭಾಧ್ಯಕ್ಷರ ಪೀಠದ ಎದುರು ರಾಷ್ಟ್ರಧ್ವಜ ಹಾರಿಸುತ್ತಾ ಪ್ರತಿಭಟನೆ ನಡೆಸಿದರು. ಇದು ರಾಷ್ಟ್ರಧ್ವಜಕ್ಕೆ ನೀಡುವ ಗೌರವವೇ? ಸದನದಲ್ಲಿ ಸುಮ್ಮನೆ ಕಲಾಪ ವ್ಯರ್ಥ ಮಾಡುವ ಬದಲು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ, ಹೋರಾಟ ಮಾಡಲಿ' ಎಂದು ಹೇಳಿದರು.

'ಮಂತ್ರಿಯ ರಾಜೀನಾಮೆ ಪಡೆಯ ಬೇಕು ಎಂಬ ಪ್ರತಿಷ್ಠೆಗೆ ಬಿದ್ದಿರುವ ಕಾಂಗ್ರೆಸ್ ಪಕ್ಷದವರು ಸದನದ ಕಲಾಪ ನಡೆಯದಂತೆ ಅಡ್ಡಿಪಡಿಸುತ್ತಿದ್ದಾರೆ. ಇದೊಂದು ರೀತಿಯಲ್ಲಿ 'ರಾಜಕೀಯ ಕೋವಿಡ್' ಹರಡುವ ಸಂಚು. ಜನರು ಇವರನ್ನು ಕ್ಷಮಿಸುವುದಿಲ್ಲ' ಎಂದರು.

'ನಾನು ಚನ್ನಪಟ್ಟಣ ಕ್ಷೇತ್ರದಲ್ಲೇ ಇರುತ್ತೇನೆ, ಬೇರೆ ಯಾವ ಕ್ಷೇತ್ರಕ್ಕೂ ಹೋಗುವುದಿಲ್ಲ' ಎಂದು ಎಚ್.ಡಿ. ಕುಮಾರಸ್ವಾಮಿ ಶುಕ್ರವಾರ ಮಂಡ್ಯದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಟೀಕೆ: ರಾಮನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರಿಗೆ ಜೆಡಿಎಸ್ ಬಗ್ಗೆ ಆಕ್ರೋಶ, ಸಿಟ್ಟು ಇದೆ. ಅದನ್ನು ಅವರ ಮಾತುಗಳಲ್ಲೇ ಕಾಣಬಹುದು' ಎಂದು ಟೀಕಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ವಾಗ್ದಾಳಿ

ಸರ್ಕಾರವೇ ಗೊಂದಲ ಸೃಷ್ಟಿಸುತ್ತಿದೆ: ಕಾಂಗ್ರೆಸ್ ಆರೋಪ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಶಿವಕುಮಾರ್

ಬೆಂಗಳೂರು: ಹಿಜಾಬ್ ವಿಚಾರದಲ್ಲಿ ರಾಜ್ಯ ಸರ್ಕಾರವೇ ಗೊಂದಲ ಸೃಷ್ಟಿಸುತ್ತಿದೆ. ಹೈಕೋರ್ಟ್ ಮಧ್ಯಂತರ ಆದೇಶವನ್ನು ತಪ್ಪಾಗಿ ವ್ಯಾಖ್ಯಾನಿಸಿ ದಿಕ್ಕು ತಪ್ಪಿಸಲಾಗುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಶುಕ್ರವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಸಂವಿಧಾನದ ಅಡಿಯಲ್ಲಿ ದೊರಕಿರುವ ಹಕ್ಕುಗಳನ್ನು ನಿರಾಕರಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಹಿಜಾಬ್ ವಿಷಯದಲ್ಲಿ ಸರ್ಕಾರದ ನಿಲುವು ಸಂವಿಧಾನಕ್ಕೆ ವಿರುದ್ಧವಾಗಿದೆ' ಎಂದರು.

'ಹಿಂದೆಂದೂ ಹಿಜಾಬ್ ವಿವಾದಕ್ಕೆ ಕಾರಣವೇ ಆಗಿರಲಿಲ್ಲ. ಇಚ್ಛೆ ಇದ್ದವರು ಧರಿಸುತ್ತಿದ್ದರು, ಉಳಿದವರು ಹಾಗೆಯೇ ತರಗತಿಗಳಿಗೆ ಬರುತ್ತಿದ್ದರು. ಸಂಘ ಪರಿವಾರದ ಪ್ರಚೋದನೆಯಿಂದ ಈಗ ವಿವಾದ ಸೃಷ್ಟಿಯಾಗಿದೆ. ಮುಸ್ಲಿಂ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ದೂರ ಇಡುವುದೇ ಇದರ ಹಿಂದಿನ ಉದ್ದೇಶ' ಎಂದು ಸಿದ್ದರಾಮಯ್ಯ ದೂರಿದರು.

'ಸಮವಸ್ತ್ರ ನೀತಿ ಇರುವ ಶಾಲೆ, ಕಾಲೇಜುಗಳಲ್ಲಿ ಮಾತ್ರ ಮಧ್ಯಂತರ ಆದೇಶ ಅನ್ವಯವಾಗುತ್ತದೆ ಎಂದು ಹೈಕೋರ್ಟ್ ಹೇಳಿದೆ. ಆದರೆ, ಈಗ ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ವ್ಯಾಪ್ತಿಯ ವಸತಿ ಶಾಲೆ, ಕಾಲೇಜು ಮತ್ತು ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲೂ ಮಧ್ಯಂತರ ಆದೇಶ ಜಾರಿಗೊಳಿಸಲು ಆದೇಶ ಹೊರಡಿಸಲಾಗಿದೆ. ಇದು ಸರ್ಕಾರ ಗೊಂದಲ ಸೃಷ್ಟಿಸುತ್ತಿರುವುದಕ್ಕೆ ಸಾಕ್ಷಿ' ಎಂದರು.

'ಶಾಲೆ, ಕಾಲೇಜುಗಳ ಬಳಿ ಪೊಲೀಸರನ್ನು ನಿಯೋಜಿಸಿ ವಿದ್ಯಾರ್ಥಿಗಳನ್ನು ಬೆದರಿಸಲಾಗುತ್ತಿದೆ. ಈ ಕೆಲಸವನ್ನು ಸರ್ಕಾರ ನಿಲ್ಲಿಸಬೇಕು. ವಿದ್ಯಾರ್ಥಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವ ಕ್ರಮವನ್ನೂ ಕೈಬಿಡಬೇಕು' ಎಂದು ಆಗ್ರಹಿಸಿದರು.

ಅಧಿಕಾರಿಗಳ ಮೇಲೆ ಒತ್ತಡ: 'ಹಿಜಾಬ್ ವಿಚಾರದಲ್ಲಿ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಆದೇಶ ಹೊರಡಿಸುವ ಕೆಲಸ ಮಾಡಲಾಗುತ್ತಿದೆ. ಪೊಲೀಸರನ್ನು ನಿಯೋಜಿಸುವುದರ ಮೂಲಕ ಒತ್ತಡ ಹೇರಲಾಗುತ್ತಿದೆ. ಬಿಜೆಪಿ ಸರ್ಕಾರ ತನ್ನ ಸ್ವಾರ್ಥ ಸಾಧನೆಗಾಗಿ ಹಿಜಾಬ್ ವಿಷಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಡಿ.ಕೆ. ಶಿವಕುಮಾರ್ ಆರೋಪಿಸಿದರು.

'ವಿದ್ಯಾರ್ಥಿಗಳು ಅವರವರ ಧರ್ಮಕ್ಕೆ ಅನುಸಾರವಾಗಿ ಬಟ್ಟೆ ಧರಿಸುತ್ತಾರೆ. ಮುಂಡಾಸು, ಓಲೆ, ಜನಿವಾರ, ಸ್ಕಾರ್ಫ್ ಧರಿಸುವುದನ್ನು ಬೇಡ ಎನ್ನಲು ಸಾಧ್ಯವೇ' ಎಂದು ಪ್ರಶ್ನಿಸಿದರು.

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/21-22 **NOTICE FOR PRIVATE SALE OF GOLD** 18/02/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 11-03-2022 as shown below:

Br. Bidadi: Site No. 342/370, Nelligudda Tank Road, Bidadi, Ramanagara- 562 109 Ph No. 080-27282383 :- 16705500001033,16705500001165,16705500001223,16705500001330,16705500001405,16706400039594,16706400039834,16706400040527,16706400040683,16706400040881,16706400041111,16706400041228,16706400041301,16706400041574,16706400041640,16706400041822,16706400042127,16706400042549,16706400042952,16706400043190,16706400047985,16706400048660,16706400048884,16706400049163,16706400049809,16706400050138,16706400050385,16706400050468,16706400050658,16706400050666,16706400050773,16706400050823,16706400050930,16706400051151,16706400051490,16706400051565,16706400051599,16706400051607,16706400051730,16706400051946,16706400052225,16706400052381,16706400052399,16706400052506,16706400052563,16706400052571,16706400052605,16706400052803,16706400052936,16706400053090,16706400053124,16706400053231,16706400053280,16706400053314,16706400053355,16706400053397,16706400053421,16706400053462,16706400053504,16706400053520,16706400053587,16706400053595,16706400053629,16706400053637,16706400053694,16706400053702,16706400053710,16706400053728,16706400053827,16706400053835,16706400053843.

Br.Balagaranahalli: Sy. No. 33/2,Balagaranahalli, Attibele Hobli, Anekal Taluk, Bangalore Urban, Karnataka, 562107, Ph No. 080 27820090:- 21706400014558,21706400012271,21706400011521,21706400017585,21706400014202,21706400014384,21706400015472,21706400015464,21706400009871,21706400017270,21706400017288,21706400015548,21706400014145,21706400015357,21706400014988,21706400017031,21706400017916,21706400010945,21706400015191,21706400016199,21706400015670,21706400015480,21706400013337,21706400013782,21706400015407,21706400012446,21706400011802,21706400015217,21706400015647,21706400015639,21706400015613,21706400015605,21706100024360,21706400014939,21706400014889,21706400014780,21706400014814,21706400014855,21706400014731,21706100023990,21706400014913,21706400011281,21706400013063,21706400010176,21706400014699,21706400009442,21706400010291,21706400015456,21706400014517,21706100019758,21706100020053,21706100023875,21706400015084,21706400015027,21706400015068,21706400009772,21706400015621,21706400015654,21706400015399,21706400004070,21706400006398,21706400003981,21706400009921,21706400013857,21705500000558,21705500000533,21705500000541.

Br. Bangalore/Basavanagudi: 20/1, Ground Floor, Shri Mallikarjuna Nilaya, Prof.B S Madhava Rao Circle, Basavanagudi, Bangalore Urban, Karnataka, 560 004, Ph No.08026571530 :- 13186400009520,13186400009249,13186400009405,13186100165937,13186100161126,13186100158072,13186400009413,13186400009447,13186400008092,13186100152927,13186400009397,13186400009454,13186400008498,13186100163791,13186400009298,13186400009694,13186400008506,13186100160144,13186400009306,13186400009553,13186100166067,13186100152059,13186100160581,13186400009546,13186400009678,13186100165929,13186100136326,13186400009538,13186400009686,13186100165895,13186100162652,13186400009629,13186400009652,13186100159682,13186100133703,13186400009637,13186400009645,13186100163221,13186100129503,13186100160490,13186400009660,13186400009702,13186100129511,13186100160516,13186100163460,13186100166091,13186100125196,13186100159518,13186400009132,13186400009470,13186100130550,13186100170903,13186400009140,13186400009488,13186100133398,13186100159500,13186400009173,13186400009496,13186100125501,13186100155656,13186400009181,13186400009504,13186100126566,13186100159492,13186400009256,13186100154808,13186100129529,13186100170226,13186400009272,13186400009348,13186100132051,13186100170945,13186400009264,13186400009371,13186400008084,13186100160623,13186400008969,13186400009389,13186400009033,13186100160656,13186100161464,13186400009363,13186100158676,13186100166133,13186100160631,13186400009421,13186100165911,13186100160649,13186100160615,13186100159542,13186100155482,13186100158999,13186100166141,13186100162876,13186400009777,13186400009736,13186100162868.

Br.Bangalore/Jaya Nagar: K M Plaza, Kanakapura Main Road, 30th Cross, 7th Block, Jayanagar, Bangalore Urban, Karnataka- 560 082,Ph No.080-26655558 :- 13876400049159,13876100372133,13876400047328,13876400049928,13876400054043,13870051030001,13876100372448,13876400047336,13876400049936,13876400054456,13876100354073,13876100372737,13876400047344,13876400049944,13876400054670,13876100354545,13876100372810,13876400047351,13876400049951,13876100354818,13876400037261,13876400047476,13876400049969,13876100355062,13876400037444,13876400047484,13876400050215,13876100355724,13876400037808,13876400047526,13876400050371,13876100355732,13876400038350,13876400047658,13876400050389,13876100355989,13876400038392,13876400047989,13876400050827,13876100357027,13876400038558,13876400048086,13876400051304,13876100358280,13876400038566,13876400048102,13876400051320,13876100359916,13876400038673,13876400048458,13876400051965,13876100360278,13876400039804,13876400048516,13876400051973,13876100360377,13876400040042,13876400048524,13876400052088,13876100361276,13876400040067,13876400048532,13876400052302,13876100361375,13876400041370,13876400048557,13876400052310,13876100361581,13876400041834,13876400048565,13876400052328,13876100361599,13876400042378,13876400048573,13876400052336,13876100361615,13876400042394,13876400048581,13876400052344,13876100362365,13876400042402,13876400048599,13876400052351,13876100364072,13876400042410,13876400048672,13876400052369,13876100364866,13876400043236,13876400048680,13876400052377,13876100365194,13876400043244,13876400048698,13876400052385,13876100365814,13876400043251,13876400048730,13876400052393,13876100365871,13876400043269,13876400048839,13876400052401,13876100366184,13876400043350,13876400048847,13876400052419,13876100366192,13876400043442,13876400048854,13876400052427,13876100366200,13876400043483,13876400048862,13876400052765,13876100366564,13876400043822,13876400048870,13876400052898,13876100366572,13876400045355,13876400049035,13876400052955,13876100366630,13876400045371,13876400049043,13876400053169,13876100367273,13876400045389,13876400049050,13876400053409,13876100367919,13876400046445,13876400049084,13876400053862,13876100368263,13876400046767,13876400049142,13876400053888,13876100369030,13876400046940,13876400049225,13876400053946,13876100369113,13876400047245,13876400049233,13876400053953,13876100369469,13876400047252,13876400049241,13876400053961,13876100370459,13876400047286,13876400049290,13876400053979,13876100371143,13876400047294,13876400049894,13876400053995,13876100371580,13876400047302,13876400049902,13876400054019,13876100371846,13876400047310,13876400049910,13876400054035.

Br. Bannergatta: Limra Towers, Kemmanaikanahalli, Bannergatta, Bangalore Urban, Karnataka, - 560 083 Ph No. 080 27828224 :- 15716400083642,15716400064386,15716400103069,15716400064121,15716400045930,15716400079103,15716400076463,15716400085522,15716400069369,15716400067090,15716400079517,15716400085530,15716400026930,15716400039966,15716400076455,15716400090670,15716400096347,15716400067082,15716400075606,15716400072603,15716400097436,15716400079483,15716400075614,15716400101402,15716400059667,15716400092924,15716400101998,15716400094482,15716400069609,15716400092957,15716400072991,15716400083865,15716400093344,15716400092684,15716400091538,15716400083857,15716400093336,15716400092700,15716400071282,15716400093005,15716400080556,15716400092981,15716400082826,15716400052548,15716400093047,15716400092932,15716400084376,15716400068353,15716400071894,15716400100933,15716400088468,15716400083501,15716400092775,15716400071191,15716400101113,15716400058479,15716400093518,15716400046086,15716400032839,15716400042648,15716400069542,15716400064402,15716400064550,15716400047670,15716400084871,15716400064394,15716400059071,15716400082529,15716400069617,15716400091942,15716400102210,15716400082974,15716400089672,15716400055061,15716400076059,15716400096743,15716400080499,15716400055012,15716400038695,15716400100842,15716400081695,15716400091959,15716400042382,15716400078618,15716400082735,15716400055038,15716400042515,15716400056945,15716400080374,15716400074526,15716400080127,15716400095547,15716400077354,15716400073643,15716400082610,15716400036335,15716400080408,15716400068544,15716400103614,15716400101923,15716300001132,15716400100800,15716400073395,15716400102103,15716300001363,15716400065359,15716400079467,15716400102111,15716400050401,15716400078006,15716400070037,15716400083451,15716400050922,15716400079384,15716400079152,15716400089854,15716400079053,15716400078568,15716400093120,15716400089862,15716400038794,15716400078543,15716400078105,15716400089870,15716400038703,15716400079376,15716400074062,15716400096024,15716400089110,15716400050120,15716400065953,15716400095976,15716400101535,15716400089482,15716400087957,15716100151855,15716400101543,15716400086736,15716400097832,15716400103358,15716400101550,15716400078030,15716400093013,15716400095489,15716400101568,15716400088070,15716400080770,15716400078691,15716400101527,15716400081463,15716400080762,15716400040253,15716400092965,15716400090845,15716400081638,15716400098103,15716400066985,15716400079681,15716400091298,15716400099044,15716400092858,15716400077057,15716400093740,15716400099051,15716400101360,15716400091041,15716400078964,15716400100925,15716400071712,15716400091058,15716400078998,15716400062828,15716400051136,15716400079624,15716400079004,15716400054940,15716400092833,15716400090316,15716400069583,15716400083923,15716400090662,15716400090324,15716400068783,15716400078196,15716400092825,15716400090308,15716400076992,15716400100693,15716400096883,15716400101303,15716400097717,15716400075408,15716400063735,15716400094375,15716400102137,15716400040022,15716400086355,15716400078683,15716400085928,15716400095307,15716300001116,15716400089748,15716400078352,15716400070458,15716400083535,15716400086140,15716100152267,15716400070441,15716300001447,15716400086199,15716400098715,15716400068866,15716300001546,15716400086157,15716400089573,15716400068957,15716400102251,15716400085498,15716400068551,15716400070904,15716400102004,15716400102053,15716400102897,15716400096214,15716400102012,15716400091595,15716400065763,15716400091124,15716400050823,15716400080689,15716400103192,15716400080549,15716400086314,15716400091033,15716400100578,15716400077826,15716400086306,15716400070847,15716400089680,15716400080135,15716400086322,15716400065029,15716400093369,15716400080143,15716400065730,15716400065318,15716400100297,15716400043216,15716400087460,15716400079616,15716400101873,15716400079368,15716400067843,15716400047647,15716400067033,15716400039867,15716400090415,15716400047621,15716400091835,15716400081729,15716400032847,15716400047613,15716400091843,15716400055228,15716400032888,15716400096297,15716400091827,15716400070250,15716400102293,15716400079061,15716400091819,15716400093302,15716400102285,15716400102327,15716400078642,15716400102681,15716400076760,15716400065417,15716400095430,15716100152051,15716400076380,15716400065409,15716400068387,15716400045906,15716400081711,15716400035691,15716400102335,15716400086124,15716400077891,15716400036848,15716300000944,15716400062646,15716400079418,15716400043828,15716300000928,15716400102871,15716400079558,15716400077909,15716400090894,15716400102152,15716400080580,15716400082222,15716400063420,15716400102061,15716400077867,15716400059717,15716400047878,15716400102129,15716400079954,15716300000076,15716400051854,15716400101741,15716400077073,15716300000134,15716400048181,15716400089888,15716400076620,15716300000274,15716400069898,15716400069740,15716300001272,15716300000456,15716400087213,15716400040923,15716300001553,15716300000845,15716400079590,15716400066720,15716300000191,15716300000969,15716400079608,15716400090944,15716300000233,15716300000936,15716400091439,15716400095091,15716300000290,15716400076315,15716400091413,15716400095075,15716300000324,15716400072439,15716400075143,15716400077131,15716300001850,15716400103036,15716400075150,15716400083212,15716300000555,15716400103028,15716400039768,15716400100685,15716300000530,15716400096172,15716400042705,15716400102079,15716300000621,15716400088351,15716400039420,15716400103010,15716300002031,15716400101477,15716400042341,15716400083345,15716300000753,15716400083386,15716400080986,15716400070425,15716300002064,15716400079889,15716400084533,15716400077917,15716300002098,15716400059725,15716400093112,15716400064147,15716300000779,15716400078857,15716400075994,15716400092403,15716300000811,15716400089508,15716400060889,15716400043380,15716300000993,15716400037432,15716400076075,15716400090217,15716300001090,15716400070011,15716400072728,15716400091694,15716300001124,15716400079525,15716400072736,15716400103630,15716400102269,15716400083220,15716400040972,15716400078873,15716400091991,15716400079509,15716400048066,15716400078907,15716400091892,15716400084004,15716400087908,15716400091801,15716400092262,15716400050245,15716400092379,15716400090431,15716400049668,15716400093278,15716400080911,15716400085878,15716400049890,15716400094524,15716400085340,15716400090456,15716400103077,15716400075465,15716400034306,15716400095331,15716400092247,15716400091793,15716400034298,15716400057067,15716400092254,15716400087122,15716400041566,15716400092767,15716300002528,15716400083568,15716400087411,15716400080051,15716400051789,15716400103283,15716400087650,15716400080531,15716400091983,15716400087379,15716400086843,15716400091777,15716400103440,15716400099515,15716400086850,15716300002700,15716400090548,15716400086835,15716300001512,15716400093526,15716400094417,15716400046003,15716400036202,15716400090266,15716400058552,15716400036194,15716400078204,15716400102160,15716400097725,15716400090035,15716400073627,15716400040766,15716400080218,15716400064378,15716400044974,15716400091330,15716400064352,15716400077925,15716400081893.

Bangalore 18-02-2022 Vice President & Zonal Head

ಕರ್ನಾಟಕ ಸರ್ಕಾರ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
(ಸರ್ಕಾರದ ಸ್ವಾಯತ್ತ ಸಂಸ್ಥೆ)
ಹೈದ್ರಾಬಾದ ರೋಡ, ರಾಯಚೂರು – 584102. Ph/Fax : 08532-238488/89
Web: www.rims-raichur.com Email : info@rims-raichur.com

ಸಂ. ರಿಮ್ಸ್ /ಸರಬರಾಜು/ಟೆಂಡರ್/ಉಪಕರಣ/03/2021–22/ ದಿನಾಂಕ :17.02.2022

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ರಕ್ತ ನಿಧಿ ಕೇಂದ್ರಕ್ಕೆ ಅವಶ್ಯವಿರುವ ವಿವಿಧ ಉಪಕರಣಗಳನ್ನು ಖರೀದಿಸಿ ಪೂರೈಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.
1) ಟೆಂಡರ್‌ಗಳನ್ನು ದಿನಾಂಕ: **19.02.2022** ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, 2) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **05.03.2022** ರ ಸಾಯಂಕಾಲ 5.00 ಗಂಟೆವರೆಗೆ, 3) ತಾಂತ್ರಿಕ ಲಕೋಟೆ (ಮೊದಲನೇಯ ಕವರ್) ತೆರೆಯುವ ದಿನಾಂಕ : 07.03.2022 ಬೆಳಿಗ್ಗೆ 11.30 ಗಂಟೆಗೆ.
ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://eproc.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ www.rims-raichur.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

ವಾ.ಸಾ.ಸಂ.ಇ/ರಾಯಚೂರು/627/ಎಂ.ಸಿ.&ಎ/2021–22

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
Email: commissionergda@gmail.com

ಸಂಖ್ಯೆ : ನಪ್ರಾಕ/ತಾಂತ್ರಿಕ/ಎಸ್.ಬಿ. ಕೆರೆ/2/2021–22/3170 ದಿನಾಂಕ: 17–02–2022

:: ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ (2ನೇ ಕರೆ) ::

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಲಬುರಗಿ ನಗರದ (ಅಪ್ಪಾ ಕೆರೆಗೆ ಹೊಂದಿಕೊಂಡಿರುವ)ಮೀನು ಮಾರುಕಟ್ಟೆ ಸ್ಟಾಲ್‌ದಿಂದ ಡಾ॥ ಬಿ.ಆರ್. ಅಂಬೇಡ್ಕರ ವೃತ್ತದವರೆಗೆ ಪಾದಚಾರಿ ಮಾರ್ಗ ನಿರ್ಮಿಸಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಮೊದಲನೇ ದರ್ಜೆ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ದ್ವಿಲಕೋಟೆ ಮಾದರಿಯಲ್ಲಿ KW-4 ರಂತೆ ಇ–ಪ್ರೋಕ್ಯೂರಮೆಂಟ ಟೆಂಡರ ಕರೆಯಲಾಗಿರುವುದು.
ಟೆಂಡರ ದಿನಾಂಕ ಮತ್ತು ಸಮಯ :
1) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **16–03–2022 ರಂದು ಬೆಳಿಗ್ಗೆ 11.00 ಗಂಟೆಗೆ,** 2) ಕ್ವಾರೀಸ್‌ಗಾಗಿ ಕೊನೆಯ ದಿನಾಂಕ ಮತ್ತು ಸಮಯ: **17–03–2022 ರಂದು ಸಾಯಂಕಾಲ 5.30 ರವರೆಗೆ,** 3) ಟೆಂಡರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **21–03–2022 ರಂದು ಸಾಯಂಕಾಲ 4.00 ರವರೆಗೆ,** 4) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **23–03–2022 ರಂದು ಸಾಯಂಕಾಲ 4.30 ಗಂಟೆಗೆ,** 5) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : **30–03–2022 ರಂದು ಬೆಳಿಗ್ಗೆ 11.00 ಗಂಟೆಗೆ** ಅಥವಾ ತಾಂತ್ರಿಕ ಬಿಡ್ಡ ಅನುಮೋದನೆಯಾದ ನಂತರ
1) ಟೆಂಡರಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): Rs. 360.12, 2) ಮುಂಗಡ ಠೇವಣಿ ಮೊತ್ತ (ಇ.ಎಂ.ಡಿ) ಟೆಂಡರ : Rs. 1.00 Lakhs Through e- portal & Rs. 2.601 Lakhs through FDR/ B.G/DD., 3) ಟೆಂಡರ ಅರ್ಜಿ ಶುಲ್ಕ: As per e- portal, 4) ಕೆಲಸದ ಅವಧಿ: 09 ತಿಂಗಳು (ಮಳೆಗಾಲ ಸಹಿತ)
ಟೆಂಡರ ಬಗ್ಗೆ ವಿವರ ವೆಬ್‌ಸೈಟ್: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಇನ್ನುಳಿದಂತೆ ವಿವರಗಳಿಗಾಗಿ ಪ್ರಾಧಿಕಾರದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1126/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1,3&4/ಇ–ಟೆಂಡರ್ ಪ್ರಕಟಣೆ/2021–22/4472 ದಿನಾಂಕ: 14.02.2022

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1, 2, 3 ಮತ್ತು 4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 5054 ಎಸ್.ಡಿ.ಪಿ ಯೋಜನೆ ಮತ್ತು 3054 ಅತಿವೃಷ್ಟಿ ಹಾಗೂ ನೆರೆಹಾವಳಿ ಅಡಿಯಲ್ಲಿ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ–ಲಕೋಟೆ ಅಡಿಯಲ್ಲಿ e-procurement ಮುಖಾಂತರ ಯಾದಗಿರಿ ತಾಲೂಕಿನ 03, ಶಹಾಪೂರ ತಾಲೂಕಿನ 13 ಮತ್ತು ಸುರಪೂರ ತಾಲೂಕಿನ 11 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ವರ್ಕ ಇಂಡೆಂಟ್ ಸಂಖ್ಯೆ: ಯಾದಗಿರಿ–(1)149130 ಮತ್ತು (2)148765. ಶಹಾಪೂರ–(1)148759,(2)148699, (3)148764, (4)148762, (5)148883, (6)148763, (7)148994, (8)149017 ಮತ್ತು (9)148823. ಸುರಪೂರ–(1)148735, (2)148789, (3)148738, (4)148793, (5)148794, (6)148736, (7)148786, (8)148787, (9)148799, (10)148800 ಮತ್ತು (11)148797. ಎಸ್.ಸಿ.ಮೀಸಲಾತಿ: 1)148723, 2)148884 ಮತ್ತು (3)148903. ಎಸ್.ಟಿ.ಮೀಸಲಾತಿ: 1)148886 ಮತ್ತು 2)148832. 2) ಕಾಮಗಾರಿ ಅಂದಾಜು ಮೊತ್ತ : ಕನಿಷ್ಠ ರೂ.10.30 ಲಕ್ಷ ಹಾಗೂ ಗರಿಷ್ಠ ರೂ:500.00 ಲಕ್ಷ, 3) ಗುತ್ತಿಗೆದಾರರ ಅರ್ಹತೆ ವಿವರ : 4 ನೇ ದರ್ಜೆ ಹಾಗೂ ಮೇಲ್ಪಟ್ಟು (ನಿಯಮಾನುಸಾರ), 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ:23,000.00 ಗರಿಷ್ಠ ರೂ: 6,69,500.00, 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ : 21.02.2022 (11.30 ಗಂಟೆ) (ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ), 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 23.02.2022 (17.30 ಗಂಟೆವರೆಗೆ), 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 28.02.2022 (16.00 ಗಂಟೆವರೆಗೆ), 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್: 02.03.2022 (11.30 ಗಂಟೆ)(ಕೆಡಬ್ಲ್ಯೂ–1 & 2ರ ಕಾಮಗಾರಿಗಳಿಗೆ ಮಾತ್ರ), 9) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ : 02.03.2022 (11.30 ಗಂಟೆ)(ಕೆಡಬ್ಲ್ಯೂ–3 & 4ರ ಕಾಮಗಾರಿಗಳಿಗೆ ಮಾತ್ರ), 10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ : 03.03.2022 (16.30 ಗಂಟೆ)(ಕೆಡಬ್ಲ್ಯೂ–3 & 4ರ ಕಾಮಗಾರಿಗಳಿಗೆ ಮಾತ್ರ), 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ, 12) ಅಂತರ್ಜಾಲ ತಾಣದ ವಿಳಾಸ : **www.e-proc.karnataka.gov.in**

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ. ವಿಭಾಗ: ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/392/ಎಂಸಿಎ/2021–22

ಲಖಿಂಪುರ ಖೇರಿ: ರೈತರ ಮೇಲೆ ವಾಹನ ಹರಿಸಿ ಹತ್ಯೆ ಪ್ರಕರಣದ ಗಾಯ ಇನ್ನೂ ಹಸಿ

ಬಿಜೆಪಿಗೆ ರೈತರ ಆಕ್ರೋಶದ ಬಿಸಿ

• ಸಂಜಯ ಪಾಂಡೆ

ಲಖಿಂಪುರ ಖೇರಿ: 'ಈ ಸರ್ಕಾರ (ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಅವರ ಸರ್ಕಾರ) ರೈತರ ಬಗ್ಗೆ ಯೋಚನೆಯನ್ನೇ ಮಾಡುತ್ತಿಲ್ಲ' ಎಂಬುದು 70 ವರ್ಷ ವಯಸ್ಸಿನ ರೈತ ದಲ್ಬೀರ್ ಸಿಂಗ್ ಅವರ ಅಭಿಪ್ರಾಯ. ಅವರು ಲಖಿಂಪುರ ಖೇರಿ ಜಿಲ್ಲೆಯ ಬನಿಕಾ ಗ್ರಾಮದ ನಿವಾಸಿ. ರೈತರ ಮೇಲೆ ವಾಹನ ಹರಿಸಿ ನಾಲ್ವರು ರೈತರು ಹತ್ಯೆಯಾದ ಸಂದರ್ಭದಲ್ಲಿ ಈ ಜಿಲ್ಲೆಯು ಸುದ್ದಿಯ ಕೇಂದ್ರವಾಗಿತ್ತು. ಕೇಂದ್ರದ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರು ಈ ವಾಹನ ಚಲಾಯಿಸಿದ್ದರು ಎಂದು ಆರೋಪಿಸಲಾಗಿದೆ.

ದಲ್ಬೀರ್ ಅವರು 50 ವರ್ಷಗಳಿಂದ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ರೈತರು ಇಷ್ಟೊಂದು ಆಕ್ರೋಶಗೊಂಡಿದ್ದನ್ನು ಮತ್ತು ಅಸಹಾಯಕವಾಗಿದ್ದನ್ನು ಕಂಡೇ ಇಲ್ಲ ಎಂದು ಅವರು ಹೇಳಿದ್ದಾರೆ. 'ನಮಗೆ ಸಾಲ ಮನ್ನಾ ಬೇಡ, ನಮಗೆ ಕೊಡುಗೆಗಳೂ ಬೇಡ. ನಮ್ಮ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಿದರೆ ಸಾಕು. ನಮ್ಮ ಸ್ಥಿತಿಯು ಉತ್ತಮಗೊಳ್ಳುತ್ತದೆ' ಎಂದು ದಲ್ಬೀರ್ ಹೇಳಿದ್ದಾರೆ.

ತಮ್ಮ ತಂದೆಯ ಜತೆಗೆ 1960ರ ದಶಕದಲ್ಲಿ ಇಲ್ಲಿಗೆ ಬಂದ ದಲ್ಬೀರ್‌ಗೆ ಆಗಿನ ಸರ್ಕಾರ ಜಮೀನು ನೀಡಿತ್ತು.

ನಾಲ್ವರು ರೈತರ ಹತ್ಯೆಯಾಗಿ ನಾಲ್ಕು ತಿಂಗಳು ಕಳೆದಿವೆ. ಆದರೆ, ರೈತರ ಮನದಲ್ಲಿ ಈ ನೆನಪು ಇನ್ನೂ ಹಸಿಯಾಗಿಯೇ ಇದೆ. ಈ ಘಟನೆಯಿಂದ ಆಗಿರುವ ಹಾನಿ ತಗ್ಗಿಸಲು ಬಿಜೆಪಿ ಭಾರಿ ಪ್ರಯತ್ನ ನಡೆಸಿದೆ. ಹಾಗಿದ್ದರೂ ರೈತರ ಹತ್ಯೆಯು ಚುನಾವಣೆಯಲ್ಲಿ ಬಿಜೆಪಿಗೆ ಪ್ರತಿಕೂಲವಾಗಿ ಪರಿಣಮಿಸಬಹುದು. ಈ ಪ್ರದೇಶದಲ್ಲಿ ಇದೇ 23ರಂದು ಮತದಾನ ನಡೆಯಲಿದೆ.

ರೈತರ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರಿಗೆ ಜಾಮೀನು ಸಿಕ್ಕಿದೆ. ರೈತರ ಆಕ್ರೋಶ ತೀವ್ರವಾಗಿರುವ ಸಂದರ್ಭದಲ್ಲಿಯೇ ಅವರು ಜಾಮೀನು ಪಡೆದಿರುವುದು ಕೂಡ ಬಿಜೆಪಿಗೆ ಪ್ರತಿಕೂಲ ಆಗಬಹುದು. ಈ ಬಗ್ಗೆ ದಲ್ಬೀರ್ ಅವರನ್ನು ಪ್ರಶ್ನಿಸಿದಾಗ 'ಆಶಿಶ್ ಮಿಶ್ರಾ ಅವರು ಕೇಂದ್ರ ಸಚಿವರ ಮಗ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು' ಎಂದು ಹೇಳಿದ್ದಾರೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲ ಎಂಟು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಕುರ್ಮಿ, ಬ್ರಾಹ್ಮಣ ಮತ್ತು ಸಿಖ್ ಸಮುದಾಯದ ಬೆಂಬಲ ಬಿಜೆಪಿಗೆ ಲಭಿಸಿದ್ದು ಈ ಗೆಲುವಿಗೆ ಕಾರಣ. ಮುಸ್ಲಿಮರು ಮತ್ತು ಪರಿಶಿಷ್ಟ ಜಾತಿಯ ಜನರು ಕೆಲವು ಕ್ಷೇತ್ರಗಳಲ್ಲಿ ನಿರ್ಣಾಯಕ. ಈ ಬಾರಿ ಪರಿಸ್ಥಿತಿ ಬದಲಾಗಿದೆ. ರೈತರು ನಡೆಸಿದ ಒಂದು ವರ್ಷದ ಪ್ರತಿಭಟನೆ, ರೈತರ ಹತ್ಯೆ, ಕಬ್ಬು ಬಾಕಿ ಪಾವತಿ ಆಗದೇ ಇರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

'ರೈತರಿಗೆ ಬಿಜೆಪಿಯ ಮೇಲೆ ಸಿಟ್ಟು ಇದೆ. ರೈತರ ಹತ್ಯೆ ಪ್ರಕರಣದಲ್ಲಿ ಮಗ ಮುಖ್ಯ ಆರೋಪಿ ಆಗಿದ್ದರೂ ಸಚಿವ ಅಜಯ್ ಮಿಶ್ರಾ ಅವರನ್ನು ಪ್ರಧಾನಿ ವಜಾ ಮಾಡಲಿಲ್ಲ. ಅವರು ಈಗಲೂ ಸಚಿವರಾಗಿಯೇ ಇದ್ದಾರೆ. ಅವರು ಸಚಿವರಾಗಿ ಮುಂದುವರಿಯುತ್ತಿರುವುದು ನಮಗೆ ಅವಮಾನ' ಎಂದು ದಿಲ್‌ಬಾಗ್ ಸಿಂಗ್ ಹೇಳುತ್ತಾರೆ. ಅವರು ಭಾರತೀಯ ಕಿಸಾನ್ ಯೂನಿಯನ್‌ನ ಸ್ಥಳೀಯ ಮುಖಂಡ.

ರೈತ ಮುನ್ನಾಲಾಲ್ ಕೂಡ ಇದೇ ಭಾವನೆ ವ್ಯಕ್ತಪಡಿಸಿದರು. 'ಜಾತಿ ಲೆಕ್ಕಾಚಾರವನ್ನು ಮರೆತುಬಿಡಿ. ಈ ಬಾರಿ, ರೈತರ ಅಸ್ತಿತ್ವವೇ ಮುಖ್ಯ ವಿಚಾರ' ಎಂದು ಮುನ್ನಾಲಾಲ್ ಹೇಳಿದರು. ಅವರು ಕುರ್ಮಿ ಸಮುದಾಯದವರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಲಖನೌದಲ್ಲಿ ಶುಕ್ರವಾರ ಚುನಾವಣಾ ಪ್ರಚಾರ ನಡೆಸಿದರು ಪಿಟಿಐ ಚಿತ್ರ

ಜಾತಿ ಲೆಕ್ಕಾಚಾರವೂ ಇದೆ

ಜಾತಿ ಮತ್ತು ರೈತರ ಬೆಂಬಲವೇ ಈ ಬಾರಿಯ ಫಲಿತಾಂಶವನ್ನು ನಿರ್ಧರಿಸಲಿದೆ. ಮತದಾನದ ದಿನಾಂಕ ಹತ್ತಿರವಾಗುತ್ತಿದ್ದಂತೆಯೇ ಎಲ್ಲವನ್ನೂ ಬದಿಗೆ ಸರಿಸಿ ಜಾತಿಯೇ ಮುನ್ನೆಲೆಗೆ ಬರುತ್ತದೆ. ನಿಜವಾದ ಸಮಸ್ಯೆಗಳು ಚರ್ಚೆಯೇ ಆಗುವುದಿಲ್ಲ ಎಂಬುದು ತಿಕುನಿಯಾದಲ್ಲಿ ಅಂಗಡಿ ಇಟ್ಟಿರುವ ಸತೀಶ್ ಕುಮಾರ್ ಮಾತು.

2017ರ ವಿಧಾನಸಭೆ ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ಸತೀಶ್ ಅವರು ಬಿಜೆಪಿಯನ್ನು ಬೆಂಬಲಿಸಿದ್ದಾರೆ. ಈ ಬಾರಿ ರೈತರ ಆಕ್ರೋಶವು ಬಿಜೆಪಿಯ ಗೆಲುವಿನ ಸಾಧ್ಯತೆಯನ್ನು ಕಡಿಮೆಯಾಗಿಸಿದೆ ಎಂಬುದು ಸತೀಶ್ ಅವರ ಅಭಿಪ್ರಾಯ.

ಮುಸ್ಲಿಮರು ಸಮಾಜವಾದಿ ಪಕ್ಷದ ಪರವಾಗಿ ಧ್ರುವೀಕರಣಗೊಂಡಿದ್ದಾರೆ. 'ಮುಸ್ಲಿಮರು ಸಮಾಜವಾದಿ ಪಕ್ಷದ ಜತೆಗೆ ಗುರುತಿಸಿಕೊಂಡಿದ್ದಾರೆ' ಎಂದು ರಜಬ್ ಖಾನ್ ಹೇಳಿದ್ದಾರೆ.

ಅಜಯ್ ಮಿಶ್ರಾ ಅವರನ್ನು ಕೈಬಿಟ್ಟಿಲ್ಲ ಎಂಬ ಕಾರಣಕ್ಕೆ ಬ್ರಾಹ್ಮಣ ಸಮುದಾಯದ ಮತಗಳು ಬಿಜೆಪಿಯತ್ತ ವಾಲಬಹುದು. ಒಂದೆರಡು ಕ್ಷೇತ್ರಗಳಲ್ಲಿ ಬ್ರಾಹ್ಮಣ ಸಮುದಾಯದ ಮತಗಳು ಗಣನೀಯ ಸಂಖ್ಯೆಯಲ್ಲಿ ಇವೆ. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿ ಸಚಿವರಾಗಿರುವ ಜಿತಿನ್ ಪ್ರಸಾದ ಅವರು ಬ್ರಾಹ್ಮಣ ಸಮುದಾಯದಲ್ಲಿ ಪ್ರಚಾರ ಮಾಡುತ್ತಿದ್ದಾರೆ. ತಮ್ಮ ಪ್ರತಿಷ್ಠೆಯ ವಿಚಾರ ಇದು ಎಂದು ಬ್ರಾಹ್ಮಣರ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಜಾತಿ ಲೆಕ್ಕಾಚಾರ ಏನೇ ಇದ್ದರೂ ತಮ್ಮ ಧ್ವನಿ ಗಟ್ಟಿಯಾಗಿ ಕೇಳಿಸಬೇಕು ಎಂಬ ದೃಢ ನಿರ್ಧಾರದಲ್ಲಿ ರೈತರು ಇದ್ದಾರೆ. ಹಾಗಾಗಿ, 2017ರ ಫಲಿತಾಂಶದ ಪುನರಾವರ್ತನೆ ಬಿಜೆಪಿಗೆ ಸುಲಭವಲ್ಲ.

ತೇಜಸ್ವಿ–ಅಖಿಲೇಶ್ ಹೆದ್ದಾರಿ ಜಟಾಪಟಿ

ಪ್ರಜಾವಾಣಿ ವಾರ್ತೆ

ಲಖನೌ / ಬೆಂಗಳೂರು: ಉತ್ತರ ಪ್ರದೇಶದ ಎಕ್ಸ್‌ಪ್ರೆಸ್ ಹೆದ್ದಾರಿಗಳು ಈಗ ಚುನಾವಣಾ ಪ್ರಚಾರದ ಸರಕುಗಳಾಗಿವೆ. ಬಿಜೆಪಿಯ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ ಮತ್ತು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ನಡುವೆ ಟ್ವೀಟ್ ಸಮರಕ್ಕೂ ಈ ಎಕ್ಸ್‌ಪ್ರೆಸ್ ಹೆದ್ದಾರಿಗಳು ಕಾರಣವಾಗಿವೆ.

ಉತ್ತರ ಪ್ರದೇಶದಲ್ಲಿ ಬಿಜೆಪಿ ಪರವಾಗಿ ಪ್ರಚಾರ ನಡೆಸುತ್ತಿರುವ ತೇಜಸ್ವಿ ಸೂರ್ಯ ಅವರು ಗುರುವಾರ ಒಂದು ಟ್ವೀಟ್ ಮಾಡಿದ್ದರು. ಆಗ್ರಾದಿಂದ ಕನೌಜ್‌ಗೆ ಪ್ರಯಾಣಿಸುವಾಗ ಅವರು 'ಆಗ್ರಾ–ಲಖನೌ' ಎಕ್ಸ್‌ಪ್ರೆಸ್ ಹೆದ್ದಾರಿಯ ವಿಡಿಯೊವನ್ನು ಟ್ವೀಟ್ ಮಾಡಿದ್ದರು. ಟ್ವೀಟ್‌ನಲ್ಲಿ, 'ಆಗ್ರಾದಿಂದ ಕನೌಜ್‌ಗೆ ಯೋಗಿಜೀ ಅವರ ಎಕ್ಸ್‌ಪ್ರೆಸ್‌ವೇಯಲ್ಲಿ ಪ್ರಯಾಣ. ಯೋಗಿಜೀ ಅವರು ಉಪಯೋಗಿ' ಎಂದು ಹೇಳಿದ್ದರು.

ಈ ಟ್ವೀಟ್‌ಗೆ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದ ಅಖಿಲೇಶ್ ಯಾದವ್ ಅವರು, 'ಈ ಎಕ್ಸ್‌ಪ್ರೆಸ್‌ವೇಯನ್ನು ನಿರ್ಮಿಸಿದವರು ನಾವು' ಎಂದು ಹೇಳಿದ್ದರು.

ತೇಜಸ್ವಿ ಸೂರ್ಯ ಅವರ ಟ್ವೀಟ್ ಅನ್ನು ರಿಟ್ವೀಟ್ ಮಾಡಿದ್ದ ಅಖಿಲೇಶ್ ಯಾದವ್ ಅವರು, 'ದೀಪದ ಕೆಳಗೆ ಸದಾ ಕತ್ತಲು ಇರುತ್ತದೆ ಎಂಬುದನ್ನು ಕೇಳಿದ್ದೆ. ಬಿಜೆಪಿಯವರ ಅಜ್ಞಾನವನ್ನು ನೋಡಿ, ಈ ಮಾತನ್ನು 'ಸೂರ್ಯನ ಕೆಳಗೆ ಕತ್ತಲು ಇರುತ್ತದೆ' ಎಂದು ಹೇಳಬಹುದು. ಈ ಆಗ್ರಾ–ಲಖನೌ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ಹೊಗಳುತ್ತಿರುವ ಸೂರ್ಯ ಅವರು ತಿಳಿದುಕೊಳ್ಳಬೇಕಿರುವುದು ಏನೆಂದರೆ, ಇದನ್ನು ಅವರ 'ಅನುಪಯೋಗಿ' ಅವರು ನಿರ್ಮಿಸಿಲ್ಲ. ಬದಲಿಗೆ ಅದನ್ನು ನಿರ್ಮಿಸಿದವರು ನಾವು' ಎಂದು ಹೇಳಿದ್ದಾರೆ.

302 ಕಿ.ಮೀ. ಉದ್ದದ ಆಗ್ರಾ–ಲಖನೌ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ಅಖಿಲೇಶ್ ಯಾದವ್ ಅವರ ಸರ್ಕಾರದ ಅವಧಿಯಲ್ಲಿ ನಿರ್ಮಿಸಲಾಗಿತ್ತು. 2016ರ ಅಂತ್ಯದಲ್ಲಿ ಅಖಿಲೇಶ್ ಯಾದವ್ ಅವರು ಈ ಹೆದ್ದಾರಿಯನ್ನು ಉದ್ಘಾಟಿಸಿದ್ದರು. 2017ರ ಫೆಬ್ರುವರಿಯಲ್ಲಿ ಇದು ಸಾರ್ವಜನಿಕರ ಬಳಕೆಗೆ ಮುಕ್ತವಾಗಿತ್ತು.

ಈ ಬಗ್ಗೆ ಸಾರ್ವಜನಿಕರು ಸಹ ತೇಜಸ್ವಿ ಸೂರ್ಯ ಅವರ ಟ್ವೀಟ್ ಅನ್ನು ಟೀಕಿಸಿದ್ದಾರೆ. 'ಮಾನ್ಯ ದಕ್ಷಿಣ ಬೆಂಗಳೂರಿನ ಸಂಸದರೇ. ಈ ಹೆದ್ದಾರಿಯನ್ನು ತೆರಿಗೆದಾರರ ಹಣದಿಂದ ನಿರ್ಮಿಸಲಾಗಿದೆ. ಅದನ್ನು ಬಳಸಲು ಮತ್ತೆ ತೆರಿಗೆ ನೀಡಬೇಕು. ಹೀಗಿದ್ದಾಗ ಅದು ಯೋಗಿಜೀ ಅವರ ಎಕ್ಸ್‌ಪ್ರೆಸ್ ಹೆದ್ದಾರಿ ಆಗಿದ್ದು ಹೇಗೆ' ಎಂದು ಸೌರವ್ ಎಂಬುವವರು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ. 'ಕರ್ನಾಟಕದ ಹೆದ್ದಾರಿಗಳನ್ನು ಈ ರೀತಿ ಯಾವಾಗ ಮಾಡುತ್ತೀರಿ' ಎಂದು ಸಂತೋಷ್ ಪಿ.ಕೆ. ಎಂಬುವವರು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಅಖಿಲೇಶ್ ಅವರ ಪ್ರತಿಕ್ರಿಯೆಗೆ ತೇಜಸ್ವಿ ಸೂರ್ಯ ಸಹ ಮತ್ತೊಂದು ಟ್ವೀಟ್‌ನಲ್ಲಿ ತೀಕ್ಷ್ಣವಾಗಿ ತಿರುಗೇಟು ನೀಡಿದ್ದಾರೆ. 'ಕಾವ್ಯಾತ್ಮಕವಾಗಿ ಬರೆಯುವ ಬದಲು, ಉತ್ತರ ಪ್ರದೇಶದ ಜನರಿಗಾಗಿ ನೀವು ಮತ್ತಷ್ಟು ಎಕ್ಸ್‌ಪ್ರೆಸ್ ಹೆದ್ದಾರಿಗಳನ್ನು ನಿರ್ಮಿಸಬೇಕಿತ್ತು' ಎಂದು ಅವರು ಟ್ವೀಟ್ ಮಾಡಿದ್ದಾರೆ. ಜತೆಗೆ 1947ರಿಂದ 2017ರವರೆಗೆ ರಾಜ್ಯದಲ್ಲಿ ಒಟ್ಟು 467 ಕಿ.ಮೀ. ಉದ್ದದ ಹೆದ್ದಾರಿಗಳನ್ನು ನಿರ್ಮಿಸಲಾಗಿತ್ತು. 2017ರಿಂದ ಯೋಗಿ ಅವರ ಸರ್ಕಾರದಲ್ಲಿ 1,321 ಕಿ.ಮೀ. ಉದ್ದದ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ ಎಂಬ ವಿವರ ಇರುವ ಬಿಜೆಪಿ ಪ್ರಚಾರದ ಪೋಸ್ಟರ್ ಅನ್ನೂ ಅವರು ಟ್ವೀಟ್ ಮಾಡಿದ್ದಾರೆ.

ಬಿಜೆಪಿಯ ನಾಯಕರು ಆಗ್ರಾ–ಲಖನೌ ಎಕ್ಸ್‌ಪ್ರೆಸ್ ಹೆದ್ದಾರಿಯನ್ನೂ ಮತ್ತೆ ಉದ್ಘಾಟಿಸಿಬಿಡುತ್ತಾರೋ ಎಂಬುದನ್ನು ಕಾದು ನೋಡಬೇಕು

ಅಖಿಲೇಶ್ ಯಾದವ್
ಸಮಾಜವಾದಿ ಪಕ್ಷದ ಮುಖ್ಯಸ್ಥ

2012–17ರಲ್ಲಿ ಅನುಪಯೋಗಿ ಆಗಿದ್ದವರು ಯಾರು ಎಂಬುದು ಜನರಿಗೆ ಗೊತ್ತಿದೆ. ಜನರು ಇದೇ ಹೆದ್ದಾರಿಯಲ್ಲಿ ನಿಮ್ಮನ್ನು ಮತ್ತೆ ಮನೆಗೆ ಕಳಿಸಲಿದ್ದಾರೆ

ತೇಜಸ್ವಿ ಸೂರ್ಯ
ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ

38 ಜನರಿಗೆ ಗಲ್ಲು, 11 ಜನರಿಗೆ ಜೀವಾವಧಿ

ಒಂದನೇ ಪುಟದಿಂದ

ಭಾರತೀಯ ದಂಡ ಸಂಹಿತೆಯ 302ನೇ ಸೆಕ್ಷನ್ (ಕೊಲೆ), 120ಬಿ (ಕ್ರಿಮಿನಲ್ ಸಂಚು) ಮತ್ತು ಕಾನೂನುಬಾಹಿರ ಚಟುವಟಿಕೆಗಳ ನಿಷೇಧ ಕಾಯ್ದೆಯ (ಯುಎಪಿಎ) ವಿವಿಧ ಸೆಕ್ಷನ್‌ಗಳ ಅಡಿ 38 ಜನರು ತಪ್ಪಿತಸ್ಥರು ಎಂದು 7,015 ಪುಟಗಳ ಸುದೀರ್ಘ ತೀರ್ಪಿನಲ್ಲಿ ವಿವರಿಸಲಾಗಿದೆ. 11 ಜನರನ್ನು ಯುಎಪಿಎ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿ ತಪ್ಪಿತಸ್ಥರು ಎಂದು ಘೋಷಿಸಲಾಗಿದೆ.

ಶಿಕ್ಷೆಗೆ ಗುರಿಯಾಗಿರುವ 49ರಲ್ಲಿ 48 ಜನರಿಗೆ ತಲಾ ₹2.85 ಲಕ್ಷ ಮತ್ತು ಒಬ್ಬನಿಗೆ ₹2.88 ಲಕ್ಷ ದಂಡ ವಿಧಿಸಲಾಗಿದೆ. ಕೃತ್ಯದಲ್ಲಿ ಮೃತಪಟ್ಟಿದ್ದವರ ಕುಟುಂಬಕ್ಕೆ ತಲಾ ₹1 ಲಕ್ಷ, ಗಂಭೀರವಾಗಿ ಗಾಯಗೊಂಡಿದ್ದವರಿಗೆ ತಲಾ ₹50,000 ಮತ್ತು ಸ್ವಲ್ಪ ಪ್ರಮಾಣದ ಗಾಯಗಳಾಗಿದ್ದವರಿಗೆ ತಲಾ ₹25,000 ಪರಿಹಾರ ನೀಡುವಂತೆ ನ್ಯಾಯಾಲಯವು ಆದೇಶಿಸಿದೆ. ತಪ್ಪಿತಸ್ಥರು ನೀಡುವ ದಂಡದ ಮೊತ್ತದಿಂದಲೇ ಸಂತ್ರಸ್ತರಿಗೆ ಪರಿಹಾರ ನೀಡಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ಶಿಕ್ಷೆಯ ಆದೇಶ ಹೊರಬಿದ್ದ ತಕ್ಷಣ ಗುಜರಾತ್ ಪೊಲೀಸರು ಅದನ್ನು ಸಂಭ್ರಮಿಸಿದ್ದಾರೆ. 'ಇದು ಐತಿಹಾಸಿಕ ತೀರ್ಪು' ಎಂದು ಗುಜರಾತ್ ಪೊಲೀಸರು ಟ್ವೀಟ್ ಮಾಡಿದ್ದಾರೆ.



ಗೋದ್ರಾ ಸೇಡಿಗಾಗಿ ಸ್ಫೋಟ ಆರೋಪ ಪಟ್ಟಿಯಲ್ಲಿ ವಿವರ

'2002ರಲ್ಲಿ ಗುಜರಾತ್‌ನಲ್ಲಿ ಗೋದ್ರಾ ಮತ್ತು ಗೋದ್ರೋತ್ತರ ಹತ್ಯಾಖಾಂಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರನ್ನು ಕೊಲ್ಲಲಾಗಿತ್ತು ಎಂದು ಇಂಡಿಯನ್ ಮುಜಾಹಿದೀನ್ ಉಗ್ರರು ನಂಬಿದ್ದರು. ಇದಕ್ಕೆ ಸೇಡು ತೀರಿಸಿಕೊಳ್ಳುವ ಸಲುವಾಗಿ ಸ್ಫೋಟಕ್ಕೆ ಸಂಚು ರೂಪಿಸಿದ್ದರು' ಎಂದು ಅಹಮದಾಬಾದ್ ಅಪರಾಧ ವಿಭಾಗದ ಪೊಲೀಸರು ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದ್ದರು.

'ಈ ಸ್ಫೋಟಗಳನ್ನು ನಡೆಸಲು ಉಗ್ರರಿಗೆ ಕೇರಳದ ವಾಗಾಮಾನ್ ಅರಣ್ಯ ಪ್ರದೇಶದಲ್ಲಿ 2007ರಲ್ಲಿ ತರಬೇತಿ ನೀಡಲಾಗಿತ್ತು. 2008ರಲ್ಲಿ ಗುಜರಾತ್‌ನ ಹಾಲೋಲ್–ಪಾವಗಡ್ ಅರಣ್ಯ ಪ್ರದೇಶದಲ್ಲೂ ತರಬೇತಿ ಶಿಬಿರ ನಡೆಸಲಾಗಿತ್ತು. ಈ ಉಗ್ರರು ಗುಜರಾತ್‌ನ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ, ಸಚಿವ ಅಮಿತ್ ಶಾ, ಬಿಜೆಪಿ ಶಾಸಕ ಪ್ರದೀಪ್ ಸಿನ್ಹಾ ಜಡೇಜಾ, ಈಗಿನ ಕೇಂದ್ರ ಸಚಿವ ಪ್ರದೀಪ್ ಪರಮಾರ್ ಅವರನ್ನು ಕೊಲ್ಲಲು ಸಂಚು ರೂಪಿಸಿದ್ದರು' ಎಂದು ಆರೋಪಪಟ್ಟಿಯಲ್ಲಿ ವಿವರಿಸಲಾಗಿತ್ತು.

2008ರ ಜುಲೈ 26ರಂದು ಅಹಮದಾಬಾದ್‌ನ 20 ಕಡೆ ಬಾಂಬ್‌ಗಳನ್ನು ಸ್ಫೋಟಿಸಲಾಗಿತ್ತು. ಅಹಮದಾಬಾದ್ ಮುನ್ಸಿಪಲ್ ಆಸ್ಪತ್ರೆ, ಸರ್ಕಾರಿ ಬಸ್‌ಗಳು, ಕಾರ್ ಪಾರ್ಕಿಂಗ್ ಮತ್ತು ಸೈಕಲ್ ನಿಲ್ದಾಣಗಳಲ್ಲಿ ಬಾಂಬ್ ಸ್ಫೋಟಿಸಲಾಗಿತ್ತು. ಈ ಘಟನೆಗಳಲ್ಲಿ 56 ಜನರು ಮೃತಪಟ್ಟಿದ್ದರು. ಈ ಸಂಬಂಧ ಒಟ್ಟು 20 ಎಫ್‌ಐಆರ್‌ಗಳು ದಾಖಲಾಗಿದ್ದವು.

ಕೆಲವೇ ದಿನಗಳ ಅಂತರದಲ್ಲಿ ಸೂರತ್ ನಗರದ ವಿವಿಧೆಡೆ 29 ಸಜೀವ ಬಾಂಬ್‌ಗಳನ್ನು ಪೊಲೀಸರು ಪತ್ತೆ ಮಾಡಿದ್ದರು. ಈ ಸಂಬಂಧ 15 ಎಫ್‌ಐಆರ್‌ಗಳು ದಾಖಲಾಗಿದ್ದವು. ಎಲ್ಲಾ ಎಫ್‌ಐಆರ್‌ಗಳನ್ನು ಒಟ್ಟುಗೂಡಿಸಿ, ಪ್ರಕರಣದ ತನಿಖೆಯನ್ನು ಅಹಮದಾಬಾದ್ ಅಪರಾಧ ವಿಭಾಗದ ಪೊಲೀಸರಿಗೆ ಒಪ್ಪಿಸಲಾಗಿತ್ತು.

'ನಾನು ಮಧುರ ಭಯೋತ್ಪಾದಕ'

ಚಂಡೀಗಡ (ಪಿಟಿಐ): 'ನಾನು ಜಗತ್ತಿನ ಅತ್ಯಂತ ಮಧುರ ಭಯೋತ್ಪಾದಕ ಇರಬೇಕು' ಎಂದು ದೆಹಲಿ ಮುಖ್ಯಮಂತ್ರಿ ಮತ್ತು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಎಎಪಿಯ ಮಾಜಿ ನಾಯಕ ಕುಮಾರ್ ವಿಶ್ವಾಸ್ ಅವರು ಪಂಜಾಬ್ ಪ್ರತ್ಯೇಕವಾದಿಗಳ ಜತೆ ಕೇಜ್ರಿವಾಲ್ ಸಂಪರ್ಕದಲ್ಲಿದ್ದಾರೆ ಎಂದು ಆರೋಪಿಸಿದ್ದರು. ಇದರ ಬೆನ್ನಲ್ಲೇ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಕೇಜ್ರಿವಾಲ್ ಅವರು ಭಯೋತ್ಪಾದಕ ಎಂದು ಟೀಕಿಸಿದ್ದವು. ಇದಕ್ಕೆ ಕೇಜ್ರಿವಾಲ್ ಅವರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ.

'ಬಹುಶಃ ಶಾಲೆ, ಆಸ್ಪತ್ರೆ, ರಸ್ತೆಗಳನ್ನು ನಿರ್ಮಿಸುವ ಮತ್ತು ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವ, ವೃದ್ಧರನ್ನು ತೀರ್ಥಯಾತ್ರೆಗೆ ಕಳುಹಿಸುವ ಜಗತ್ತಿನ ಏಕೈಕ ಮತ್ತು ಅತ್ಯಂತ ಮಧುರವಾದ ಭಯೋತ್ಪಾದಕ ನಾನಾಗಿರಬೇಕು. ಇಂತಹ ಭಯೋತ್ಪಾದಕ ಈವರೆಗೆ ಹುಟ್ಟೇ ಇರಲಿಲ್ಲ' ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಕೇಜ್ರಿವಾಲ್ ಚುನಾವಣೆಗಾಗಿ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುತ್ತಿದ್ದಾರೆ ಎನ್ನಲಾಗಿದೆ. ಪ್ರಧಾನಿ ಅವರು ಕೇಜ್ರಿವಾಲ್ ವಿರುದ್ಧ ತನಿಖೆಗೆ ಆದೇಶಿಸಬೇಕು

ಚರಣ್‌ಜಿತ್ ಸಿಂಗ್ ಚನ್ನಿ
ಪಂಜಾಬ್ ಮುಖ್ಯಮಂತ್ರಿ

ಬಲಿಷ್ಠ ಸರ್ಕಾರ ಬೇಕಿದೆ: ವರುಣ್

ಪ್ರಜಾವಾಣಿ ವಾರ್ತೆ

ನವದೆಹಲಿ: ಎಬಿಜಿ ಶಿಪ್‌ಯಾರ್ಡ್‌ ₹23,000 ಕೋಟಿ ವಂಚನೆ ಪ್ರಕರಣದ ಸಂಬಂಧ ಕೇಂದ್ರ ಸರ್ಕಾರವನ್ನು ಬಿಜೆಪಿ ಸಂಸದ ವರುಣ್ ಗಾಂಧಿ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ.

'ವಿಜಯ್ ಮಲ್ಯ ₹9,000 ಕೋಟಿ, ನೀರವ್ ಮೋದಿ ಮತ್ತು ₹14,000 ಕೋಟಿ ಮತ್ತು ರಿಷಿ ಅಗರ್ವಾಲ್ ₹23,000 ಕೋಟಿ. ಈಗ ದೇಶದಲ್ಲಿ ಪ್ರತಿದಿನ 14 ಮಂದಿ ಸಾಲದ ಹೊರೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಈ ಧನಪಿಶಾಚಿಗಳು ಮಾತ್ರ ಲೂಟಿ ಹೊಡೆಯುತ್ತಿದ್ದಾರೆ' ಎಂದು ವರುಣ್ ಟ್ವೀಟ್ ಮಾಡಿದ್ದಾರೆ.

'ಈ ಮಹಾ ಭ್ರಷ್ಟ ವ್ಯವಸ್ಥೆಯ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು, ಬಲಿಷ್ಠವಾದ ಸರ್ಕಾರದ ಅವಶ್ಯಕತೆ ಇದೆ' ಎಂದು ಅವರು ಹೇಳಿದ್ದಾರೆ.

ಬಹಿರಂಗ ಪ್ರಚಾರ ಅಂತ್ಯ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ ಮೂರನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರ ಶುಕ್ರವಾರ ಅಂತ್ಯವಾಗಿದೆ. ಹಾಗೆಯೇ, ಪಂಜಾಬ್‌ನಲ್ಲಿಯೂ ಬಹಿರಂಗ ಪ್ರಚಾರ ಕೊನೆಗೊಂಡಿದೆ. ಎರಡೂ ರಾಜ್ಯಗಳಲ್ಲಿ ಭಾನುವಾರ ಮತದಾನ ನಡೆಯಲಿದೆ.

ಉತ್ತರ ಪ್ರದೇಶದ 16 ಜಿಲ್ಲೆಗಳ 59 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಒಟ್ಟು 627 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ. ಪಂಜಾಬ್‌ನ ಎಲ್ಲ 117 ಕ್ಷೇತ್ರಗಳಲ್ಲಿ ಒಂದೇ ಹಂತದಲ್ಲಿ ಮತದಾನ ಆಗಲಿದೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಸ್ಪರ್ಧಿಸಿರುವ ಕರ್ಹಾಲ್ ಕ್ಷೇತ್ರದಲ್ಲಿ ಈ ಹಂತದಲ್ಲಿ ಮತದಾನ ಆಗಲಿದೆ. ಕೇಂದ್ರ ಸಚಿವ ಎಸ್.ಪಿ. ಸಿಂಗ್ ಅವರು ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

ಬಹಿರಂಗ ಪ್ರಚಾರದ ಕೊನೆಯ ದಿನ ವಿವಿಧ ಪಕ್ಷಗಳು ನಾಯಕರು ಎರಡೂ ರಾಜ್ಯಗಳಲ್ಲಿ ಪ್ರಚಾರ ನಡೆಸಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಉತ್ತರ ಪ್ರದೇಶದ ಕಾನ್ಪುರ, ಕಲ್ಪಿ, ಜಲೌನ್, ಹಮೀರ್‌ಪುರಗಳಲ್ಲಿ ಪ್ರಚಾರ ಮಾಡಿದರು. ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಜಲೌನ್ ಮತ್ತು ಔರೈಯಾದಲ್ಲಿ ಮತ ಯಾಚನೆ ಮಾಡಿದರು.

ಪಂಜಾಬ್‌ನಲ್ಲಿ ಒಟ್ಟು 1,304 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ನುಡಿ–ಕಿಡಿ



ಕ್ರೀಸ್‌ನಲ್ಲೇ ಆಡಬೇಕು ಎಂದು ಇಬ್ಬರು ಬ್ಯಾಟ್ಸ್‌ಮನ್‌ಗಳು ಗುದ್ದಾಡುತ್ತಿದ್ದಾರೆ. ನಾನ್‌ಸ್ಟ್ರೈಕ್‌ನಲ್ಲಿ ಇರಲು ಇಬ್ಬರೂ ಸಿದ್ಧರಿಲ್ಲ. ಹೀಗಿದ್ದಾಗ ಇಬ್ಬರೂ ಔಟ್ ಆಗುವುದು ಖಚಿತ. ಪಂಜಾಬ್ ಕಾಂಗ್ರೆಸ್‌ನ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಪಂಜಾಬ್‌ನಂತಹ ಗಡಿ ರಾಜ್ಯದಲ್ಲಿ ಆಡಳಿತ ನಡೆಸುವ ಸಾಮರ್ಥ್ಯ ಇರುವುದು ಕಾಂಗ್ರೆಸ್‌ಗೆ ಮಾತ್ರ. ಯಾವ ವಿರೋಧ ಪಕ್ಷವೂ ಈಗ ಬಹುಮತ ಪಡೆಯುವ ಸ್ಥಿತಿಯಲ್ಲಿ ಇಲ್ಲ. ಜನರು ವಿರೋಧ ಪಕ್ಷಗಳಿಗೆ ಮತ ನೀಡಿ ತಮ್ಮ ಮತವನ್ನು ವ್ಯರ್ಥ ಮಾಡಿಕೊಳ್ಳುವುದಿಲ್ಲ

ಸಚಿನ್ ಪೈಲಟ್, ಕಾಂಗ್ರೆಸ್ ನಾಯಕ

ಬಿಜೆಪಿ ಸರ್ಕಾರವು ಕಳೆದ ಐದು ವರ್ಷಗಳಲ್ಲಿ ಮಣಿಪುರವನ್ನು ಅಭಿವೃದ್ಧಿಯತ್ತ ಒಯ್ದಿದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ಮಾದಕವಸ್ತು ಜಾಲವನ್ನು ನಿಯಂತ್ರಣಕ್ಕೆ ತರಲಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆಯಲ್ಲಿ ಸ್ಥಿರತೆ ತರಲಾಗಿದೆ

ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

2002ರಿಂದ 2017ರವರೆಗೆ ಮಣಿಪುರದಲ್ಲಿ ಕಾಂಗ್ರೆಸ್ ರಾಜಕೀಯ ಸ್ಥಿರತೆಯನ್ನು ಸಾಧಿಸಿತ್ತು. ಇಲ್ಲಿ ಅಸ್ಥಿರತೆ ಆರಂಭವಾದದ್ದೇ 2017ರಲ್ಲಿ. ಕಾಂಗ್ರೆಸ್‌ಗೆ ಬಹುಮತ ಬಂದರೂ, ಸರ್ಕಾರ ರಚಿಸಿದ್ದು ಬಿಜೆಪಿ. ಐದೂ ವರ್ಷ ಕೇವಲ ಪಕ್ಷಾಂತರ ನಡೆಯುತ್ತಿತ್ತು

ಜೈರಾಮ್ ರಮೇಶ್, ಕಾಂಗ್ರೆಸ್ ಹಿರಿಯ ನಾಯಕ

ತಾವು ಪ್ರಧಾನಿಯಾಗಿದ್ದಾಗ ಹಣದುಬ್ಬರವು ಸತತ 22 ತಿಂಗಳು ಎರಡಂಕಿಗಿಂತಲೂ ಹೆಚ್ಚು ಇದ್ದುದ್ದನ್ನು ಮನಮೋಹನ್ ಸಿಂಗ್ ಮರೆತಿದ್ದಾರೆ. ಈಗಿನ ಹಣದುಬ್ಬರದ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ಬಗ್ಗೆ ನನಗೆ ತುಂಬಾ ಗೌರವವಿತ್ತು. ಅವರಿಂದ ನಾನು ಇದನ್ನು ನಿರೀಕ್ಷಿಸಿರಲಿಲ್ಲ. ನನಗೆ ನೋವಾಗಿದೆ

ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ

ರಾಜಭವನಕ್ಕೆ ಬಿಜೆಪಿ ನಾಯಕರ ನೇಮಕ ಪ್ರಶ್ನಿಸಿದ್ದ ಐಎಎಸ್ ಅಧಿಕಾರಿ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಪಿಣರಾಯಿ ವಿಜಯನ್

ತಿರುವನಂತಪುರ: ಕೇರಳದಲ್ಲಿ ಬಿಜೆಪಿ ಪದಾಧಿಕಾರಿಯೊಬ್ಬರನ್ನು ರಾಜ್ಯಪಾಲರ ಆಪ್ತ ಸಹಾಯಕರನ್ನಾಗಿ ನೇಮಕ ಮಾಡಿರುವುದನ್ನು ಆಕ್ಷೇಪಿಸಿ ಪತ್ರ ಬರೆದಿದ್ದ ಐಎಎಸ್ ಅಧಿಕಾರಿಯನ್ನು ವರ್ಗಾವಣೆ ಮಾಡಲಾಗಿದೆ. ಇದರ ಹಿಂದೆಯೇ ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಬೇಕಿದ್ದ ಭಾಷಣಕ್ಕೆ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರು ಅಂಕಿತ ಹಾಕಿದ್ದಾರೆ.

ಬಿಜೆಪಿ ನಾಯಕರ ನೇಮಕವನ್ನು ಆಕ್ಷೇಪಿಸಿ ಸಾಮಾನ್ಯ ಆಡಳಿತ ವಿಭಾಗದ ಪ್ರಧಾನ ಕಾರ್ಯದರ್ಶಿ ಕೆ.ಆರ್. ಜ್ಯೋತಿಲಾಲ್ ಅವರು ರಾಜಭವನಕ್ಕೆ ಪತ್ರ ಬರೆದಿದ್ದರು. ಈ ಅಧಿಕಾರಿ ವಿರುದ್ಧ ಕ್ರಮ ಜರುಗಿಸಬೇಕು ಎಂದು ರಾಜ್ಯಪಾಲರು ಪಟ್ಟುಹಿಡಿದಿದ್ದಾರೆ ಎಂಬ ವರದಿಗಳಿದ್ದವು.

ಈ ಬೆಳವಣಿಗೆ ಕುರಿತಂತೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೂ ರಾಜ್ಯಪಾಲರ ಜೊತೆಗೆ ಚರ್ಚಿಸಿದ್ದರು. ಇದರ ಬೆನ್ನಲ್ಲೇ ಜ್ಯೋತಿಲಾಲ್ ಅವರನ್ನು ಹುದ್ದೆಯಿಂದ ತೆರವುಗೊಳಿಸಲಾಗಿದೆ. ಇದಾದ ಬಳಿಕವೇ ಜಂಟಿ ಅಧಿವೇಶನ ಉದ್ದೇಶಿಸಿ ತಾವು ಮಾಡಬೇಕಿದ್ದ ಭಾಷಣಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಯಾಗಿದ್ದ ಹರಿ ಎಸ್.ಕರ್ತಾ ಅವರನ್ನು ರಾಜ್ಯಪಾಲರ ಆಪ್ತ ಸಹಾಯಕನಾಗಿ ನೇಮಿಸಲಾಗಿತ್ತು. ಇದಕ್ಕೆ ಆಕ್ಷೇಪಿಸಿ ಐಎಎಸ್ ಅಧಿಕಾರಿ ಪತ್ರ ಬರೆದಿದ್ದರು. ರಾಜಕೀಯ ಹಿನ್ನೆಲೆಯವರನ್ನು ರಾಜಭವನದಲ್ಲಿ ಸಿಬ್ಬಂದಿಯಾಗಿ ನೇಮಿಸಿರುವ ನಿದರ್ಶನ ಇಲ್ಲ ಎಂದಿದ್ದರು.

ಇದಕ್ಕೆ ಕಟುವಾಗಿ ಪ್ರತಿಕ್ರಿಯಿಸಿದ್ದ ರಾಜ್ಯಪಾಲರು, 'ಮಂತ್ರಿಗಳು ರಾಜಕೀಯ ಹಿನ್ನೆಲೆಯವರನ್ನೇ ಆಪ್ತ ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳಲಿದ್ದು, ಅವರಿಗೆ ಜೀವನಪೂರ್ತಿ ಪಿಂಚಣಿ ನೀಡುವುದಿಲ್ಲವೇ' ಎಂದು ಪ್ರಶ್ನಿಸಿದ್ದರು.

ಈ ನಡುವೆ, ವಿರೋಧಪಕ್ಷದ ನಾಯಕ ವಿ.ಡಿ.ಸತೀಶನ್ ಅವರು, ರಾಜ್ಯಪಾಲರು ಮತ್ತು ಸರ್ಕಾರದ ನಡುವೆ ಇರುವ ಆತ್ಮೀಯ ಒಡನಾಟವನ್ನು ಮುಚ್ಚಿಡಲು ಇದೊಂದು ಗಿಮಿಕ್ ಅಷ್ಟೇ ಎಂದು ವ್ಯಂಗ್ಯವಾಡಿದ್ದರು. ವಿಶ್ವವಿದ್ಯಾಲಯಗಳಿಗೆ ನೇಮಕ ಕುರಿತಂತೆ ರಾಜ್ಯಪಾಲರು ಸರ್ಕಾರದ ರಾಜಕೀಯ ಒತ್ತಡಕ್ಕೆ ಮಣಿದಿದ್ದಾರೆ. ಇದಕ್ಕೆ ಪ್ರತಿಯಾಗಿ ರಾಜಕೀಯ ಹಿನ್ನೆಲೆಯವರನ್ನು ರಾಜಭವನಕ್ಕೆ ನೇಮಿಸಲಾಗಿದೆ ಎಂದು ಹೇಳಿದ್ದಾರೆ.

'ಸಂಘದ ಏಜೆಂಟ್, ವಾಪಸು ಹೋಗಿ'


ಆರೀಫ್ ಮೊಹಮ್ಮದ್

ತಿರುವನಂತಪುರಂ (ಪಿಟಿಐ): ನಿರೀಕ್ಷೆಯಂತೆಯೇ ಕೇರಳ ವಿಧಾನಸಭೆ ಅಧಿವೇಶನದ ಮೊದಲ ದಿನ ಗೊಂದಲದ ಸ್ಥಿತಿ ಮೂಡಿದ್ದು, ರಾಜ್ಯಪಾಲರದ ಭಾಷಣದ ವೇಳೆ ಪ್ರತಿಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಿದರು.

'ವಾಪಸು ಹೋಗಿ' ಎಂದು ಘೋಷಣೆ ಕೂಗಿದ ವಿರೋಧಪಕ್ಷಗಳ ಸದಸ್ಯರು, ರಾಜ್ಯಪಾಲರ ಭಾಷಣವನ್ನು ಬಹಿಷ್ಕರಿಸಿ, ಬಳಿಕ ಸದನದ ಹೊರಗಡೆ ಧರಣಿ ನಡೆಸಿದರು. ರಾಜ್ಯಪಾಲರು ಸದನ ಪ್ರವೇಶಿಸುತ್ತಿದ್ದಂತೆಯೇ ಧಿಕ್ಕಾರದ ಘೋಷಣೆ ಕೂಗಿ, ಭಿತ್ತಿಪತ್ರ ಪ್ರದರ್ಶಿಸಿದರು.

ರಾಜ್ಯದಲ್ಲಿ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಅನಪೇಕ್ಷಿತ ಒಪ್ಪಂದವಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ರಕ್ಷಿಸುವ ಉದ್ದೇಶದಿಂದಲೇ ರಾಜ್ಯಪಾಲರು ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತರುವ ಸುಗ್ರೀವಾಜ್ಞೆಗೆ ಸಹಿ ಹಾಕಿದ್ದಾರೆ ಎಂದು ಟೀಕಿಸಿದರು.

ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಅವರು, ರಾಜ್ಯಪಾಲರು ಸಂಘ ಪರಿವಾರದ ಏಜೆಂಟರಂತೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕಲಾಪದ ವೇಳೆ ಸತೀಶನ್ ಮಾತನಾಡಲು ಯತ್ನಿಸಿದಾಗ ಇರಿಸುಮುರಿಸುಗೊಂಡಂತಿದ್ದ ರಾಜ್ಯಪಾಲರು, ಇದು, ಪ್ರತಿಭಟನೆಯ ಸಂದರ್ಭವಲ್ಲ. ಪ್ರತಿಪಕ್ಷ ನಾಯಕನ ಸ್ಥಾನ ಜವಾಬ್ದಾರಿಯುಳ್ಳದ್ದಾಗಿದೆ ಎಂದು ಹೇಳಿದರು.

ತಮ್ಮ ಭಾಷಣದಲ್ಲಿ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರು, ರಾಜ್ಯ ಸರ್ಕಾರದ ಸಾಧನೆಗಳನ್ನು ಪಟ್ಟಿ ಮಾಡಿದರು. ಕೇಂದ್ರವು ರಾಜ್ಯಗಳಿಗೆ ಸಂಪನ್ಮೂಲ ಹಂಚಿಕೆಯನ್ನು ಕಡಿಮೆ ಮಾಡಿದ್ದು, ಆರ್ಥಿಕ ದುಸ್ಥಿತಿಗೆ ತಳ್ಳುತ್ತಿದೆ ಎಂದು ಟೀಕಿಸಿದರು.

ಒಕ್ಕೂಟ ವ್ಯವಸ್ಥೆಯಲ್ಲಿ ಸಹಕಾರದ ಮಹತ್ವವನ್ನು ಒತ್ತಿ ಹೇಳಿದ ಅವರು, ಇತ್ತೀಚಿನ ದಿನಗಳಲ್ಲಿ ಕೇಂದ್ರ ರೂಪಿಸಿದ ಶಾಸನಗಳು ರಾಜ್ಯಗಳು ಚರ್ಚೆಯಾಗುತ್ತವೆ. ಶಾಸನ ರೂಪಿಸುವ ಮೊದಲು ರಾಜ್ಯಗಳ ಜೊತೆಗೆ ಪರಿಣಾಮಕಾರಿ ಚರ್ಚೆಯೂ ಆಗುತ್ತಿಲ್ಲ ಎಂದರು.

ಇದು, ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು. ನಮ್ಮ ಸರ್ಕಾರ ಇದರ ವಿರುದ್ಧವಾಗಿದ್ದು, ಇಂಥ ವ್ಯವಸ್ಥೆ ಮುಂದುವರಿಯಬಾರದು ಎಂಬುದಾಗಿ ಬಯಸುತ್ತದೆ ಎಂದು ಹೇಳಿದರು.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2021-22 **NOTICE FOR PRIVATE SALE OF GOLD** 17/02/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 11-03-2022 as shown below:

Br. Thirupalya: Near Electronic City, Hebgodi Post, Tirupalya, Bangalore Urban, Karnataka, 560099, Ph no. 080-27833335 :- 21126400022859,21126400028138,21126400028146,21126400022875,21126400031033,21126400031124,21126400021968,21126400030985,21126400022842,21126400023477,21126400027338,21126400030589,21126400030902,21126400023865,21126400030936,21126400030944,21126400030886,21126400022149,21126400015044,21126400024103,21126400030415,21126400030217,21126400030225,21126400032098,21126400030951,21126400031199,21126400030191,21126400030696,21126400030530,21126400022388,21126400028096,21126400025779,21126400030324,21126400031256,21126400031769,21126400023071,21126400030845,21126400028989,21126400024723. **Br. Thirumalasettyhalli: SY No.84, Thirumalasettyhalli Village, Samethanahalli P.O, Bangalore Rural, Karnataka- 560067, Ph No. 080 28549041 :-** 22626100009683,22626400013823,22626400025264,22626400021321,22626400025025,22626400021313,22626400024499,22626400024481,22626400005209,22626400022824,22626400016214,22626400020919,22626400015836,22626400019259,22626400017071,22626400015638,22626400020083,22626400024200,22626400015521,22626400017386,22626400012825,22626400012817,22626400017378,22626400013849,22626400022287,22626400023889,22626400020562,22626400003501,22626400016883,22626400016297,22626400018418,22626400024952,22626400013047,22626400014953,22626400016339,22626400014508,22626400011587,22626400017097,22626400025033,22626400025256,22626400016909,22626400003196,22626400006033,22626400016685,22626400021685,22626400007130,22626400013393,22626400017840,22626400016651,22626400023897,22626400024432,22626400024887,22626400013310,2626400020422,22626400020430.
Br. Taverekere: No.104/1, Ground Floor, Chocolate Factory Road, 1st Main, Taverekere, Bangalore Urban- 560 029 :- 16596100255784,16596100250082,16596100250256,16596100250470,16596100262707,16596100250876,16596100251239,16596100251395,16596100251502,16596100265932,16596100263267,16596100252013,16596100252286,16596100252542,16596100252872,16596100252922,16596100253573,16596100253649,16596100253631,16596100254027,16596100254001,16596100267375,16596100254175,16596100254266,16596100263762,16596100254357,16596100254373,16596100254431,16596100254506,16596100254514,16596100267557,16596100267565,16596100267607,16596100267664,16596100254902,16596100267839,16596100255263,16596100255123,16596100255156,16596100255180,16596400018379,16596100255297,16596100255438,16596400018361,16596400025655,16596400017710,16596400025408,16596400020664,16596400018155,16596400025689,16596400026109,16596400026133,16596400018445,16596400026364,16596400026455,16596400018403,16596400018494,16596400021001,16596400026893, [illegible]
Br. Visweswaraya Layout: Site No.2, 4th Block, Visweswaraya Layout, Manganahalli, Ullal Upanagara P O, Bangalore, Karnataka- 560110 :- [illegible]
Br.Channapatna: Anugraha Towers, 8th Cross, B M Road, Kuvempunagar, Channapatna, Ramanagara- 562 160, Ph no. 080-27251885:- [illegible]
Br. Chambanahalli: Sy no 82,Next to ISME College, Sarjapura Road Chambenahlli., Taluk Anekal, Dommasandra Post, Bangalore- 562 125, Ph no. 080 22712227 :- [illegible]

Bangalore 17-02-2022 Vice President & Zonal Head

ಫ್ಯಾಷನ್

ಅಚ್ಚುಮೆಚ್ಚು 'ಶರ್ಟ್ ಡ್ರೆಸ್'

ಮನಸ್ವಿ

ಒಂದು ಕಾಲದಲ್ಲಿ 'ಶರ್ಟ್' ಹುಡುಗರ ದಿರಿಸಾಗಿತ್ತು. ಈಗ ಕಾಲ ಬದಲಾಗಿದೆ. ಶರ್ಟ್‌ನಂತಿರುವ ಬಗೆ ಬಗೆ ವಿನ್ಯಾಸದ ಉಡುಪುಗಳತ್ತ ಹೆಣ್ಣುಮಕ್ಕಳೂ ಆಕರ್ಷಿತರಾಗುತ್ತಿದ್ದಾರೆ. ವಿಶೇಷವಾಗಿ ಮಿಲೇನಿಯಲ್ ಹುಡುಗಿಯರು ನವನವೀನ ವಿನ್ಯಾಸದ ಶರ್ಟ್ ಡ್ರೆಸ್‌ಗಳನ್ನು ಇಷ್ಟಪಟ್ಟು ಧರಿಸುತ್ತಿದ್ದಾರೆ. ಫ್ಯಾಷನ್ ವಿನ್ಯಾಸಕರೂ ಇಂತಹ ಉಡುಪುಗಳ ವಿನ್ಯಾಸಕ್ಕೆ ಹೆಚ್ಚು ಪ್ರಾಮುಖ್ಯ ನೀಡುತ್ತಿದ್ದಾರೆ. ಜೀನ್ಸ್, ಲೆಗ್ಗಿಂಗ್ಸ್, ಜೆಗ್ಗಿಂಗ್ಸ್‌ನಂತಹ ಉಡುಪುಗಳಿಗೆ 'ಮ್ಯಾಚ್' ಆಗುವ ಈ ಉಡುಪುಗಳು ಎಲ್ಲಾ ಕಾಲದಲ್ಲೂ ಧರಿಸಲು ಸೂಕ್ತ ಎನ್ನುವಂತಿವೆ. ಕಾಲರ್, ಮುಂದಿನಿಂದ ಬಟನ್, ತುಂಬು ತೋಳಿನ ವಿನ್ಯಾಸ ಹೊಂದಿರುವ ಈ ಡ್ರೆಸ್‌ಗಳನ್ನು ಧರಿಸಿದಾಗ ಸ್ಟೈಲಿಷ್ ಆಗಿ ಕಾಣಿಸಬಹುದು. ಧರಿಸಲು ಸುಲಭವಾಗಿದ್ದು ಸರಳವಾಗಿ ಕಾಣುವ ಈ ಡ್ರೆಸ್‌ಗಳು ಹೆಚ್ಚು ಆರಾಮದಾಯಕ. ಅಲ್ಲದೇ ಬೇಸಿಗೆಯಲ್ಲಿ ಈ ಡ್ರೆಸ್‌ಗಳು ಹೆಚ್ಚು ಹೊಂದುತ್ತವೆ.

ಶಿಫಾನ್ ಸ್ಲೀವ್‌ಲೆಸ್ ಶರ್ಟ್ ಡ್ರೆಸ್

ಇತ್ತೀಚಿನ ಟಾಪ್ ಟ್ರೆಂಡ್‌ಗಳಲ್ಲಿ ಶಿಫಾನ್ ಸ್ಲೀವ್‌ಲೆಸ್ ಶರ್ಟ್ ಡ್ರೆಸ್ ಕೂಡ ಒಂದು. ಇದು ಸಾಮಾನ್ಯವಾಗಿ ಮೊಣಕಾಲಿನವರೆಗೆ ಇದ್ದು ಇದರ ಮೇಲೆ ಸೊಂಟಕ್ಕೆ ಬೆಲ್ಟ್ ಧರಿಸಬಹುದು. ಈ ಡ್ರೆಸ್ ಧರಿಸಲು ಆರಾಮವಾಗಿದ್ದು ಹೆಚ್ಚು ಸ್ಟೈಲಿಶ್ ಆಗಿಯೂ ಕಾಣುತ್ತದೆ. ಇದರೊಂದಿಗೆ ಬಿಳಿ ಬಣ್ಣದ ಶೂ ಧರಿಸಿದರೆ ಸೂಕ್ತ. ಪಾರ್ಟಿ, ಔಟಿಂಗ್‌ನಂತಹ ಸಂದರ್ಭದಲ್ಲಿ ಧರಿಸಲು ಉತ್ತಮ.

ಸಾಲಿಡ್ ಫಾರ್ಮಲ್ ಶರ್ಟ್ ಡ್ರೆಸ್

ಸಾಲಿಡ್ ಫಾರ್ಮಲ್ ಶರ್ಟ್ ಡ್ರೆಸ್ ಅನ್ನು ಎಲ್ಲಾ ಕಾಲದಲ್ಲೂ ಧರಿಸಬಹುದು. ಈ ಡ್ರೆಸ್ ಕಚೇರಿಗೆ ಧರಿಸಲು ಸೂಕ್ತ ಎನ್ನಿಸುತ್ತದೆ. ತಿಳಿ ನೀಲಿ, ಬಿಳಿ, ತಿಳಿ ಗುಲಾಬಿ ಬಣ್ಣದ ಫಾರ್ಮಲ್ ಶರ್ಟ್ ಡ್ರೆಸ್ ಹೆಚ್ಚು ಒಪ್ಪುತ್ತದೆ. ಶರ್ಟ್ ಮೇಲೆ ಒಂದಿಷ್ಟು ಚಿತ್ತಾರಗಳಿದ್ದರೆ ಆಗ ಇನ್ನಷ್ಟು ಸುಂದರವಾಗಿ ಕಾಣಬಹುದು. ಮುಕ್ಕಾಲು ತೋಳಿನ ಈ ಶರ್ಟ್ ಅನ್ನು ಸಿಂಗಲ್ ಪೀಸ್ ಧರಿಸಬಹುದು.

ಪಾಪ್ಲಿನ್ ಕಾಷ್ಯುಯಲ್ ಶರ್ಟ್ ಡ್ರೆಸ್

ಬಜೆಟ್ ಫ್ರೆಂಡ್ಲಿ ಆಗಿರುವ ಈ ಶರ್ಟ್ ಡ್ರೆಸ್ ಹೆಚ್ಚಾಗಿ ನೀಲಿ ಹಾಗೂ ಬಿಳಿ ಬಣ್ಣದಲ್ಲಿರುತ್ತದೆ. ಧರಿಸಲು ಆರಾಮದಾಯಕ ಎನ್ನಿಸುವ ಪಾಪ್ಲಿನ್ ವಿನ್ಯಾಸದ ಡ್ರೆಸ್‌ಗೆ ಸೊಂಟದ ಬಳಿ ಇಲಾಸ್ಟಿಕ್ ಇದೆ. ಸಣ್ಣ ಕಾಲರ್ ವಿನ್ಯಾಸ ಹೊಂದಿರುವ ಈ ಶರ್ಟ್ ಮುಕ್ಕಾಲು ತೋಳಿನದ್ದಾಗಿರುತ್ತದೆ. ಇದನ್ನು ಸಿಂಗಲ್ ಡ್ರೆಸ್ ರೂಪದಲ್ಲೂ ಧರಿಸಬಹುದು. ಇದರಲ್ಲಿ ಉದ್ದ ತೋಳಿನ ವಿನ್ಯಾಸ ಡ್ರೆಸ್ ಕೂಡ ಧರಿಸಲು ಸೂಕ್ತ ಎನ್ನಿಸುತ್ತದೆ. ಇದನ್ನು ಷಾಪಿಂಗ್, ಸ್ನೇಹಿತರ ಕೂಟದಂತಹ ಸಂದರ್ಭದಲ್ಲಿ ಧರಿಸಲು ಸೂಕ್ತ ಎನ್ನಿಸುತ್ತದೆ.

ಎಂಬ್ರಾಯಿಡರಿ ರೌಂಡ್ ನೆಕ್ ಶರ್ಟ್

ಎಂಬ್ರಾಯಿಡರಿ ಚಿತ್ತಾರವಿರುವ ರೌಂಡ್ ನೆಕ್ ಶರ್ಟ್ ಮೊಣಕಾಲಿಗಿಂತಲೂ ಕೊಂಚ ಕೆಳಗಿನವರೆಗಿರುತ್ತದೆ. ತಿಳಿ ಬಣ್ಣದ ಬಟ್ಟೆಯ ಮೇಲೆ ತೆಳ್ಳನೆಯ ಗೆರೆಗಳನ್ನು ಹೊಂದಿರುವಂತಹ ಈ ಡ್ರೆಸ್ ಹೆಣ್ಣುಮಕ್ಕಳ ಅಂದ ಹೆಚ್ಚಿಸುವುದರಲ್ಲಿ ಸಂಶಯವಿಲ್ಲ.

ಫ್ಲೋರಲ್ ಮ್ಯಾಕ್ಸಿ ಶರ್ಟ್ ಡ್ರೆಸ್

ಫ್ಲೋರಲ್ (ಹೂವಿನ ಚಿತ್ತಾರ) ವಿನ್ಯಾಸ ಹೆಣ್ಣುಮಕ್ಕಳಿಗೆ ಅಚ್ಚುಮೆಚ್ಚು. ಈ ವಿನ್ಯಾಸದ ಸೀರೆ, ಡ್ರೆಸ್ ಎಲ್ಲವೂ ಹೆಣ್ಣುಮಕ್ಕಳಿಗೆ ಅಂದವಾಗಿಯೇ ಕಾಣಿಸುತ್ತದೆ. ಈ ವಿನ್ಯಾಸದ ಶರ್ಟ್ ರೂಪದ ಡ್ರೆಸ್ ಈಗ ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡುತ್ತಿದೆ. ಪಾರ್ಟಿ, ಕಚೇರಿ, ಷಾಪಿಂಗ್ ಹೀಗೆ ಎಲ್ಲಾ ಸಂದರ್ಭಕ್ಕೂ ಹೊಂದುವ ಈ ಡ್ರೆಸ್ ಗಾಢ ಬಣ್ಣದಲ್ಲಿ ಹೆಚ್ಚು ಅಂದವಾಗಿ ಕಾಣುತ್ತದೆ. ಫ್ಲೋರಲ್ ವಿನ್ಯಾಸದ ಶರ್ಟ್ ಡ್ರೆಸ್ ಶಾರ್ಟ್, ಲಾಂಗ್, ಮಿಡ್ಡಿ ಹೀಗೆ ಎಲ್ಲಾ ರೂಪದಲ್ಲೂ ಲಭ್ಯವಿದೆ. ಇದನ್ನು ಎಲ್ಲಾ ವಯೋಮಾನದವರು ತೊಡಬಹುದು.

ಪ್ಲಸ್ ಸೈಜ್ ಶರ್ಟ್ ಡ್ರೆಸ್

'ಶರ್ಟ್ ಡ್ರೆಸ್ ನಮಗೆ ಧರಿಸಲು ಸಾಧ್ಯವಿಲ್ಲ' ಎಂದು ಪ್ಲಸ್ ಸೈಜ್‌ನವರು ಬೇಸರಿಸುವ ಹಾಗಿಲ್ಲ. ಪ್ರಿಂಟ್ ಇರುವ ಮೊಣಕಾಲಿಗಿಂತ ಕೊಂಚ ಕೆಳಗಿನವರೆಗೆ ಬರುವ ಪ್ಲಸ್ ಸೈಜ್ ಶರ್ಟ್‌ಗಳನ್ನೂ ವಸ್ತ್ರ ವಿನ್ಯಾಸಕರು ವಿನ್ಯಾಸ ಮಾಡಿದ್ದಾರೆ. ಪ್ಲಸ್ ಸೈಜ್‌ನವರಿಗೆ ಇದು ಧರಿಸಲು ಸೂಕ್ತವಾಗಿದೆ. ದು ಆರಾಮದಾಯಕ ಉಡುಪಾಗಿದ್ದು ಅಂದವನ್ನೂ ಹೆಚ್ಚಿಸುತ್ತದೆ. ❖

ಅರೊಮಾ... ಆರಾಮ..!



ಸುಗಂಧ ದ್ರವ್ಯ/ತೈಲಗಳು ನಿಸರ್ಗದ ಅದ್ಭುತ ಕೊಡುಗೆಗಳು; ಅರೊಮಾ ಥೆರಪಿ ಒಂದು ಪರ್ಯಾಯ ಹಾಗೂ ಪೂರಕ ಚಿಕಿತ್ಸಾ ಪದ್ಧತಿ; ನೋವು ಮರೆಸುವ ಗುಣ ಈ ತೈಲಗಳಿಗಳಿಗಿವೆ. ಅಷ್ಟೇ ಅಲ್ಲ, ನೋವು ನಿವಾರಿಸುವ ಗೂಣವೂ ಇದೆ. ಅನೇಕ ಮಾನಸಿಕ ರೋಗಗಳಿಗೆ, ಖಿನ್ನತೆಗೆ ಅರೊಮಾ ಥೆರಪಿ ಉತ್ತಮ ಆಯ್ಕೆ. ಉತ್ಕೃಷ್ಟ ಜೀವನಶೈಲಿಗೂ ಇದು ಒಳ್ಳೆಯ ಆಯ್ಕೆ. ದಣಿದ ದೇಹ ಮನಸ್ಸಿಗೆ ಈ ಸುಗಂಧತೈಲಗಳ ಪರಿಮಳ ದಿವ್ಯೌಷಧ.

ಶರ್ಮಿಳಾ ಜೋಷಿ, ಅರೊಮಾ ಚಿಕಿತ್ಸಕರು

ಹರೀಶ್ ಬಿ. ಎಸ್.

ಪರಿಮಳ ಪಸರಿಸುವ ತೈಲಗಳಿಗೆ, ನೋವು ಮರೆಸುವ ಗುಣವಿದೆ. ಹೀಗೆ ಮನಸ್ಸನ್ನು ಉಲ್ಲಸಿತವಾಗಿಡುವ ಸುಗಂಧ ದ್ರವ್ಯ/ತೈಲಗಳ ಕುರಿತ ಮಾಹಿತಿ ಇಲ್ಲಿದೆ.

ಮೊಡವೆಯೇ ಚಿಂತೆ ಬಿಡಿ, ಲ್ಯಾವೆಂಡರ್ ತೈಲ ಬಳಸಿ; ತಲೆ ಹೊಟ್ಟೇ, ಟೀ ಟ್ರೀ ತೈಲವಿದೆ ನೋಡಿ; ಮೂಗು ಕಟ್ಟಿದೆಯೇ, ನೀಲಗಿರಿಯ ತೈಲ ಆದೀತು; ಮಲಗುವ ಕೋಣೆಯಲ್ಲಿ ಸೊಳ್ಳೆಗಳ ಕಾಟವೇ?, ಸಿಟ್ರೋನೆಲ್ಲಾದ ತೈಲ ಖಂಡಿತಾ ಉತ್ತಮ ಆಯ್ಕೆ; ಖಿನ್ನರಾಗಿರುವಿರಾ? ಚಿಂತಿಸದಿರಿ, ರೋಸ್ಮೆರಿಯ ಸುಗಂಧತೈಲವಿದೆ. ಸ್ನಾನದ ಮನೆಯಲ್ಲಿ ಪನ್ನೀರಿನ ತೈಲ, ಆಹಾ ಅದೇನು ಅದ್ಭುತ ಅನುಭವ...

ಹೌದು, ನಾನು ಹೇಳ ಹೊರಟಿರುವುದು ನೈಸರ್ಗಿಕ ಸುಗಂಧತೈಲಗಳ ಗುಣ-ವಿಶೇಷಗಳು ಹಾಗೂ ಅವುಗಳ ಬಳಕೆಯ ಕುರಿತಾಗಿ. ಒಂದು ಕಾಲದಲ್ಲಿ ರಾಣಿಯರಿಗಷ್ಟೇ ಸೀಮಿತವಾಗಿದ್ದವು, ಐಷಾರಾಮಿ ಬದುಕಿನ ಕುರುಹಾಗಿದ್ದವು, ಸಿರಿವಂತಿಕೆಯ ಪ್ರತೀಕಗಳಾಗಿದ್ದವು ಈ ಸುಗಂಧಿ ತೈಲಗಳು. ಅವುಗಳ ಘಮ ಅರಮನೆಗಳನ್ನು ದಾಟಿ ಸಾಮಾನ್ಯರ ಮನೆಗಳನ್ನು ಮುಟ್ಟುತ್ತಿರುವುದು ಉತ್ತಮ ಬೆಳವಣಿಗೆ. ಸೃಷ್ಟಿಯ ಅದ್ಭುತ ಕೊಡುಗೆಗಳಿವು.

ಬಳಸುವ ಬಗೆ-ಬಗೆಗೆ

ಸುಮ್ಮನೆ ಘಮಿಸಿದರೂ ಸಾಕು. ಲ್ಯಾವೆಂಡರಿನ ತೈಲ ಮನಸ್ಸನ್ನು ಶಾಂತಗೊಳಿಸಿ, ತಿಳಿಯಾಗಿಸಿ, ಮುದ ನೀಡಿ, ಸಮ್ಮೋಹಕ ಅನುಭವವನ್ನು ನೀಡಿ ಬಿಡುತ್ತದೆ. ಸುಖ ನಿದ್ರೆಗೂ ಸಹಕಾರಿ. ನೋಡಿ ಈ ಘಮಲಿನ ರಾಣಿ. ಲ್ಯಾವೆಂಡರ್ ಸಿಗದಿದ್ದರೂ ಚಿಂತೆ ಬೇಡ, ಶ್ರೀಗಂಧ, ಲಾವಂಚ ಅಥವಾ ಪಚೋಲಿಯ ಸುಗಂಧದೆಣ್ಣೆಯೂ ಆಗಬಹುದು.

ಎಷ್ಟು ಹೊತ್ತು ತೈಲದ ಬಾಟಲ್ ಹಿಡಿದು ಘಮಿಸುವುದು? ಆ ಕಷ್ಟ ಬಿಡಿ, ತೈಲದ ನಾಲ್ಕೈದು ಹನಿಗಳನ್ನು 'ಘಮ ಪ್ರಸರಕ'(ಡಿಫ್ಯೂಸರ್) ಅಥವಾ 'ಆವಿಕಾರಕ'ಕ್ಕೆ (ವೇಪರೈಸರ್) ಹಾಕಿ ಆರಾಮ ಕುರ್ಚಿಯಲ್ಲಿ ಕೂತು ಅರೆ ತಾಸು ಕಣ್ಣುಮುಚ್ಚಿ ಘಮವ ಆಘ್ರಾಣಿಸಿ ನೋಡಿ. ಮನಸ್ಸು ಅದೆಷ್ಟು ಹಗುರಗುರ.

ಹೇಗಿದ್ದರೂ ನೀವು ಆಗೊಮ್ಮೆ-ಈಗೊಮ್ಮೆ ಎಣ್ಣೆ ಸ್ನಾನ ಮಾಡುವಿರಿ. ಎಣ್ಣೆಯೊಂದಿಗೆ ಸುಗಂಧ ತೈಲ ಹನಿಗಳೂ ಸೇರಿದರೆ ಸ್ವರ್ಗಾನುಭವ. ಹರಳೆಣ್ಣೆಗೋ ಎಳ್ಳೆಣ್ಣೆಗೋ ಕೊಬ್ಬರಿಯ ಎಣ್ಣೆಗೋ ಜೊಜೋಬಾದ ತೈಲಕ್ಕೋ ಪಚೋಲಿ, ಲ್ಯಾವೆಂಡರ್, ಜಿರೇನಿಯಂ, ಗುಲಾಬಿ ಅಥವಾ ಅಪೂರ್ವಸಂಪಿಗೆ (ಯ್ಲಾಂಗ್ ಯ್ಲಾಂಗ್)ಯ ಸುಗಂಧತೈಲಗಳನ್ನು ಮಿತವಾಗಿ ಮಿಶ್ರಿಸಿ ಅರೆ ತಾಸು ಅಂಗಮರ್ದಿಸಿ ಅಭ್ಯಂಜನ ಮಾಡಿ ನೋಡಿ. ದೇಹವಷ್ಟೇ ಅಲ್ಲ, ಮನಸ್ಸೂ ಪ್ರಫುಲ್ಲ.

ತಲೆ ಕೂದಲಿನಲ್ಲಿ ಹೊಟ್ಟಿನ ಕಿರಿಕಿರಿಯಿದ್ದಲ್ಲಿ ಶಾಂಪೂ/ಕಂಡೀಷನರ್ ಜೊತೆ ರೋಸ್ಮೆರಿ/ಟೀ ಟ್ರೀ ತೈಲದ ಎರಡು-ಮೂರು ಹನಿ ಹಾಕಿ ತಲೆಗೂದಲಿಗೊಂದಷ್ಟು ಮಾಲೀಷ್ ಮಾಡುವುದು ಮರೆಯಬೇಡಿ.

ಸ್ನಾನದ ನಂತರ ಧ್ಯಾನಿಸುವಾಗ ಪರಿಮಳ ಸೂಸುವ ಮೇಣದಬತ್ತಿಯಿರಲಿ, ಪೂಜಿಸುವಾಗ ಕೋಣೆಯ ತುಂಬ ತುಳಸಿಯದ್ದೋ ಅಥವಾ ಸಿರಿಗಂಧದ್ದೋ ತೈಲದ ಘಮ ಅಲೆಅಲೆಯಾಗಿ ಬರುತಿರಲಿ. ದೈವ ಸಿಕ್ಕ ಅನುಭವ-ಅನುಭೂತಿ ನಿಮ್ಮದಾಗದಿದ್ದರೆ ಕೇಳಿ. ಪೂಜೆಯ ತರುವಾಯ ಚರ್ಮಕ್ಕೊಂದಿಷ್ಟು ಪೋಷಣೆ ಅಗತ್ಯವಾಗಿ ಮಾಡಿಕೊಳ್ಳುವಿರಿ. ಬಳಸುವ ಆರ್ದ್ರಕದ (ಮಾಯಿಶ್ಚರೈಸರ್) ಮುಲಾಮಿಗೆ ಒಂದು ಹನಿ ಲ್ಯಾವೆಂಡರ್ ತೈಲ ಹಾಕಿ ಬಿಡಿ, ನೀವು ಖಂಡಿತವಾಗಿ ಲ್ಯಾವೆಂಡರ್ ಬಳಸುವುದನ್ನು ಮುಂದುವರೆಸುವಿರಿ.

ಪಚೋಲಿ/ಲಾವಂಚ/ಶ್ರೀಗಂಧದ ಸುಗಂಧತೈಲದ ಹನಿಯೊಂದನ್ನು ನೀವು ಧರಿಸುವ ದಿರಿಸಿಗೆ (ಮೂಗಿಗೆ ಹತ್ತಿರವಿರುವ ಬಟ್ಟೆಯ ಭಾಗ ಕೊರಳ ಪಟ್ಟಿಗೆ) ಹಾಕಿ ನೋಡಿ, ಬಟ್ಟೆ ಮಾಸಬಹುದು. ಘಮ ಮೂರ್ನಾಲ್ಕು ದಿನ ಮಾಸಲಾರದು.

ಪೆಪ್ಪರ್ಮಿಂಟ್, ಸ್ಪಿಯರ್ಮಿಂಟ್, ಕಿತ್ತಳೆ, ರೋಸ್ಮೆರಿ ಹಾಗೂ ನಿಂಬೆಯ ಸುಗಂಧ ತೈಲಗಳು ಆಲಸ್ಯ ದೂರಮಾಡುತ್ತವೆ; ಚಕ್ಕೆ ತೈಲ ಆಘ್ರಾಣಿಸಿದರೆ ಚೈತನ್ಯ ವೃದ್ಧಿಸುವುದು; ನಿಂಬೆ ಹಾಗೂ ಕಾಡುಕಿತ್ತಳೆಯ ತೈಲಗಳು ಮನಸ್ಥಿತಿಯ ಔನ್ನತ್ಯಕ್ಕೆ ಉತ್ತಮ; ಫ್ರಾಂಕಿನ್ಸೆನ್ ತೈಲ ನರವ್ಯೂಹದ ಸಮಸ್ಥಿತಿಯಲ್ಲಿಡುತ್ತದೆ; ದುಃಖಿತರಾಗಿದ್ದರೆ ಲ್ಯಾವೆಂಡರಿನ ಸುಗಂಧದೆಣ್ಣೆ, ಉದ್ವೇಗಕ್ಕೆ ಒಳಗಾಗಿದ್ದರೆ ಪನ್ನೀರ ಪತ್ರೆಯ (ಜಿರೇನಿಯಂ) ತೈಲ; ಮನಸ್ಸು ದಣಿದಿದ್ದರೆ ಕಾಳುಮೆಣಸಿನ ತೈಲ; ಪ್ರಣಯಕ್ಕೆ ಗುಂಡುಮಲ್ಲಿಗೆಯ ತೈಲ; ಪ್ರೇರಣೆ ಬೇಕೆನಿಸಿದರೆ ತುಳಸಿಯ ಎಣ್ಣೆಯ ಸುವಾಸನೆಯನ್ನು ತುಸು ಹೊತ್ತು ಅನುಭವಿಸಿದರೆ ಸಾಕು... ಹೀಗೆ ಒಂದೊಂದು ಭಾವನೆಗೆ ಒಂದೊಂದು ಸುಗಂಧದೆಣ್ಣೆ.

ಬಳಸುವ/ಕೊಳ್ಳುವ ಮೊದಲು

ಮೈಕೈಗೆ ಸುಗಂಧತೈಲ ಹಚ್ಚುವ ಮೊದಲು ಅವುಗಳನ್ನು ಜಜೊಬಾ ಅಥವಾ ಕೊಬ್ಬರಿ ಎಣ್ಣೆ ಅಥವಾ ಎಳ್ಳೆಣ್ಣೆಯೊಡನೆ ಮಿಶ್ರ ಮಾಡಬೇಕು. ಚರ್ಮಕ್ಕೆ ಬಳಸುವ ಮೊದಲು ರೂಪಾಯಿ ನಾಣ್ಯದಷ್ಟು ಜಾಗದಲ್ಲಿ ಹಚ್ಚಿ ನೋಡಿ. ಯಾವುದೇ ಅಡ್ಡಪರಿಣಾಮ ಆಗುವುದಿಲ್ಲವೆಂಬುದನ್ನು ಖಾತ್ರಿ ಮಾಡಿಕೊಂಡ ನಂತರವೇ ಮುಂದುವರೆಯಿರಿ. ನೆನಪಿರಲಿ; ಯಾವ ಕಾರಣಕ್ಕೂ ಈ ತೈಲಗಳನ್ನು ಬಾಯಿಯ ಮೂಲಕ ಹೊಟ್ಟೆಗೆ ತೆಗೆದುಕೊಳ್ಳುವಂತಿಲ್ಲ.

ಯಾವಾಗಲೂ ವಿಶ್ವಾಸಾರ್ಹ ಮೂಲಗಳಿಂದ ಮಾತ್ರ ಶುದ್ಧ ತೈಲಗಳನ್ನೇ ಖರೀದಿಸಿ. ಬಹಳಷ್ಟು ಜನರು ತೈಲಗಳನ್ನು ಕೊಳ್ಳುವಾಗ ಮೋಸ ಹೋಗುತ್ತಾರೆ. ಮಾರಾಟ ಮಾಡುವ ಎಲ್ಲ ತೈಲಗಳನ್ನು ಪರಿಶುದ್ಧವೆಂದು ನಂಬುದೂ ಕಷ್ಟ. ಇವುಗಳ ಶುದ್ಧತೆಯ ಪರೀಕ್ಷೆ ಅಷ್ಟು ಸರಳವೂ ಅಲ್ಲ. ಬಹಳಷ್ಟು ಸುಗಂಧತೈಲಗಳ ಬೆಲೆ ಹೆಚ್ಚಿರುವುದರಿಂದ ಕಲಬೆರಕೆ ಮಾಡಿ ಮಾರುವವರೇ ಹೆಚ್ಚು. ವಯೋವೃದ್ಧರು, ಚಿಕ್ಕ ಮಕ್ಕಳು ಹಾಗೂ ಗರ್ಭಿಣಿಯರು ವೈದ್ಯರ ಸಲಹೆ ಪಡೆದೇ ಈ ಸುಗಂಧತೈಲಗಳನ್ನು ಬಳಸಬೇಕು.

ಕೆಲವು ಕೃಷಿಕರು ಈ ತೈಲಗಳನ್ನು ಉತ್ಪಾದಿಸುವ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇನ್ನೂ ಕೆಲವರು ಇಂಥ ಬೆಳೆಗಳನ್ನು ಬೆಳೆದು ಸ್ವಯಂ ಭಟ್ಟಿ ಇಳಿಸಿ ತೈಲಗಳನ್ನು ಉತ್ಪಾದಿಸುತ್ತಿದ್ದಾರೆ. ಅಂಥವರಿಂದ ನೇರವಾಗಿ ಖರೀದಿಸಿದರೆ ಕಲಬೆರಕೆಯ ಸಾಧ್ಯತೆ ಕಡಿಮೆ. ಪರ್ಯಾಯವಾಗಿ ಖರೀದಿಸಿದ ತೈಲಗಳ ಗುಣಮಟ್ಟವನ್ನು ಕೃಷಿ/ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲೋ ಅಥವಾ ಬೆಂಗಳೂರಿನ ಕೇಂದ್ರೀಯ ಔಷಧ ಹಾಗೂ ಸುಗಂಧದ್ರವ್ಯ ಬೆಳೆಗಳ ಸಂಶೋಧನಾ ಸಂಸ್ಥೆ, ಇಲ್ಲವೇ ಬೆಂಗಳೂರಿನ ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ಪರೀಕ್ಷಿಸಬಹುದಾಗಿದೆ. ಈ ತೈಲಗಳ ಬಳಕೆಯ ಬಗೆಗೆ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9480557634ಗೆ ಸಂಪರ್ಕಿಸಬಹುದು.

(ಲೇಖಕರು ಸಹಾಯಕ ಪ್ರಾಧ್ಯಾಪಕರು, ತೋಟಗಾರಿಕೆ ಮಹಾವಿದ್ಯಾಲಯ ಬೆಂಗಳೂರು)

ಚಿಕನ್, ಮಟನ್ ಖಾದ್ಯ-ವೈವಿಧ್ಯ

ನಳಪಾಕ

ಫಾತಿಮಾ ಇಶ್ರತ್

ಚಿಕನ್ ಮಸ್ತಾನಿ

ಬೇಕಾಗುವ ಸಾಮಗ್ರಿಗಳು: ಚಿಕನ್-1 ಕೆ.ಜಿ, ಎಣ್ಣೆ-3 ಚಮಚ, ತುಪ್ಪ-2 ಚಮಚ, ಈರುಳ್ಳಿ ಪೇಸ್ಟ್-4 ಮಧ್ಯಮ ಗಾತ್ರದ್ದು, ಶುಂಠಿ ಬೆಳ್ಳುಳ್ಳಿ ಪೇಸ್ಟ್-1 ಚಮಚ ತುಪ್ಪ ಹಾಕಿ, ಜೀರಿಗೆ ಹುಡಿ-1 ಚಮಚ, ಗರಂ ಮಸಾಲ-1 ಚಮಚ, ಮೆಣಸಿನ ಹುಡಿ-1 2 ಚಮಚ, ಅರಿಸಿನ ಹುಡಿ - 1 ಚಮಚ, ಕರಿಮೆಣಸಿನ ಹುಡಿ-1 ಚಮಚ, ಚಾಟ್ ಮಸಾಲ-1/2 ಚಮಚ, ಮೊಸರು-1 ಕಪ್, ಉಪ್ಪು-ರುಚಿಗೆ ತಕ್ಕಷ್ಟು, ಕೊತ್ತಂಬರಿ ಸೊಪ್ಪು-1 ಹಿಡಿ

ತಯಾರಿಸುವ ವಿಧಾನ: ಪಾನ್‌ಗೆ 3 ಚಮಚ ಎಣ್ಣೆ ಹಾಕಿ, ಅದಕ್ಕೆ 4 ಈರುಳ್ಳಿಯ ಪೇಸ್ಟ್, ಶುಂಠಿ ಬೆಳ್ಳುಳ್ಳಿ ಪೇಸ್ಟ್ 1 ಚಮಚ ಹಾಕಿ. ನಂತರ ಚಿಕನ್ ಹಾಕಿ ಅದಕ್ಕೆ ಒಂದೊಂದು ಚಮಚ ಜೀರಿಗೆ, ಮೆಣಸಿನ ಹುಡಿ, ಗರಂ ಮಸಾಲೆ, ಅರಿಸಿನ ಹುಡಿ, ಕಾಳುಮೆಣಸು ಹುಡಿ ಹಾಕಿ ಚೆನ್ನಾಗಿ ಕೈ ಆಡಿಸಿ. ಚಾಟ್ ಮಸಾಲ 1/2 ಚಮಚ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಸರಿಯಾಗಿ ಮಿಶ್ರಣ ಮಾಡಿ. ಅದಕ್ಕೆ1 ಕಪ್ ಗಟ್ಟಿ ಮೊಸರು ಸೇರಿಸಿ. ಚೆನ್ನಾಗಿ ಬೇಯಿಸಿ ಬೌಲ್‌ಗೆ ಹಾಕಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ.

ಮಟನ್ ರೋಸ್ಟ್ ಡ್ರೈ

ಬೇಕಾಗುವ ಸಾಮಗ್ರಿಗಳು: ಮಟನ್- 1 ಕೆಜಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್-2 ಟೇಬಲ್ ಚಮಚ, ಮೆಣಸಿನ ಹುಡಿ-1 ಟೀ ಚಮಚ, ಅರಿಸಿನ ಹುಡಿ-1/2 ಟೀ ಚಮಚ, ತೆಂಗಿನೆಣ್ಣೆ-3 ಟೇಬಲ್ ಚಮಚ, ಕರಿಬೇವು ಸೊಪ್ಪು-ಸ್ವಲ್ಪ, ತೆಂಗಿನಕಾಯಿ ಸಣ್ಣಗೆ ಹಚ್ಚಿದ್ದು-ಸ್ವಲ್ಪ (ಬೇಕಾದರೆ ಮಾತ್ರ), ಹಸಿಮೆಣಸಿನ ಕಾಯಿ-2, ಈರುಳ್ಳಿ -1, ಕೊತ್ತಂಬರಿ ಹುಡಿ-1 ಟೀ ಚಮಚ ಸೋಂಪು ಕಾಳು ಹುಡಿ-1/4 ಟೀ ಚಮಚ, ಗರಂ ಮಸಾಲ-1/2 ಟೀ ಚಮಚ, ಕಾಳುಮೆಣಸಿನ ಹುಡಿ-1/2 ಟೀ ಚಮಚ

ತಯಾರಿಸುವ ವಿಧಾನ: ಕುಕರ್‌ಗೆ 1 ಕೆಜಿ ಮಟನ್ ಹಾಕಿ ಅದಕ್ಕೆ 1 ಟೇಬಲ್ ಚಮಚ ಶುಂಠಿ ಬೆಳ್ಳುಳ್ಳಿ ಪೇಸ್ಟ್, ಉಪ್ಪು, ಮೆಣಸಿನ ಹುಡಿ 1/2 ಟೀ ಚಮಚ, ಅರಿಸಿನ 1/4 ಟೀ ಚಮಚ, 1/2 ಕಪ್ ನೀರು ಹಾಕಿ ಮುಚ್ಚಳ ಮುಚ್ಚಿ 4 ರಿಂದ 5 ವಿಶಲ್ ತೆಗೆಯಿರಿ. ನಂತರ ಒಂದು ಪಾನ್‌ಗೆ 2 ಟೇಬಲ್ ಚಮಚ ತೆಂಗಿನೆಣ್ಣೆ, 1ಟೇಬಲ್ ಚಮಚ ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಸ್ವಲ್ಪ ಕರಿಬೇವು ಸೊಪ್ಪು ಹಾಕಿ ಚೆನ್ನಾಗಿ ಕೈಯಾಡಿಸಿ. ಸಣ್ಣಗೆ ಹಚ್ಚಿದ ತೆಂಗಿನಕಾಯಿ ಹಾಕಿ ಕಂದು ಬಣ್ಣ ಆಗುವವರೆಗೂ ಹುರಿಯಿರಿ. 2 ಹಸಿಮೆಣಸಿನ ಕಾಯಿ ಉದ್ದಕ್ಕೆ ಸೀಳಿ ಹಾಕಿ. ನಂತರ ತೆಳ್ಳಗೆ ಹಚ್ಚಿದ ಈರುಳ್ಳಿಯನ್ನು ಸೇರಿಸಿ. ಅದಕ್ಕೆ 1/4 ಟೀ ಚಮಚ ಅರಿಸಿನ, 1/2 ಟೀ ಚಮಚ ಮೆಣಸಿನ ಹುಡಿ, 1 ಟೀ ಚಮಚ ಕೊತ್ತಂಬರಿ ಹುಡಿ, 1/4 ಟೀ ಚಮಚ ಸೋಂಪುಕಾಳು ಹುಡಿ ಸೇರಿಸಿ ಕೈಯಾಡಿಸಿ. ನಂತರ ಅದಕ್ಕೆ ಬೇಯಿಸಿದ ಮಟನ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಹಾಗೇ ತಲಾ 1/2 ಟೀ ಚಮಚ ಗರಂಮಸಾಲೆ, ಕಾಳುಮೆಣಸಿನ ಹುಡಿ ಸೇರಿಸಿ ಮಟನ್ ಕಂದು ಬಣ್ಣ ಆಗುವವರೆಗೂ ಕೈಯಾಡಿಸುತ್ತಾ, ಚೆನ್ನಾಗಿ ರೋಸ್ಟ್ ಮಾಡಿ. ಮತ್ತೊಂದು ಪಾನ್‌ಗೆ 1ಟೇಬಲ್ ಚಮಚ ತೆಂಗಿನೆಣ್ಣೆಗೆ ಸಣ್ಣಗೆ ಹಚ್ಚಿದ ತೆಂಗಿನಕಾಯಿ, ಕರೀಬೇವನ್ನು ಹಾಕಿ ಕಂದು ಬಣ್ಣಕ್ಕೆ ಹುರಿದು ಮಟನ್‌ಗೆ ಸೇರಿಸಿ. ಬರಿ ಮಟನ್ ಪೀಸ್ ತೆಗೆದು ನಿಮಗೆ ಬೇಕಾದಂತೆ ಅಲಂಕರಿಸಿ ಎಲ್ಲರಿಗೂ ಬಡಿಸಿ.

ಲಿಂಗತ್ವ ಅಲ್ಪಸಂಖ್ಯಾತರಿಗೆ ಆತ್ಮಗೌರವದ ಬದುಕು ಸಾಧ್ಯವೇ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

• ಬಿಇ ಓದಿರುವ 25ರ ಯುವಕ. ನನಗೆ ಬಾಲ್ಯದಿಂದಲೂ ಹುಡುಗಿಯಾಗುವ ಬಯಕೆಯಿದೆ. ಹುಡುಗಿಯರಂತೆ ಬಟ್ಟೆ ಧರಿಸುವ ಆಟವಾಡುವ ವರ್ತಿಸುವ ಬಯಕೆಯಾಗುತ್ತಿತ್ತು. ಈಗ ಆಕರ್ಷಕ ಹುಡುಗಿಯಾಗಿ ಪ್ರೀತಿಸುವ ಹುಡುಗನೊಬ್ಬನ ಜೊತೆ ಬಾಳುವ ಕನಸನ್ನು ಕಾಣುತ್ತಿರುತ್ತೇನೆ. ದೈಹಿಕವಾಗಿಯೂ ಹೆಣ್ಣಾಗಿ ಬದುಕಬೇಕೆಂದು ಬಯಕೆಯಾಗುತ್ತದೆ. ಆದರೆ ಸಮಾಜವನ್ನು ಎದುರಿಸುವ ಕುರಿತಾಗಿ ಭಯ ಹಿಂಜರಿಕೆಗಳಿವೆ. ನನ್ನೊಳಗೆ ಹೆಣ್ಣಿನ ಮಿದುಳು ಇರುವುದಕ್ಕೆ ಹೀಗಾಗುತ್ತಿದೆಯೇ? ನಾನು ಏನು ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ತಂದೆ–ತಾಯಂದಿರ ವಂಶವಾಹಿಗಳು ಸೇರುವಾಗ ಮಗುವಿನ ಲಿಂಗ ನಿರ್ಧಾರವಾಗಿ ಅದರಂತೆ ದೇಹರಚನೆಯಾಗುತ್ತದೆ. ಗಂಡು ಹೆಣ್ಣುಗಳ ಮಿದುಳಿನ ರಚನೆಯಲ್ಲಿ ವ್ಯತ್ಯಾಸವಿರುವುದಿಲ್ಲ. ಮಗು ಬೆಳೆಯುತ್ತಾ ಬಂದಂತೆ ಲೈಂಗಿಕತೆಯನ್ನು ಗುರುತಿಸಿಕೊಳ್ಳುತ್ತಾ ಹೋಗುತ್ತದೆ. ಕೆಲವೊಮ್ಮೆ ದೇಹರಚನೆ ಲೈಂಗಿಕತೆಗೆ ಹೊಂದಿಕೆಯಾಗದೆ ಹೋಗಬಹುದು. ಜನಸಂಖ್ಯೆಯ ಹೆಚ್ಚಿನ ಭಾಗ ಭಿನ್ನಲಿಂಗದವರೊಡನೆ ಲೈಂಗಿಕ ಆಕರ್ಷಣೆಗೆ ಒಳಗಾಗುತ್ತಾರೆ. ಕೆಲವರು ತಮ್ಮದೇ ಲಿಂಗದ ವ್ಯಕ್ತಿಗಳಿಗೆ ಆಕರ್ಷಿತರಾಗುತ್ತಾರೆ. ಇವರನ್ನು ಸಲಿಂಗಕಾಮಿಗಳೆಂದು ಹೇಳುತ್ತಾರೆ. ಇವರು ತಮ್ಮ ದೇಹರಚನೆಯನ್ನು ಒಪ್ಪಿಕೊಂಡಿರುತ್ತಾರೆ. ಇನ್ನೂ ಕೆಲವರಲ್ಲಿ ದೇಹರಚನೆಯನ್ನೇ ಬದಲಾಯಿಸಿಕೊಳ್ಳುವ ಬಯಕೆಯಾಗುತ್ತದೆ. ಇಂತವರನ್ನು ಲಿಂಗತ್ವ ಅಲ್ಪಸಂಖ್ಯಾತರು(ಟ್ರಾನ್ಸ್‌ಜೆಂಡರ್ಸ್) ಎನ್ನುತ್ತಾರೆ. ಇಂತಹ ಆಸಕ್ತಿ ಮೂಡುವುದಕ್ಕೆ ಸ್ಪಷ್ಟವಾದ ಕಾರಣಗಳು ತಿಳಿದಿಲ್ಲ. ಸಲಿಂಗಕಾಮಿಗಳ ಉಡುಪು ವರ್ತನೆಗಳು ಅವರ ಜನ್ಮಲಿಂಗದಂತೆಯೇ ಇರುವುದರಿಂದ ಇಂತವರು ಸಮಾಜದ ಕಣ್ಣಿಗೆ ಬೀಳುವುದಿಲ್ಲ. ಆದರೆ ಲಿಂಗತ್ವ ಅಲ್ಪಸಂಖ್ಯಾತರ ಉಡುಪು ವರ್ತನೆಗಳು ಜನ್ಮಲಿಂಗಕ್ಕೆ ವಿರುದ್ಧವಾಗಿರುವುದರಿಂದ ಸಾಮಾಜಿಕವಾಗಿ ಒಪ್ಪಿತವಾದುದಲ್ಲ ಎನ್ನುವುದು ಶತಶತಮಾನಗಳಿಂದ ಬಂದಿರುವ ನಂಬಿಕೆ. ಹಾಗಾಗಿ ಸಮಾಜ ಇವರನ್ನು ಕೀಳಾಗಿ ನೋಡುತ್ತಾ ಬಂದಿದೆ. ಆದರೆ ಕಳೆದ ಹಲವಾರು ದಶಕಗಳಿಂದ ಪ್ರಪಂಚದ ಎಲ್ಲಾ ಕಡೆಯಂತೆ ಭಾರತದಲ್ಲಿಯೂ ನಿಧಾನವಾಗಿಯಾದರೂ ಬದಲಾವಣೆಗಳಾಗುತ್ತಿವೆ. ನಿಮ್ಮ ಲೈಂಗಿಕತೆ ಬಹುಸಂಖ್ಯಾತರಿಗಿಂತ ಭಿನ್ನವಾಗಿರುವುದರಿಂದ ಭಯ ಹಿಂಜರಿಕೆಗಳು ಸಹಜವಾದದ್ದು. ಆದರೆ ಇದು ಕಾಯಿಲೆಯಲ್ಲ ಅಥವಾ ಕೊರತೆಯಲ್ಲ. ಮೊದಲು ಉದ್ಯೋಗವನ್ನು ಹುಡುಕಿಕೊಂಡು ಆರ್ಥಿಕವಾಗಿ ಸ್ವತಂತ್ರರಾಗಿ. ನಂತರ ನಿಮ್ಮ ಲೈಂಗಿಕತೆಯನ್ನು ಆಯ್ದುಕೊಳ್ಳಲು ಎರಡು ದಾರಿಗಳಿವೆ. 1. ದೇಹರಚನೆಯನ್ನು ಬದಲಾಯಿಸಿಕೊಳ್ಳದೆ ಉಡುಗೆ ಅಲಂಕಾರಗಳಿಂದ ಹೆಣ್ಣಾಗಿ ಬಾಳುವುದು. 2. ವೈದ್ಯರ ಸಹಾಯದಿಂದ ಶಸ್ತ್ರಚಿಕಿತ್ಸೆಯ ಮೂಲಕ ದೇಹರಚನೆಯನ್ನು ಬದಲಾಯಿಸಿಕೊಂಡು ಹೆಣ್ಣಾಗುವುದು. ಈ ಎರಡೂ ಆಯ್ಕೆಗಳಲ್ಲಿಯೂ ನಿಮಗೆ ಇಷ್ಟವಾಗುವ ಲೈಂಗಿಕ ಸಂಗಾತಿಯನ್ನು ಆಯ್ದುಕೊಳ್ಳಬಹುದು. ಆದರೆ ಒಬ್ಬರಿಗಿಂತ ಹೆಚ್ಚು ಜನರ ಜೊತೆ ಲೈಂಗಿಕ ಸಂಪರ್ಕ ಬೆಳೆಸುವಾಗ ಲೈಂಗಿಕ ಕಾಯಿಲೆಗಳ ಬಗೆಗೆ ಸಂಪೂರ್ಣ ಎಚ್ಚರವಹಿಸಬೇಕು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಇತರರ ತಪ್ಪುಗಳ ಬಗ್ಗೆ ಪೂರ್ವಗ್ರಹ ಹೊಂದುವುದು ನಾವು ಮಾಡುವ ಅತ್ಯಂತ ದೊಡ್ಡ ತಪ್ಪು.

-ಖಲೀಲ್ ಗಿಬ್ರಾನ್

ಸರ್ಕಾರಿ ನೌಕರರ ಬಳಿ ಬಿಪಿಎಲ್ ಕಾರ್ಡ್ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ

ಬಡತನ ರೇಖೆಯಿಂದ ಕೆಳಗಿರುವ (ಬಿಪಿಎಲ್) ಕುಟುಂಬಗಳನ್ನು ಗುರುತಿಸಿ, ಅವುಗಳಿಗೆ ರಿಯಾಯಿತಿ ದರದಲ್ಲಿ ಪಡಿತರ ಸಾಮಗ್ರಿಯನ್ನು ಸರ್ಕಾರ ಪೂರೈಸುತ್ತಿದೆ. ಬಡತನದ ಕಾರಣದಿಂದ ಯಾವುದೇ ಕುಟುಂಬ ಹಸಿವಿನಿಂದ ಬಳಲುವಂತಹ ಸ್ಥಿತಿ ತಲೆದೋರಬಾರದು ಎಂಬ ಸಾಮಾಜಿಕ ಕಳಕಳಿಯಿಂದ ಆರಂಭಿಸಲಾದ ಕಾರ್ಯಕ್ರಮವಿದು. ಇದರ ಪ್ರಯೋಜನವು ಅರ್ಹರಿಗೆ ಮಾತ್ರ ತಲುಪುವಂತೆ ನೋಡಿಕೊಳ್ಳುವುದು ಕೂಡ ಸರ್ಕಾರದ ಜವಾಬ್ದಾರಿ. ಆದರೆ, ರಾಜ್ಯದಲ್ಲಿ 21,232 ಸರ್ಕಾರಿ ನೌಕರರು ಹಾಗೂ ಅರೆ ಸರ್ಕಾರಿ ನೌಕರರು ಬಿಪಿಎಲ್ (ಅಂತ್ಯೋದಯ) ಪಡಿತರ ಚೀಟಿ ಹೊಂದಿರುವುದು ಅದರಲ್ಲೂ ಕೆಲವರು ಕಡುಬಡವರಿಗಷ್ಟೇ ನೀಡಲಾಗುವ ಅಂತ್ಯೋದಯ ಅನ್ನ ಯೋಜನೆಯ (ಎಎವೈ) ಪಡಿತರ ಚೀಟಿಯನ್ನು ಮಾಡಿಸಿಕೊಂಡಿರುವುದು ನಾಚಿಕೆಗೇಡಿನ ವಿಚಾರ. ಬಡವರಿಗೆ ಸರ್ಕಾರ ಕೊಡಮಾಡುವ ಸವಲತ್ತುಗಳನ್ನು ಕೈತುಂಬ ಸಂಬಳ ಪಡೆಯುವ ಇಂತಹ ನೌಕರರೇ ದುರ್ಬಳಕೆ ಮಾಡಿಕೊಳ್ಳುವುದು ಅಕ್ಷಮ್ಯ. ಸರ್ಕಾರಿ ನೌಕರ ಕುಟುಂಬಗಳು ಎಎವೈ ಅಥವಾ ಬಿಪಿಎಲ್ ಕಾರ್ಡ್ ಹೊಂದಿದ್ದರೆ ಅದನ್ನು ಹಿಂದಿರುಗಿಸುವಂತೆ ಆಹಾರ ಇಲಾಖೆ ಹಲವು ಬಾರಿ ಸೂಚನೆ ನೀಡಿತ್ತು. 'ಸರ್ಕಾರ ಹಾಗೂ ಸರ್ಕಾರದ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುವ ಯಾವುದೇ ನೌಕರ ಅಥವಾ ಅವರ ಅವಲಂಬಿತ ಕುಟುಂಬ ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿದ್ದರೆ, ಒಂದು ತಿಂಗಳಲ್ಲಿ ಅದನ್ನು ಆಹಾರ ಇಲಾಖೆಗೆ ಹಿಂದಿರುಗಿಸಿ ರದ್ದುಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಅಂಥವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಿ, ನಷ್ಟ ವಸೂಲಿ ಮಾಡಲಾಗುವುದು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು 2020ರ ಜೂನ್ 10ರಂದು ಸುತ್ತೋಲೆ ಹೊರಡಿಸಿದ್ದರು. ತಪ್ಪು ತಿದ್ದಿಕೊಳ್ಳಲು ಅವಕಾಶ ನೀಡಿದರೂ ಅದನ್ನು ಕೆಲವರು ಉಪೇಕ್ಷಿಸಿರುವುದು 'ಏನು ಮಾಡಿದರೂ ದಕ್ಕಿಸಿಕೊಳ್ಳಬಹುದು' ಎಂಬ ಭಂಡಧೈರ್ಯಕ್ಕೆ ನಿದರ್ಶನ. ಸರ್ಕಾರವು ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆಯ (ಎಚ್‌ಆರ್‌ಎಂಎಸ್) ದತ್ತಾಂಶಗಳ ಮೂಲಕ ಎಎವೈ ಮತ್ತು ಬಿಪಿಎಲ್ ಕಾರ್ಡ್‌ದಾರರ ಮಾಹಿತಿ ಪಡೆದು, ಅದನ್ನು ನ್ಯಾಷನಲ್ ಇನ್ಫರ್ಮ್ಯಾಟಿಕ್ ಸೆಂಟರ್ (ಎನ್‌ಐಸಿ) ಮೂಲಕ ಪರಿಶೀಲಿಸಿದ ಬಳಿಕವಷ್ಟೇ ಈ ಸವಲತ್ತನ್ನು ಯಾವೆಲ್ಲ ಸರ್ಕಾರಿ ನೌಕರರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಬೆಳಕಿಗೆ ಬಂದಿದೆ. ಅಗತ್ಯ ವಸ್ತುಗಳ ಕಾಯ್ದೆ ಹಾಗೂ ಸೇವಾ ನಿಯಮಗಳಡಿ ಇಂತಹ ನೌಕರರಿಗೆ ನೋಟಿಸ್ ನೀಡಿ, ತಲಾ ₹ 40 ಸಾವಿರದಿಂದ ₹ 1.50 ಲಕ್ಷದವರೆಗೆ ದಂಡ ವಿಧಿಸಿರುವುದು ಸರಿಯಾದ ಕ್ರಮ. ಸರ್ಕಾರದ ಯೋಜನೆಗಳನ್ನು ಅಕ್ರಮವಾಗಿ ಬಳಸಿಕೊಳ್ಳುವುದು ಹಾಗೂ ಸುಳ್ಳು ಮಾಹಿತಿ ನೀಡಿ ಪಡಿತರ ಚೀಟಿ ಪಡೆಯುವುದು ಕಾನೂನುಬಾಹಿರ ಅಪರಾಧ. ಇಷ್ಟು ವರ್ಷ ಸರ್ಕಾರದ ಸವಲತ್ತನ್ನು ದುರ್ಬಳಕೆ ಮಾಡಿದ ತಪ್ಪಿಗಾಗಿ ಅವರು ದಂಡ ತೆರಲೇಬೇಕು. ಸೇವಾ ದಾಖಲೆಯಲ್ಲೂ ಇದು ಕಪ್ಪುಚುಕ್ಕೆಯಾಗಿ ದಾಖಲಾಗಬೇಕು.

ಪಡಿತರ ಚೀಟಿ ದುರ್ಬಳಕೆ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು. ಅರ್ಹರಿಗೆ ಮಾತ್ರ ಈ ಸವಲತ್ತು ಸಿಗುವಂತೆ ನೋಡಿಕೊಳ್ಳಬೇಕು

ಬಡತನದಲ್ಲಿ ಬಳಲುತ್ತಿರುವ ಕುಟುಂಬಗಳಿಗೆ ಬಿಪಿಎಲ್ ಅಥವಾ ಎಎವೈ ಪಡಿತರ ಚೀಟಿ ಮಾಡಿಸಿಕೊಳ್ಳಬೇಕೆಂದರೆ ಹರಸಾಹಸಪಡಬೇಕಾದಂತಹ ಕಠಿಣ ನಿಯಮಗಳು ಜಾರಿಯಲ್ಲಿವೆ. ಬಿಪಿಎಲ್ ಪಡಿತರ ಚೀಟಿ ಪಡೆಯಲು ಕುಟುಂಬದ ಸದಸ್ಯರೆಲ್ಲರೂ ಬಯೊಮೆಟ್ರಿಕ್ ದಾಖಲೆಗಳನ್ನು ನೀಡುವುದು ಕಡ್ಡಾಯ. ಇಂತಹ ಕಠಿಣ ನಿಯಮಗಳ ಹೊರತಾಗಿಯೂ ಸರ್ಕಾರಿ ನೌಕರ ಕುಟುಂಬಗಳು ಬಿಪಿಎಲ್ ಹಾಗೂ ಎಎವೈ ಪಡಿತರ ಚೀಟಿ ಪಡೆಯಲು ಸಾಧ್ಯವಾಗಿದ್ದು ಹೇಗೆ ಎಂಬುದು ಯಕ್ಷಪ್ರಶ್ನೆ. ತಂತ್ರಜ್ಞಾನದಲ್ಲಿ ಇಷ್ಟೆಲ್ಲ ಮುಂದುವರಿದಿರುವಾಗಲೂ ರಾಜ್ಯದಲ್ಲಿ ಪಡಿತರ ಚೀಟಿ ವಿತರಿಸುವ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲು ಸಾಧ್ಯವಾಗಿಲ್ಲ ಎಂಬುದು ಇದರಿಂದ ಸ್ಪಷ್ಟವಾಗಿದೆ. ಇಲಾಖೆಯ ಅಧಿಕಾರಿಗಳು ಶಾಮೀಲಾಗದೇ ಇಂತಹ ಅಕ್ರಮಗಳು ನಡೆಯಲು ಸಾಧ್ಯವಿಲ್ಲ. ಇಲಾಖೆಯಲ್ಲಿರುವ ಇಂತಹ ಭ್ರಷ್ಟ ಅಧಿಕಾರಿಗಳನ್ನು ಪತ್ತೆಹಚ್ಚುವ ಮೂಲಕ ಅವರ ವಿರುದ್ಧವೂ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಬಿಪಿಎಲ್ ಮಾತ್ರವಲ್ಲದೆ, ಎಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ ಸಾವಿರಾರು ಕುಟುಂಬಗಳಿಗೆ ಮೂರು- ನಾಲ್ಕು ವರ್ಷಗಳ ಬಳಿಕವೂ ಪಡಿತರ ಚೀಟಿ ವಿತರಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪಡಿತರ ವಿತರಣೆಗೆ ಪಾರದರ್ಶಕ ವ್ಯವಸ್ಥೆಯನ್ನು ರೂಪಿಸುವುದು, ಸರ್ಕಾರದ ಸವಲತ್ತುಗಳು ದುರ್ಬಳಕೆ ಆಗದಂತೆ ತಡೆಯುವುದೂ ಅಷ್ಟೇ ಮುಖ್ಯ. ಪಡಿತರ ಚೀಟಿ ಪಡೆಯಲು ಇರುವ ಮಾನದಂಡಗಳನ್ನು, ಪ್ರತೀ ಗ್ರಾಮದಲ್ಲಿ ಅಥವಾ ನಗರದಲ್ಲಿ ವಾರ್ಡ್ ಮಟ್ಟದಲ್ಲಿ ಯಾವೆಲ್ಲ ಕುಟುಂಬಗಳು ಎಎವೈ ಹಾಗೂ ಬಿಪಿಎಲ್ ಚೀಟಿ ಹೊಂದಿವೆ, ಆಯಾ ತಿಂಗಳು ಯಾವ ಕುಟುಂಬಕ್ಕೆ ಎಷ್ಟು ಪಡಿತರ ವಿತರಿಸಲಾಗಿದೆ ಎಂಬ ವಿವರ ಸಾರ್ವಜನಿಕವಾಗಿ ಲಭ್ಯ ಆಗಬೇಕು. ಜಿಲ್ಲಾಡಳಿತ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳ ವೆಬ್‌ಸೈಟ್‌ಗಳಲ್ಲೂ ಈ ಮಾಹಿತಿಯನ್ನು ಪ್ರಕಟಿಸಬೇಕು. ಅನರ್ಹ ಕುಟುಂಬಗಳು ಇಂತಹ ಕಾರ್ಡ್ ಹೊಂದಿರುವುದು ಕಂಡುಬಂದರೆ ದೂರು ನೀಡುವುದಕ್ಕೆ ವೇದಿಕೆ ಕಲ್ಪಿಸಬೇಕು. ಇದಕ್ಕೆ ಸರ್ಕಾರಕ್ಕೆ ಇಚ್ಛಾಶಕ್ತಿ ಬೇಕು ಅಷ್ಟೆ. ಬಿಪಿಎಲ್ ಪಡಿತರ ಚೀಟಿಯನ್ನು ನೀಡುವುದರ ಮೂಲ ಉದ್ದೇಶ ಬಡವರಿಗೆ ಪಡಿತರವನ್ನು ರಿಯಾಯಿತಿ ದರದಲ್ಲಿ ವಿತರಿಸುವುದೇ ಆಗಿದ್ದರೂ, ವಿವಿಧ ಸರ್ಕಾರಿ ಸವಲತ್ತುಗಳನ್ನು ಪಡೆಯುವುದಕ್ಕೂ ಇದನ್ನೇ ಮಾನದಂಡವನ್ನಾಗಿ ಬಳಸಲಾಗುತ್ತಿದೆ. ಹಾಗಾಗಿ ಅರ್ಹರಲ್ಲದ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ವಿತರಿಸಿದರೆ, ಅದು ಬೇರೆ ಬೇರೆ ಸವಲತ್ತುಗಳನ್ನು ಪಡೆಯುವುದಕ್ಕೂ ದುರ್ಬಳಕೆ ಆಗುವ ಸಾಧ್ಯತೆ ಇದೆ. ಹಾಗಾಗಿ ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ದುರ್ಬಳಕೆ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು. ಅರ್ಹರಿಗೆ ಮಾತ್ರ ಈ ಸವಲತ್ತು ಸಿಗುವಂತೆ ನೋಡಿಕೊಳ್ಳಬೇಕು.

ದಿನದ ಟ್ವೀಟ್

ಪರಿವರ್ತಿಸಬಹುದೇ?

ಕಂದಾಯ ಇಲಾಖೆಯು ಅರಣ್ಯ ಇಲಾಖೆಯ ಸಮ್ಮತಿ ಇಲ್ಲದೆ ಅರಣ್ಯ ಭೂಮಿಯನ್ನು ಅರಣ್ಯೇತರ ಭೂಮಿಯನ್ನಾಗಿ ಪರಿವರ್ತಿಸಬಹುದೇ? ಪತ್ರಿಕಾ ವರದಿಗಳನ್ನು ನೋಡಿದಾಗ, ಬನ್ನೇರುಘಟ್ಟದಲ್ಲಿ ಹೀಗೆ ನಡೆದಿರುವುದಾಗಿ ರಾಜ್ಯ ಅರಣ್ಯ ಇಲಾಖೆ ಹೇಳುತ್ತಿರುವಂತೆ ಭಾಸವಾಗುತ್ತದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

ನನ್ನನ್ನು ಭಯೋತ್ಪಾದಕ ಎಂದು ಕಾಂಗ್ರೆಸ್, ಬಿಜೆಪಿ ಆರೋಪಿಸುತ್ತಿವೆ. ಹಾಗಿದ್ದಲ್ಲಿ ಕೇಂದ್ರ ಸರ್ಕಾರದ ಏಜೆನ್ಸಿಗಳು ಏನು ಮಾಡುತ್ತಿವೆ? ನನ್ನನ್ನು ಈವರೆಗೆ ಏಕೆ ಬಂಧಿಸಿಲ್ಲ? ನಾನು ಭಯೋತ್ಪಾದಕನೇ ಆಗಿದ್ದರೆ ಕೇಂದ್ರ ಸರ್ಕಾರವು ನಿದ್ರಿಸುತ್ತಿದೆ ಮತ್ತು ರಾಷ್ಟ್ರೀಯ ಭದ್ರತೆಯನ್ನು ಕಡೆಗಣಿಸಿದೆ.

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಬುಧವಾರ, 19-2-1997

• ಆಲಮಟ್ಟಿ: ನಡೆಯದ ಸಭೆ ಪಟೇಲ್ ಗೈರುಹಾಜರಿ

ನವದೆಹಲಿ, ಫೆ. 18– ಆಲಮಟ್ಟಿ ಅಣೆಕಟ್ಟು ಎತ್ತರದ ವಿವಾದ ಕುರಿತಂತೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಅವರ ಮಧ್ಯಸ್ಥಿಕೆಯಲ್ಲಿ ಇಂದು ನಡೆಯಬೇಕಾಗಿದ್ದ ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಯಲಿಲ್ಲ.

ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಗೈರುಹಾಜರಾದ ಕಾರಣ ಇಂದಿನ ಮಾತುಕತೆ ನಡೆಯಲು ಸಾಧ್ಯವಾಗಲಿಲ್ಲ. ಸಂಯುಕ್ತ ರಂಗದ ನಾಲ್ವರು ಮುಖ್ಯಮಂತ್ರಿಗಳ ಒಕ್ಕೂಟ ನೇಮಕ ಮಾಡಿದ್ದ ತಜ್ಞರ ಸಮಿತಿಯು ಈಗಾಗಲೇ ತನ್ನ ವರದಿಯನ್ನು ನೀಡಿದೆ. ಈ ವರದಿಯನ್ನು ಆಧರಿಸಿ ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಮಾತುಕತೆ ನಡೆಸುವ ಕಾರ್ಯಕ್ರಮವಿತ್ತು.

ನಿರೀಕ್ಷೆಯಂತೆ ಚಂದ್ರಬಾಬು ನಾಯ್ಡು ಅವರು ಸಂಯುಕ್ತ ರಂಗದ ಚಾಲನಾ ಸಮಿತಿ ಸಭೆಗೆ ಆಗಮಿಸಿದ್ದರಾದರೂ, ಪಟೇಲರ ಗೈರುಹಾಜರಿಯಿಂದ ಕುಪಿತರಾಗಿ ಸಭೆಯ ಅರ್ಧದಲ್ಲಿಯೇ ಎದ್ದು ಹೋದರು.

50 ವರ್ಷಗಳ ಹಿಂದೆ

ಶನಿವಾರ, 19-2-1972

• ಭಾರತದ ಬಾಂಗ್ಲಾ ನೀತಿಗೆ ಜನತೆಯ ಬೆಂಬಲದ ಅಳತೆಗೋಲು: ಇಂದಿರಾ

ಹುಬ್ಬಳ್ಳಿ, ಫೆ. 18– 'ಭಾರತ ವಿರೋಧಿ ನಿಲುವನ್ನು ತಳೆದ ಅನೇಕ ರಾಷ್ಟ್ರಗಳು ಭಾರತ ಸರ್ಕಾರದ ಬಾಂಗ್ಲಾ ನೀತಿಗೆ ಜನತೆಯ ಬೆಂಬಲವಿದೆಯೇ ಎಂಬುದನ್ನು ಖಾತರಿ ಪಡಿಸಿಕೊಳ್ಳಲು ವಿಧಾನಸಭೆಗಳ ಚುನಾವಣೆ ಫಲಿತಾಂಶಗಳಿಗಾಗಿ ಕಾಯುತ್ತಿವೆ' ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಹೇಳಿದರು.

ರೈಲ್ವೆ ಸ್ಪೋರ್ಟ್ಸ್ ಮೈದಾನದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರ ಭಾರಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಇಂದಿರಾ ಗಾಂಧಿ ಅವರು, ಸ್ವಾತಂತ್ರ್ಯ ರಕ್ಷಣೆ ಮತ್ತು ಪ್ರಗತಿಪರ ಕಾರ್ಯಕ್ರಮಗಳ ಜಾರಿಗೆ ಆಡಳಿತ ಕಾಂಗ್ರೆಸ್‌ನಲ್ಲಿ ಪೂರ್ಣ ವಿಶ್ವಾಸ ವ್ಯಕ್ತಪಡಿಸಿ, ಬೆಂಬಲ ನೀಡಲು ಜನತೆಗೆ ಮನವಿ ಮಾಡಿದರು.

ಷೇರು ಮಾರುಕಟ್ಟೆ ಸೂಚ್ಯಂಕಗಳು ಏರಿಕೆಯಲ್ಲಿರುವಂತೆ ಮಾಡಿ ಅರ್ಥ ವ್ಯವಸ್ಥೆಯನ್ನು ಸರಿಪಡಿಸಲು ಆಗದು

ಬಜೆಟ್‌ನ ಆಚೆಗೆ, ಸೌಹಾರ್ದದ ಕಡೆಗೆ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಬಲಿಷ್ಠ ನಾಯಕರು ಟೀಕೆಯನ್ನು ಕಂಡಾಗ ಕೋಪಗೊಳ್ಳುತ್ತಾರೆ. ಹಾಗಾಗಿ, ಪ್ರಧಾನಿ ನರೇಂದ್ರ ಮೋದಿ ಅವರು ಆಗಾಗ 'ರಚನಾತ್ಮಕ ಟೀಕೆಗಳನ್ನು' ಸ್ವಾಗತಿಸಿದಾಗ ಖುಷಿ, ಆಶ್ಚರ್ಯ ಆಗುತ್ತದೆ. ಕೆಲವು ಸಮಯದ ಹಿಂದೆ ಒಂದು ಕಾರ್ಯಕ್ರಮದಲ್ಲಿ ಅವರು, 'ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಟೀಕೆಗಳು ಬಹಳ ಸಹಜ. ಆ ಟೀಕೆಗಳು ಪ್ರಜಾತಂತ್ರವನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ' ಎಂದರು. ಅವರ ಮಾತಿನ ಹಿಂದೆ ಬೇರೆ ಯಾವ ಅರ್ಥವೂ ಇಲ್ಲ ಎಂದು ಭಾವಿಸಿ ನಾನು, ರೋಗಪೀಡಿತವಾಗಿರುವ ಅರ್ಥ ವ್ಯವಸ್ಥೆಯ ಕುರಿತು ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳುವ ಧೈರ್ಯ ತೋರುವೆ (ಅರ್ಥ ವ್ಯವಸ್ಥೆಯಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ ಎಂಬುದು ಬೇರೆ ಮಾತು). ಅರ್ಥ ವ್ಯವಸ್ಥೆಯ ಪುನಶ್ಚೇತನಕ್ಕೆ ಅಗತ್ಯವಿರುವ ವ್ಯವಸ್ಥೆಯೊಂದನ್ನು ಕಟ್ಟಲು ಪ್ರಧಾನಿಯವರು ಬಜೆಟ್ ಮಂಡನೆಗೂ ಮೀರಿ ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಬಹುದು ಎಂಬ ಬಗ್ಗೆ ಒಂದೆರಡು ಮಾತು ಆಡುತ್ತೇನೆ.

ಬಜೆಟ್‌ಗೂ ಮೊದಲು ಮೋದಿ ಮತ್ತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಉದ್ಯಮದ ಕೆಲವು ನಾಯಕರನ್ನು ಭೇಟಿಯಾದರು. ದೇಶದ ಅರ್ಥ ವ್ಯವಸ್ಥೆ ಸ್ಥಿತಿಯ ಬಗ್ಗೆ ಉದ್ಯಮದ ಪ್ರಮುಖರಿಂದ ಒಂದಿಷ್ಟು ಮಾಹಿತಿ ಪಡೆಯುವ ಉದ್ದೇಶ ಈ ಭೇಟಿಯ ಹಿಂದೆ ಹಿತ್ತು. ಅರ್ಥ ವ್ಯವಸ್ಥೆಯು ಅದಾಗಲೇ ಇಳಿಜಾರಿನ ಹಾದಿಯಲ್ಲಿ ಇತ್ತು. ನಂತರ, ಕೋವಿಡ್ ಕಾರಣದಿಂದಾಗಿ ತೀರಾ ಕೆಟ್ಟ ಸ್ಥಿತಿಗೆ ಕುಸಿಯಿತು. ತೀರಾ ನೀರಸವಾದ ಬಜೆಟ್ ಮಂಡನೆ ಆದಾಗಲೂ ಅದನ್ನು ಹಾಡಿಹೊಗಳುವ ನಮ್ಮ ಕೆಲವು ಉದ್ಯಮಗಳ ನಾಯಕರು ಯಾವಾಗಲೂ ಮಾತನಾಡುವ ಸಂಗತಿಗಳ ಬಗ್ಗೆಯೇ ಮಾತನಾಡುತ್ತಾರೆ. ಸಾಲ ಸಿಗುತ್ತಿಲ್ಲದಿರುವುದು, ಬೇಡಿಕೆಯನ್ನು ಹೆಚ್ಚಿಸಬೇಕಿರುವುದು, ತೆರಿಗೆ ಭಯೋತ್ಪಾದನೆ, ಜಿಎಸ್‌ಟಿ ವ್ಯವಸ್ಥೆಯನ್ನು ಸರಳೀಕರಿಸುವುದು, ಹಣಕಾಸಿನ ನೀತಿಗಳು, ವಿತ್ತೀಯ ಕೊರತೆ ಇತ್ಯಾದಿ ಸಂಗತಿಗಳ ಬಗ್ಗೆ ಅವರು ಮಾತನಾಡುತ್ತಾರೆ.

ಪ್ರಧಾನಿಯವರ ಹಲವು ಸಭೆಗಳಲ್ಲಿ ಹೇಳದೇ ಇದ್ದ ಸಂಗತಿಯು ಸಭೆಗಳಲ್ಲಿ ಹೇಳಿದ ವಿಚಾರಗಳಿಗಿಂತ ಹೆಚ್ಚು ಮಹತ್ವದ್ದಾಗಿತ್ತು– ಅದು, ಸರ್ಕಾರ ಹಾಗೂ ಸಮಾಜದ ಹಲವು ವರ್ಗಗಳ ನಡುವೆ ಉಂಟಾಗಿರುವ ವಿಶ್ವಾಸದ ಕೊರತೆಯನ್ನು ಸರಿಪಡಿಸುವುದು. ಇಂದಿನ ಬಲಪಂಥೀಯ ರಾಜಕಾರಣವು ಕೋಮು ಸೌಹಾರ್ದವನ್ನು ಮತ್ತೆ ಮತ್ತೆ ಕದಡುತ್ತಿದೆ ಎಂಬುದನ್ನು ಮೋದಿ ಅವರಿಗೆ ಹೇಳಬೇಕಿತ್ತು. ಹಣಕಾಸು ಅಥವಾ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ತೀರ್ಮಾನ ಕೈಗೊಳ್ಳುವ ಮೊದಲು ಅದು ಉದ್ಯಮಗಳ ಮೇಲೆ ಬೀರುವ ಪ್ರಭಾವ ಮಾತ್ರವಲ್ಲದೆ, ಬೀದಿ ಬದಿಯ ಸಣ್ಣ ವ್ಯಾಪಾರಿ, ಢಾಬಾ, ರೆಸ್ಟೋರೆಂಟ್, ಟ್ಯಾಕ್ಸಿ ಮತ್ತು ಟ್ರಕ್ ಚಾಲಕ, ಅಡುಗೆಯವ... ಇಂಥವರ ಮೇಲೆ ಬೀರುವ ಪ್ರಭಾವವನ್ನೂ ಗಮನದಲ್ಲಿ ಇರಿಸಿಕೊಳ್ಳಬೇಕು ಎಂಬುದನ್ನು ಹೇಳಬೇಕಿತ್ತು.

ಎಡಪಂಥದಲ್ಲಿ ಗುರುತಿಸಿಕೊಂಡಿರುವ, ಅತಿರೇಕದ ವರ್ತನೆ ತೋರುವ ಕೆಲವು ಸಂಘಟನೆಗಳು ಯಾವ ತಪ್ಪನ್ನೂ ಮಾಡುತ್ತಿಲ್ಲ ಎನ್ನಲು ಈ ಮಾತು ಹೇಳುತ್ತಿಲ್ಲ. ಆದರೆ, ಒಕ್ಕೂಟ ಸರ್ಕಾರವು ದೇಶದ ರಾಜಕೀಯ ಹಾಗೂ ಸಾಮಾಜಿಕ ಬದುಕಿನಲ್ಲಿ ಇರುವ ಎಡ–ಬಲ ಪಂಥೀಯ ಮತೀಯವಾದಿ, ಮೂಲಭೂತವಾದಿ ಸಂಘಟನೆಗಳ ವಿಚಾರದಲ್ಲಿ ಗಟ್ಟಿ ನಿರ್ಧಾರ ಕೈಗೊಳ್ಳಬೇಕು, ತ್ವರಿತವಾಗಿ ಮತ್ತು ನ್ಯಾಯಸಮ್ಮತವಾಗಿ ಅವುಗಳ ವಿರುದ್ಧ ಕ್ರಮ ಜರುಗಿಸಬೇಕು ಎನ್ನಲು ಈ ಮಾತು ಹೇಳಿದ್ದೇನೆ. ಇಷ್ಟೇ ಅಲ್ಲ, ಸರ್ಕಾರದ ಹೊಗಳುಭಟರ ವರ್ಗ ಹಾಗೂ ಸರ್ಕಾರದ ವಿರೋಧಿಗಳ ನಡುವಿನ ಕಂದಕವನ್ನು ಮುಚ್ಚುವ ಕೆಲಸ ಮಾಡಬೇಕು ಸಹ.

ಉದ್ಯಮದ ಪ್ರತಿನಿಧಿಗಳು ಮುಕ್ತವಾಗಿ ಮಾತನಾಡಬೇಕಿದ್ದ ತಮ್ಮ ಜವಾಬ್ದಾರಿ ನಿಭಾಯಿಸುವಲ್ಲಿ ವಿಫಲರಾದರು. ಅರ್ಥ ವ್ಯವಸ್ಥೆಯು ಮತ್ತೆ ಹಳಿಗೆ ಬರಬೇಕು ಎಂದಾದರೆ ಶಾಂತಿ ಮತ್ತು ಸ್ಥಿರತೆ ಮೂಲಭೂತ ಅಗತ್ಯಗಳು ಎಂಬ ಸರಳ ಮಾತನ್ನು ದೇಶದ ಉದ್ಯಮ ವಲಯವು ಪ್ರಧಾನಿಯವರಿಗೆ ಹೇಳಬೇಕಿತ್ತು.

ಕೆಲವು ಕಂಪನಿಗಳ ಷೇರು ಮೌಲ್ಯವು ಹೆಚ್ಚಾಗುವಂತೆ ಮಾಡಿ, ಆ ಮೂಲಕ ಮಾರುಕಟ್ಟೆಯ ಸೂಚ್ಯಂಕಗಳು ಏರಿಕೆಯಲ್ಲಿ ಇರುವಂತೆ ಮಾಡಿ ಅರ್ಥ ವ್ಯವಸ್ಥೆಯ ಸಮಸ್ಯೆಗಳನ್ನು ಸರಿಪಡಿಸಲು ಆಗುವುದಿಲ್ಲ. ಬೇರೆ ಯಾವ ಸಂಗತಿಗಳೂ ತನಗೆ ಗೊತ್ತಿಲ್ಲ ಎಂಬಂತೆ ವರ್ತಿಸುವ, ಕೆಲವು ಪ್ರಯೋಜನಗಳಿಗೆ ಮಾತ್ರ ಒತ್ತಾಯಿಸುವ ಧೋರಣೆಯನ್ನು ದೇಶದ ಉದ್ಯಮ ವಲಯ ಕೈಬಿಡಬೇಕು. ಅಮೆರಿಕದಲ್ಲಿ ಜನಾಂಗೀಯ ಸಂಘರ್ಷ ನಡೆಯುತ್ತಿದ್ದ ಸಂದರ್ಭದಲ್ಲಿ ಎಮರ್ಸನ್, 'ಶಾಂತಿ ಇರುವಲ್ಲಿ ಬೆಳೆಯುವ ಗಿಡ ವಾಣಿಜ್ಯ ವಹಿವಾಟು. ಇದು ಶಾಂತಿ ಸೃಷ್ಟಿಯಾದ ತಕ್ಷಣ ಬೆಳೆಯುತ್ತದೆ, ಶಾಂತಿ ಇರುವಷ್ಟು ಕಾಲ ಬೆಳೆಯುತ್ತ ಇರುತ್ತದೆ' ಎಂದು ಹೇಳಿದ್ದ.

ಅಸಮಾನತೆಯು ವ್ಯಾಪಕವಾಗಿ ವಿಸ್ತರಿಸಿ ಬಹುಕಾಲ ಉಳಿದುಕೊಂಡರೆ, ಸಮಾಜದಲ್ಲಿ ಸಂಘರ್ಷವು ನಿರಂತರವಾಗಿ ಇದ್ದರೆ ವಾಣಿಜ್ಯ ವಹಿವಾಟುಗಳು ಹೆಚ್ಚು ಕಾಲ ಸಮೃದ್ಧಿಯಾಗಿ ನಡೆಯಲು ಸಾಧ್ಯವಿಲ್ಲ. ವರ್ಗ, ಜಾತಿ, ಧರ್ಮದ ಹೆಸರಿನಲ್ಲಿ ನಡೆಯುವ ಸಂಘರ್ಷವು ಅರ್ಥ ವ್ಯವಸ್ಥೆ ಕುಸಿಯುವಂತೆ ಮಾಡುತ್ತದೆ. ಒಂದು ದೊಡ್ಡ ಹಡಗು ಮುಳುಗಿದರೆ ಅದರಲ್ಲಿ ಇರುವ ಎಲ್ಲರೂ ಮುಳುಗುತ್ತಾರೆ.

ದೇಶದಲ್ಲಿ ಉದಾರವಾದಿ ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ರಾಜಕಾರಣಿಗಳಿಗಿಂತಲೂ ಹೆಚ್ಚಾಗಿ ಉದ್ಯಮ ವಲಯದ ಕೆಲವು ದೈತ್ಯರೇ ದೊಡ್ಡ ಅಪಾಯ. ಏಕೆಂದರೆ, ಅವರಿಗೆ ಸ್ಪರ್ಧೆ ಇರುವುದು ಇಷ್ಟವಿಲ್ಲ. ಲೈಸೆನ್ಸ್ ರಾಜ್ ವ್ಯವಸ್ಥೆ ಅವರಿಗೆ ಮತ್ತೆ ಬೇಕು. ಉದ್ಯಮ ಜಗತ್ತಿನಲ್ಲಿ ಎತ್ತರಕ್ಕೆ ಏರಿದ ನಂತರ, ತಾವು ಈ ಹಂತಕ್ಕೆ ಬಂದಿದ್ದಕ್ಕೆ ಕಾರಣ ಸುಧಾರಣೆಗಳು ಎಂಬುದನ್ನೇ ಅವರು ಮರೆತುಬಿಡುತ್ತಾರೆ. ಖಾಸಗೀಕರಣ ಬೇಕು ಎನ್ನುತ್ತಲೇ, ಏಕಸ್ವಾಮ್ಯಕ್ಕೆ ವಿರೋಧವನ್ನು ವ್ಯಕ್ತಪಡಿಸಬೇಕು.

ನಿಯಮಗಳಿಗೆ ವಿಶೇಷ ವಿನಾಯಿತಿ ಕೋರಲು, ಸ್ಪರ್ಧೆಯಲ್ಲಿ ಬೇರೊಬ್ಬರಿಗಿಂತ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಲು ಮರೆಯಲ್ಲಿ ಲಾಬಿ ನಡೆಸುತ್ತಿರುವ ಉದ್ದಿಮೆಗಳು ನರೇಂದ್ರ ಮೋದಿ ಅವರ 'ಮೇಕ್ ಇನ್ ಇಂಡಿಯಾ' ಕರೆಗೆ ವಿರುದ್ಧವಾಗಿವೆ. ಅಲ್ಲದೆ, ವಿದೇಶಿ ನೇರ ಬಂಡವಾಳವನ್ನು (ಎಫ್‌ಡಿಐ) ಆಕರ್ಷಿಸುವ, ವಾಣಿಜ್ಯೋದ್ಯಮ ನಡೆಸುವ ಪ್ರಕ್ರಿಯೆ ಸುಲಲಿತವಾಗಬೇಕು ಎಂದು ಮೋದಿ ಅವರು ಹೊಂದಿರುವ ಬಯಕೆಗೆ ಕೂಡ ಇವರ ನಡೆಗಳು ಪೂರಕವಾಗಿ ಇಲ್ಲ.

ಭಾರತದ ಬೆಳವಣಿಗೆಯ ಯಶೋಗಾಥೆಯಿಂದ ಆಕರ್ಷಿತರಾಗಿ ಹೂಡಿಕೆದಾರರು ಭಾರತಕ್ಕೆ ಬರುತ್ತಾರೆ. ಪ್ರಧಾನಿಯವರು, ರಾಜ್ಯಗಳ ನಾಯಕರು ವಿದೇಶಗಳಿಗೆ ಹೋದಾಗ ಅವರ ಮಾತುಗಳಿಂದ ಆಕರ್ಷಿತರಾಗಿಯೂ ಬರುತ್ತಾರೆ. ಆದರೆ, ಒಮ್ಮೆ ಹೂಡಿಕೆ ಮಾಡಿದ ನಂತರದಲ್ಲಿ, ಇಲ್ಲಿ ಸ್ಥಳೀಯ ಉದ್ಯಮ ಪ್ರಮುಖರಿಗೆ ಅನುಕೂಲ ಆಗುವಂತೆ ನಿಯಮಗಳನ್ನು ಮನಸ್ಸಿಗೆ ಬಂದಂತೆ ಬದಲಾಯಿಸಲಾಗುತ್ತದೆ, ತಮಗೆ (ವಿದೇಶಿ ಹೂಡಿಕೆದಾರರಿಗೆ) ಇಲ್ಲಿ ಬೆಳೆಯಲು ಅನುಕೂಲ ಕಲ್ಪಿಸುವುದಿಲ್ಲ ಎಂಬುದು ಗೊತ್ತಾದರೆ ಭವಿಷ್ಯದಲ್ಲಿ ಹೂಡಿಕೆಗಳು ಬರುವುದಿಲ್ಲ.

ಭಾರತದಲ್ಲಿ ವಹಿವಾಟು ನಡೆಸುವುದಕ್ಕೂ ಭಾರತದಲ್ಲಿ ಪರಿಚಯ ಯಾರದ್ದಿದೆ ಎಂಬುದಕ್ಕೂ ಸಂಬಂಧ ಇದೆ ಎಂದು ವಿದೇಶಿ ಕಂಪನಿಗಳಿಗೆ ಅನ್ನಿಸುತ್ತಿದೆ. ಸರ್ಕಾರಗಳು ತಾವು ನೀಡಿದ್ದ ಭರವಸೆಯನ್ನು ಮರೆತು, ಇತರ ಎಲ್ಲರಿಗಿಂತಲೂ ಕೆಲವು ಉದ್ದಿಮೆಗಳಿಗೆ ಮಾತ್ರ ಆದ್ಯತೆ ನೀಡಿದರೆ ಅರ್ಥ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ನಮ್ಮ ದೇಶದಿಂದ ಆಗುವ ರಫ್ತುಗಳ ಮೇಲೆ, ನಮ್ಮ ದೇಶದ ಉದ್ಯಮಿಗಳು ವಿದೇಶಗಳಲ್ಲಿ ಮಾಡುವ ಹೂಡಿಕೆಗಳ ಮೇಲೆ ಪ್ರತೀಕಾರದ ಕ್ರಮವೂ ಎದುರಾಗುತ್ತದೆ.

ಸದ್ಯದ ಸಂದರ್ಭದಲ್ಲಿ ಧ್ರುವೀಕೃತಗೊಂಡಿರುವ ದೇಶವನ್ನು ಒಗ್ಗೂಡಿಸಲು ಮೋದಿ ಅವರು ತಮಗೆ ದೊರೆತಿರುವ ಜನಾದೇಶ, ಪಕ್ಷದಲ್ಲಿ ತಮಗೆ ಇರುವ ಅಧಿಕಾರದ ಬಲದಿಂದ ಮುಂದಾಗಬೇಕು. ಮೋದಿ ಅವರು ಭರವಸೆಯನ್ನು ಮತ್ತೆ ಉದ್ದೀಪಿಸಬೇಕು. ಈಗಿನ ಸಂದರ್ಭವು ಎಷ್ಟೇ ಕಷ್ಟಕರವಾಗಿ ಇದ್ದರೂ ಪರಿಸ್ಥಿತಿ ಸರಿಯಾಗುತ್ತದೆ ಎಂದು ಆಶಿಸೋಣ. ಭವಿಷ್ಯದ ಬಗ್ಗೆ ಆಶಾಭಾವ ಹೊಂದಬಹುದು ಎಂದು ಆಶಿಸೋಣ. ಯಾವುದೇ ಅರ್ಥ ವ್ಯವಸ್ಥೆಯ ಪಾಲಿನ ಅಗೋಚರ ಇಂಧನವಾಗಿರುವ 'ಭರವಸೆ'ಯು ಸಮುದಾಯದ ತಳಮಟ್ಟದಲ್ಲಿ ಈಗ ಕಾಣಿಸುತ್ತಿಲ್ಲ.

ಉದ್ದೇಶಗಳು ಎಷ್ಟೇ ಒಳ್ಳೆಯವಾಗಿದ್ದರೂ ಸಾಮಾಜಿಕ ಸಂಘರ್ಷ ನಿರಂತರವಾಗಿದ್ದರೆ ಯಾವ ಉದ್ಯಮವೂ ಬೆಳೆಯಲಾರದು.

ಚುರುಮುರಿ

ಪ್ರೇಮ ಪುರಾಣ!

• ಬಿ.ಎನ್.ಮಲ್ಲೇಶ್

ಪತ್ರಕರ್ತ ತೆಪರೇಸಿಯ ಒಂದು ಕಣ್ಣು ಊದಿಕೊಂಡಿತ್ತು. ಎರಡೂ ಕೆನ್ನೆಗಳ ಮೇಲೆ ಯಾರೋ ಚೆನ್ನಾಗಿ ಬಾರಿಸಿದ ಗುರುತುಗಳಿದ್ದವು. ಹರಟೆಕಟ್ಟೆ ಗೆಳೆಯರಿಗೆ ಗಾಬರಿಯಾಯಿತು. 'ಏನೋ ಇದು ತೆಪರ? ಯಾಕೆ, ಏನಾತು?' ಗುಡ್ಡೆ ಆತಂಕ ವ್ಯಕ್ತಪಡಿಸಿದ. ತೆಪರೇಸಿ ಮಾತಾಡಲಿಲ್ಲ.

'ಮೊನ್ನೆ ಅಸೆಂಬ್ಲೀಲಿ ಈಶ್ವರಪ್ಪ, ಡಿಕೆಶಿ ಜಗಳನೇನಾದ್ರು ಬಿಡ್ಸಾಕೆ ಹೋಗಿದ್ದೇನೋ?' ದುಬ್ಬೀರ ವಿಚಾರಿಸಿದ.

'ಅಥ್ವ ಹಿಜಾಬು- ಕೇಸರಿ ಶಾಲು ಗಲಾಟೆಲೇನಾದ್ರು ಸಿಕ್ಕಾಕಂಡಿದ್ಯಾ?' ಕೊಟ್ರೇಶಿ ಪ್ರಶ್ನೆ. ತೆಪರೇಸಿ ಪಿಟಿಕ್ಕೆನ್ನಲಿಲ್ಲ.

'ನಂಗೇನೋ ಇವ್ನು ಕುಮಾರಸ್ವಾಮಿ- ಸಿದ್ರಾಮಣ್ಣನ ಜಂಟಿ ಇಂಟ್ರೂ ಮಾಡೋಕೋಗಿ ಏನೋ ಯಡವಟ್ಟು ಮಾಡ್ಕಂಡಾನೆ ಅನ್ಸುತ್ತಪ್ಪ' ಪರ್ಮೇಶಿ ಅನುಮಾನ ವ್ಯಕ್ತಪಡಿಸಿದ.

'ಯಾಕೋ ಮಾತಾಡ್ತಿಲ್ಲ? ರಾತ್ರಿ ಜಾಸ್ತಿ ತಗಂಡು ಎಲ್ಲಾದ್ರು ಬಿದ್ದುಬಂದ್ಯೋ ಹೆಂಗೆ?' ದುಬ್ಬೀರ ನಕ್ಕ. ತೆಪರೇಸಿ ಬಾಯಿ ಬಿಡಲಿಲ್ಲ.

ಅಷ್ಟರಲ್ಲಿ ಅಲ್ಲಿಗೆ ಬಂದ ಚಾದಂಗಡಿ ಮಂಜಮ್ಮ 'ಇದು ತೆಪರೇಸಿ ಪ್ರೇಮ ಪುರಾಣ ಕಣ್ರೋ' ಎಂದಳು ನಗುತ್ತ. 'ಏನು? ಪ್ರೇಮ ಪುರಾಣನ? ಅಂದ್ರೆ?' ಗುಡ್ಡೆಗೆ ಕುತೂಹಲ.

'ಮೊನ್ನೆ ವ್ಯಾಲೆಂಟೈನ್ಸ್ ಡೇ ಇತ್ತಲ್ಲ, ಅವತ್ತು ತೆಪರೇಸಿಗೆ ಯಾರೋ ಹುಡುಗಿ ಕಾಲ್ ಮಾಡಿ 'ಹ್ಯಾಪಿ ವ್ಯಾಲೆಂಟೈನ್ಸ್ ಡೇ' ಅಂದ್ಲಂತೆ. 'ನೀವು ಹ್ಯಾಂಡ್‌ಸಮ್ಮಾಗಿದೀರ. ನಿಮ್ಮನ್ನ ಕಂಡ್ರೆ ನಂಗೆ ತುಂಬಾ ಇಷ್ಟ...' ಅಂದ್ಲಂತೆ.

'ಅಲೆ ಇವ್ನ, ಮುಂದೆ?'

'ಸಂಜೆ ಎಲ್ಲಾದ್ರು ಸಿಗೋಣ್ವ ಅಂತ ಕೇಳಿದ್ಲಂತೆ'

'ಬಪ್ಪರೆ ಮಗನೆ, ಆಮೇಲೆ?'

'ಸಂಜೆ ಅವಳು ಕರೆದ ಜಾಗಕ್ಕೆ ಇವನು ಹೋಗಿ ಹಿಂಗೆ ಹೊಡ್ತ ತಿಂದು ಬಂದಿದಾನೆ... ಶೂರ' ಮಂಜಮ್ಮ ವರದಿ ಒಪ್ಪಿಸಿದಳು.

'ಅರೆ, ಅವಳೇ ಕರೆದ ಮೇಲೆ ಮತ್ತೆ ಹೊಡೆದಿದ್ಯಾಕೆ?' ಪರ್ಮೇಶಿ ಕೇಳಿದ.

'ಯಾಕೇಂದ್ರೆ ಕಾಲ್ ಮಾಡಿದ್ದು ಯಾರೋ ಹುಡುಗಿ ಅಲ್ಲ, ತೆಪರನ ಹೆಂಡ್ತಿ ಪಮ್ಮಿ! ಹುಡುಗಿ ಬೇಕಾ ಅಂತ ಹಿಡ್ಕಂಡು ಚೆನ್ನಾಗಿ ಇಕ್ಕಿದ್ಲಂತೆ'.

'ಹೌದಾ? ಎಲಾ ಚಪಲ ಚೆನ್ನಿಗರಾಯ' ಎಂದ ದುಬ್ಬೀರ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಮಕ್ಕಳಿಗೂ ಇರುತ್ತದೆ ಖಾಸಗಿತನ

ಮಕ್ಕಳು ನಮ್ಮವು ಅಂದಮಾತ್ರಕ್ಕೆ ಅವರ ಮೇಲೆ ನಾವು ನಮ್ಮ ವಿಚಾರಗಳನ್ನು ತುರುಕಿ ಹಾದಿ ತಪ್ಪಿಸುವುದು ಸಲ್ಲ

• ಸದಾಶಿವ್ ಸೊರಟೂರು

ಕೆಲವು ದಿನಗಳ ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ಎರಡು ವಿಡಿಯೊಗಳು ಮಿಂಚಿನಂತೆ ಹರಿದಾಡಿದವು. ಮೊದಲನೆಯದು, ಪುಟ್ಟ ಮಗುವೊಂದು ತನ್ನ ಶಿಕ್ಷಕಿಯೊಂದಿಗೆ ಮಾತನಾಡಿದ ವಿಡಿಯೊ. ಅದರಲ್ಲಿ ಆ ಮಗು ತರಗತಿ ಕೋಣೆಯಲ್ಲೇ ಶಿಕ್ಷಕಿಯೊಂದಿಗೆ ತುಂಬಾ ತರಲೆಯಾಗಿ ಮಾತನಾಡುತ್ತದೆ. 'ರೆಸ್ಪೆಕ್ಟ್ ಕೊಡಿ, ನನಗೆ ರೆಸ್ಪೆಕ್ಟ್' ಅಂತ ಜೋರು ಮಾಡುತ್ತದೆ. ಆ ವಿಡಿಯೊವನ್ನು ತರಗತಿ ಶಿಕ್ಷಕರೇ ಮಾಡಿರುವುದಂತೂ ನಿಶ್ಚಿತ.

ಎರಡನೇ ವಿಡಿಯೊ ಮನೆಯಲ್ಲಿ ಬಹುಶಃ ಅವರ ತಾಯಿಯೇ ಮಾಡಿರುವಂತಹದ್ದು. ಆ ಮಗು ಕೂಡ ತಾಯಿಯೊಂದಿಗೆ ಜಗಳಕ್ಕೆ ಇಳಿಯುತ್ತದೆ. ಓದುವುದು ಬೋರು, ಇವತ್ತೊಂದಿನ ಬಿಡಿ ಅನ್ನುತ್ತದೆ. ಅಳುತ್ತಾ ಗೋಗರೆಯುತ್ತದೆ. ಮಗುವಿನ ಮುಂದೆ ಮೊಬೈಲ್ ಹಿಡಿದು ಪ್ರಶ್ನೆಗಳನ್ನು ಕೇಳುತ್ತಾ ರೆಕಾರ್ಡ್ ಮಾಡಲಾಗಿದೆ. ಮಗು 'ನೀವು ಕೇಳಿ-ಕೇಳಿ ನಗ್ತೀರಿ' ಅಂತ ಸಂಕಟದಲ್ಲಿ ಒತ್ತಿ ಹೇಳುತ್ತದೆ.

ಇದು ಮಗುವಿನ ಖಾಸಗಿತನದ ವಿಚಾರ. ಚಿತ್ರೀಕರಿಸುವುದರಿಂದ ಮಗುವಿನ ಖಾಸಗಿತನವನ್ನು ಉಲ್ಲಂಘನೆ ಮಾಡಿದಂತಾಗುತ್ತದೆ. ಅಲ್ಲದೆ ಅದೊಂದು ಅಪರಾಧ ಕೂಡ. ಇಲ್ಲಿ ಮಗು ತನ್ನ ಭಾವನೆ, ಪ್ರತಿಕ್ರಿಯೆಯನ್ನು ಸಾಂದರ್ಭಿಕವಾಗಿ ತೋರಿದೆ. ಅದನ್ನು ರೆಕಾರ್ಡ್ ಮಾಡಿ ತೋರಿಸುವುದರಿಂದ ಮಗು ತನ್ನ ಭಾವನೆಯನ್ನು ಬದಲಿಸಿಕೊಳ್ಳದೇ ಹೋಗಬಹುದು. ಮುಂದೆ ಅದೇ ಅದರ ವ್ಯಕ್ತಿತ್ವವಾಗಿ ರೂಪುಗೊಳ್ಳಬಹುದು. ಅವರು ಮನೆಯ ಸದಸ್ಯರೇ ಆಗಲಿ, ಪೋಷಕರೇ ಆಗಲಿ, ಶಿಕ್ಷಕರೇ ಆಗಲಿ ಮಗುವಿನ ಖಾಸಗಿತನವನ್ನು ಗೌರವಿಸಬೇಕಾಗುತ್ತದೆ. ಮಕ್ಕಳ ಅನುಮತಿ ಇಲ್ಲದೆ ಫೋಟೊ ತೆಗೆಯುವುದು, ವಿಡಿಯೊ ಮಾಡುವುದು, ಶೇರ್ ಮಾಡುವುದು ಮಕ್ಕಳ ಹಕ್ಕಿನ ಉಲ್ಲಂಘನೆ.

'ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ. ಜೀವನದ ಸ್ವಪ್ರೇಮದ ಮಕ್ಕಳು. ಅವರು ನಿಮ್ಮ ಮೂಲಕ ಬರುತ್ತಾರೆಯೇ ವಿನಾ ನಿಮ್ಮಿಂದ ಅಲ್ಲ. ಅವರು ನಿಮ್ಮೊಂದಿಗೇ ಇದ್ದರೂ ನಿಮ್ಮ ಒಡೆತನಕ್ಕೆ ಒಳಪಟ್ಟವರಲ್ಲ. ನಿಮ್ಮ ಒಲವನ್ನು ಅವರಿಗೆ ನೀಡಬಹುದು, ಆಲೋಚನೆಗಳನ್ನಲ್ಲ, ಅವರಿಗೆ ಅವರದೇ ಆದ ಆಲೋಚನೆಗಳಿರುತ್ತವೆ' ಎನ್ನುತ್ತಾನೆ ಸಾಹಿತಿ ಖಲೀಲ್ ಗಿಬ್ರಾನ್.

ಮಕ್ಕಳು ನಮ್ಮವು ಅಂದಮಾತ್ರಕ್ಕೆ ನಾವು ಅವುಗಳ ಮೇಲೆ ಹಕ್ಕು ಸಾಧಿಸುವುದಲ್ಲ. ಒತ್ತಡ ಹೇರುವುದಲ್ಲ. ಒಂದೇ ಸಮನೆ ದಂಡಿಸುವುದೂ ಸರಿಯಲ್ಲ. ನಮ್ಮ ವಿಚಾರಗಳನ್ನು ತುರುಕಿ ತುರುಕಿ ಹಾದಿ ತಪ್ಪಿಸುವುದಲ್ಲ. ಅತೀ ಮುದ್ದು ಮಾಡಿ ಕೆಲಸಕ್ಕೆ ಬಾರದವರಂತೆ ಸಿದ್ಧಗೊಳಿಸುವುದೂ ಅಲ್ಲ. ನಮ್ಮೆಲ್ಲಾ ಆಸೆಗಳನ್ನು ಅವರ ಮೇಲೆ ಹೇರಿ ಅವರ ಬೆನ್ನುಗಳನ್ನು ಬಾಗಿಸುವುದಲ್ಲ. ನೌಕರಿಗಾಗಿಯೇ ಓದಿ ಎಂದು ಹಿಂಸೆ ನೀಡಿ ಬದುಕಿನ ರುಚಿಯನ್ನು ಕೆಡಿಸುವುದಲ್ಲ.

ನಾವು ಮಗುವಿನ ನೆಲೆಯಲ್ಲಿ ಆ ವಿಡಿಯೊ ತುಣುಕುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅನೇಕ ಒಳನೋಟಗಳು ಸಿಗುತ್ತವೆ. ಮಗುವಿನ ಮೇಲೆ ಹೇರಲಾದ ಒತ್ತಡ ಕಣ್ಣಿಗೆ ರಾಚುತ್ತದೆ. ಒತ್ತಡದ ಭಾರ ಹೊರಲಾರದೆ ಭಾವನೆಯ ಕಟ್ಟೆ ಒಡೆದು ಮಗು ಅಂತಹ ವರ್ತನೆಗೆ ಇಳಿದಿದೆ. ಪದೇ ಪದೇ ಅದನ್ನು ಪುನರಾವರ್ತಿಸಿದರೆ ಮಗು ಆ ವರ್ತನೆಯನ್ನೇ ತನ್ನ ರಕ್ಷಣಾ ತಂತ್ರವನ್ನಾಗಿ ಬಳಸಿಕೊಳ್ಳಬಹುದು. ಕೊನೆಯವರೆಗೂ ಮಗುವಿನಲ್ಲಿ ಆ ವರ್ತನೆಯೇ ಉಳಿದು ಹೋಗಬಹುದು. ಇದೊಂದು ಅಪಾಯಕಾರಿ ನಡೆ. ಈ ವಿಡಿಯೊ ನೋಡಿದ ಬೇರೆ ಮಕ್ಕಳೂ ಅದನ್ನೇ ಅನುಕರಿಸುವ ಅಪಾಯವಿದೆ.



ಹೀಗೆ ವಿಡಿಯೊ ಮಾಡಿ ಹರಿಯಬಿಟ್ಟು 'ನೋಡಿ ಈ ಕಾಲದ ಮಕ್ಕಳು ಹೇಗೆ ಕೆಟ್ಟು ಹೋಗ್ತಿದಾವೆ' ಎಂದು ಷರಾ ಬರೆಯುವ ಮಂದಿಯೇ ಹೆಚ್ಚು. ಯಾವ ಮಗುವೂ ಹುಟ್ಟುವಾಗಲೇ ಕೆಟ್ಟ ಗುಣಗಳನ್ನು ಹೊತ್ತುಕೊಂಡೇ ಹುಟ್ಟುವುದಿಲ್ಲ. ಅವೆಲ್ಲಾ ಮಗು ಈ ಪರಿಸರದಲ್ಲೇ ಕಲಿತುಕೊಂಡಿದ್ದು. ಅದಕ್ಕೆ ಮಗು ಕಾರಣವಲ್ಲ. ನಾವು ಮತ್ತು ನೀವೆಲ್ಲರೂ ಕಾರಣ. ನಮ್ಮ ಈ ಹೊತ್ತಿನ ದುರಾಸೆ ಕಾರಣ. ಮಕ್ಕಳು ಅಂಕದ ಮೂಟೆಗಳಾಗಬೇಕು, ದುಡಿಯುವ ಯಂತ್ರಗಳಾಗಬೇಕು, ಹಣ ಮಾಡುವ ಸ್ಕೀಮುಗಳಾಗಬೇಕು, ಹೇಗಾದರೂ ಸರಿ ಸಿರಿವಂತಿಕೆ ಮೈವೆತ್ತಬೇಕು ಅನ್ನುವ ನಮ್ಮ ಈ ಐಲು ಮನಃಸ್ಥಿತಿಯೇ ಇದಕ್ಕೆಲ್ಲಾ ಕಾರಣ. 'ಮಗಾ ನಿನ್ನ ಬದುಕು ಒಳ್ಳೆಯದಾಗಿರಲಿ...' ಅನ್ನುವ ಹಾರೈಕೆ ಎಲ್ಲೋ ಕಳೆದುಹೋಗಿದೆ. ಬದುಕಿನ ಖುಷಿ ಹಣದಲ್ಲಿ, ಅಧಿಕಾರದಲ್ಲಿದೆ ಎಂದು ಈಗೀಗ ಮಕ್ಕಳ ತಲೆಗೆ ತುಂಬಲಾಗುತ್ತಿದೆ. ಅದರ ಫಲವೇ ಇದು.

ಅಬ್ರಹಾಂ ಲಿಂಕನ್ ತಮ್ಮ ಮಗನ ಶಿಕ್ಷಕನಿಗೆ ಬರೆದ ಪತ್ರದ ಸಾಲುಗಳು ಇವು: 'ಪ್ರತಿಯೊಬ್ಬ ಮುಠ್ಠಾಳನಿಗೂ ಪ್ರತಿಯಾಗಿ ಒಬ್ಬ ಧೀರೋದಾತ್ತನನ್ನು, ಪ್ರತಿಯೊಬ್ಬ ಸ್ವಾರ್ಥ ರಾಜಕಾರಣಿಗೆ ಬದಲು ಒಬ್ಬ ನಿಷ್ಠಾವಂತನನ್ನು, ಪ್ರತೀ ಶತ್ರುವಿಗೆ ಬದಲು ಒಬ್ಬ ಸನ್ಮಿತ್ರ ನಿದ್ದಾನೆ ಎಂಬುದನ್ನು ಕಲಿಸಿರಿ. ಶ್ರಮವಹಿಸಿ ಗಳಿಸಿದ ಹಣ ಹೆಚ್ಚು ಬೆಲೆಯುಳ್ಳದ್ದು ಎಂಬುದನ್ನು, ಸೋಲು ಗೆಲುವಿನಲ್ಲಿ ಸಮಚಿತ್ತದಿಂದ ಇರುವುದನ್ನು, ಸೃಷ್ಟಿಯ ಕೌತುಕವನ್ನು ಕಂಡು ಧ್ಯಾನಿಸುವುದನ್ನು ಕಲಿಸಿರಿ. ತನ್ನ ವಿಚಾರಗಳ ಬಗ್ಗೆ ತನಗೇ ನಂಬಿಕೆ ಗಳಿಸಿಕೊಳ್ಳುವುದನ್ನು ಕಲಿಸಿರಿ. ಹಾಗಾದಾಗ ಅವರು ಮಾನವೀಯ ವ್ಯಕ್ತಿಗಳಾಗಿ ಬೆಳೆಯುತ್ತಾರೆ'. ಈ ಮಾತು ಎಲ್ಲ ಕಾಲಕ್ಕೂ ಮನನೀಯ.

ವಾಚಕರ ವಾಣಿ

ಸಾರ್ವಜನಿಕ ಸಾರಿಗೆ ಎಲ್ಲೆಡೆ ಪ್ರಾರಂಭವಾಗಲಿ

ಜನಸಾಮಾನ್ಯರು ಕೆಲಸ ಕಾರ್ಯಗಳಿಗೆ ತೆರಳಲು ಹೆಚ್ಚಿಗೆ ಬಸ್‌ಗಳನ್ನೇ ಅವಲಂಬಿಸಿರುತ್ತಾರೆ. ಅದರಲ್ಲೂ ವಿಶೇಷವಾಗಿ ಹಳ್ಳಿಗಳಲ್ಲಿ ಇದ್ದುಕೊಂಡು ನಗರಗಳಿಗೆ ಹೋಗಿ ಕೆಲಸ ಮಾಡುವವರು, ಬೆಳೆದ ಬೆಳೆಗಳನ್ನು ಮಾರಾಟ ಮಾಡುವ ಸಲುವಾಗಿ ರೈತರು, ವ್ಯಾಪಾರಿಗಳು ಊರಿಂದ ಊರಿಗೆ ಪ್ರಯಾಣ ಮಾಡಲು ಬಸ್‌ಗಳನ್ನೇ ನಂಬಿರುತ್ತಾರೆ. ಆದರೆ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿ ಜನಜೀವನ ಸಹಜಸ್ಥಿತಿಗೆ ಬಂದಿದ್ದರೂ ಖಾಸಗಿ ಸಾರಿಗೆ ವ್ಯವಸ್ಥೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಗಿಲ್ಲ.

ಪ್ರಯಾಣಿಕರ ಸಂಖ್ಯೆ ಕಡಿಮೆ ಇರುವೆಡೆ ಬಸ್ ಓಡಿಸಿದರೆ ಆರ್ಥಿಕ ನಷ್ಟ ಎದುರಾಗುತ್ತದೆ ಎಂದು ಸೇವೆ ಒದಗಿಸಲು ಖಾಸಗಿ ಬಸ್ ಮಾಲೀಕರು ಹಿಂದೆಮುಂದೆ ನೋಡುತ್ತಾರೆ. ಆದರೆ ಸರ್ಕಾರಿ ಸಾರಿಗೆಯ ಮೂಲ ಉದ್ದೇಶ ಸಾರ್ವಜನಿಕರಿಗೆ ಸೇವೆ ಸಲ್ಲಿಸುವುದೇ ಆಗಿರುತ್ತದೆ. ಹೀಗಾಗಿ ಸರ್ಕಾರ ರಾಜ್ಯದಾದ್ಯಂತ ಆದಷ್ಟು ಬೇಗ ಸರ್ವೆ ಮಾಡಿಸಿ, ಎಲ್ಲೆಲ್ಲಿ ಅವಶ್ಯಕವೋ ಅಲ್ಲೆಲ್ಲ ಸರ್ಕಾರಿ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕು.

ಹರವೆಸಂಗಣ್ಣಪ್ರಕಾಶ್, ಹರವೆ, ಚಾಮರಾಜನಗರ

ಖರೀದಿ ಕೇಂದ್ರಕ್ಕಾಗಿ ಕಾದಿದ್ದಾರೆ ರೈತರು

ಕಡಲೆಗೆ ಸರ್ಕಾರ ಬೆಂಬಲ ಬೆಲೆ ಘೋಷಿಸಿ ತಿಂಗಳುಗಳೇ ಕಳೆದಿವೆ. ಅದರ ಖರೀದಿಗೆ ಸರ್ಕಾರ ಯಾವಾಗ ಕೇಂದ್ರಗಳನ್ನು ಪ್ರಾರಂಭಿಸುತ್ತದೆ ಎಂದು ರೈತರು ತುದಿಗಾಲಲ್ಲಿ ನಿಂತು ಕಾಯುತ್ತಿದ್ದಾರೆ. ಆದರೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸ್ಪಷ್ಟ ಉತ್ತರವಿಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಕಡಲೆ ಧಾರಣೆ ದಿನೇದಿನೇ ಕುಸಿಯುತ್ತಿದೆ. ಇದರಿಂದ ರೈತರು ಹಣೆಗೆ ಕೈ ಹಚ್ಚಿ ಕುಳಿತುಕೊಳ್ಳುವಂತಾಗಿದೆ. ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ವಿಚಾರಿಸಿದರೆ, ತೊಗರಿ ಖರೀದಿ ನಂತರ ಖರೀದಿಸುತ್ತೇವೆ ಎಂದು ಹೇಳುತ್ತಾರೆ. ಈ ವರ್ಷ ಕಡಲೆ ಬೆಳೆಯಲ್ಲಿ ದಾಖಲೆ ಇಳುವರಿ ಕಂಡಿದ್ದರೂ ದೇವರು ವರ ಕೊಟ್ಟರೂ ಪೂಜಾರಿ ಕೊಡ ಎಂಬಂಥ ಸ್ಥಿತಿ ರೈತರದ್ದಾಗಿದೆ. ಸರ್ಕಾರವು ಏಕಕಾಲಕ್ಕೆ ತೊಗರಿ ಮತ್ತು ಕಡಲೆ ಖರೀದಿ ಕೇಂದ್ರಗಳನ್ನು ಪ್ರತ್ಯೇಕವಾಗಿ ಪ್ರಾರಂಭಿಸಿ, ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕು.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

ಮಾಹಿತಿ ಸೋರಿಕೆ: ಕ್ಷಿಪ್ರ ತನಿಖೆ ಅಗತ್ಯ

ಷೇರು ಹೂಡಿಕೆದಾರರಿಗೆ ದಲ್ಲಾಳಿಗಳು ಅಥವಾ ಕಂಪನಿಗಳಿಂದ ಅನ್ಯಾಯವಾದಾಗ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರಕ್ಕೆ ದೂರು ಸಲ್ಲಿಸಬಹುದು. ಆದರೆ ಅಲ್ಲಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕಿಯೊಬ್ಬರು ಹಿಮಾಲಯದ ಯೋಗಿಯೊಬ್ಬರ ಜೊತೆ ಅತಿ ದೊಡ್ಡ ಷೇರು ಮಾರುಕಟ್ಟೆಯ ಸೂಕ್ಷ್ಮ ಮಾಹಿತಿಗಳನ್ನು ಹಂಚಿಕೊಂಡಿರುವುದು ಬೇಲಿಯೇ ಎದ್ದು ಹೊಲ ಮೇಯ್ದಂತಹ ಆತಂಕಕಾರಿ ವಿಷಯವಾಗಿದೆ. ಹೂಡಿಕೆದಾರರಿಗೆ ಆಗಾಗ ಮಾರ್ಗದರ್ಶನ ಮಾಡುವ, ಪಾಠ ಹೇಳುವ ಸಂಸ್ಥೆಯ ಕಾರ್ಯಾಚರಣೆಯ ಬಗ್ಗೆಯೂ ನಿರಂತರವಾಗಿ ಆಮೂಲಾಗ್ರ ಪರಿಶೋಧನೆ ಮಾಡುತ್ತಿದ್ದರೆ ಮಾತ್ರ ಹೂಡಿಕೆದಾರರ ವಿಶ್ವಾಸವನ್ನು ಉಳಿಸಿಕೊಳ್ಳಲು ಸಾಧ್ಯ. ಭಾರತೀಯ ಜೀವ ವಿಮಾ ನಿಗಮದ ಬಹು ನಿರೀಕ್ಷಿತ, ಪ್ರತಿಷ್ಠಿತ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಬರುತ್ತಿರುವ ಈ ಮಹತ್ತರ ಘಟ್ಟದಲ್ಲಿ ಮೇಲಿನ ಪ್ರಕರಣದ ಕ್ಷಿಪ್ರ ತನಿಖೆ ನಡೆದು, ಆರೋಪಿಗಳಿಗೆ ಕೂಡಲೇ ಶಿಕ್ಷೆಯಾಗುವುದು ಅತ್ಯಗತ್ಯ.

ಭರತ್ ಬಿ.ಎನ್., ಬೆಂಗಳೂರು

ಸಂಘರ್ಷಕ್ಕೆ ಇತಿಶ್ರೀ ಹಾಡಲಿ

ಸಂವಿಧಾನಾತ್ಮಕ ಹುದ್ದೆಯಲ್ಲಿ ಇರುವ ಸಚಿವ ಕೆ.ಎಸ್.ಈಶ್ವರಪ್ಪ ಅವರು ಸಂದರ್ಭ ಯಾವುದೇ ಇರಲಿ, ಇವತ್ತಲ್ಲ ನಾಳೆ ಕೆಂಪುಕೋಟೆಯ ಮೇಲೆ ಕೇಸರಿ ಧ್ವಜ ಹಾರಾಡಲಿದೆ ಎಂದದ್ದು ಸರ್ವಥಾ ಸಮರ್ಥನೀಯವಲ್ಲ. ಕೆಂಪುಕೋಟೆಯ ಧ್ವಜಸ್ತಂಭ ಕೇವಲ ಒಂದು ಕಂಬವಲ್ಲ. ಸಮಸ್ತ ಭಾರತೀಯರ ದೇಶಾಭಿಮಾನದ ಸಂಕೇತ, ಸಾರ್ವಭೌಮತ್ವದ ಪ್ರತೀಕ. ಅಲ್ಲಿ ರಾಷ್ಟ್ರಧ್ವಜವಷ್ಟೇ ಹಾರಾಡಬೇಕು. ಅನ್ಯ ಧ್ವಜವನ್ನು ಹಾರಿಸುತ್ತೇವೆ ಎಂದರೆ ಅದಕ್ಕೆ ಎರಡರ್ಥವಿಲ್ಲ. ಒಂದೇ ಅರ್ಥ. ರಾಷ್ಟ್ರಧ್ವಜವನ್ನು ಇಳಿಸುತ್ತೇವೆ ಎಂದು!

ಈಶ್ವರಪ್ಪನವರ ಮನಸ್ಸಿನಲ್ಲಿ ಅಂಥ ಭಾವನೆ ಇತ್ತೋ ಇಲ್ಲವೋ ಅದು ಬೇರೆ ಪ್ರಶ್ನೆ. ಆದರೆ, ಆ ಗಳಿಗೆಯಲ್ಲಿ ಅವರ ಮಾತು ಧ್ವನಿಸಿದ್ದು ಅದನ್ನೇ. ಹಾಗಾಗಿ, ಈಶ್ವರಪ್ಪನವರ 'ನಾನು ರಾಷ್ಟ್ರಧ್ವಜಕ್ಕೆ ಅಗೌರವ ತೋರಿಲ್ಲ'ವೆಂಬ ಹೇಳಿಕೆ ಸಮರ್ಥನೀಯವಲ್ಲ. ಹಾಗೆಂದು ಅದೇನೂ ಪರಿಹಾರವಿಲ್ಲದ ಪ್ರಮಾದವಲ್ಲ. ವಿಷಯ ಸದನದಲ್ಲಿ ಪ್ರಸ್ತಾಪವಾದೊಡನೆ ಬೇಷರತ್ತಾಗಿ ಕ್ಷಮೆ ಕೋರಿದ್ದರೆ ಅವರ ಗೌರವವೂ ಹೆಚ್ಚುತ್ತಿತ್ತು, ವಿರೋಧ ಪಕ್ಷದವರ ಬಾಯಿ ಮುಚ್ಚಿಸಿದಂತೆಯೂ ಆಗುತ್ತಿತ್ತು. ಹಾಗೆ ಮಾಡದೆ ವಿಷಯವನ್ನು ಪಕ್ಷದ ನೆಲೆಗಟ್ಟಿಗೆ ಎಳೆತಂದು ಸಮರ್ಥಿಸಿಕೊಂಡದ್ದು, ಅಲ್ಲದೆ ಅವರ ಪಕ್ಷದ ಇತರ ನಾಯಕರು ಸಮರ್ಥನೆಗೆ ನಿಂತದ್ದು ಸಮಂಜಸವಲ್ಲ. ಪ್ರತಿಷ್ಠೆಯನ್ನು ಬದಿಗಿಟ್ಟು ಎರಡೂ ಪಕ್ಷದವರು ಸಂಘರ್ಷಕ್ಕೆ ಕೂಡಲೇ ಇತಿಶ್ರೀ ಹಾಡುವುದು ಒಳ್ಳೆಯದು. ಈಗಾಗಲೇ ರಾಜ್ಯದಲ್ಲಿ ಧರ್ಮಸೂಕ್ಷ್ಮತೆ ಪ್ರಕ್ಷುಬ್ಧ ಸ್ಥಿತಿಯನ್ನು ನಿರ್ಮಿಸಿದೆ. ಶಾಲಾ ಕಾಲೇಜುಗಳಲ್ಲಿ ಬಿಗುವಿನ ವಾತಾವರಣವಿದೆ. ಇಂಥ ಹೊತ್ತಿನಲ್ಲಿ ಸದನವನ್ನು ಕಾರ್ಯಕಲಾಪಗಳು ನಡೆಯದಂಥ ಸ್ಥಿತಿಗೆ ದೂಡುವುದು ತರವಲ್ಲ.

ರೇಚಂಬಳ್ಳಿ ದುಂಡಮಾದಯ್ಯ, ಚಾಮರಾಜನಗರ

ಗೋಮಾಳ ಪರಭಾರೆ: ತನಿಖೆಗೆ ಅನುಮತಿ ಕೊಡಿ

'37 ಎಕರೆ ಗೋಮಾಳ ಪರಭಾರೆ; ಅಧಿಕಾರಿಗೆ ರಕ್ಷಣೆ' (ಪ್ರ.ವಾ., ಫೆ. 18). ಅಧಿಕಾರಕ್ಕೆ ಬರುವ ಯಾವುದೇ ಪಕ್ಷ ತಮ್ಮದು ಭ್ರಷ್ಟಾಚಾರಮುಕ್ತ ಸರ್ಕಾರ ಎಂದು ಶಂಖನಾದ ಮಾಡುತ್ತಲೇ ಇರುತ್ತದೆ. ಆದರೆ, ಅದರ ವರ್ತನೆ ತದ್ವಿರುದ್ಧವಾಗಿರುತ್ತದೆ. ಅಂದಾಜು ₹ 200 ಕೋಟಿ ಮೌಲ್ಯದ 37 ಎಕರೆ ಗೋಮಾಳವನ್ನು ಪರಭಾರೆ ಮಾಡಿರುವ ಅಧಿಕಾರಿ ಕೆ.ರಂಗನಾಥ್ ವಿರುದ್ಧ ತನಿಖೆ ನಡೆಸಲು ಅನುಮತಿ ಕೋರಿದ್ದ ಭ್ರಷ್ಟಾಚಾರ ನಿಗ್ರಹ ದಳದ ಪ್ರಸ್ತಾವವನ್ನು ರಾಜ್ಯ ಸರ್ಕಾರ ತಿರಸ್ಕರಿಸಿರುವುದು ಇಬ್ಬಂದಿತನದ ದ್ಯೋತಕ. ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯ ಶಿಫಾರಸನ್ನೂ ಗಣನೆಗೆ ತೆಗೆದುಕೊಳ್ಳದ ಸರ್ಕಾರವು ಆರೋಪಿ ಅಧಿಕಾರಿಯ ತಲೆಕಾಯಲು ನಿಂತಿರುವುದು ದುರಂತವೇ ಸರಿ. ಈ ಅಧಿಕಾರಿಯು ರಾಜ್ಯ ಸರ್ಕಾರವನ್ನೇ ಮಣಿಸುವಷ್ಟು ಪ್ರಭಾವಶಾಲಿಯೇ ಎಂಬ ಅನುಮಾನ ಹುಟ್ಟುತ್ತದೆ. ಸರ್ಕಾರ ತನಿಖೆಗೆ ಅನುಮತಿ ನೀಡುವುದರ ಮೂಲಕ ತನ್ನ ಘನತೆ ಉಳಿಸಿಕೊಳ್ಳಬೇಕಾಗಿದೆ. ಅಧಿಕಾರಿಗಳಿಗೆ ಸ್ಪಷ್ಟ ಸಂದೇಶ ರವಾನಿಸಬೇಕಾಗಿದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನ್ನಡ ಸಾಹಿತ್ಯ ಪರಿಷತ್‌ನ ಬೈಲಾ ತಿದ್ದುಪಡಿ ಅಗತ್ಯ ಇದೆಯೇ?

ಕಸಾಪವನ್ನು 'ಹೌದಪ್ಪ'ಗಳ ಚಾವಡಿಯಾಗಿಸುವ ಯತ್ನ

• ಪ್ರೊ.ಎಸ್.ಜಿ. ಸಿದ್ಧರಾಮಯ್ಯ



1915ರಲ್ಲಿ ರಾಜಪ್ರಭುತ್ವದ ಆಶ್ರಯದಲ್ಲಿ ಪ್ರಾರಂಭವಾದ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ-ಕನ್ನಡಿಗ-ಕರ್ನಾಟಕದ ಸಾಕ್ಷಿಪ್ರಜ್ಞೆಯಾಗಿ ಬೆಳೆದು ಬಂದ ಬಗೆಯೇ ವಿಸ್ಮಯಕರವಾದುದು. ಅರಮನೆಯ ಆವರಣದಲ್ಲಿ ಉಪಜೀವಿತವಾಗಿ ಉಸಿರಾಡುತ್ತಿದ್ದ ಸಾಹಿತ್ಯ, ಕೇವಲ ಪಂಡಿತಮಾನ್ಯರ ಸ್ವತ್ತಾಗದೆ ಜನಸಾಮಾನ್ಯರ ಅನುಭವ ಸಂಪತ್ತಾಗಿ ಜನಮುಖಿಯಾಗಿ ಪಾಮರರ ಬೀದಿ ಜಗಲಿಗಳನ್ನೂ ಒಳಗೊಳ್ಳುತ್ತಾ ವಿಶ್ವಕನ್ನಡಿಗರ ವ್ಯಾಪ್ತಿಗೆ ವಿಸ್ತರಿಸಿ ಬೆಳೆದದ್ದೇ ಒಂದು ಬೆರಗು. ಪ್ರಭುಗಳ ಆಶ್ರಯದಲ್ಲಿ ಪ್ರಾರಂಭವಾದರೂ ಪ್ರಭುಗಳು ಅದರ ಸ್ವಾಯತ್ತತೆಯನ್ನು ಘನತೆಯಲ್ಲಿ ಗೌರವಿಸಿದ್ದರು. ಪ್ರಜಾಪ್ರಭುತ್ವದಲ್ಲೂ ಯಾವ ರಾಜಕೀಯ ಪಕ್ಷವೂ ಕಸಾಪದ ಸ್ವಾಯತ್ತತೆಯ ಘನತೆಗೆ ಕುಂದು ಉಂಟು ಮಾಡಿರಲಿಲ್ಲ. ನಮ್ಮ ಸಾಮಾಜಿಕ ಪಿಡುಗಾಗಿರುವ ಜಾತಿ ರಾಜಕಾರಣದ ದುರ್ಗಂಧ ಸುಳಿದರೂ ಅದು ಕಸಾಪದ ಮೂಲ ಆಶಯಕ್ಕೆ ಎಂದೂ ದ್ರೋಹ ಬಗೆಯಲಿಲ್ಲ. ಕೆಲವು ಅಧ್ಯಕ್ಷರ ಅಧಿಕಾರ ಲಾಲಸೆಯ ಕಾರಣದಿಂದಾಗಿ, ಮೂರುವರ್ಷದ ಅಧಿಕಾರಾವಧಿ ಐದುವರ್ಷದ ವಿಸ್ತರಣೆಗೆ ವಾಮಮಾರ್ಗದಲ್ಲಿ ಹರಿದದ್ದು ಕಸಾಪದಲ್ಲಿ ನಡೆದ ಕೆಟ್ಟ ಬೆಳವಣಿಗೆ. ಇದರ ಕೆಟ್ಟ ಪರಿಣಾಮವೆಂದರೆ ಇದುವರೆಗಿನ 'ರಾಜಮಾರ್ಗ'ವನ್ನು ಬಿಟ್ಟು ಅನೀತಿಯ ಅಕ್ರಮ ಮಾರ್ಗದಲ್ಲಿ ಅಹಂಕಾರದ ವರ್ತನೆಗಳು ವಿಜೃಂಭಿಸತೊಡಗಿವೆ.

2021ರ ಕಸಾಪ ಅಧ್ಯಕ್ಷರ ಚುನಾವಣೆಯಲ್ಲಿ ರಾಜಕೀಯ ಪಕ್ಷವೊಂದು ಒಬ್ಬ ವ್ಯಕ್ತಿಗೆ ಬೆಂಬಲವನ್ನು ಪಕ್ಷ ವಲಯದಲ್ಲಿ ಘೋಷಿಸಿ, ಕಸಾಪ ಚುನಾವಣೆಯಲ್ಲಿ ನೇರವಾಗಿ ಭಾಗವಹಿಸಿತು. ಅದರ ಬೆಂಬಲದಿಂದ ಗೆದ್ದ ವ್ಯಕ್ತಿ, ಅಧಿಕಾರಗ್ರಹಣದ ನಂತರ ಸರ್ವಾಧಿಕಾರಿಯಂತೆ ವರ್ತಿಸತೊಡಗಿದ್ದಾರೆ. ದಿನಕ್ಕೊಂದು ಹೇಳಿಕೆ ನೀಡುತ್ತಾ ಕನ್ನಡದ ಸಾಕ್ಷಿಪ್ರಜ್ಞೆಯಂತಿರುವ ಕಸಾಪವನ್ನು ಒಂದು ಸಂಘಟನೆಯ ಪಕ್ಷ ರಾಜಕಾರಣದ ವೇದಿಕೆಯಾಗಿ ಪರಿವರ್ತಿಸ ಹೊರಟಿದ್ದಾರೆ. ನೂರು ವರ್ಷಗಳಿಂದಲೂ ಬೈಲಾ ತಿದ್ದುಪಡಿಯೇ ಆಗಿಲ್ಲವೆಂದು ಹಸಿಸುಳ್ಳು ಹೇಳುತ್ತಾ, ಕಸಾಪ ಬೈಲಾದ ಸಮಗ್ರ ತಿದ್ದುಪಡಿಗೆ ಸಮಿತಿ ರಚಿಸಿದ್ದಾರೆ. ಆ ಸಮಿತಿ ಸಿದ್ಧಪಡಿಸಿದ ಕರಡು ಪ್ರತಿಯ ಕೆಲ ಅಂಶಗಳು ಪತ್ರಿಕೆಯಲ್ಲಿ (ಫೆ. 15ರಂದು) ಪ್ರಕಟವಾಗಿವೆ. ಅಲ್ಲಿ ಪ್ರಸ್ತಾಪಿತವಾಗಿರುವ ಹಲವು ತಿದ್ದುಪಡಿಗಳು ಕಸಾಪದ ಮೂಲ ಹಾಗೂ ಮುಖ್ಯ ಆಶಯಕ್ಕೇ ಕೊಡಲಿ ಬೀಸಿವೆ.

> ಪ್ರಸ್ತಾವಿತ ತಿದ್ದುಪಡಿಗಳ ಉದ್ದೇಶ ಕಸಾಪದಲ್ಲಿ ಇದುವರೆಗೆ ಅನುಷ್ಠಾನದಲ್ಲಿದ್ದ ವಿಕೇಂದ್ರೀಕರಣ ನೀತಿಯನ್ನು ತೊಡೆದುಹಾಕಿ ಕೇಂದ್ರೀಕೃತ ಅಧಿಕಾರಶಾಹಿಯನ್ನು ಜಾರಿಗೆ ತರುವುದು ಹಾಗೂ ಶ್ರೀಸಾಮಾನ್ಯರನ್ನು ಮತ್ತು ಪ್ರಶ್ನಿಸುವವರನ್ನು ಕಸಾಪದಿಂದ ದೂರವಿಟ್ಟು ಅದನ್ನು ಹೌದಪ್ಪಗಳ ಚಾವಡಿಯಾಗಿಸುವುದೇ ಆಗಿದೆ. ಇಲ್ಲಿಯ ಹೌದಪ್ಪಗಳು ಇನ್ನಾರೂ ಆಗಿರದೆ ಒಂದು ರಾಜಕೀಯ ಪಕ್ಷದ ಸೈದ್ಧಾಂತಿಕ ಒಪ್ಪಿತ ಮುದ್ರೆಯ ಕಾಲಾಳುಗಳೇ ಆಗಿರುತ್ತಾರೆ. ಅಂಥವರ ಕಬ್ಜಾ ಆಗುವಂತೆ ಕಸಾಪವನ್ನು ಬದಲಾಯಿಸುವುದೇ ಗುರಿ

ಪ್ರಜಾವಾಣಿ ಚರ್ಚೆ

(1) 'ಕಸಾಪ ಸದಸ್ಯರಾಗಲು 10ನೇ ತರಗತಿ ತೇರ್ಗಡೆಯಾಗಿರಬೇಕು. ಇಲ್ಲದಿದ್ದರೆ ಪರಿಷತ್ತು ನಡೆಸುವ ಪರೀಕ್ಷೆಯನ್ನು ಎದುರಿಸಬೇಕು. ಹೊರನಾಡು ಹೊರದೇಶಗಳಲ್ಲಿರುವ ಕನ್ನಡಿಗರಿಗೆ ಈ ಶೈಕ್ಷಣಿಕ ಅರ್ಹತೆ ಹಾಗೂ ಪರೀಕ್ಷೆ ಅನ್ವಯವಾಗದು' ಈ ನಿಬಂಧನೆ ಎಷ್ಟು ಹಾಸ್ಯಾಸ್ಪದವೋ ಅಷ್ಟೇ ದ್ವಂದ್ವಾತ್ಮಕವೂ ವೈರುಧ್ಯಗಳಿಂದ ಕೂಡಿದುದೂ ಆಗಿರುವುದರ ಜೊತೆಗೆ ತುಂಬಾ ಅಪಾಯಕಾರಿಯಾದುದೂ ಆಗಿದೆ. ಮಾನ್ಯ ಅಧ್ಯಕ್ಷರು ಈಗಾಗಲೇ ಕಸಾಪದಲ್ಲಿ ಮೂವತ್ತು ಸಾವಿರ ಹೆಬ್ಬೆಟ್ಟಿನವರು ಸದಸ್ಯರಾಗಿದ್ದಾರೆ ಎಂದು ತೀರ ಅಸಡ್ಡೆಯ ಧೋರಣೆಯಲ್ಲಿ ಮಾತನಾಡಿದ್ದಾರೆ. ಅವರ ಮಾತು ಸಾಹಿತ್ಯವನ್ನು ಕೇವಲ ಅಕ್ಷರವಂತರ ಸ್ವತ್ತಾಗಿ ಕಾಣುವ ಅಹಂಕಾರದ ಮಾತಾಗಿದೆ. ಕವಿರಾಜಮಾರ್ಗಕಾರ ಕನ್ನಡ ಜನಪದರನ್ನು 'ಕುರಿತೋದದೆಯುಮ್ ಕಾವ್ಯಪ್ರಯೋಗ ಪರಿಣತಮತಿಗಳ್ ನಾಡವರ್ಗಳ್' - ಎಂದು ಗೌರವಿಸಿದ್ದಾರೆ. ಅದಕ್ಕೆ ಸಾಕ್ಷ್ಯ ಎಂಬಂತೆ ಸಮೃದ್ಧವಾದ ಕನ್ನಡ ಜಾನಪದ ಸಾಹಿತ್ಯ ನಮ್ಮ ಕಣ್ಣೆದುರೇ ಇದೆ. ಜಾನಪದ ವೃತ್ತಿ ಗಾಯಕರು ಹಾಡಿರುವ ಇಪ್ಪತ್ತಕ್ಕೂ ಅಧಿಕ ಸಂಖ್ಯೆಯ ಜನಪದ ಪುರಾಣ ಕಾವ್ಯಗಳು ಇಲ್ಲಿ ಉಲ್ಲೇಖಾರ್ಹ. ಅವುಗಳ ಲೋಕದರ್ಶನ ಮನುಷ್ಯಕೇಂದ್ರಿತ ನೆಲೆಗಿಂತ ಜೀವಕೇಂದ್ರಿತ ವ್ಯಾಪ್ತಿಯ ನಿಸರ್ಗಧರ್ಮ ನಿಷ್ಠವಾದುದು. ಇಂಥ ಜನಪದ ಕಲಾವಿದರನ್ನು ಜನಪದ ಕಾಯಕ ಜೀವಿಗಳನ್ನು ಜನಪದ ಸಾಹಿತ್ಯವನ್ನು ಇದುವರೆಗೂ ಕಸಾಪ ತುಂಬು ಗೌರವದಲ್ಲಿ ಒಳಗೊಂಡಿದೆ ಹಾಗೂ ಅಷ್ಟೇ ಘನತೆಯಲ್ಲಿ ಅವರನ್ನು ನಡೆಸಿಕೊಂಡಿದೆ. ಈ ಸನ್ಮಾನ್ಯ ಅಧ್ಯಕ್ಷರು ಅವರನ್ನು ಹೊರಗಿಡುವ ನಿಯಮ ರೂಪಿಸಿದಂತೆ ಮಾತನಾಡುತ್ತಿದ್ದಾರೆ. ಇದರ ಹಿಂದಿನ ಉದ್ದೇಶವೇನು? ಒಂದು ಕೋಟಿ ಸದಸ್ಯತ್ವದ ಉದ್ದೇಶ ಯಾರನ್ನು ಯಾವ ಸಮುದಾಯವನ್ನು ನಿರ್ದಿಷ್ಟತೆಯಲ್ಲಿಟ್ಟುಕೊಂಡ ದುರುದ್ದೇಶದಿಂದ ಕೂಡಿದೆ?

(2) 'ಪರಿಷತ್ತಿನ ಸದಸ್ಯರು ಸದಸ್ಯ ಸಂಸ್ಥೆಗಳು ಅನುಚಿತ ನಡವಳಿಕೆ ಇತ್ಯಾದಿ ಆರೋಪಕ್ಕೆ ಒಳಗಾದರೆ ಮೇಲ್ನೋಟಕ್ಕೆ ಸರಿ ಎನ್ನಿಸಿದರೆ ಕೇಂದ್ರ ಘಟಕದ ಅಧ್ಯಕ್ಷರು ಅಂತಹವರನ್ನು ನೇರವಾಗಿ ಅಮಾನತು ಮಾಡಬಹುದು. ಇದಕ್ಕೆ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಬೇಕಿಲ್ಲ' ಎಂದೂ ಕರಡಿನಲ್ಲಿ ಹೇಳಲಾಗಿದೆ. ಇದು ಪ್ರಜಾಪ್ರಭುತ್ವವಾದಿ ಆಡಳಿತಾತ್ಮಕ ನಡೆಯಲ್ಲ. ಸರ್ವಾಧಿಕಾರಿ ಧೋರಣೆಯ ಏಕಪಕ್ಷೀಯ ನಿರ್ಧಾರದ ಅಜ್ಞಾನದ ನಡೆ. ಸಹಿತತ್ವದ ಸಾಹಿತ್ಯ ವಲಯದಲ್ಲಿ ಸರ್ವಾಧಿಕಾರಿ ಅಹಂಕಾರ ವಿಜೃಂಭಿಸಿದರೆ 'ಕುರುಡು ಕಾಂಚಾಣ ಕುಣಿಯುತಲಿತ್ತು ಕಾಲಿಗೆ ಬಿದ್ದವರ ತುಳಿಯುತಲಿತ್ತು' ಎಂಬಂತೆ ಬಲಿಹೋಗುವ ನಿರಪರಾಧಿಗಳ ಪ್ರಮಾಣಕ್ಕೆ ಲೆಕ್ಕ ಕೊಡುವವರೂ ಇಲ್ಲದಂತಾಗುತ್ತಾರೆ.

(3) 'ತಾತ್ಕಾಲಿಕವಾಗಿ ಜಿಲ್ಲೆ ಸೇರಿದಂತೆ ವಿವಿಧ ಘಟಕಗಳಿಗೆ ಅಧ್ಯಕ್ಷರ ನೇಮಕಾತಿ ಅಧಿಕಾರವನ್ನು ಕೇಂದ್ರ ಘಟಕದ ಅಧ್ಯಕ್ಷರಿಗೆ ನೀಡಬೇಕು' -ಈ ಪ್ರಸ್ತಾವ ವಿಕೇಂದ್ರೀಕರಣ ನೀತಿಯಲ್ಲಿ ವಿಸ್ತರಿಸಿಕೊಂಡಿದ್ದ ಕಸಾಪದ ಬೆಳವಣಿಗೆಯನ್ನು ಏಕವ್ಯಕ್ತಿ ಕೇಂದ್ರಿತ ಅಧಿಕಾರದ ಅಡ್ಡೆಯಾಗಿಸುವ ನಡೆಯಾಗಿದೆ.

(4) 'ಪರಿಷತ್ತಿಗೆ ಸಿಬ್ಬಂದಿ ನೇಮಕ ಮಾಡುವ ಅಧಿಕಾರವನ್ನು ಕೇಂದ್ರ ಘಟಕದ ಅಧ್ಯಕ್ಷರಿಗೇ ನೀಡಬೇಕು' - ಪ್ರಸ್ತಾವಿತ ತಿದ್ದುಪಡಿ ಸೇರಿದಂತೆ ಮೇಲಿನ ಎರಡೂ ತಿದ್ದುಪಡಿಗಳು ಸರ್ವಾಧಿಕಾರಿ ಧೋರಣೆಗೆ ಅಧ್ಯಕ್ಷರನ್ನು ಬೆಳೆಸುತ್ತವೆಯೇ ಹೊರತು ಕಾರ್ಯಕಾರಿ ಸಮಿತಿಯ ಅಗತ್ಯವನ್ನೇ ಅಪ್ರಸ್ತುತಗೊಳಿಸುವ ನಿಯಮಗಳಾಗಿವೆ.

(5) 'ಜಿಲ್ಲಾ ಸಮ್ಮೇಳನಗಳ ಅತಿಥಿಗಳ ಆಯ್ಕೆಯ ತೀರ್ಮಾನವನ್ನು ಕೇಂದ್ರ ಘಟಕದ ಅಧ್ಯಕ್ಷರಿಗೆ ನೀಡಬೇಕು' - ಇದು ಜಿಲ್ಲಾಧ್ಯಕ್ಷರನ್ನು ಅಲ್ಲಿಯ ಕಾರ್ಯಕಾರಿ ಸಮಿತಿಯನ್ನು ಹಾಗೂ ಜಿಲ್ಲಾ ಸಾಹಿತ್ಯ ವಲಯವನ್ನು ಜಿಲ್ಲೆಯ ಜನತೆಯನ್ನು ಅಗೌರವಿಸುವ ನಿಲುವಾಗಿದೆ.

ಮೇಲಿನ ಐದೂ ಪ್ರಸ್ತಾವಿತ ತಿದ್ದುಪಡಿಗಳ ಉದ್ದೇಶ ಕಸಾಪದಲ್ಲಿ ಇದುವರೆಗೆ ಅನುಷ್ಠಾನದಲ್ಲಿದ್ದ ವಿಕೇಂದ್ರೀಕರಣ ನೀತಿಯನ್ನು ತೊಡೆದುಹಾಕಿ ಕೇಂದ್ರೀಕೃತ ಅಧಿಕಾರಶಾಹಿಯನ್ನು ಜಾರಿಗೆ ತರುವುದು ಹಾಗೂ ಶ್ರೀಸಾಮಾನ್ಯರನ್ನು ಮತ್ತು ಪ್ರಶ್ನಿಸುವವರನ್ನು ಕಸಾಪದಿಂದ ದೂರವಿಟ್ಟು ಅದನ್ನು ಹೌದಪ್ಪಗಳ ಚಾವಡಿಯಾಗಿಸುವುದೇ ಆಗಿದೆ. ಇಲ್ಲಿಯ ಹೌದಪ್ಪಗಳು ಇನ್ನಾರೂ ಆಗಿರದೆ ಒಂದು ರಾಜಕೀಯ ಪಕ್ಷದ ಸೈದ್ಧಾಂತಿಕ ಒಪ್ಪಿತ ಮುದ್ರೆಯ ಕಾಲಾಳುಗಳೇ ಆಗಿರುತ್ತಾರೆ. ಅಂಥವರ ಕಬ್ಜಾ ಆಗುವಂತೆ ಕಸಾಪವನ್ನು ಬದಲಾಯಿಸುವುದು.

ಇದನ್ನು ಆಗುಮಾಡುವ ನಿಟ್ಟಿನಲ್ಲಿ ಅಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುತ್ತಿರುವ ಮಾನ್ಯ ಅಧ್ಯಕ್ಷರು ದಿನಕ್ಕೊಂದು ಬಗೆಯ ಮಾತುಗಳನ್ನು ಉದುರಿಸುತ್ತಾ ಕನ್ನಡಿಗರನ್ನು ಕನ್ನಡ ಪ್ರಜ್ಞೆಯನ್ನು ಲೆಕ್ಕಕ್ಕೇ ಇಟ್ಟುಕೊಳ್ಳದಂತೆ ಮಾತನಾಡುತ್ತಿದ್ದಾರೆ. ಇದುವರೆಗೂ ಐದುನೂರು ರೂಪಾಯಿಗಳಿದ್ದ ಸದಸ್ಯತ್ವದ ಶುಲ್ಕವನ್ನು ಒಮ್ಮೆಗೇ ಇನ್ನೂರೈವತ್ತಕ್ಕೆ ಇಳಿಸಿದ ಮಾತನಾಡಿದರು. ಈಗ ಮತ್ತೆ ಸದಸ್ಯರಿಗೆ ಕೊಡುವ ಸ್ಮಾರ್ಟ್‌ಕಾರ್ಡ್ ಶುಲ್ಕವನ್ನೂ ಸೇರಿಸಿ 400 ರೂಪಾಯಿ ಸದಸ್ಯತ್ವದ ಶುಲ್ಕ ಕಟ್ಟಬೇಕೆನ್ನುತ್ತಿದ್ದಾರೆ. ಇದುವರೆಗೂ ಸದಸ್ಯರಾಗುವವರು ಹತ್ತನೇ ತರಗತಿ ಪಾಸಾಗಿರಬೇಕು ಎನ್ನುತ್ತಿದ್ದವರು ಈಗ ಏಳನೇ ತರಗತಿ ಓದಿದ್ದರೆ ಸಾಕು ಎನ್ನುತ್ತಿದ್ದಾರೆ. ಹೆಬ್ಬೆಟ್ಟುಗಳಿಗೆ ಕನ್ನಡ ಕಲಿಸುವ ಮಾತನಾಡುತ್ತಿದ್ದಾರೆ. ಆಯ್ಕೆಯಾದ ಎರಡು ತಿಂಗಳ ಒಳಗೆ ಜಿಲ್ಲಾಧ್ಯಕ್ಷರುಗಳು ತಾಲ್ಲೂಕಿನ ಸದಸ್ಯರುಗಳ ಸಮಾಲೋಚನಾ ಸಭೆ ನಡೆಸಿ ಸಮಿತಿಯನ್ನು ರಚಿಸಬೇಕು. ರಚಿಸಿದ ಸಮಿತಿಯ ಪಟ್ಟಿಗೆ ಕೇಂದ್ರ ಅಧ್ಯಕ್ಷರ ಅನುಮತಿ ಪಡೆದು ಎರಡು ತಿಂಗಳೊಳಗೇ ಕಾರ್ಯಕ್ರಮಗಳನ್ನು ಆರಂಭಿಸಬೇಕು. ಇದು ಇದುವರೆಗೂ ಇದ್ದ ನಿಯಮ. ಆದರೆ ಚುನಾವಣೆ ಮುಗಿದು ಮೂರು ತಿಂಗಳಾದರೂ ಇನ್ನೂ ಎಲ್ಲಾ ಜಿಲ್ಲೆಗಳ ಸಮಿತಿಗಳಿಗೆ ಅನುಮೋದನೆಯನ್ನೇ ನೀಡಿಲ್ಲ. ರಾಜ್ಯ ಘಟಕಕ್ಕೂ ಪೂರ್ಣ ಪ್ರಮಾಣದಲ್ಲಿ ಸಮಿತಿಗಳ ನೇಮಕಾತಿ ಮಾಡಿಲ್ಲ. ಹೀಗೆ ಮಾಡಬೇಕಾದ ಕೆಲಸ ಬೆಟ್ಟದಷ್ಟಿರುವಾಗ ಇದಾವುದನ್ನೂ ತ್ವರಿತಗತಿಯಲ್ಲಿ ಮಾಡದೆ ಅಧಿಕಾರಗ್ರಹಣ ಮಾಡಿಕೊಂಡ ಮರುಕ್ಷಣದಿಂದಲೇ ಬೈಲಾ ತಿದ್ದುಪಡಿಯ ಉಮೇದಿಗೆ ಬಿದ್ದಿದ್ದಾರೆ. ಯಾವುದೇ ಸಂಸ್ಥೆಯ ಬೈಲಾತಿದ್ದುಪಡಿಗೆ ಮುನ್ನ ಆ ಸಂಸ್ಥೆಯ ಮೂಲ ಬೈಲಾದ ಆಗುಹೋಗುಗಳ ಅನುಭವಾತ್ಮಕ ಅರಿವು ಮುಖ್ಯ. ಇದಕ್ಕೆ ಕನಿಷ್ಠ ಒಂದೆರಡು ವರ್ಷಗಳ ಅನುಭವ ಪಡೆದ ನಂತರ ಮಾನ್ಯ ಅಧ್ಯಕ್ಷರು ಈ ಮಾತನ್ನಾಡಿದ್ದರೆ ಅದಕ್ಕೆ ಬೆಲೆ ಬರುತ್ತಿತ್ತು. ಅದನ್ನು ಬಿಟ್ಟು ಆತುರಾತುರವಾಗಿ ಬೈಲಾ ತಿದ್ದುಪಡಿ ಮಾಡಹೊರಟಿರುವ ಈ ಧೋರಣೆ ಕಸಾಪಕ್ಕೆ ವಕ್ಕರಿಸಿರುವ ದೊಡ್ಡ ಆಪತ್ತೇ ಸರಿ.

ಮಾನ್ಯ ಜೋಷಿಯವರು ಕನ್ನಡ-ಕನ್ನಡಿಗ-ಕರ್ನಾಟಕದ ಸಾಕ್ಷಿಪ್ರಜ್ಞೆಯಾಗಿರುವ ಕಸಾಪವನ್ನು ಅದರ ಸ್ವಾಯತತ್ತೆಯನ್ನು ಸಾಂಸ್ಕೃತಿಕ ಹಿರಿಮೆಯನ್ನು ಒಳಗೊಳ್ಳುವ ಗುಣದಲ್ಲಿ ಬೆಳೆಸುವ ಪ್ರಜ್ಞೆಯನ್ನು ರೂಢಿಸಿಕೊಳ್ಳಬೇಕಾದ ಅಗತ್ಯವಿದೆ. ಅಧಿಕಾರಿಯ ಅಹಂಕಾರಕ್ಕಿಂತ ಸರ್ವರೊಳಗೊಂದೊಂದು ನುಡಿಗಲಿತ ಸರ್ವಜ್ಞಪ್ರಜ್ಞೆಯ ವಿನಯದಲ್ಲಿ, ವಿಕೇಂದ್ರೀಕರಣದ ಬಹುತ್ವ ಭಾವಸಿರಿಯಲ್ಲಿ ಕಸಾಪವನ್ನು ಮುನ್ನಡೆಸುವ ತಿಳಿವಳಿಕೆಯನ್ನೂ ರೂಢಿಸಿಕೊಳ್ಳಲಿ ಎಂದು ಕಸಾಪದ ಒಬ್ಬ ಸದಸ್ಯನಾಗಿ ಹಾಗೂ ಒಬ್ಬ ಸಾಮಾನ್ಯ ಕನ್ನಡಿಗನಾಗಿ ವಿನಂತಿಸುತ್ತೇನೆ.

ಲೇಖಕ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 49

ಮೂರು ವಿಧದ ಶಿವಯೋಗಿಗಳು

ಈಗ ಸೂತಮಹಾಮುನಿ ಜಪಯೋಗದ ವಿವರ ಹೇಳುತ್ತಾನೆ. ಜಪದಿಂದ ಚಿತ್ತವು ಶುದ್ಧಿಯಾಗುವುದರಿಂದ ತಪಸ್ಸಾನ್ನಾಚರಿಸುವ ಶಿವಯೋಗಿಯೂ ಅವಶ್ಯವಾಗಿ ಜಪವನ್ನು ಮಾಡಬೇಕು ಎನ್ನುತ್ತಾನೆ.

ಶಿವಯೋಗಿಗಳಲ್ಲಿ ಕ್ರಿಯಾಯುಕ್ತರು, ತಪೋಯುಕ್ತರು ಮತ್ತು ಜಪಯುಕ್ತರೆಂಬ ಮೂರು ವಿಧದ ಶಿವಯೋಗಿಗಳಿದ್ದಾರೆ. ಧನ ಮುಂತಾದ ಐಶ್ವರ್ಯಗಳಿಂದ ಮತ್ತು ಸಾಷ್ಟಾಂಗ ನಮಸ್ಕಾರಗಳಿಂದ ಪೂಜಿಸುವವನು ಕ್ರಿಯಾಯೋಗಿ. ಮಿತವಾದ ಆಹಾರ ಸೇವಿಸುತ್ತಾ, ಜಿತೇಂದ್ರಿಯನಾಗಿ, ಪರರಿಗೆ ದ್ರೋಹವನ್ನೆಣಿಸದೆ ಪೂಜಾಯುಕ್ತನಾದವನು ತಪೋಯೋಗಿ. ಈ ಎರಡೂ ಗುಣಗಳುಳ್ಳವನಾಗಿ ಸದಾ ಶಿವಮಂತ್ರನಾಮಗಳನ್ನು ಜಪಿಸುವವನು ಜಪಯೋಗಿ.

ಆದಿಯಲ್ಲಿ ನಮಃ ಪದವುಳ್ಳ, ಐದು ತತ್ವ ಅಕ್ಷರಗಳಿರುವ ಶಿವನಾಮ ಓಂ ನಮಃ ಶಿವಾಯ ಮಂತ್ರವು ಸ್ಥೂಲಪ್ರಣವರೂಪವಾದ ಶಿವಪಂಚಾಕ್ಷರೀಮಂತ್ರ. ಈ ಮಂತ್ರವನ್ನ ಉಚ್ಚರಿಸುವಾಗ ಪ್ರಾರಂಭದಲ್ಲಿ ಓಂಕಾರವನ್ನು ಸೇರಿಸಿ 'ಓಂ ನಮಃ ಶಿವಾಯ' ಅಂತ ಜಪಿಸಬೇಕು. ಈ ಪಂಚಾಕ್ಷರಮಂತ್ರವನ್ನು ಜಪಿಸುವುದರಿಂದ ಸಕಲ ಇಷ್ಟಾರ್ಥಸಿದ್ಧಿಯನ್ನು ಪಡೆಯಬಹುದು. ಗುರುಮುಖದಿಂದ ಮಂತ್ರದ ಉಪದೇಶವನ್ನು ಪಡೆದು, ಯಾವ ತೊಂದರೆಯೂ ಇಲ್ಲದ ಪ್ರಶಸ್ತವಾದ ಪ್ರದೇಶದಲ್ಲಿ ಕುಳಿತು, ಶುಕ್ಲಪಕ್ಷದಲ್ಲಿ ಪ್ರಾರಂಭಿಸಿ ಕೃಷ್ಣಪಕ್ಷದವರೆಗೆ ಶಿವಪಂಚಾಕ್ಷರೀಜಪವನ್ನು ಮಾಡಬೇಕು. ಮಾಘಮಾಸ ಮತ್ತು ಭಾದ್ರಪದಮಾಸಗಳು ಶಿವಪಂಚಾಕ್ಷರೀಮಂತ್ರಜಪಕ್ಕೆ ಅತ್ಯುತ್ತಮವಾದ ಕಾಲ.

ಶಿವನನ್ನು ಸ್ಮರಿಸುವಾಗ ಅವನ ದಿವ್ಯಸ್ವರೂಪವನ್ನು ಮನದ ಪರದೆಯ ಮೇಲೆ ಬಿಡಿಸಬೇಕು. ಅದು ಹೇಗೆಂದರೆ, ಶಿವನು ಪದ್ಮಾಸನದಲ್ಲಿ ಕುಳಿತು, ತನ್ನ ಎಡತೊಡೆಯಲ್ಲಿ ಶಕ್ತಿ(ಪಾರ್ವತಿ)ಯನ್ನು ಕೂರಿಸಿಕೊಂಡಂತೆ. ಶಿರಸ್ಸಿನಲ್ಲಿ ಗಂಗೆ ಮತ್ತು ಚಂದ್ರ ಕಲೆಗಳನ್ನು ಧರಿಸಿರುವಂತೆ ಮನದಲ್ಲಿ ಚಿತ್ರಿಸಿಕೊಳ್ಳಬೇಕು. ಮಂಗಳವನ್ನುಂಟುಮಾಡುವ ಶಿವನನ್ನು ಪ್ರಮಥಗಣಗಳು ಸುತ್ತಲೂ ನೆರೆದಿರುವಂತೆ. ಮೃಗ(ಜಿಂಕೆ)ಶಿಶುವನ್ನು ಕೈಯಲ್ಲಿ ಹಿಡಿದಿರುವಂತೆ. ವರದಮುದ್ರೆ ಮತ್ತು ಅಭಯಮುದ್ರೆಗಳನ್ನು ಪ್ರದರ್ಶಿಸುತ್ತಾ, ಸದಾ ಭಕ್ತರಿಗೆ ಅನುಗ್ರಹವನ್ನುಂಟು ಮಾಡುವಂತೆ ಶಿವನನ್ನು ಸ್ಮರಿಸಬೇಕು.

ಶುದ್ಧವಾದ ಆಚಾರವುಳ್ಳ ಮನಸ್ಸಿನಿಂದ ಸೂರ್ಯಮಂಡಲದಲ್ಲಿ ಶಿವನನ್ನು ಪೂಜಿಸಿದ ನಂತರ, ಪೂರ್ವಾಭಿಮುಖವಾಗಿ ಕುಳಿತು ಪಂಚಾಕ್ಷರೀಮಂತ್ರವನ್ನು ಜಪಿಸಬೇಕು. ಕೃಷ್ಣಚತುರ್ಥಿಯ ಪ್ರಾತಃಕಾಲದಲ್ಲಿ ಶುದ್ಧವಾದ ಪ್ರದೇಶದಲ್ಲಿ ಕುಳಿತು, ಹನ್ನೆರಡು ಸಾವಿರ ಶಿವಪಂಚಾಕ್ಷರೀಮಂತ್ರ ಜಪಿಸಬೇಕು.

ನಂತರ ಪೂಜೆಗಾಗಿ ಶಿವಭಕ್ತರಾಗಿರುವ ದಂಪತಿಗಳನ್ನು ಆಹ್ವಾನಿಸಬೇಕು. ಸಾಂಬಶಿವಮೂರ್ತಿಸ್ವರೂಪನಾದ ಗುರುವನ್ನು, ಗುರುಪತ್ನಿಯೊಡನೆ ಆಹ್ವಾನಿಸಬೇಕು. ಹಾಗೇ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ, ಈಶಾನ ಎಂಬ ಐದು ಶಿವಮೂರ್ತಿಗಳ ಪೂಜೆಗಾಗಿ ಐದು ಶಿವಭಕ್ತರನ್ನು ನಿಯಮಿಸಬೇಕು. ನಂತರ ಪೂಜಾಸಾಮಗ್ರಿಗಳಿಂದ ಶಿವಪೂಜೆ ಪ್ರಾರಂಭಿಸಬೇಕು. ಶಿವಪೂಜೆಯನ್ನು ವಿಧಿವತ್ತಾಗಿ ಮಾಡಿದಮೇಲೆ, ಹೋಮ ಮಾಡಬೇಕು. ಅಗ್ನಿಮುಖಪರ್ಯಂತವಾಗಿ ತನ್ನ ಸೂತ್ರದಂತೆಯೇ ಆಚರಿಸಿ ಹೋಮವನ್ನು ಮುಗಿಸಬೇಕು.

ಶಿವಭಕ್ತರಾದವರಿಂದ ನೂರೆಂಟು ಹೋಮಗಳನ್ನು ಮಾಡಿಸಬೇಕು. ಹೋಮ ಮಾಡಿದವರಿಗೆ ದಕ್ಷಿಣೆಯನ್ನು ಕೊಡಬೇಕು. ಗುರುವಿಗೆ ಎರಡು ಹಸುಗಳನ್ನು ದಾನಮಾಡಬೇಕು. ಗುರುವು ಈಶಾನಾದಿ ಪಂಚಬ್ರಹ್ಮಸ್ವರೂಪನೆಂದೂ, ಸಾಂಬಶಿವ ಸ್ವರೂಪನೆಂದು ತಿಳಿದು, ಅವನ ಪಾದ ತೊಳೆದ ಜಲದಲ್ಲಿ ಸ್ನಾನ ಮಾಡಬೇಕು. ಹಾಗೆ ಮಾಡಿದರೆ, ಮೂವತ್ತಾರು ಕೋಟಿ ತೀರ್ಥಗಳಲ್ಲಿ ಸ್ನಾನಮಾಡಿದ ಪುಣ್ಯ ಲಭಿಸುವುದು. ಗುರುಗಳಿಗೆ ಹತ್ತು ಅಂಗಗಳೊಡನೆ ಅನ್ನವನ್ನು ಭಕ್ತಿಯಿಂದ ದಾನಮಾಡಬೇಕು. ಪಾರ್ವತೀ ಎಂಬ ಬುದ್ಧಿಯಿಂದ ಗುರುಪತ್ನಿಯನ್ನು ಪೂಜಿಸಬೇಕು. ರುದ್ರಾಕ್ಷಿ ಮತ್ತು ವಸ್ತ್ರಗಳನ್ನೂ ಅರ್ಪಿಸಿ, ಗುರುಜನಗಳಿಗೆ ಮೃಷ್ಟಾನ್ನಭೋಜನ ಮತ್ತು ದಕ್ಷಿಣೆಯನ್ನು ಕೊಡಬೇಕು. ದೇವದೇವನಾದ ಶಿವನನ್ನು ಪ್ರಾರ್ಥಿಸಿ ಜಪವನ್ನು ಮುಗಿಸಬೇಕು. ಹೀಗೆ ಪುರಶ್ಚರಣ(ಜಪ)ವನ್ನು ಮಾಡಿದವನು ಮಂತ್ರಜ್ಞನಾಗುವನು.

ಪಂಚಲಕ್ಷ ಜಪದಿಂದ ಅತಲಲೋಕ ಅಂದರೆ, ಪಾತಾಳಲೋಕದಿಂದ ಸತ್ಯಲೋಕ ಪರ್ಯಂತವಾಗಿರುವ ಎಲ್ಲಾ ಲೋಕಗಳ ಐಶ್ವರ್ಯ(ಭೋಗ)ವನ್ನು ಪಡೆಯುವನು. ಜಪದ ಮಧ್ಯದಲ್ಲಿಯೇ ಮೃತನಾದರೆ ಆ ಜಪದ ಪುಣ್ಯವನ್ನು ಸ್ವರ್ಗಾದಿಗಳಲ್ಲಿ ಅನುಭವಿಸುವನು. ಇನ್ನೂ ಲಕ್ಷ ಬಾರಿ ಜಪಿಸಿದರೆ ಬ್ರಹ್ಮನ ಸಾಮೀಪ್ಯ ಲಭಿಸುವುದು. ಒಂದು ಕೋಟಿ ಜಪಿಸಿದರೆ, ಸಾಕ್ಷಾತ್ ಬ್ರಹ್ಮನ ಸಮಾನರಾಗುವರು. ಹೀಗೆ ಕಾರ್ಯಬ್ರಹ್ಮ, ಅಂದರೆ ಚತುರ್ಮುಖ ಬ್ರಹ್ಮನ ಸಾಯುಜ್ಯವನ್ನು ಪಡೆದು, ಮತ್ತೊಂದು ಕಲ್ಪ ಪ್ರಾರಂಭವಾದಾಗ ಬ್ರಹ್ಮಪುತ್ರನಾಗಿ ಜನಿಸಿ, ಶಾಶ್ವತ ಮುಕ್ತಿ ಪಡೆಯುವರು.

ಬದಲಾವಣೆ ಆತುರದ ಕ್ರಮವಲ್ಲ, ಅನಿವಾರ್ಯ

• ಮಹೇಶ ಜೋಶಿ

ಶತಮಾನ ದಾಟಿದರೂ ತನ್ನ ಕ್ರಿಯಾಶೀಲತೆಯನ್ನು ನಿರಂತರವಾಗಿ ಪ್ರಕಟಿಸುತ್ತಿರುವ ಅಪರೂಪದ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಭಾರತದ ಸಾಹಿತ್ಯಿಕ ಸಂಸ್ಥೆಗಳ ಪೈಕಿ ಎಂದೂ ವಿರಮಿಸದೆ ಇಷ್ಟು ದೂರ ಸಾಗಿದ, ಇಷ್ಟು ಎತ್ತರಕ್ಕೆ ಜಿಗಿದ ಮತ್ತೊಂದು ಸಂಸ್ಥೆಯಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪಾಲಿನ 'ಜೀವಧ್ವನಿ'. ಇದು ಮೈಸೂರು ಸಂಸ್ಥಾನದ ಅಂದಿನ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಶಯದಂತೆ ಆರಂಭಗೊಂಡ ಸಂಸ್ಥೆ. ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಅವರ ಒತ್ತಾಸೆ ಮತ್ತು ಸತತ ಪೋಷಣೆ ಇದರ ಪಾಲಿಗೆ ಲಭ್ಯವಾಯಿತು.

ರಾಜಪ್ರಭುತ್ವದಲ್ಲಿ ಮೈದಳೆದ ಪರಿಷತ್ತು ಅನಂತರ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಬೆಳೆದು ನಿಂತಿತು. ಪ್ರಭುತ್ವ ಮತ್ತು ಪ್ರಜೆಗಳ ಪ್ರೀತಿ ಮತ್ತು ಗೌರವಾದರಗಳಿಗೆ ಸಮಸಮನಾಗಿ ಪಾತ್ರವಾದ ಏಕಮಾತ್ರ ಸಂಸ್ಥೆ ಪರಿಷತ್ತು. ತನ್ನ ವಿಸ್ತೃತ ಶಾಖಾಜಾಲದಿಂದಾಗಿ ಅದರ ಚಟುವಟಿಕೆಗಳು ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿಗಳವರೆಗೆ ಹರಡಿಕೊಂಡಿವೆ. ಶತಮಾನ ದಾಟಿದ ಹೆಗ್ಗಳಿಕೆ ಇರುವ ಪರಿಷತ್ತು ಅಂಗರಚನೆಯನ್ನು ಮೂಲಸ್ವರೂಪಕ್ಕೆ ಧಕ್ಕೆ ಬರದಂತೆ ಇದರ ಸಂಸ್ಥಾಪಕರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನಪರ ಆಶಯಗಳಿಗೆ ಚ್ಯುತಿ ತಾರದಂತೆ ತಿದ್ದುಪಡಿ ಮಾಡುವ ಅಗತ್ಯವಿದೆ. ಆರಂಭದ ಕಾಲದಿಂದ ಇದುವರೆಗೆ 14 ಸಲ ಅದರ ತಿದ್ದುಪಡಿಯಾಗಿದೆ. ಆದರೆ ಈಗ ಜಾರಿಯಲ್ಲಿರುವ ನಿಬಂಧನೆಗಳನ್ನು ಸಹ ಈ ಕಾಲದ ಅಗತ್ಯಗಳಿಗೆ, ಸವಾಲುಗಳಿಗೆ, ತಂತ್ರಜ್ಞಾನದಲ್ಲಿ ಆಗಿರುವ ಅಗಾಧವಾದ ಬದಲಾವಣೆಗಳಿಗೆ ತಕ್ಕಂತೆ ತಿದ್ದಬೇಕಾದ ಅಗತ್ಯವಿದೆ.

ಕನ್ನಡ ಜನತೆಯು ಪರಿಷತ್ತಿನ ಬಗೆಗೆ ಇಟ್ಟಿರುವ ಭರವಸೆ ಮತ್ತು ನಂಬಿಕೆಯನ್ನು ಪುಷ್ಟೀಕರಿಸಲು ಅದನ್ನು ಕೂಲಂಕಷವಾಗಿ ಗಮನಿಸಬೇಕಾಗಿದೆ. ಇದು ಸೂಕ್ತ ಚಿಂತನ- ಮಂಥನದ ಮೂಲಕ ಅನುಷ್ಠಾನಗೊಳ್ಳಬೇಕಾಗಿದೆ. ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣದ ಪೂರ್ವದಲ್ಲಿ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಯಿತು.

1915ರಲ್ಲಿ ಪರಿಷತ್ತು ರಚನೆಯಾಗಿ ನಿಬಂಧನೆಗಳು ರೂಪುಗೊಂಡಾಗ ರಾಜ್ಯದಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಾಜಕೀಯ ಸಂದರ್ಭ ಮತ್ತು ಸನ್ನಿವೇಶಗಳು ಬೇರೆಯಾಗಿದ್ದವು. ಆಗ ರೂಪುಗೊಂಡ ನಿಯಮಗಳು ಕಾಲಧರ್ಮ ಮತ್ತು ಜೀವನಶೈಲಿಗೆ ಅನುಗುಣವಾಗಿದ್ದವು. 1915ರಿಂದ 2022ರ ನಡುವೆ ಅಗಾಧವಾದ ಅಂತರವಿದೆ. ತಂತ್ರಜ್ಞಾನ ದಾಪುಗಾಲಿಟ್ಟು ಊಹೆಗೂ ಮೀರಿ ಬೆಳೆದು ನಿಂತಿದೆ. ಕನ್ನಡವನ್ನೂ, ಪರಿಷತ್ತಿನ ಆಡಳಿತವನ್ನೂ ತಂತ್ರಜ್ಞಾನದ ಜೊತೆಜೊತೆಗೆ ಒಯ್ಯಬೇಕಾಗಿದೆ. ಕಾಲಕ್ಕೆ ತಕ್ಕಂತೆ ಆಡಳಿತದಲ್ಲಿ ಪಾರದರ್ಶಕತೆ ಅಪೇಕ್ಷಣೀಯ. ಕಾರ್ಯಕ್ರಮದ ನಿರ್ವಹಣೆಯೂ ಬದಲಾಗಿದೆ. ದೃಕ್-ಶ್ರವ್ಯ ಮಾಧ್ಯಮಗಳ ಬಳಕೆ ಇಂದಿನ ಅಗತ್ಯ. ಈ ಎಲ್ಲ ಪರಿವರ್ತನೆಗಳನ್ನೂ ನಿಬಂಧನೆಗಳು ಒಳಗೊಳ್ಳಬೇಕು.

> ಯಾವುದೇ ಬದಲಾವಣೆಯನ್ನು ಮಾಡಲು ಹೊರಟಾಗ ವಿರೋಧ ಸಹಜವಾದದ್ದು. ಪರಿವರ್ತನೆಯ ಸಂದರ್ಭದಲ್ಲಿ ಇಂತಹ ಅಡ್ಡಿ, ಆತಂಕಗಳನ್ನು ಮೆಟ್ಟಿ ನಿಲ್ಲಬೇಕಾಗಿದೆ. ಸ್ಥಿತ್ಯಂತರದ ಅವಧಿಯಲ್ಲಿ ಇಂತಹ ಪ್ರತಿರೋಧಗಳು ಸಹಜ ಎಂಬುದು ಕಸಾಪದ ಅರಿವಿನಲ್ಲಿದೆ. ಪರಿಷತ್ತಿನ ಉದ್ದೇಶಿತ ತಿದ್ದುಪಡಿಗೆ ಕರ್ನಾಟಕದ ಎಲ್ಲ ಭಾಗಗಳಿಂದ, ವರ್ಗಗಳಿಂದ ಅಭೂತಪೂರ್ವ ಬೆಂಬಲ ದೊರೆತಿರುವುದು ಸ್ಫೂರ್ತಿ ನೀಡಿದೆ

ಸಾಹಿತ್ಯ ಪರಿಷತ್ತು ಶ್ರೀಸಾಮಾನ್ಯರ ಪರಿಷತ್ತಾಗಬೇಕೆಂಬುದು ನನ್ನ ದೀರ್ಘಕಾಲದ ಬಯಕೆ ಮತ್ತು ಆಶಯ. ಪರಿಷತ್ತನ್ನು ಕರ್ನಾಟಕದ ಏಕಮಾತ್ರ ಪ್ರಾತಿನಿಧಿಕ ಸಂಸ್ಥೆ ಎಂದಾಗ ನಿಬಂಧನೆಗಳು ಅದನ್ನು ಪ್ರತಿಫಲಿಸುವಂತಿರಬೇಕು. ಇಲ್ಲದಿದ್ದರೆ ಸದ್ಯ ಸುಮಾರು ಮೂರೂವರೆ ಲಕ್ಷ ಸದಸ್ಯರಿರುವ ಪರಿಷತ್ತಿನ ಚುನಾವಣೆಗೆ ಸ್ಪರ್ಧಿಸಬೇಕೆಂದರೆ ಶ್ರೀಮಂತರಿಂದ ಮಾತ್ರ ಸಾಧ್ಯ. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಬಯಸುವವರು 18 ವರ್ಷ ವಯೋಮಾನದವರಾಗಿರಬೇಕು ಹಾಗೂ ಕನ್ನಡ ಓದು, ಬರಹ ಬಲ್ಲವರಾಗಿರಬೇಕು ಎಂಬುದನ್ನು 1915ರ ನಿಬಂಧನೆಗಳು ಸ್ಪಷ್ಟಪಡಿಸಿವೆ. ಕನ್ನಡ ಅನ್ನದ ಭಾಷೆಯಾಗಲು, ಕನ್ನಡ ಶಾಲೆಗಳು ಉಳಿಯಲು ನಿಬಂಧನೆಗಳಿಗೆ ತಿದ್ದುಪಡಿ ಮಾಡಲೇಬೇಕು. ಇದೀಗ ಮಾಹಿತಿ ಹಕ್ಕು ಕಾಯ್ದೆಯು ಜಾರಿಯಾಗಿರುವುದರಿಂದ ನಮ್ಮ ನಿಬಂಧನೆಗಳಲ್ಲಿ ಅದನ್ನೂ ಅಳವಡಿಸಿಕೊಳ್ಳಬೇಕು.

ಸಾಕ್ಷರತೆಯ ಬಗ್ಗೆ ಪರಿಷತ್ತಿನ ಅಂಗರಚನೆ ಉಲ್ಲೇಖಿಸಿದೆ. ಇದುವರೆಗೂ ಕನ್ನಡ ಓದಲು ಬರೆಯಲು ಬಾರದವರಿಗೆ ಕನ್ನಡವನ್ನು ಕಲಿಸುವಿಕೆಯ ಬಗ್ಗೆ ಪರಿಷತ್ತು ಯಾವುದೇ ಕ್ರಮವನ್ನು ಕೈಗೊಂಡಿರಲಿಲ್ಲ. ಇದೀಗ ಪರಿಷತ್ತಿನ ನಿಯಮ ನಿಬಂಧನೆಗಳನ್ನು ಸ್ಪಷ್ಟಪಡಿಸಲು ಬೇರಿಗೆ ಕೈಹಾಕಲಾಗಿದೆ. ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ಕನ್ನಡ-ಕನ್ನಡಿಗ-ಕರ್ನಾಟಕ ಕೇಂದ್ರಿತವಾಗಿ ಮಾಡಲು ಪಣತೊಡಬೇಕಿದೆ. ಈ ಮೊದಲು ಅದು ಕೇವಲ ನುಡಿಕೇಂದ್ರಿತವಾಗಿತ್ತು.

ನಿಬಂಧನೆಗಳ ತಿದ್ದುಪಡಿಗಾಗಿ 11 ಜನ ಪ್ರಾಜ್ಞರ ಸಮಿತಿಯನ್ನು ರಚಿಸಲಾಗಿದೆ. ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಈ ಸಮಿತಿಯಲ್ಲಿ ಸಹಕಾರಿ ಕ್ಷೇತ್ರದ ಧುರೀಣರು, ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು, ಕಲೆಯ ಬಗೆಗೆ ತುಡಿತವಿರುವವರು, ಜಾನಪದ ತಜ್ಞರು, ಸಂಘಟಕರು ಇದ್ದಾರೆ. ಪರಿಷತ್ತಿನ ಅಂಗರಚನೆಯನ್ನು ಬದಲಿಸಬೇಕೆಂಬುದು ಆತುರದ ಕ್ರಮವಲ್ಲ. ಅದು ಅತ್ಯಂತ ಅನಿವಾರ್ಯವಾದದ್ದು.

ನಾಡಿನ ಹೆಸರಾಂತ ವಿದ್ವಾಂಸರ ಜೊತೆಯಲ್ಲಿ ಇದೇ 17ರಂದು ನಡೆದ ಸಭೆಯು ತಿದ್ದುಪಡಿಗೆ ಮಾಡಬೇಕು ಎಂಬುದಕ್ಕೆ ಸಮ್ಮತಿಯ ಮುದ್ರೆಯನ್ನು ಒತ್ತಿತು. ಈ ಸಭೆಯಲ್ಲಿ ಸಾಹಿತಿಗಳು, ಕಲಾವಿದರು, ಶಿಕ್ಷಣತಜ್ಞರು ಸೇರಿದಂತೆ ಬದುಕಿನ ವಿವಿಧ ಕ್ಷೇತ್ರಗಳಿಗೆ ಸಂಬಂಧಪಟ್ಟವರನ್ನು ಆಹ್ವಾನಿಸಿ ಅವರಿಗೆ ನಿಬಂಧನೆಗಳ ಕರಡು ಪ್ರತಿಯನ್ನು ನೀಡಿ, ಮಾಡಿರುವ ತಿದ್ದುಪಡಿಗಳು ಸಮಂಜಸವಾಗಿವೆಯೇ ಎಂದು ತಿಳಿಸಲು ಪರಿಷತ್ತು ಕೋರಿತ್ತು. ಸಭೆ ಇವೆಲ್ಲ ಬದಲಾವಣೆಗಳಿಗೂ ಸರ್ವಸಮ್ಮತವಾದ ಒಪ್ಪಿಗೆಯನ್ನು ನೀಡಿತು. ಪರಿಷತ್ತಿನ ಸದಸ್ಯರಾಗಲು ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯನ್ನು 45 ವರ್ಷಗಳಿಗಿಂತ ಕೆಳಗಿನವರು ಏಳನೆಯ ತರಗತಿಯವರೆಗೆ ಓದಿರಬೇಕೆಂದೂ, ಅದರ ಮೇಲ್ಪಟ್ಟ ವಯಸ್ಸಿನವರಿಗೆ ವಿನಾಯಿತಿಯನ್ನು ನೀಡಬಹುದೆಂದು ಅಭಿಪ್ರಾಯಪಟ್ಟಿತು. ಜಾನಪದ ಕಲಾವಿದರು, ರಂಗಭೂಮಿ ಕಲಾವಿದರು, ಚಿತ್ರ ಕಲಾವಿದರು, ಕುಶಲಕರ್ಮಿಗಳು, ರೈತರು, ಅಸಂಘಟಿತ ಕಾರ್ಮಿಕರಿಗೆ ಶೈಕ್ಷಣಿಕ ಅರ್ಹತೆಯಿಂದ ವಿನಾಯಿತಿ ನೀಡಬೇಕೆಂದು ಸಭೆ ಸೂಚಿಸಿತು.

ಸದಸ್ಯತ್ವ ಶುಲ್ಕವನ್ನು ಈಗಿರುವ ಒಟ್ಟು ₹1,000ದಿಂದ ₹250ಕ್ಕೆ ಇಳಿಸುವುದು ಜನಪರವಾದ ಕ್ರಮವೆಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿತು. ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಕಲಾವಿದರನ್ನು ಸದಸ್ಯರಾಗಿ ನೋಂದಾಯಿಸಿಕೊಳ್ಳಲು ಪರಿಷತ್ತು ಮುಂದಾಗಬೇಕೆಂದು ತಿಳಿಸಿತು.

ಯಾವುದೇ ಬದಲಾವಣೆಯನ್ನು ಮಾಡಲು ಹೊರಟಾಗ ವಿರೋಧ ಸಹಜವಾದದ್ದು. ಪರಿವರ್ತನೆಯ ಸಂದರ್ಭದಲ್ಲಿ ಇಂತಹ ಅಡ್ಡಿ, ಆತಂಕಗಳನ್ನು ಮೆಟ್ಟಿ ನಿಲ್ಲಬೇಕಾಗಿದೆ. ಸ್ಥಿತ್ಯಂತರದ ಅವಧಿಯಲ್ಲಿ ಇಂತಹ ಪ್ರತಿರೋಧಗಳು ಸಹಜ ಎಂಬುದು ಕಸಾಪದ ಅರಿವಿನಲ್ಲಿದೆ. ಪರಿಷತ್ತಿನ ಉದ್ದೇಶಿತ ತಿದ್ದುಪಡಿಗೆ ಕರ್ನಾಟಕದ ಎಲ್ಲ ಭಾಗಗಳಿಂದ, ವರ್ಗಗಳಿಂದ ಅಭೂತಪೂರ್ವ ಬೆಂಬಲ ದೊರೆತಿರುವುದು ಸ್ಫೂರ್ತಿ ನೀಡಿದೆ. ಈ ಕ್ರಾಂತಿಕಾರಕ ಬದಲಾವಣೆಗಳಿಂದ ಪರಿಷತ್ತು ಹೊಸ ಆಯಾಮವನ್ನು ಪಡೆಯಲಿದೆ ಎಂಬ ದೃಢ ವಿಶ್ವಾಸವಿದೆ.

ಲೇಖಕ: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಪದಬಂಧ 4874

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
3.ಒಪ್ಪವಾಗಿ ರಾಗದೊಡನೆ ಬಂದ ಪ್ರೀತಿ (4)
5.ಬಡಿವಾರ ತೋರಿದಾಗ ಆವರಿಸಿದ ಕ್ಷಾಮ (2)
6.ಕಗ್ಗೊಲೆಯ ಘಟನೆ (4)
7.ಮದುವೆ ಗಂಡಿನ ಆದಾಯಕರ! (7)
10.ವೇದಾದಿಗಳನ್ನು ಅಧ್ಯಯನ ಮಾಡಿರುವವನು (4)
11.ಸವತಿಯ ಹತ್ತಿರವಿರುವ ಹೆಂಡತಿ (2)
13.ಈಕೆ ಬಸುರಿ ಹೆಂಗಸು (4)
14.ಮೋಸದ ಹೂಟವಿದು (3)

ಮೇಲಿಂದ ಕೆಳಕ್ಕೆ

1.ಒಡಹುಟ್ಟಿದವರಲ್ಲಿ ಹಿರಿಯ (2)
2.ಹೆಂಡತಿಯನ್ನು ಕಳೆದುಕೊಂಡವನು (3)
4.ವಿಷ್ಣುವಿನ ವಾಹನ (3)
5.ಈತ ದುಡ್ಡಿಲ್ಲದವನು (3)
6.ಹಣ ಕೊಟ್ಟು ಖರೀದಿಸಿದ ಸೊಡರು (3)
8.ಈಕೆ ಹೆಂಗಸು (3)
9.ಸ್ನೇಹಿತೆ ಇಲ್ಲಿದ್ದಾಳೆ (3)
10.ಅಚ್ಚುಮೆಚ್ಚಿನ ಭಕ್ತ (3)
11.ಸರದ ಜೊತೆಗೆ ತಂದಿರುವ ಸಾಮಾನು (3)
12.ಪಾವಿತ್ರತೆಯಲ್ಲಿರುವ ನದಿಯ ಒಡಲು (2)



4873ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಬಕಾರ3.ಬಾತ್ಮೀದಾರ
5.ನಸುಕು7.ರಪ9.ಮಾನ
10.ವಾಮನ11.ವನ
12.ಸುಮ14.ಹವನ
16.ನವನಟ
17.ವಧಾಕಾರ

ಮೇಲಿಂದ ಕೆಳಕ್ಕೆ:
1.ಸಮರ2.ರನ3.ಬಾಕು
4.ರಸನ
6.ಸುವರ್ಣಮಹೋತ್ಸವ
8.ಪದವೀದಾನ
9.ಮಾತುಹೊರಿಸು
11.ವರ್ಧನ13.ಮಧುರ
14.ಹಟ15.ನವ

ಸುಡೊಕು 5260

	7			3		1		6
4		9						
	1		7	6	2		5	4
		3	5		6	4		
	4			2			6	7
		5	1		7	3		
	8		6			2		3
2		6			3			
	3	4		7		6		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5259 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಫೆಬ್ರುವರಿ 19, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 07 ನೇ ದಿನ
ತಿಥಿ: (ಮಾಘ ಕೃಷ್ಣ) ತೃತೀಯ ಗಂ. 21-57 ನಕ್ಷತ್ರ: ಉತ್ತರಫಲ್ಗುನಿ ಗಂ. 16-51 ಯೋಗ: ಧೃತಿ ಗಂ. 16-56, ಕರಣ: ವಣಿಜ ಗಂ. 10-16. ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-55 ಸೂರ್ಯಾಸ್ತ : 06-34
ಮುಸ್ಲಿಂ ದಿನಾಂಕ : 17 ರಜಬ್ ದಿನ ವಿಶೇಷ : ಶಿವಾಜಿ ಜಯಂತಿ, ಶೃಂಗೇರಿ ಶಾರದಾ ಪರಮೇಶ್ವರಿ ರಥೋತ್ಸವ
ಅದೃಷ್ಟ ಸಂಖ್ಯೆ: 2, 6

ಮೇಷ: ನಿಮ್ಮ ಸಹವರ್ತಿಗಳಲ್ಲಿ ಸಲಹೆ ಸಹಕಾರ ಕೋರುವಿರಿ. ಹೆಂಡತಿಗೆ ಹೊಸ ಉದ್ಯೋಗ ದೊರೆತು ಸಂತಸ. ದೈಹಿಕ ಕೆಲಸವನ್ನು ಮಾಡಿ ದುಡಿಮೆ ಮಾಡುತ್ತಿರುವವರು ದೇಹಕ್ಕೆ ಸ್ವಲ್ಪ ಮಟ್ಟಿನ ವಿಶ್ರಾಂತಿ ನೀಡಬೇಕಾಗುತ್ತದೆ.

ವೃಷಭ: ಮನಸ್ಸಿನಲ್ಲಿ ಖಿನ್ನತೆ ಹಾಗೂ ಋಣಾತ್ಮಕ ಚಿಂತನೆಗಳು ಈ ದಿನ ನಿಮ್ಮನ್ನು ಕಾಡಲಿದೆ. ಪ್ರಾರಂಭಿಸಿದ ಕೆಲಸ ನಾಳೆಗೆ ಎನ್ನದೆ ವೃತ್ತಿಯಲ್ಲಿ ಪಾದರಸದಂತೆ ಇರಲು ಪ್ರಯತ್ನಿಸಿ. ಎಲ್ಲಾ ವಿಚಾರದಲ್ಲೂ ಎಚ್ಚರದ ನಡೆ ಇರಲಿ.

ಮಿಥುನ: ಹೋಟೆಲ್ ಉದ್ಯಮಿಗಳಿಗೆ ಲಾಭಾಂಶ ಹೆಚ್ಚಿದ್ದರೂ ನೌಕರ ವರ್ಗದವರ ಕೊರತೆ ಅಥವಾ ಅವರ ಅಧಿಕ ಅಪೇಕ್ಷೆಯು ಕಿರಿಕಿರಿ ಎನಿಸುವುದು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪ್ರಯತ್ನ ಅನಿವಾರ್ಯ.

ಕರ್ಕಾಟಕ: ಕರ್ತವ್ಯದಲ್ಲಿ ಅಧಿಕವಾದ ಆತ್ಮವಿಶ್ವಾಸವು ಲೆಕ್ಕಾಚಾರವಿಲ್ಲದ ಜೀವನದಂತೆ ಆಗುತ್ತದೆ. ಕ್ರಿಮಿಕೀಟಗಳಿಂದ ಅಲರ್ಜಿ. ಸಾಂಸಾರಿಕವಾಗಿ ಸುಖ, ನೆಮ್ಮದಿಯು ದೇವತಾನುಗ್ರಹದಿಂದ ಅಭಿವೃದ್ಧಿಯಾಗಲಿದೆ.

ಸಿಂಹ: ಯಶಸ್ಸಿಗೆ ಇನ್ನೊಂದಿಷ್ಟು ಪೂರಕವಾದ ವಾತಾವರಣ ಮೂಡಲಿದೆ. ವಾಹನಸಂಚಾರದಲ್ಲಿ ಮಿತ ವೇಗವು ಮುಖ್ಯ. ರಾಜಕೀಯ ಭವಿಷ್ಯದಲ್ಲಿ ಉತ್ತಮವಾದ ಅವಕಾಶ ಸಿಕ್ಕಿದರೂ, ಕಾದು ನೋಡುವ ಪ್ರವೃತ್ತಿ ಉತ್ತಮ.

ಕನ್ಯಾ: ವೃತ್ತಿಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆ ಮತ್ತು ಸಾಧನೆಗೆ ಪುರಸ್ಕಾರಗಳು ದೊರಕಲಿವೆ. ದೇಹಾರೋಗ್ಯವನ್ನು ಸ್ವತಃ ಕಾಳಜಿ ವಹಿಸಿ ನೋಡಿಕೊಳ್ಳಿ. ನಾಗದೇವರನ್ನು ಆರಾಧಿಸುವುದರಿಂದ ಆರೋಗ್ಯ ಪ್ರಾಪ್ತಿ.

ತುಲಾ: ತಾಯಿ ಅಥವಾ ಬಾಳಸಂಗಾತಿಯ ಮಾತನ್ನು ಮೀರದಿರುವುದು ಲೇಸು. ಸಾಮಾಜಿಕ ಕೆಲಸಗಳಲ್ಲಿ ನಿಮ್ಮ ಪರಿಶ್ರಮ ಸಾರ್ಥಕವಾಗಲಿದೆ. ವಿದ್ಯುತ್‌ಶಕ್ತಿಯ ಬಳಕೆಯಲ್ಲಿ, ವಿದ್ಯುತ್ಸ್ಥಾವರದ ಕಾರ್ಮಿಕರಲ್ಲಿ ಹೆಚ್ಚಿನ ಗಮನವಿರಲಿ.

ವೃಶ್ಚಿಕ: ಕಾರ್ಯ ಸಾಧನೆಗೆ ಅಧಿಕ ತಿರುಗಾಟ, ಗಣ್ಯರ ಭೇಟಿ ಅನಿವಾರ್ಯ. ನಿಮ್ಮಲ್ಲಿರುವ ಸ್ಪರ್ಧಾತ್ಮಕ ಮನೋಭಾವವು ನಿಮ್ಮನ್ನು ಅತ್ಯುನ್ನತ ಮಟ್ಟಕ್ಕೆ ಏರುವಂತೆ ಮಾಡುತ್ತದೆ. ಸಂತಾನಾಪೇಕ್ಷಿಗಳು ಫಲವನ್ನು ಪಡೆಯುವಿರಿ.

ಧನು: ಸ್ವಯಂಕೃತ ಅಪರಾಧದ ಬಗ್ಗೆ ಎಚ್ಚರವಿರಲಿ, ಸರಿ ತಪ್ಪುಗಳ ನಿರ್ಣಯವು ಕಷ್ಟಕರ ಎನಿಸುವುದು. ಹಿತಶತ್ರುಗಳು ನಾವಿದ್ದೇವೆ ಎಂದು ಹೇಳುವುದು ನಿಮಗೆ ಈ ದಿನ ಅನುಭವಕ್ಕೆ ಬರಲಿದೆ.

ಮಕರ: ಬಹಳ ದಿನಗಳಿಂದ ವರ್ತಮಾನ ಕಾಲದಲ್ಲಿರುವ ಕೆಲಸವು ಶುಭ ಅಂತ್ಯ ಕಾಣುತ್ತದೆ. ವಾತಾವರಣದಲ್ಲಾಗುವ ಬದಲಾವಣೆಯು ದೇಹದ ಮೇಲೆ ಪ್ರಭಾವ ಬೀರಲಿದೆ. ಖರ್ಚು-ವೆಚ್ಚದಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನಿಸಿ.

ಕುಂಭ: ಜಮೀನು ಖರೀದಿ ಅಥವಾ ಜಮೀನಿನ ಗುತ್ತಿಗೆಯಂತಹ ವ್ಯವಹಾರಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೇ ನಿಮ್ಮ ಮನದ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ.

ಮೀನ: ನಿಮ್ಮ ಒಳ್ಳೆಯ ಕನಸುಗಳಿಗೆ ಜೀವ ಬಂದಂತೆ ಭಾಸವಾಗುತ್ತದೆ. ತಂತ್ರಜ್ಞರು ಮತ್ತು ಕುಶಲಕಾರ್ಮಿಕರಿಗೆ ಬೇಡಿಕೆ ಹೆಚ್ಚುವುದು. ಮಗಳ ಮನೆಯಿಂದ ವಿಶೇಷ ಸುದ್ದಿ ಕೇಳುವಿರಿ. ಮಾರಾಟ ಪ್ರತಿನಿಧಿಗಳಿಗೆ ಸಂತಸ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,305
ಇಂದಿನ ಅಂತ್ಯ	17,276
▼	29
ದಿನದ ಕನಿಷ್ಠ	17,219

ವಿನಿಮಯ ದರ

$ ಡಾಲರ್	74.66
£ ಪೌಂಡ್	101.86
€ ಯುರೊ	85.03
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1365 (1355)
ಸೋಯಾ (ರಿಫೈನ್ಡ್)	₹1325 (1325)
ಸೂರ್ಯಕಾಂತಿ (ರಿಫೈನ್ಡ್)	₹1340 (1340)
ಪಾಮೋಲಿನ್	₹1287 (1280)

ಮುಂಬೈ ಧಾರಣೆ

ಶೇಂಗಾ

18-2-2022

ಜಾವಾ 70/80(ಹೊಸ)	10200-10250
ಜಾವಾ 80/90(ಹೊಸ)	9800-9850
ದಪ್ಪ ಮಧ್ಯಪ್ರದೇಶ(ಹೊಸ)	9200-9250
ದಪ್ಪ ಗುಜರಾತ್(ಹೊಸ)	8450-8500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1375 (1365)
ಒಂದು ವಾರದ ಡೆಲಿವರಿ	1370 (1360)
ಸೋಯಾ ಕಚ್ಚಾ	1310 (1290)
ಪಾಮ್ ವಾರದ ಡೆಲಿವರಿ	1285 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1287 (1265)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	49,950 (50,000)
ಬೆಳ್ಳಿ ಕೆ.ಜಿ	63,800 (64,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಿಮಾಲಯದ ಯೋಗಿಯೊಬ್ಬರ ಮಾತು ಕೇಳಿ ನೇಮಕಾತಿ ಆರೋಪ

ಸಿಬಿಐನಿಂದ ಚಿತ್ರಾ ವಿಚಾರಣೆ

ಮುಖ್ಯಾಂಶಗಳು

- ಸೌಲಭ್ಯದ ದುರ್ಬಳಕೆ ಮಾಡಿಕೊಂಡ ಆರೋಪ
- ದೇಶಬಿಟ್ಟು ತೆರಳದಂತೆ ಲುಕ್‌ಔಟ್ ನೋಟಿಸ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮಾಜಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಚಿತ್ರಾ ರಾಮಕೃಷ್ಣ ಅವರನ್ನು ಕೇಂದ್ರೀಯ ತನಿಖಾ ದಳವು (ಸಿಬಿಐ) ಶುಕ್ರವಾರ ವಿಚಾರಣೆಗೆ ಒಳಪಡಿಸಿದೆ. ಷೇರುಗಳನ್ನು ತ್ವರಿತವಾಗಿ ಖರೀದಿಸಲು ಹಾಗೂ ಮಾರಾಟ ಮಾಡಲು ವರ್ತಕರಿಗೆ ಅವಕಾಶ ಕಲ್ಪಿಸುವ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ಈ ವಿಚಾರಣೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿತ್ರಾ, ಎನ್‌ಎಸ್‌ಇ ಇನ್ನೊಬ್ಬ ಮಾಜಿ ಸಿಇಒ ರವಿ ನಾರಾಯಣ್ ಮತ್ತು ಮಾಜಿ ಸಿಒಒ ಆನಂದ್ ಸುಬ್ರಮಣಿಯನ್ ಅವರು ದೇಶಬಿಟ್ಟು ತೆರಳದಂತೆ ಸಿಬಿಐ ಲುಕ್‌ಔಟ್ ಸುತ್ತೋಲೆ ಹೊರಡಿಸಿದೆ. ಷೇರುಗಳನ್ನು ತ್ವರಿತವಾಗಿ ಮಾರಾಟ, ಖರೀದಿ ಮಾಡುವ ಅವಕಾಶವನ್ನು ದುರ್ಬಳಕೆ ಮಾಡಿಕೊಂಡ ಆರೋಪದ ಅಡಿಯಲ್ಲಿ ದೆಹಲಿ ಮೂಲದ ಒಪಿಜಿ ಸೆಕ್ಯುರಿಟೀಸ್ ಪ್ರೈ.ಲಿ. ಕಂಪನಿಯ ಮಾಲೀಕ ಸಂಜಯ್ ಗುಪ್ತಾ ಎನ್ನುವವರ ಮೇಲೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

'ಈ ಕಂಪನಿಯ ಮಾಲೀಕ ಎನ್‌ಎಸ್‌ಇ ಸರ್ವರ್ ಅನ್ನು ಎನ್‌ಎಸ್‌ಇಯ ಕೆಲವು ಅಧಿಕಾರಿಗಳ ಜೊತೆ ಶಾಮೀಲಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದರು ಎಂಬ ಆರೋಪ ಇದೆ. 2010ರಿಂದ 2012ರ ನಡುವೆ ಎನ್‌ಎಸ್‌ಇಯ ಕೆಲವು ಅಧಿಕಾರಿಗಳು ಈ ಖಾಸಗಿ ಕಂಪನಿಗೆ ಷೇರುಪೇಟೆಯ

ಚಿತ್ರಾ
–ಪಿಟಿಐ ಚಿತ್ರ

ಸರ್ವರ್‌ಗೆ ಲಾಗಿನ್ ಮೊದಲಿಗನಾಗಿ ಆಗಲು ಅಕ್ರಮವಾಗಿ ಅನುಕೂಲ ಮಾಡಿಕೊಡುತ್ತಿದ್ದರು. ಇದರಿಂದಾಗಿ ಈ ಕಂಪನಿಗೆ ಬೇರೆ ಯಾವುದೇ ಬ್ರೋಕರ್‌ಗಿಂತ ಮೊದಲು ಕೆಲವು ದತ್ತಾಂಶಗಳು ಸಿಗುತ್ತಿದ್ದವು' ಎಂದು ಸಿಬಿಐ ಪ್ರಥಮ ಮಾಹಿತಿ ವರದಿಯನ್ನು (ಎಫ್‌ಐಆರ್) ಹೇಳಿದೆ.

ಚಿತ್ರಾ ಅವರು ಹಿಮಾಲಯ ಪರ್ವತಗಳಲ್ಲಿ ವಾಸಿಸುವ ಯೋಗಿಯೊಬ್ಬರ ಮಾತು ಕೇಳಿ ಆನಂದ್ ಸುಬ್ರಮಣಿಯನ್ ಅವರನ್ನು ಎನ್‌ಎಸ್‌ಇಯ ಗ್ರೂಪ್ ಆಪರೇಟಿಂಗ್ ಆಫೀಸರ್ ಹುದ್ದೆಗೆ ನೇಮಕ ಮಾಡಿದ್ದರು ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಈಚೆಗೆ ಸಿದ್ಧಪಡಿಸಿರುವ ವರದಿಯಲ್ಲಿ ಹೇಳಿದೆ. ಸುಬ್ರಮಣಿಯನ್ ನೇಮಕ ಪ್ರಕ್ರಿಯೆಯಲ್ಲಿ ನಿಯಮಗಳ ಪಾಲನೆ ಆಗಿಲ್ಲ ಎಂದು ಸೆಬಿ ಆರೋಪಿಸಿದೆ. ಚಿತ್ರಾ ಅವರಿಗೆ ಸೆಬಿ ₹ 3 ಕೋಟಿ ದಂಡ ವಿಧಿಸಿದೆ.

ಸಂಕ್ಷಿಪ್ತ ಸುದ್ದಿ

ಅಮರನಾಥ ಯಾತ್ರೆ ಸಿದ್ಧತೆಗೆ ಸೂಚನೆ

ಶ್ರೀನಗರ: ಕೋವಿಡ್‌ನಿಂದಾಗಿ ಮೂರು ವರ್ಷಗಳಿಂದ ಸ್ಥಗಿತಗೊಂಡಿದ್ದ ಪ್ರಸಿದ್ಧ ಅಮರನಾಥ ಯಾತ್ರೆಯನ್ನು ಈ ಬಾರಿ ನಡೆಸಲು ಜಮ್ಮು ಮತ್ತು ಕಾಶ್ಮೀರ ಆಡಳಿತವು ನಿರ್ಧರಿಸಿದ್ದು, ಈ ಸಂಬಂಧ ಸಕಲ ಸಿದ್ಧತೆ ಕೈಗೊಳ್ಳುವಂತೆ ವಿವಿಧ ಇಲಾಖೆಗಳಿಗೆ ಸೂಚನೆ ನೀಡಿದೆ.

60 ದಿನಗಳ ಕಾಲ ನಡೆಯುವ ವಾರ್ಷಿಕ ಯಾತ್ರೆಯಲ್ಲಿ ಪಾಲ್ಗೊಳ್ಳುವ ಯಾತ್ರಾರ್ಥಿಗಳಿಗೆ ಅಗತ್ಯ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವಂತೆ ಹಾಗೂ ಸಂಬಂಧಿಸಿದ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಕೆಲಸ ನಿರ್ವಹಿಸುವಂತೆ ನಿರ್ದೇಶನ ನೀಡಲಾಗಿದೆ.

'ತಿರುಪತಿ: ಖಾಸಗಿ ಹೋಟೆಲ್ ಬಂದ್'

ಹೈದರಾಬಾದ್: ತಿರುಮಲದಲ್ಲಿನ ತಿರುಪತಿ ದೇವಸ್ಥಾನದ ಆವರಣದಲ್ಲಿ ತಲೆಎತ್ತಿರುವ ಎಲ್ಲ ಖಾಸಗಿ ಹೋಟೆಲ್‌ಗಳನ್ನು ತೆರವುಗೊಳಿಸಿ, ದೇಗುಲಕ್ಕೆ ಭೇಟಿ ನೀಡುವ ಎಲ್ಲರಿಗೂ ಏಕರೂಪದಲ್ಲಿ ಅನ್ನ ಪ್ರಸಾದವನ್ನು ವಿತರಿಸಲು ಆಡಳಿತ ಮಂಡಳಿಯು ಚಿಂತನೆ ನಡೆಸಿದೆ.

ಆಡಳಿತ ಮಂಡಳಿಯ ಅಧ್ಯಕ್ಷ ವೈ.ವಿ.ಸುಬ್ಬಾರೆಡ್ಡಿ ಅವರ ಪ್ರಕಾರ, ತಿರುಮಲ ಬೆಟ್ಟದಲ್ಲಿ ಎಲ್ಲ ಪ್ರಮುಖ, ಆಯಕಟ್ಟಿನ ಸ್ಥಳದಲ್ಲಿ ಅನ್ನ ಪ್ರಸಾದ ವಿತರಿಸುವ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ.

ತಿರುಮಲ ವೆಂಕಟೇಶ್ವರನ ದರ್ಶನಕ್ಕೆ ಬರುವ ಎಲ್ಲ ಭಕ್ತಾದಿಗಳಿಗೆ ಏಕರೂಪದ ಆಹಾರ ಒದಗಿಸುವುದು ಇದರ ಗುರಿ ಎಂದು ಹೇಳಿದರು. ತಿರುಪತಿಯಲ್ಲಿ ಅನ್ನಪ್ರಸಾದ ಕೇಂದ್ರವನ್ನು ಪರಿಶೀಲಿಸಿದ ಅವರು, ಖಾಸಗಿ ಹೋಟೆಲ್‌ಗಳು ಅಣಬೆಯಂತೆ ವ್ಯಾಪಿಸಿರುವುದನ್ನು ಗಮನಿಸಿದರು.

ದಾವೂದ್ ಸಹೋದರ ಇಕ್ಬಾಲ್ ಕಸ್ಕರ್ ಬಂಧನ

ಮುಂಬೈ(ಪಿಟಿಐ): 1993ರ ಮುಂಬೈ ಸರಣಿ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ರೂವಾರಿ, ಭೂಗತ ಪಾತಕಿ ದಾವೂದ್ ಇಬ್ರಾಹಿಂ ಸಹೋದರ, ಜೈಲಿನಲ್ಲಿರುವ ಇಕ್ಬಾಲ್ ಕಸ್ಕರ್‌ನನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಬಂಧಿಸಿದೆ.

ಹಲವು ಸುಲಿಗೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ ಥಾಣೆ ಜೈಲಿನಲ್ಲಿರುವ ಕಸ್ಕರ್‌ನನ್ನು ಹಣ ಅಕ್ರಮ ವರ್ಗಾವಣೆ ಸಂಬಂಧ ಇತ್ತೀಚೆಗೆ ದಾಖಲಾದ ಹೊಸ ಪ್ರಕರಣದಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈತರ ಮನೆ ಬಾಗಿಲಿಗೆ ಬೆಳೆ ವಿಮೆ ಪಾಲಿಸಿ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಫಸಲು ವಿಮಾ ಯೋಜನೆಯು (ಪಿಎಂಎಫ್‌ಬಿವೈ) ಏಳನೆಯ ವರ್ಷಕ್ಕೆ ಕಾಲಿಡುತ್ತಿದ್ದು, ಮುಂಬರುವ ಮುಂಗಾರು ಅವಧಿಯಲ್ಲಿ ವಿಮಾ ಪಾಲಿಸಿಗಳನ್ನು ರೈತರ ಮನೆಬಾಗಿಲಿಗೆ ತಲುಪಿಸುವ ಅಭಿಯಾನವನ್ನು ಕೇಂದ್ರ ಸರ್ಕಾರ ಆರಂಭಿಸಲಿದೆ.

ಪಾಲಿಸಿಯ ವಿವರ, ಜಮೀನಿನ ದಾಖಲೆಗಳು, ಕ್ಲೇಮ್ ಪ್ರಕ್ರಿಯೆ ಮತ್ತು ದೂರು ಹೇಳಿಕೊಳ್ಳುವ ಬಗ್ಗೆ ಎಲ್ಲ ರೈತರಿಗೂ ಗೊತ್ತಿರಬೇಕು ಎಂಬ ಉದ್ದೇಶವು 'ಮೇರಿ ಪಾಲಿಸಿ ಮೇರಿ ಹಾಥ್' ಹೆಸರಿನ ಈ ಅಭಿಯಾನಕ್ಕೆ ಇದೆ ಎಂದು ಕೇಂದ್ರ ಕೃಷಿ ಸಚಿವಾಲಯ ಹೇಳಿದೆ.

ಯೋಜನೆಯು ಜಾರಿಯಲ್ಲಿ ಇರುವ ಎಲ್ಲ ರಾಜ್ಯಗಳಲ್ಲಿಯೂ ಈ ಅಭಿಯಾನ ಆರಂಭವಾಗಲಿದೆ.

ಸಂಘರ್ಷ ತೀವ್ರವಾದರೆ ₹ 55 ಸಾವಿರ ದಾಟುವ ಸಾಧ್ಯತೆ

ರಷ್ಯಾ–ಉಕ್ರೇನ್ ಬಿಕ್ಕಟ್ಟು: ಚಿನ್ನದ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನದ ದರ ಮತ್ತೆ ಏರುಮುಖವಾಗಿದೆ. ಬೆಂಗಳೂರಿನಲ್ಲಿ ಫೆಬ್ರುವರಿ 1ರಿಂದ 18ರ ನಡುವೆ ಚಿನ್ನದ ದರವು 10 ಗ್ರಾಂಗೆ ₹ 2,060ರಷ್ಟು ಏರಿಕೆ ಕಂಡಿದೆ. ಫೆಬ್ರುವರಿ 1ರಂದು ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರ ₹ 49,580 ಆಗಿತ್ತು. ಈಗ ಅದು ₹ 51,640ಕ್ಕೆ ಏರಿಕೆಯಾಗಿದೆ.

'ಚಿನ್ನದ ದರವು ಈ ಪ್ರಮಾಣದಲ್ಲಿ ಏರಿಕೆ ಕಾಣಲು ಉಕ್ರೇನ್ ಮತ್ತು ರಷ್ಯಾ ನಡುವಿನ ಬಿಕ್ಕಟ್ಟು ಮುಖ್ಯ ಕಾರಣ. ಇದೇ ಪರಿಸ್ಥಿತಿ ಮುಂದುವರಿದಲ್ಲಿ ಚಿನ್ನದ ದರವು ಇನ್ನಷ್ಟು ಹೆಚ್ಚಾಗಲಿದೆ. ಒಂದೊಮ್ಮೆ, ಎರಡೂ ದೇಶಗಳ ನಡುವಿನ ಸಂಘರ್ಷ ತೀವ್ರಗೊಂಡರೆ, ಯುದ್ಧ ಸಂಭವಿಸಿದರೆ 10 ಗ್ರಾಂ ಚಿನ್ನದ ದರವು ₹ 55 ಸಾವಿರವನ್ನೂ ದಾಟಬಹುದು' ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಅಧ್ಯಕ್ಷ ವಿದ್ಯಾಸಾಗರ್ 'ಪ್ರಜಾವಾಣಿ'ಗೆ ತಿಳಿಸಿದರು.

ವಿದ್ಯಾಸಾಗರ್

ಯುದ್ಧದ ಸಂದರ್ಭ ಎದುರಾದಾಗ ಚಿನ್ನವನ್ನು ಸಂಗ್ರಹಿಸಿಟ್ಟುಕೊಳ್ಳುವುದು ಜಾಸ್ತಿ ಆಗುತ್ತದೆ. ಇದು ಚಿನ್ನದ ದರ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂದರು. ಉಕ್ರೇನ್ ಗಡಿಯಿಂದ ರಷ್ಯಾ ತನ್ನ ಸೇನೆಯನ್ನು ವಾಪಸ್ ಕರೆಸಿಕೊಳ್ಳುತ್ತಿದೆ ಎನ್ನುವ ಸುದ್ದಿಯು ಬುಧವಾರ ಬಂದ ಕೆಲವೇ ಕ್ಷಣಗಳಲ್ಲಿ 10 ಗ್ರಾಂ ಚಿನ್ನದ ದರ ₹ 700ರಷ್ಟು ಕಡಿಮೆ ಆಗಿತ್ತು. ಹೀಗಾಗಿ, ಉಕ್ರೇನ್–ರಷ್ಯಾ ಬಿಕ್ಕಟ್ಟು ಶಮನವಾದಲ್ಲಿ ಚಿನ್ನದ ದರವು ಕಡಿಮೆ ಆಗಲಿದೆ ಎಂದು ಹೇಳಿದರು.

ಬೇಡಿಕೆ ಮೇಲೆ ಪರಿಣಾಮ ಇಲ್ಲ: ಉಕ್ರೇನ್ ಬಿಕ್ಕಟ್ಟಿನಿಂದಾಗಿ ಭಾರತದಲ್ಲಿ ಚಿನ್ನದ ಬೇಡಿಕೆಯ ಮೇಲೆ ಹೆಚ್ಚಿನ ಪರಿಣಾಮ ಆಗಿಲ್ಲ. 'ಇಲ್ಲಿಯ ಜನರ ಮನಃಸ್ಥಿತಿ ಹೇಗಿದೆ ಎಂದರೆ, ಚಿನ್ನದ ಬೆಲೆ ಜಾಸ್ತಿ ಆಗುತ್ತಿದೆ ಎಂದಾದರೆ, ಮುಂದೆ ಇನ್ನೂ ಜಾಸ್ತಿ ಆಗುತ್ತದೆ ಎನ್ನುವ

ಭಯದಿಂದ ಈಗ ಖರೀದಿ ಮಾಡುತ್ತಾರೆ. ಬೆಲೆ ಕಡಿಮೆ ಆಗುತ್ತಿದ್ದರೆ, ಇನ್ನಷ್ಟು ಕಡಿಮೆ ಆಗಬಹುದು ನೋಡೋಣ ಎಂದು ಖರೀದಿಸದೇ ಉಳಿಯುತ್ತಾರೆ' ಎಂದು ಅವರು ವಿವರಿಸಿದರು.

ಚಿನ್ನಕ್ಕೆ ಬರುತ್ತಿರುವ ಬೇಡಿಕೆಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಮದುವೆ ಸಮಾರಂಭಗಳಿಗೆ ಆಭರಣ ಖರೀದಿ ಎಂದಿನಂತೆಯೇ ಇದೆ. ಪರಿಸ್ಥಿತಿ ಎದುರಿಸುವ ಧೈರ್ಯ ಇರುವ ಕೆಲವರು ಹೂಡಿಕೆಯ ಉದ್ದೇಶದಿಂದ ಚಿನ್ನ ಖರೀದಿಸುತ್ತಿದ್ದಾರೆ ಎಂದು ವ್ಯಾಪಾರಿಯೊಬ್ಬರು ತಿಳಿಸಿದರು.

ಮಾರ್ಚ್ 11ರಿಂದ ಎಲ್‌ಐಸಿ ಐಪಿಒ?

ಸಿಡ್ನಿ/ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರದ ಮಾಲೀಕತ್ವದ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ (ಐಪಿಒ) ಪ್ರಕ್ರಿಯೆಯು ಮಾರ್ಚ್ 11ರಿಂದ ಶುರುವಾಗುವ ಸಾಧ್ಯತೆ ಇದೆ. ಮಾ. 11ರಿಂದ ಆರಂಭಿಕ ಹೂಡಿಕೆದಾರರಿಗೆ ಅವಕಾಶ ಮುಕ್ತವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಈ ಐಪಿಒ ಮೂಲಕ ₹ 60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಇತರ ಹೂಡಿಕೆದಾರರಿಗೆ ಎರಡು ದಿನಗಳ ನಂತರ ಅವಕಾಶ ಮುಕ್ತವಾಗಬಹುದು ಎಂದು ಗೊತ್ತಾಗಿದೆ. ಈ ಐಪಿಒಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅನುಮತಿಯು ಮಾರ್ಚ್ ಮೊದಲ ವಾರದಲ್ಲಿ ದೊರೆಯುವ ನಿರೀಕ್ಷೆ ಇದೆ. ಇದಾದ ನಂತರದಲ್ಲಿ, ಷೇರುಗಳ ಬೆಲೆ ಎಷ್ಟು ಎಂಬುದನ್ನು ತಿಳಿಸಲಾಗುತ್ತದೆ.

ಈ ಕುರಿತು ಅಧಿಕೃತ ಹೇಳಿಕೆ ನೀಡಲು ಎಲ್‌ಐಸಿ ನಿರಾಕರಿಸಿದೆ. ಮಾರ್ಚ್ 11ರ ವೇಳೆಗೆ ಐಪಿಒ ಶುರುವಾಗಬೇಕು ಎಂಬ ಗುರಿಯೊಂದಿಗೆ ನಿಗಮ ಕೆಲಸ ಮಾಡುತ್ತಿದೆ. ಕೊನೆಯಲ್ಲಿ, ದಿನಾಂಕದಲ್ಲಿ ಬದಲಾವಣೆ ಆಗುವ ಸಾಧ್ಯತೆಯೂ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷ ಕೊನೆಗೊಳ್ಳುವ ಮೊದಲೇ ಐಪಿಒ ಪೂರ್ಣಗೊಳಿಸುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ.

ಶೇ 5.8ರಷ್ಟು ಜಿಡಿಪಿ ಬೆಳವಣಿಗೆ: ಎಸ್‌ಬಿಐ

ಮುಂಬೈ (ಪಿಟಿಐ): ದೇಶದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಡಿಸೆಂಬರ್ ತ್ರೈಮಾಸಿಕದಲ್ಲಿ ಶೇಕಡ 5.8ರಷ್ಟು ಬೆಳವಣಿಗೆ ಆಗಿರುವ ಸಾಧ್ಯತೆ ಇದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಎಕೊವ್ರ್ಯಾಪ್ ವರದಿ ತಿಳಿಸಿದೆ.

ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 8.4ರಷ್ಟು ಬೆಳವಣಿಗೆ ಕಂಡಿದೆ. ಆದರೆ, ಮೊದಲ ತ್ರೈಮಾಸಿಕದಲ್ಲಿ ಆಗಿದ್ದ ಶೇ 20.1ರಷ್ಟು ಬೆಳವಣಿಗೆಗೆ ಹೋಲಿಸಿದರೆ ಎರಡನೇ ತ್ರೈಮಾಸಿಕದ ಬೆಳವಣಿಗೆ ಕಡಿಮೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮೂರನೇ ತ್ರೈಮಾಸಿಕದ ಜಿಡಿಪಿ ಅಂಕಿ–ಅಂಶವನ್ನು ಫೆಬ್ರುವರಿ 28ರಂದು ಬಿಡುಗಡೆ ಮಾಡಲಿದೆ.

2021–22ನೇ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಗೆಯು ಶೇ 8.8ರಷ್ಟು ಆಗಲಿದೆ ಎಂದು ಎಸ್‌ಬಿಐ ವರದಿ ಹೇಳಿದೆ. ಜಿಡಿಪಿಯು ಶೇ 9.3ರಷ್ಟು ಆಗಲಿದೆ ಎಂದು ಈ ಹಿಂದೆ ಹೇಳಿತ್ತು.

ಟ್ರೈಬರ್‌ನ ಸೀಮಿತ ಆವೃತ್ತಿ ಬಿಡುಗಡೆ

ನವದೆಹಲಿ (ಪಿಟಿಐ): ರೆನೊ ಇಂಡಿಯಾ ಕಂಪನಿಯು ತನ್ನ ಕಾಂಪ್ಯಾಕ್ಟ್ ಮಲ್ಟಿಪರ್ಪಸ್ ವೆಹಿಕಲ್ (ಎಂಪಿವಿ) 'ಟ್ರೈಬರ್'ನ ಸೀಮಿತ ಆವೃತ್ತಿಯನ್ನು ದೇಶದ ಮಾರುಕಟ್ಟೆಗೆ ಶುಕ್ರವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 7.24 ಲಕ್ಷ.

ಈ ಆವೃತ್ತಿಯು 1 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿದ್ದು, ಮ್ಯಾನುಯಲ್ ಮತ್ತು ಈಸಿ–ಆರ್ ಆಟೊಮೇಟೆಡ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಲಭ್ಯವಿದೆ.

2019ರಲ್ಲಿ ಬಿಡುಗಡೆ ಆಗಿರುವ 'ಟ್ರೈಬರ್'ನ ಒಟ್ಟಾರೆ ಮಾರಾಟವು 1 ಲಕ್ಷದ ಮೈಲಿಗಲ್ಲು ದಾಟಿದೆ ಎಂದು ಕಂಪನಿಯು ಇದೇ ವೇಳೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	515
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-44500
ಹಳತು	46000-53000
ಚಿತ್ರದುರ್ಗ	
ಆಪಿ	45129-45559
ಬೆಟ್ಟೆ	36219-36679
ಕೆಂಪುಗೋಟು	31600-32000
ರಾಶಿ	44639-45069
ಕುಮಟ	
ಚಿಪ್ಪು	24069-28888
ಕೋಕ	20109-26019
ಫ್ಯಾಕ್ಟರಿ	13509-19699
ಹಳೆಚಾಲಿ	46019-48099
ಹೊಸಚಾಲಿ	37010-42019
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22899-29229
ಚಾಲಿ	45899-46899
ಕೋಕ	21699-29189
ಹೊಸಚಾಲಿ	34699-41399
ಕೆಂಪುಗೋಟು	28689-33019
ರಾಶಿ	45699-47099
ತಟ್ಟಿಬೆಟ್ಟೆ	37699-44899
ಶಿರಸಿ	
ಬೆಟ್ಟೆ	24296-45199
ಬಿಳಿಗೋಟು	21789-36819
ಚಾಲಿ	32199-42028
ರಾಶಿ	32899-46909
ಯಲ್ಲಾಪುರ	
ಬಿಳಿಗೋಟು	24919-31899
ಕೋಕ	18899-29887
ಹಳೆಚಾಲಿ	46511-48599
ಹೊಸಚಾಲಿ	34319-41799
ಕೆಂಪುಗೋಟು	30100-36409
ರಾಶಿ	45699-51509
ತಟ್ಟಿಬೆಟ್ಟೆ	37699-44895
ಶಿವಮೊಗ್ಗ	
ಬೆಟ್ಟೆ	46100-51099
ಗೊರಬಲು	17009-34160
ರಾಶಿ	43559-46089
ಸರಕು	53169-75009
ರಾಮನಗರ ರೇಷ್ಮೆ	
ಮಿಶ್ರತಳಿ	400-760
ದ್ವಿತಳಿ	445-975

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	16100	16150	251.50 ಸೆಂಟ್ಸ್
ಎಸಿ	7810	7400	8000	
ಆರ್‌ಪಿ	8000	7600	8050	ಲಂಡನ್
ಆರ್‌ಸಿ	4075	3950	4050	2289 ಡಾಲರ್ಸ್

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2500-3300
ಮಧ್ಯಮ	₹2000-2500
ಸಣ್ಣ	₹1500-2000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹18000-20000

2ನೇ ದರ್ಜೆ ₹10000-16000

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹9000-9000
ಪುತ್ತೂರು	₹4000-10500
ತುರುವೇಕೆರೆ	₹17700-17800

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಅಡುಗೆ ಕೆಲಸಕ್ಕೆ (ಸಸ್ಯಾಹಾರಿ ಮತ್ತು ಮಾಂಸಾಹಾರಿ) 40 ವಯಸ್ಸಿನೊಳಗಿನ ಮಹಿಳೆ ಬೇಕಾಗಿದ್ದಾರೆ. ಪಾರ್ಟ್-ಟೈಮ್ / ಫುಲ್-ಟೈಮ್, ಕನಕಪುರ ರಸ್ತೆ, ಬೆಂಗಳೂರು.9880839279

General

✓ ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-48,000/- 9739066244, 7406066011

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

✓ ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೋಮಾದವರು 18,000- 56,000/- ವಸತಿಯೂಟದೊಂದಿಗೆ 8197650569, 7204396011

ಬೆಂಗಳೂರಿನಲ್ಲಿಎಸಿ ಟೆಕ್ನಿಷಿಯನ್‌ಗಳು ತಕ್ಷಣ ಬೇಕಾಗಿದ್ದಾರೆ. ಸಂಬಳ Rs20000 to Rs25000 + Petrol +Incentives. ಸಂಪರ್ಕಿಸಿ 8867475763/ 7204347372

Part-Time Jobs

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Marketing & Sales

LALSWEETS PVT Ltd Urgently require sales Representative for immediate joining Male candidates with 2 wheeler Salary up to 21K+ Conveyance+ Incentives Please contact 8660499891/ 8884564876

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು, ಯುವಕರು ಬೇಕಾಗಿದ್ದಾರೆ. ತಕ್ಷಣ ವಸತಿಯೂಟದೊಂದಿಗೆ ಸಂಬಳ 16,000 - 23,000. 6366324863, 9663196788

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080 -25300714

ರಿಯಲ್ ಎಸ್ಟೇಟ್ ಬೈಯಿಂಗ್

Sites

Vishweshwariah Layout

WANTED BDA Site Anjanapura, Banashankari 6th Stage, Vishweshwaraiah layout & Mysore MUDA Site, any BDA Katha or MUDA Katha, immediate settlement. Genuine Sellers Contact: 9902038118.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

House

Peenya

T. DASARAHALLI 1350Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

Residential/ Commercial

Peenya

T. DASARAHALLI 1350 Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

★||ಶ್ರೀಶಕ್ತಿ ಸಾಯಿಬಾಬಾ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್ ಕಛೇರಿ, ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9591588881

'ವಿಶ್ವಖ್ಯಾತಿಯ ದಕ್ಷಿಣಕನ್ನಡ' ಕೇರಳಿಯ ದೈವಸಂಭೂತ ಜ್ಯೋತಿಷ್ಯ,ವಾಸ್ತುಗುರು ಶ್ರೀದೇವಾನಂದನ್ ರವರಿಂದ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ, ನೆಮ್ಮದಿಗಾಗಿ,ಸರ್ವಮನಇಚ್ಛೆ, ಮಹಾವಶೀಕರಣ,ಆಕರ್ಷಣಾ, ಸಂಮೋಹನ ಮತ್ತು ಶತ್ರು ಸಂಬಂಧಿತ,ದುಷ್ಟಶಕ್ತಿ ಮಾಯಾವಿಗಳ ಇಂದೇ ಪರಿಹಾರಕ್ಕಾಗಿ.9845005009

ಸ್ತ್ರೀ-ವಶೀಕರಣ, ಪುರುಷ-ವಶೀಕರಣ, ಮಾಟ-ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ-ಭವಿಷ್ಯ, ಖಚಿತ- ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ : ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★||ನಂ.1 ಸ್ತ್ರೀಪುರುಷ||★ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಒಂದು ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ಪಾಂಡುರಂಗ ಗುರೂಜಿ. 9972033162

ASTRO YATRA

ಹೆಸರಿನಲ್ಲೇ ಇದೆ ಭವಿಷ್ಯ



ಮಕ್ಕಳಿಗೆ ಹೆಸರಿಡುವುದು ಒಂದು ಕಲೆಯಲ್ಲ ಹೆಸರಿನಲ್ಲಿ ಭವಿಷ್ಯವಿದೆ. 1)ಭಾರತ ದೇಶದಲ್ಲಿರುವ ಯಾವುದೇ ನದಿಗಳ ಹೆಸರನ್ನು ಹೆಣ್ಣು ಮಕ್ಕಳಿಗೆ ಇಡಬಾರದು, ಇಟ್ಟರೆ ಅಂಥವರ ಜೀವನ ಮಾನಸಿಕ ನೆಮ್ಮದಿ ಅಷ್ಟಾಗಿ ಚೆನ್ನಾಗಿರುವುದಿಲ್ಲ ಉದಾ: ಗಂಗಾ, ಕಾವೇರಿ, ಕಪಿಲ, ಯಮುನ, ಜಮುನ, ಅರ್ಕಾವತಿ, ಗೋದಾವರಿ, ತುಂಗಭದ್ರಾ, ಸರಸ್ವತಿ, ನರ್ಮದಾ, ಸಿಂಧೂ, ಕೃಷ್ಣಾ ಇನ್ನು ಇದರ ಉಪನದಿಗಳು, ನೀವೇ ಪರೀಕ್ಷಿಸಿ ಇವರ ಜೀವನ ಹೇಳಿಕೊಳ್ಳುವ ಮಟ್ಟಕ್ಕೆ ಜೀವನ ವಿರುವುದಿಲ್ಲ (2)ಇದೇ ರೀತಿ ಜ್ಯೋತಿಷ್ಯದಲ್ಲಿ 27 ನಕ್ಷತ್ರಗಳಲ್ಲಿ ಅಶ್ವಿನಿ, ಭರಣಿ, ಅನುರಾಧ, ರೋಹಿಣಿ, ಅರುಂಧತಿ, ಸ್ವಾತಿ, ರೇವತಿ etc., 2)ಇದೇ ರೀತಿ ಯಾವ ಹೆಣ್ಣುಮಕ್ಕಳಿಗೂ ಎರಡು, ನಾಲ್ಕು, ಆರು ಅಕ್ಷರದಲ್ಲಿ ಹೆಸರಿಡಬಾರದು ಇವರ ಜೀವನವು ಅತಂತ್ರವಾಗಿರುತ್ತದೆ. ಉದಾ: ಗೀತಾ, ರಾಧಾ, ವೀಣಾ, ಲಕ್ಷ್ಮೀ, ಗಂಗಾ, ಸೀತಾ, ಬಿಂದು etc., 4 ಅಕ್ಷರದಲ್ಲಿ: ಕಲಾವತಿ, ರಾಧಾಮಣಿ, ವೇದವಲ್ಲಿ, ನಾಗಮಣಿ, ಕಮಲಮ್ಮ, ಸುಬ್ಬಲಕ್ಷ್ಮೀ, ಅರುಂಧತಿ, ನಾಗರತ್ನ, ಶಾಂತಾಮಣಿ, ಸುಧಾರಾಣಿ etc.,3)ಗಂಡುಮಕ್ಕಳಿಗೆ ಮೂರಕ್ಷರದಲ್ಲಿ ಹೆಸರಿಡಬಾರದು ಇವರಲ್ಲಿ 70% ಜನರ ಜೀವನ ಕಷ್ಟದಿಂದ ನಡೆಯುತ್ತದೆ. 3 ಅಕ್ಷರದ ಹೆಸರುಗಳು, ರಮೇಶ, ಸುರೇಶ, ಶ್ರೀಧರ, ಗೋಪಾಲ, ಗೋವಿಂದ, ಭಾರ್ಗವ, ಶ್ರೀಹರಿ, ನಂದೀಶ 4)ಐದಲಿಗೆ 4 ಅಕ್ಷರದಲ್ಲಿದ್ದರೆ ಉತ್ತಮ ಉದಾ: ರಾಮಚಂದ್ರ, ಜಯಚಂದ್ರ, ನಾಗರಾಜ, ರಾಮಸ್ವಾಮಿ, ಶ್ರೀನಿವಾಸ, ವೀರಸೇನ, ವಾಸುದೇವ, ನಾರಾಯಣ etc., 5)ಇದೇ ರೀತಿ ಯಾವ ಗಂಡು ಮಕ್ಕಳಿಗೂ ಗೋತ್ರದ ಹೆಸರಿಡಬಾರದು ಆತ್ರೇಯನ ಅಂಗೀರಸ, ಕೌಂಡಿನ್ಯ, ಕಶ್ಯಪ, ಕೌಶಿಕ, ಗೌತಮ, ಭಾರ್ಗವ, ಧನಂಜಯ, ಶ್ರೀವತ್ಸ, ವಿಶ್ವಾಮಿತ್ರ, ಲೋಹಿತ ಇವೆಲ್ಲಾ ಅಶುಭ 6)ಇದೇ ರೀತಿ ಋಷಿಗಳ ಹೆಸರಿಡಬಾರದು ಉದಾ: ಜಮದಗ್ನಿ, ಕೌಂಡಿನ್ಯ, ವ್ಯಾಸರಾಜ, ಶಾಂಡಿಲ್ಯ, ಶೌನಕ, ಹಿರಣ್ಯ etc.,ನಾವು ತಿಳಿಸುವ ಹೆಸರುಗಳಲ್ಲಿ ಕೆಲವರು ಚೆನ್ನಾಗಿರಬಹುದು ಅಂತವರು ಸ್ವಯಂ ಶಕ್ತಿಯಿಂದ ಅಥವಾ ಸಾಧನೆಯಿಂದಲ್ಲ, ಪಿತಾರ್ಜಿತ ಆಸ್ತಿಯಲ್ಲಿ ಸುಖ ಇರಬಹುದು, ಅಷ್ಟೇ(ಇನ್ನೂ ಮುಂದುವರಿಯುವುದು–ಭಾಗ–2)

Contact: RAMASWAMY ASTROLEGER
1176/1, 36th Main Road, Poornapragna Nagara, Uttarahalli, Bangalore-560061
M: 94482 43757, 94816 43757

EDUCATION CORNER

ಸ್ಪರ್ಧಾಮಿತ್ರ ACADEMY
IAS / KAS / PSI
Prelims & Mains
BANK / RRB Exam
ADMISSIONS OPEN
Branches: Bengaluru & Kalaburgi
Near Attiguppe Metro Station, Service Road, Vijayanagar, Bengaluru - 40.
9535111133 / 9535111199 / 88

★||ವಶೀಕರಣ ಸ್ಪೆಷಲಿಸ್ಟ್||★ ಸ್ತ್ರೀ ಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 27 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9008968867

ಪ್ರವಾಸ

Travel

23.03.2022,19.04.2022, 18.05.2022 ಶ್ರೀಲಂಕಾ 8ದಿನಗಳು.18.03.2022, 12.04.2022, 11:05.2022 ಕಾಶಿ,ಗಯಾ,ಅಯೋಧ್ಯ 7ದಿನಗಳು. 20.03.2022, 03.04.2022 ಗುಜರಾತ್ 8ದಿನಗಳು.21.03.2022, 12.04.2022, 27.04.2022, 23.05.2022 ಶಿಮ್ಲಾ, ಕುಲುಮನಾಲಿ 7ದಿನಗಳು. 11.03.2022, 19.04.2022 ದೆಹಲಿ, ಆಗ್ರಾ,ಜೈಪುರ, 6ದಿನಗಳು. 18.03.2022,22.04.2022, 16.05.2022 ರಾಮೇಶ್ವರ, ಕನ್ಯಾಕುಮಾರಿ 5ದಿನಗಳು. ಮಲೆನಾಡು ಪ್ರವಾಸ 3ದಿನಗಳು. ಇದಲ್ಲದೆ ಕಸ್ಟಮೈಸ್ ಫ್ಯಾಮಿಲಿ ಪ್ರವಾಸ ಹಾಗೂ ಇತರ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವೆಲ್ಸ್ ಬೆಂಗಳೂರು-03. 9448402248, 7022547922, 9342483417

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/6 ದಿನಗಳು. 04.03.2022 ತಿರುನಳ್ಳಾರ್, ನವಗ್ರಹದರ್ಶನ, ತಂಜಾವೂರು, ಕುಂಭಕೋಣಂ, ಚಿದಂಬರಂ, ವೇಲಂಗಣಿ 18ಕ್ಷೇತ್ರಗಳು 6000/-. 06.04.2022 ರಾಮೇಶ್ವರ, ಕನ್ಯಾಕುಮಾರಿ,ಮದುರೈ, ತಿರುಚೆಂದೂರ್ ಇತ್ಯಾದಿ 7300/-. 9448390735

8 ದಿನಗಳ ಶಿರಡಿ ಪ್ರವಾಸ. 16-03-2022, 7ದಿನಗಳ ಕೇರಳ ಪ್ರವಾಸ. 04-04-2022, 5ದಿನಗಳ ಶ್ರೀಶೈಲ ಅಹೋಬಿಲಂ ಪ್ರವಾಸ, 21ದಿನಗಳ ಸೆವೆನ್‌ಸಿಸ್ಟರ್ಸ್. 08-04-2022, 8/10 ದಿನಗಳ ಕಾಶ್ಮೀರ್, ವೈಷ್ಣೋದೇವಿ ಪ್ರವಾಸ. 21-03-2022, 04-04-2022, 11-04-2022, 13ದಿನಗಳ ಚಾರ್ ಧಾಮ್‌ಯಾತ್ರಾ. 11-05-2022,25-05-2022, 08-06-2022, 15-06-2022, 11ದಿನಗಳ ಕೋಲ್ಕತಾ ಡಾರ್ಜಿಲಿಂಗ್. 07-04-2022, 21-04-2022, 05-05-2022, 19-05-2022, 7/12 ದಿನಗಳ ಕುಲುಮನಾಲಿ, 22-03-2022, 05-04-2022, 19-04-2022, 03-05-2022,17-05-2022, 13ದಿನಗಳ ಕಾಶಿ,ನೇಪಾಳ, ಮುಕ್ತಿನಾಥ. 04-04-2022, 18-04-2022, 02-05-2022, 16-05-2022. ಶ್ರೀಮಲ್ಲಿಕಾರ್ಜುನ ಟ್ರಾವೆಲ್ 9880847001, 9342848791

ರೈಲು ಮತ್ತು ಎಸಿ ಬಸ್ಸಿನಲ್ಲಿ 20.05.2022 ಹಾಗೂ 27.05.2022ರಿಂದ 17/22ದಿನಗಳ ನವದೆಹಲಿ, ಕೊಲ್ಕತ್ತಾ,ಕಾಶಿ,ನೇಪಾಳ,ಪುರಿ, ಹರಿದ್ವಾರ. 09.06.2022ರಿಂದ ವಿಮಾನ ಮತ್ತು ಬಸ್ಸಿನಲ್ಲಿ ಚಾರೋಧಾಮ್ 13ದಿನಗಳು ಹಾಗೂ 7ದಿನಗಳ ಕಾಶಿ,ಗಯಾ, ನೈಮಿಷಾರಣ್ಯಾ.ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್, #164,ಆರ್.ವಿ.ರಸ್ತೆ, (ಮಿನರ್ವ ಬಸ್‌ಸ್ಟಾಪ್ ಎದುರು) ಬೆಂಗಳೂರು4.ಫೋನ್: 8105657052, 9480182865, 08026565085.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ವೆಸ್ಟ್ ಇಂಡೀಸ್ ಎದುರಿನ ಎರಡನೇ ಟ್ವೆಂಟಿ20 ಪಂದ್ಯ; ಕೊಹ್ಲಿ, ಪಂತ್ ಆಟದ ಸೊಬಗು

ಭಾರತಕ್ಕೆ ಸರಣಿ ಜಯದ ಸಂಭ್ರಮ

ಕೋಲ್ಕತ್ತ (ಪಿಟಿಐ): ಏಕದಿನ ಸರಣಿಯಲ್ಲಿ ಆಧಿಪತ್ಯ ಸ್ಥಾಪಿಸಿದ ಭಾರತ ತಂಡ ವೆಸ್ಟ್ ಇಂಡೀಸ್ ಎದುರಿನ ಟ್ವೆಂಟಿ20 ಸರಣಿಯಲ್ಲೂ ಪಾರಮ್ಯ ಮೆರೆಯಿತು. ಈಡನ್ ಗಾರ್ಡನ್ ಅಂಗಣದಲ್ಲಿ ಶುಕ್ರವಾರ ನಡೆದ ಎರಡನೇ ಪಂದ್ಯದಲ್ಲಿ ಎಂಟು ರನ್‌ಗಳ ಜಯ ಗಳಿಸಿ ಮೂರು ಪಂದ್ಯಗಳ ಸರಣಿಯನ್ನು ತನ್ನದಾಗಿಸಿಕೊಂಡಿತು.

ವಿರಾಟ್ ಕೊಹ್ಲಿ ಮತ್ತು ರಿಷಭ್ ಪಂತ್ ಅವರ ಅರ್ಧಶತಕಗಳ ನೆರವಿನಿಂದ ಭಾರತ 5 ವಿಕೆಟ್‌ಗಳಿಗೆ 186 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್‌ಗೆ 3 ವಿಕೆಟ್‌ಗೆ 178 ರನ್ ಗಳಿಸಲಷ್ಟೇ ಸಾಧ್ಯವಾಯಿತು.

59 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿದ್ದಾಗ ಜೊತೆಗೂಡಿದ ನಿಕೋಲಸ್ ಪೂರನ್ (62; 41 ಎಸೆತ, 5 ಬೌಂಡರಿ, 3 ಸಿಕ್ಸರ್) ಮತ್ತು ರೋವ್ಮನ್ ಪೊವೆಲ್ (68; 36 ಎ, 4 ಬೌಂ, 5 ಸಿ) ಶತಕದ ಜೊತೆಯಾಟವಾಡಿ ಭರವಸೆ ಮೂಡಿಸಿದರು. 19ನೇ ಓವರ್‌ನಲ್ಲಿ ಪೂರನ್ ವಿಕೆಟ್ ಪಡೆದು ಭುವನೇಶ್ವರ್ ಕುಮಾರ್ ಸಂಭ್ರಮಿಸಿದರು.

ಲಯಕ್ಕೆ ಮರಳಿದ ಕೊಹ್ಲಿ: ಟಾಸ್ ಗೆದ್ದ ವೆಸ್ಟ್ ಇಂಡೀಸ್ ಆತಿಥೇಯರನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಕೆಲವು ತಿಂಗಳಿಂದ ರನ್ ಬರ ಅನುಭವಿಸುತ್ತಿದ್ದ ವಿರಾಟ್ ಕೊಹ್ಲಿ ಈ ಪಂದ್ಯದಲ್ಲಿ ಲಯ ಕಂಡುಕೊಂಡರು. ಅವರೊಂದಿಗೆ ರಿಷಭ್ ಪಂತ್ ಕೂಡ ಮಿಂಚಿದರು. ಅವರಿಬ್ಬರ ಅವರ ಅರ್ಧಶತಕಗಳ ಬಲದಿಂದ ಭಾರತ ಸವಾಲಿನ ಮೊತ್ತ ಕಲೆ ಹಾಕಿತು.

ಎರಡನೇ ಓವರ್‌ನಲ್ಲೇ ಇಶಾನ್ ಕಿಶನ್ ವಿಕೆಟ್ ಕಳೆದುಕೊಂಡರು. ಮಾಜಿ ನಾಯಕ ಕೊಹ್ಲಿ ಜೊತೆಗೂಡಿ ನಾಯಕ ರೋಹಿತ್ ಶರ್ಮಾ ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು.

ವಿರಾಟ್ ಕೊಹ್ಲಿ ಬ್ಯಾಟಿಂಗ್ ವೈಭವ –ಪಿಟಿಐ ಚಿತ್ರ

ಇವರಿಬ್ಬರ ಜೊತೆಯಾಟದಲ್ಲಿ 49 ರನ್‌ಗಳು ಸೇರಿದವು. ಅಷ್ಟರಲ್ಲಿ ರೋಹಿತ್ ಶರ್ಮಾ ವಿಕೆಟ್ ಒಪ್ಪಿಸಿದರು. ಸೂರ್ಯಕುಮಾರ್ ಯಾದವ್ ಬೇಗನೇ ಮರಳಿದರು. ನಂತರ ಕೊಹ್ಲಿ ಮತ್ತು ವಿಕೆಟ್ ಕೀಪರ್ ರಿಷಭ್ ಪಂತ್ ಆಟ ರಂಗೇರಿತು. ಮೋಹಕ ಹೊಡೆತಗಳೊಂದಿಗೆ ಕೊಹ್ಲಿ ಮುದ ನೀಡಿದರೆ ರಿಷಭ್ ಪಂತ್ ಸಹಜ ಶೈಲಿಯಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದರು.

ತಂಡದ ಮೊತ್ತ ಮೂರಂಕಿ ದಾಟಿದ ಸ್ವಲ್ಪ ಹೊತ್ತಿನಲ್ಲೇ ರಾಸ್ಟನ್ ಚೇಸ್ ಎಸೆತದಲ್ಲಿ ಕೊಹ್ಲಿ (52; 41 ಎಸೆತ, 7 ಬೌಂಡರಿ, 1 ಸಿಕ್ಸರ್) ಬೌಲ್ಡ್ ಆದರು. ಪಂತ್ (52; 28 ಎ, 7 ಬೌಂ, 1 ಸಿ) ಜೊತೆಗೂಡಿದ ವೆಂಕಟೇಶ್ ಅಯ್ಯರ್ ವೇಗವಾಗಿ ರನ್ ಗಳಿಸಲು ನೆರವಾದರು. ಕೊನೆಯ ಓವರ್‌ನಲ್ಲಿ ಔಟಾಗುವ ಮುನ್ನ ವೆಂಕಟೇಶ್ 76 ರನ್‌ಗಳ ಜೊತೆಯಾಟವಾಡಿದರು.

ಕೀರನ್ ಪೊಲಾರ್ಡ್‌ಗೆ ಶತಕದ ಪಂದ್ಯ : ವೆಸ್ಟ್ ಇಂಡೀಸ್ ತಂಡದ ನಾಯಕ ಕೀರನ್ ಪೊಲಾರ್ಡ್ ಈ ಪಂದ್ಯದಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಿದರು. ಇದು ಅವರ 100ನೇ ಅಂತರರಾಷ್ಟ್ರೀಯ ಟ್ವೆಂಟಿ20 ಪಂದ್ಯವಾಗಿತ್ತು. ಈ ಸಾಧನೆ ಮಾಡಿದ ವೆಸ್ಟ್ ಇಂಡೀಸ್‌ನ ಮೊದಲ ಆಟಗಾರ ಅಗಿದ್ದಾರೆ ಅವರು.

ಈ ಹಿಂದಿನ 99 ಪಂದ್ಯಗಳ 81 ಇನಿಂಗ್ಸ್‌ಗಳಲ್ಲಿ ಅವರು 1561 ರನ್ ಕಲೆ ಹಾಕಿದ್ದಾರೆ. ಅಜೇಯ 75 ರನ್ ಅವರ ಗರಿಷ್ಠ ಮೊತ್ತವಾಗಿದ್ದು ಆರು ಅರ್ಧಶತಕ ಗಳಿಸಿದ್ದಾರೆ.

99 ಸಿಕ್ಸರ್ ಮತ್ತು 93 ಬೌಂಡರಿ ಸಿಡಿಸಿದ್ದಾರೆ. 42 ವಿಕೆಟ್‌ಗಳನ್ನೂ ಉರುಳಿಸಿದ್ದಾರೆ.

ಸ್ಕೋರ್ ಕಾರ್ಡ್

ಭಾರತ 5ಕ್ಕೆ 186 (20 ಓವರ್)
ರೋಹಿತ್ ಸಿ ಕಿಂಗ್ ಬಿ ಚೇಸ್ 19 (18 ಎ, 4x2, 6x1), ಇಶಾನ್ ಸಿ ಮೇಯರ್ಸ್ ಬಿ ಕಾಟ್ರೆಲ್ 2 (10 ಎ), ವಿರಾಟ್ ಬಿ ಚೇಸ್ 52 (41 ಎ, 4x7, 6x1), ಸೂರ್ಯಕುಮಾರ್ ಸಿ ಮತ್ತು ಬಿ ಚೇಸ್ 8 (6 ಎ, 4x1), ರಿಷಭ್ ಔಟಾಗದೆ 52 (28 ಎ, 4x7, 6x1), ವೆಂಕಟೇಶ್ ಬಿ ಶೆಫರ್ಡ್ 33 (18 ಎ, 4x4, 6x1), ಹರ್ಷಲ್ ಔಟಾಗದೆ 1 (1ಎ)
ಇತರೆ (ಬೈ 5, ಲೆಗ್‌ಬೈ 3, ನೋಬಾಲ್ 2, ವೈಡ್ 9) 19
ವಿಕೆಟ್ ಪತನ: 1-10 (ಇಶಾನ್ ಕಿಶನ್, 1.5), 2-59 (ರೋಹಿತ್ ಶರ್ಮಾ, 7.5), 3-72 (ಸೂರ್ಯಕುಮಾರ್ ಯಾದವ್, 9.5), 4-106 (ವಿರಾಟ್ ಕೊಹ್ಲಿ, 13.4), 5-182 (ವೆಂಕಟೇಶ್ ಅಯ್ಯರ್, 19.3)
ಬೌಲಿಂಗ್: ಅಕೀಲ್ ಹೊಸೇನ್ 4-0-30-0, ಶೆಲ್ಡನ್ ಕಾಟ್ರೆಲ್ 3-1-20-1, ಜೇಸನ್ ಹೋಲ್ಡರ್ 4-0-45-0, ರೊಮಾರಿಯೊ ಶೆಫರ್ಡ್ 3-0-34-1, ರಾಸ್ಟನ್ ಚೇಸ್ 4-0-25-3, ಒಡೀನ್ ಸ್ಮಿತ್ 1-0-10-0, ಕೀರನ್ ಪೊಲಾರ್ಡ್ 1-0-14-0

ವೆಸ್ಟ್ ಇಂಡೀಸ್ 3ಕ್ಕೆ 178 (20 ಓವರ್)
ಬ್ರೆಂಡನ್ ಸಿ ಸೂರ್ಯಕುಮಾರ್ ಬಿ ರವಿ 22 (30ಎ, 4X2), ಮೇಯರ್ಸ್ ಸಿ ಮತ್ತು ಚಾಹಲ್ 9 (10ಎ, 4X1), ಪೂರನ್ ಸಿ ರವಿ ಬಿ ಭುವನೇಶ್ವರ್ 62 (41ಎ, 41ಎ, 4X5, 6X3), ರೋವಮನ್ ಔಟಾಗದೆ 68 (36ಎ, 4X4, 6X5), ಪೊಲಾರ್ಡ್ ಔಟಾಗದೆ 3 (3ಎ)
ಇತರೆ (ಲೆಗ್‌ಬೈ 2, ವೈಡ್ 12) 14
ವಿಕೆಟ್ ಪತನ: 1-34 (ಕೈಲ್ ಮೇಯರ್ಸ್, 5.1), 2-59 (ಬ್ರೆಂಡನ್ ಕಿಂಗ್, 8.3), 3-159 (ನಿಕೊಲಸ್ ಪೂರನ್, 18.3)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-29-1, ದೀಪಕ್ ಚಾಹರ್ 4-0-40-0, ಯಜುವೇಂದ್ರ ಚಾಹಲ್ 4-0-31-1, ಹರ್ಷಲ್ ಪಟೇಲ್ 4-0-46-0, ರವಿ ಬಿಷ್ಣೋಯಿ 4-0-30-1

ಫಲಿತಾಂಶ: ಭಾರತ ತಂಡಕ್ಕೆ 8 ರನ್‌ಗಳ ಜಯ, 2–0ರಿಂದ ಸರಣಿ ಮುನ್ನಡೆ.

ಕಬಡ್ಡಿ: ಬೆಂಗಾಲ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಾಲ್ ವಾರಿಯರ್ಸ್ ಮತ್ತು ದಬಂಗ್ ಡೆಲ್ಲಿ ತಂಡಗಳು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಶುಕ್ರವಾರ ಭರ್ಜರಿ ಜಯ ಗಳಿಸಿದವು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್ ಆವರಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯಗಳಲ್ಲಿ ಬೆಂಗಾಲ್ 43-36ರಲ್ಲಿ ಪುಣೇರಿ ಪಲ್ಟನ್ ಎದುರು ಜಯ ಗಳಿಸಿತು. ದಬಂಗ್ ಡೆಲ್ಲಿ 40-32ರಲ್ಲಿ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ಇನ್ನೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 43-33ರಿಂದ ತಮಿಳ್ ತಲೈವಾಸ್ ಎದುರು ಗೆದ್ದಿತು.

ಪಂದ್ಯದ ಆರಂಭದಲ್ಲಿ ಪುಣೇರಿ ಪಲ್ಟನ್ ಮುನ್ನಡೆ ಗಳಿಸಿತ್ತು. ಮೊದಲಾರ್ಧದ ಮುಕ್ತಾಯದ ವೇಳೆ ಬೆಂಗಾಲ್ 10 ಪಾಯಿಂಟ್‌ಗಳ ಹಿನ್ನಡೆಯಲ್ಲಿತ್ತು. ಆದರೆ ದ್ವಿತೀಯಾರ್ಧದಲ್ಲಿ ತಿರುಗೇಟು ನೀಡಿ ಗೆಲುವಿನ ದಡ ಸೇರಿತು. ಮಣಿಂದರ್ ಸಿಂಗ್ 11 ಪಾಯಿಂಟ್‌ಗಳೊಂದಿಗೆ ಮತ್ತೊಮ್ಮೆ ಸೂಪರ್ ಟೆನ್ ಸಾಧನೆ ಮಾಡಿದರು. ಮೋಹಿತ್ ಗೋಯತ್ 15 ಪಾಯಿಂಟ್ ಗಳಿಸಿದರೂ ಪುಣೇರಿ ತಂಡಕ್ಕೆ ಜಯ ತಂದುಕೊಡಲು ಆಗಲಿಲ್ಲ.

ನವೀನ್ ಅನುಪಸ್ಥಿತಿಯಿಂದಾಗಿ ಜೋಗಿಂದರ್ ನರ್ವಾಲ್ ನಾಯಕತ್ವದಲ್ಲಿ ಕಣಕ್ಕೆ ಇಳಿದ ದಬಂಗ್ ಡೆಲ್ಲಿ ತಂಡ ವಿಜಯ್, ಆಶು ಮಲಿಕ್ ಮತ್ತು ನೀರಜ್ ನರ್ವಾಲ್ ಅವರ ಅಮೋಘ ಆಟದ ನೆರವಿನಿಂದ ಮುನ್ನುಗ್ಗಿತು.



ಪುಣೇರಿ ಪಲ್ಟನ್ ತಂಡದ ಡಿಫೆಂಡರ್‌ಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಬೆಂಗಾಲ್ ವಾರಿಯರ್ಸ್‌ನ ಮಣಿಂದರ್ ಸಿಂಗ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	21	15	5	1	81
ದಬಂಗ್ ಡೆಲ್ಲಿ	22	12	6	4	75
ಯು ಪಿ ಯೋಧಾ	22	10	9	3	68
ಬೆಂಗಳೂರು ಬುಲ್ಸ್	22	11	9	2	66
ಹರಿಯಾಣ ಸ್ಟೀಲರ್ಸ್	21	10	8	3	63
ಜೈಪುರ ಪಿಂಕ್ ಪ್ಯಾಂಥರ್ಸ್	21	10	9	2	62
ಗುಜರಾತ್ ಜೈಂಟ್ಸ್	21	9	8	4	62
ಪುಣೇರಿ ಪಲ್ಟನ್	21	11	9	1	61
ಬೆಂಗಾಲ್ ವಾರಿಯರ್ಸ್	22	9	10	3	57
ಯು ಮುಂಬಾ	21	7	9	5	54
ತಮಿಳ್ ತಲೈವಾಸ್	22	5	11	6	47
ತೆಲುಗು ಟೈಟನ್ಸ್	22	1	17	4	27

(ಶುಕ್ರವಾರದ ಪಂದ್ಯಗಳ ಅಂತ್ಯಕ್ಕೆ)

ಸಂತ ಕ್ಲಾರೆಟ್ ಕಾಲೇಜಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತ ಕ್ಲಾರೆಟ್ ಪಿಯು ಕಾಲೇಜು ವಿದ್ಯಾರ್ಥಿಗಳು ಸಂತ ಫ್ರಾನ್ಸಿಸ್ ಪದವಿ ಕಾಲೇಜು ಆಯೋಜಿಸಿದ್ದ ಅಂತರಕಾಲೇಜು ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರಿದರು.

ಗುರುವಾರ ನಡೆದ ಕ್ರೀಡಾಕೂಟದ ಬಾಲಕರ ವಿಭಾಗದ ಬ್ಯಾಸ್ಕೆಟ್‌ಬಾಲ್ ಮತ್ತು ವಾಲಿಬಾಲ್ ಸ್ಪರ್ಧೆಗಳಲ್ಲಿ ಪ್ರಶಸ್ತಿ ಜಯಿಸಿದರು. ಕಾಲೇಜಿನ ಬಾಲಕಿಯರೂ ಬ್ಯಾಸ್ಕೆಟ್‌ಬಾಲ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ನಗರದ 15 ಕಾಲೇಜುಗಳಿಂದ 450ಕ್ಕೂ ಅಧಿಕ ಅಥ್ಲೀಟ್‌ಗಳು ಪಾಲ್ಗೊಂಡಿದ್ದರು.

ಫಲಿತಾಂಶಗಳು: ಬಾಲಕರ ಥ್ರೋಬಾಲ್‌ನಲ್ಲಿ ಸಂತ ಜೋಸೆಫ್ ಕಾಲೇಜಿಗೆ ಪ್ರಶಸ್ತಿ, ಫ್ರಾನ್ಸಿಸ್ ಕಾಲೇಜು ರನ್ನರ್ಸ್‌ಅಪ್. ಬಾಲಕಿಯರ ಥ್ರೋಬಾಲ್‌ನಲ್ಲಿ ಬಸವನಗುಡಿಯ ಬಿ.ಎಂ.ಎಸ್. ಪಿಯು ಕಾಲೇಜಿಗೆ ಪ್ರಶಸ್ತಿ, ಫ್ರಾನ್ಸಿಸ್ ಕಾಲೇಜು ತಂಡ ರನ್ನರ್ಸ್‌ಅಪ್. ಬ್ಯಾಸ್ಕೆಟ್‌ಬಾಲ್ ಬಾಲಕರ ವಿಭಾಗದಲ್ಲಿ ಸಂತ ಕ್ಲಾರೆಟ್ ಕಾಲೇಜಿಗೆ ಪ್ರಶಸ್ತಿ, ಸಂತ ಜೋಸೆಫ್ ಕಾಲೇಜು ರನ್ನರ್ಸ್ ಅಪ್. ಬಾಲಕಿಯರ ವಿಭಾಗದ ಬ್ಯಾಸ್ಕೆಟ್‌ಬಾಲ್‌ನಲ್ಲಿ ಸಂತ ಕ್ಲಾರೆಟ್ ಕಾಲೇಜು ಚಾಂಪಿಯನ್; ಸಂತ ಫ್ರಾನ್ಸಿಸ್ ಕಾಲೇಜು ರನ್ನರ್ಸ್‌ಅಪ್. ಬಾಲಕರ ವಿಭಾಗದ ವಾಲಿಬಾಲ್ ಸ್ಪರ್ಧೆಯಲ್ಲಿ ಜಾಲಹಳ್ಳಿಯ ಸಂತ ಕ್ಲಾರೆಟ್ ಕಾಲೇಜಿಗೆ ಪ್ರಶಸ್ತಿ; ಸಂತ ಜೋಸೆಫ್ ಕಾಲೇಜು ರನ್ನರ್ಸ್‌ಅಪ್.

ಬಾಲಕಿಯರ ಥ್ರೋಬಾಲ್‌ನಲ್ಲಿ ಪ್ರಶಸ್ತಿ ಗೆದ್ದ ಬಸವನಗುಡಿಯ ಬಿ.ಎಂ.ಎಸ್. ಪಿಯು ಕಾಲೇಜು ತಂಡಕ್ಕೆ ಫ್ರಾನ್ಸಿಸ್ ಕಾಲೇಜಿನ ಉಪ ನಿರ್ದೇಶಕ ಪೀಟರ್ ಅವರು ಪ್ರಶಸ್ತಿ ವಿತರಿಸಿದರು.

ಪಾಂಡೆ ಬಳಗಕ್ಕೆ ರೈಲ್ವೇಸ್ ದಿಟ್ಟ ಉತ್ತರ

ರಣಜಿ ಟ್ರೋಫಿ: ಗೌತಮ್ ಆಲ್‌ರೌಂಡ್ ಆಟ; ಯುವರಾಜ್‌ಗೆ 5 ವಿಕೆಟ್

ಪ್ರಜಾವಾಣಿ ವಾರ್ತೆ

ಚೆನ್ನೈ: ಆರಂಭಿಕ ಆಟಗಾರರ ಶತಕದ ಜೊತೆಯಾಟ ಮತ್ತು ಮಧ್ಯಮ ಕ್ರಮಾಂಕದ ಅರಿಂದಂ ಘೋಷ್ ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ರೈಲ್ವೇಸ್ ತಂಡ ಕರ್ನಾಟಕಕ್ಕೆ ತಿರುಗೇಟು ನೀಡುವ ಹಾದಿಯಲ್ಲಿದೆ.

ಇಲ್ಲಿನ ಗುರುನಾನಕ್ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ರಣಜಿ ಟೂರ್ನಿಯ ಎಲೀಟ್ 'ಸಿ' ಗುಂಪಿನ ಪಂದ್ಯದಲ್ಲಿ ಕರ್ನಾಟಕದ ಮೊದಲ ಇನಿಂಗ್ಸ್ ಮೊತ್ತವಾದ 481 ರನ್‌ಗಳಿಗೆ ಉತ್ತರಿಸಿರುವ ರೈಲ್ವೇಸ್ ಎರಡನೇ ದಿನದಾಟದ ಮುಕ್ತಾಯಕ್ಕೆ 3 ವಿಕೆಟ್‌ಗಳಿಗೆ 213 ರನ್ ಗಳಿಸಿದೆ. 268 ರನ್‌ಗಳ ಹಿನ್ನಡೆಯಲ್ಲಿದೆ.

ಮೂವರು ವೇಗಿಗಳು ಮತ್ತು ಇಬ್ಬರು ಸ್ಪಿನ್ನರ್‌ಗಳನ್ನು ಬಳಸಿಕೊಂಡ ಕರ್ನಾಟಕದ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿದ ರೈಲ್ವೆ ಬ್ಯಾಟರ್‌ಗಳು ದಿಟ್ಟವಾಗಿ ಬ್ಯಾಟ್ ಬೀಸಿ ರನ್ ಕಲೆ ಹಾಕಿದರು.

ಕೆ. ಗೌತಮ್

ಮೃಣಾಲ್ ದೇವಧರ್ (56; 78 ಎಸೆತ, 10 ಬೌಂಡರಿ) ಮತ್ತು ವಿವೇಕ್ ಸಿಂಗ್ (59; 174 ಎ, 10 ಬೌಂ) ಮೊದಲ ವಿಕೆಟ್‌ಗೆ 110 ರನ್ ಸೇರಿಸಿದರು. ನಾಲ್ಕನೇ ಕ್ರಮಾಂಕದ ಅರಿಂದಂ ಘೋಷ್ (78; 108 ಎ, 12 ಬೌಂ, 1 ಸಿಕ್ಸರ್) ಅರ್ಧಶತಕ ಗಳಿಸಿ ಕ್ರೀಸ್‌ನಲ್ಲಿದ್ದಾರೆ.

ಆರಂಭದ ಬ್ಯಾಟರ್‌ಗಳು 28ನೇ ಓವರ್‌ಗಳ ವರೆಗೆ ಕ್ರೀಸ್‌ನಲ್ಲಿ ಉಳಿದು ಕರ್ನಾಟಕದ ಬೌಲರ್‌ಗಳನ್ನು ಕಾಡಿದರು. ವಿಕೆಟ್ ಕೀಪರ್ ಸಿದ್ಧಾರ್ಥ್ ಮೂಲಕ ಮೃಣಾಲ್ ಅವರ ವಿಕೆಟ್ ಉರುಳಿಸಿದ ಗೌತಮ್ ತಂಡಕ್ಕೆ ಮೊದಲ ಯಶಸ್ಸು ಗಳಿಸಿಕೊಟ್ಟರು. ಒಂದು ಸಿಕ್ಸರ್‌ನೊಂದಿಗೆ ಎಂಟು ಎಸೆತಗಳಲ್ಲಿ ಎಂಟು ರನ್ ಗಳಿಸಿದ ಶಿವಂ ಚೌಧರಿ 30ನೇ ಓವರ್‌ನಲ್ಲಿ ವಾಪಸ್ ಮರಳಿದರು. ಈ ವಿಕೆಟ್ ಕೂಡ ಗೌತಮ್ ಪಾಲಾಯಿತು. ನಂತರ ವಿವೇಕ್ ಸಿಂಗ್ ಜೊತೆಗೂಡಿದ ಅರಿಂದಂ ಘೋಷ್ ಅವರು ಅಮೋಘ ಆಟವಾಡಿದರು. ಇಬ್ಬರೂ 80 ರನ್‌ಗಳನ್ನು ಸೇರಿಸಿದರು. ಶಾಂತಚಿತ್ತರಾಗಿ ದಾಳಿ ಎದುರಿಸಿದ ವಿವೇಕ್ 174 ಎಸೆತಗಳಲ್ಲಿ 59 ರನ್ ಗಳಿಸಿದರು. ಅರಿಂದಂ ಸ್ವಲ್ಪ ವೇಗವಾಗಿಯೇ ರನ್ ಕಲೆಹಾಕಲು ಮುಂದಾದರು. 60ನೇ ಓವರ್‌ನಲ್ಲಿ ವಿವೇಕ್ ಸಿಂಗ್ ಅವರನ್ನು ವಾಪಸ್ ಕಳುಹಿಸಿದ ಗೌತಮ್ ಮೂರೂ ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು.

ಬ್ಯಾಟಿಂಗ್‌ನಲ್ಲೂ ಗೌತಮ್ ಮಿಂಚು

ಗುರುವಾರ ಭರ್ಜರಿ ಬ್ಯಾಟಿಂಗ್ ಮೂಲಕ 392 ರನ್ ಗಳಿಸಿದ್ದ ಕರ್ನಾಟಕ ತಂಡವನ್ನು ಶುಕ್ರವಾರ ರೈಲ್ವೇಸ್ ಬೌಲರ್‌ಗಳು ಪೆಟ್ಟು ನೀಡಿದರು. ಐದು ವಿಕೆಟ್ ಉರುಳಿಸಿದ ಮಧ್ಯಮ ವೇಗಿ ಯುವರಾಜ್ ಸಿಂಗ್ ದಾಳಿಗೆ ಮನೀಷ್ ಪಾಂಡೆ ಬಳಗದ ಮಧ್ಯಮ ಕ್ರಮಾಂಕ ಮತ್ತು ಬಾಲಂಗೋಚಿಗಳು ನಡುಗಿದರು.

ಕೃಷ್ಣಪ್ಪ ಗೌತಮ್ ಒಬ್ಬರೇ ದಿಟ್ಟ ಬ್ಯಾಟಿಂಗ್ ಮಾಡಿದರು. 32 ಎಸೆತಗಳಲ್ಲಿ ತಲಾ 4 ಸಿಕ್ಸರ್ ಮತ್ತು ಬೌಂಡರಿ ಸಿಡಿಸಿದ ಅವರು 52 ರನ್ ಗಳಿಸಿ ತಂಡ ಉತ್ತಮ ಮೊತ್ತ ಸೇರಿಸಲು ನೆರವಾದರು.

ಸಕೀಬುಲ್ ದಾಖಲೆ; ಸರ್ಫರಾಜ್ ದ್ವಿಶತಕ

ಬಿಹಾರದ ಯುವ ಬ್ಯಾಟರ್ ಸಕೀಬುಲ್ ಘನಿ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಪದಾರ್ಪಣೆ ಪಂದ್ಯದಲ್ಲೇ ತ್ರಿಶತಕ ಗಳಿಸಿದ ಮೊದಲ ಆಟಗಾರ ಎನಿಸಿಕೊಂಡರು. ಮಿಜೋರಾಂ ಎದುರಿನ ಪಂದ್ಯದಲ್ಲಿ 22 ವರ್ಷದ ಘನಿ 405 ಎಸೆತಗಳಲ್ಲಿ 341 ರನ್ ಗಳಿಸಿದರು. ಅವರ ಇನಿಂಗ್ಸ್‌ನಲ್ಲಿ 56 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳಿದ್ದವು.

ಪ್ಲೇಟ್ ಗುಂಪಿನ ಪಂದ್ಯದಲ್ಲಿ 5 ವಿಕೆಟ್‌ಗಳಿಗೆ 686 ರನ್ ಗಳಿಸಿ ಬಿಹಾರ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಬಾಬುಲ್ ಕುಮಾರ್ ಜೊತೆ 538 ರನ್‌ಗಳ ಬೃಹತ್ ಜೊತೆಯಾಟದಲ್ಲೂ ಘನಿ ಪಾಲುದಾರರಾದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 500ಕ್ಕೂ ಹೆಚ್ಚು ರನ್‌ಗಳ ಜೊತೆಯಾಟ ಮೂಡಿಬಂದಿರುವುದು ಇದು ಐದನೇ ಬಾರಿ.

ಪದಾರ್ಪಣೆ ಪಂದ್ಯದಲ್ಲಿ ಗರಿಷ್ಠ ರನ್ ಗಳಿಸಿದ ದಾಖಲೆ ಈ ವರೆಗೆ ಮಧ್ಯಪ್ರದೇಶದ ಅಜಯ್ ರೊಹೇರಾ ಅವರ ಹೆಸರಿನಲ್ಲಿತ್ತು. 2018ರಲ್ಲಿ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಅವರು 267 ರನ್ ಗಳಿಸಿದ್ದರು.
ಸರ್ಫರಾಜ್ ಖಾನ್ ದ್ವಿಶತಕ: ಯುವ ಆಟಗಾರ ಸರ್ಫರಾಜ್ ಖಾನ್ ಅವರ 275 ರನ್ ಬಲದಿಂದ ಮುಂಬೈ ತಂಡದ ಏಳು ವಿಕೆಟ್‌ಗಳಿಗೆ 544 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಎಲೀಟ್ ವಿಭಾಗದ ಡಿ ಗುಂಪಿನ ಪಂದ್ಯದಲ್ಲಿ ಸೌರಾಷ್ಟ್ರ ವಿರುದ್ಧ ಸರ್ಫರಾಜ್ 401 ಎಸೆತ ಎದುರಿಸಿದರು.

ಸ್ಕೋರ್ ಕಾರ್ಡ್

ಕರ್ನಾಟಕ, ಮೊದಲ ಇನಿಂಗ್ಸ್ 481 (109.3 ಓವರ್) (ಗುರುವಾರ 90 ಓವರ್‌ಗಳಲ್ಲಿ 5ಕ್ಕೆ 392)
ಸಿದ್ಧಾರ್ಥ್ ಸಿ ಚೌಧರಿ ಬಿ ಯುವರಾಜ್ 146 (250 ಎ, 4x18, 6x2), ಶ್ರೇಯಸ್ ಸಿ ಯಾದವ್ ಬಿ ಅಮಿತ್ 19 (50 ಎ, 4x3), ಗೌತಮ್ ಸಿ ಯಾದವ್ ಬಿ ಯುವರಾಜ್ 52 (32 ಎ, 4x4, 6x4), ವೈಶಾಖ್ ಸಿ ಯಾದವ್ ಬಿ ಯುವರಾಜ್ 0 (5 ಎ), ವಿದ್ಯಾಧರ್ ಸಿ ಯಾದವ್ ಬಿ ಯುವರಾಜ್ 4 (11 ಎ, 4x1), ರೋನಿತ್ ಔಟಾಗದೆ 8 (7 ಎ, 4x2)
ಇತರೆ (ಲೆಗ್‌ಬೈ 5, ನೋಬಾಲ್ 1, ವೈಡ್ 1) 7
ವಿಕೆಟ್ ಪತನ: 6-409 (ಕೆ.ವಿ.ಸಿದ್ಧಾರ್ಥ್, 99.2), 7-417 (ಶ್ರೇಯಸ್ ಗೋಪಾಲ್, 100.3), 8-424 (ವೈಶಾಖ್ ವಿಜಯಕುಮಾರ್, 101.5), 9-438 (ವಿದ್ಯಾಧರ ಪಾಟೀಲ, 105.2), 10-481 (ಗೌತಮ್, 109.3)
ಬೌಲಿಂಗ್: ಅಮಿತ್ ಮಿಶ್ರಾ 27-6-97-1, ಹಿಮಾಂಶು ಸಾಂಗ್ವಾನ್ 21-0-7-0, ಯುವರಾಜ್ ಸಿಂಗ್ 27.3-6-93-5, ಅವಿನಾಶ್ ಯಾದವ್ 27.5-2-156-1, ಕರ್ಣ ಶರ್ಮಾ 14-1-75-0, ಶಿವಂ ಚೌಧರಿ 6.5-1-22-2, ಮೊಹಮ್ಮದ್ ಸೈಫ್ 4.1-0-26-0

ರೈಲ್ವೇಸ್, ಮೊದಲ ಇನಿಂಗ್ಸ್ 3ಕ್ಕೆ 213 (65 ಓವರ್)
ಮೃಣಾಲ್ ಸಿ ಶರತ್ ಬಿ ಗೌತಮ್ 56 (78 4x10), ವಿಕೇಕ್ ಸಿ ಶರತ್ ಬಿ ಗೌತಮ್ 59 (174 ಎ, 4x10), ಶಿವಂ ಸಿ ಪಡಿಕ್ಕಲ್ ಬಿ ಗೌತಮ್ 8 (8 ಎ, 6x1), ಅರಿಂದಂ ಬ್ಯಾಟಿಂಗ್ 78 (108 ಎ, 4x12, 6x1), ಸೈಫ್ ಬ್ಯಾಟಿಂಗ್ 8 (23 ಎ, 4x1)
ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 1) 4
ವಿಕೆಟ್ ಪತನ: 1-110 (ಮೃಣಾಲ್ ದೇವಧರ್, 27.4), 2-118 (ಶಿವಂ ಚೌಧರಿ, 29.6), 3-198 (ವಿವೇಕ್ ಸಿಂಗ್, 59.1)
ಬೌಲಿಂಗ್: ವೈಶಾಖ್ ವಿಜಯಕುಮಾರ್ 12-2-43-0, ವಿದ್ಯಾಧರ್ ಪಾಟೀಲ್ 8-1-30-0, ಕೃಷ್ಣಪ್ಪ ಗೌತಮ್ 22-5-71-3, ರೋನಿತ್ ಮೋರೆ 13-4-42-0, ಶ್ರೇಯಸ್ ಗೋಪಾಲ್ 10-1-25-0

ಚಾಂದಿನಿಗೆ ಶಿನ್ ಬೊ ಎದುರಾಳಿ

ನವದೆಹಲಿ (ಪಿಟಿಐ): ಭಾರತದ ವೃತ್ತಿಪರ ಬಾಕ್ಸರ್ ಚಾಂದಿನಿ ಮೆಹ್ರಾ ಅವರು ಇದೇ ಶನಿವಾರ ಗಾಂಗ್ವಾನ್ ಡೊ ನಗರದಲ್ಲಿ ನಡೆಯಲಿರುವ ಫೆದರ್ ವೇಟ್ ವಿಭಾಗದ ಸ್ಪರ್ಧೆಯಲ್ಲಿ ಕೊರಿಯಾದ ಶಿನ್ ಬೊ ಮಿ ರೆ ಅವರನ್ನು ಎದುರಿಸುವರು. 2018ರಲ್ಲಿ ಕಣಕ್ಕೆ ಇಳಿದ 21 ವರ್ಷದ ಬಾಕ್ಸರ್‌ನ 11ನೇ ವೃತ್ತಿಪರ ಬೌಟ್ ಇದಾಗಿದ್ದು ಈ ಹಿಂದಿನ 10 ಬೌಟ್‌ಗಳಲ್ಲಿ 8ರಲ್ಲಿ ಜಯಿಸಿದ್ದಾರೆ. ಶನಿವಾರದ ಬೌಟ್‌ನಲ್ಲಿ ಪಾಲ್ಗೊಳ್ಳುವುದಕ್ಕಾಗಿ ಭಾರಿ ಮೊತ್ತ ನೀಡಲು ಆಯೋಜಕರು ಮುಂದಾಗಿದ್ದಾರೆ.

ಓಮೈಕ್ರಾನ್ ಉಪ ರೂಪಾಂತರಿ ವೈರಾಣು ಬಿಎ.2 ಅಪಾಯಕಾರಿ– ಅಧ್ಯಯನದ ವರದಿ

ಟೋಕಿಯೊ (ಪಿಟಿಐ): ಬಿಎ.2 ಓಮೈಕ್ರಾನ್ ಉಪ ರೂಪಾಂತರಿ ವೈರಾಣು ತೀವ್ರಗತಿಯಲ್ಲಿ ಹರಡುವುದಲ್ಲದೆ, ಗಂಭೀರ ಕಾಯಿಲೆಯನ್ನೂ ಉಂಟು ಮಾಡುವ ಸಾಮರ್ಥ್ಯ ಹೊಂದಿದೆ ಎಂದು ಅಧ್ಯಯನವೊಂದರ ವರದಿ ಹೇಳಿದೆ.

ಈ ವೈರಾಣು ಹಿಂದಿನ ಕೊರೊನಾ ವೈರಸ್‌ನಂತೆಯೇ ಶ್ವಾಸಕೋಶಕ್ಕೆ ತೀವ್ರ ಹಾನಿ ಮಾಡಿ, ಗಂಭೀರ ಆರೋಗ್ಯ ಸಮಸ್ಯೆ ತರಲಿದೆ ಎಂದು ಬಯೋರಕ್ಸಿವ್ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿರುವ ಅಧ್ಯಯನ ವರದಿ ಹೇಳಿದೆ. ಆದರೆ ಬಿಎ.1 ವೈರಾಣುಕ್ಕಿಂತಲೂ ಹೆಚ್ಚು ಪ್ರಸರಣ ವೇಗ ಹೊಂದಿರುವ ಇದು ಹೆಚ್ಚು ಅಪಾಯಕಾರಿಯಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಗುರುವಾರ ಹೇಳಿದೆ.

ಕೋವಿಡ್–19 ಗೆ ನೀಡುವ ಚಿಕಿತ್ಸೆಯನ್ನೇ ಈ ಉಪ ರೂಪಾಂತರಿಗೂ ನೀಡಬಹುದಾಗಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಬಿಎ.1 ನಂತೆಯೇ ಬಿಎ.2 ರೂಪಾಂತರಿ ಕೋವಿಡ್ ಲಸಿಕೆಯ ರೋಗ ನಿರೋಧಕ ಶಕ್ತಿಯನ್ನು ವಿಫಲಗೊಳಿಸುತ್ತವೆ ಎಂದು ಜಪಾನಿನ ಟೋಕಿಯೊ ವಿಶ್ವವಿದ್ಯಾಲಯದ ಸಂಶೋಧಕರು ಶೋಧಿಸಿದ್ದಾರೆ.

ಕಳೆದ ವರ್ಷ ನವೆಂಬರ್‌ನಲ್ಲಿ ಆಫ್ರಿಕಾದ ಬೋಟ್ಸ್ವಾನದಲ್ಲಿ ಮೊದಲ ಬಾರಿಗೆ ಓಮೈಕ್ರಾನ್ ವೈರಾಣು ಪತ್ತೆಯಾಯಿತು.

ಹಾಂಗ್‌ಕಾಂಗ್: ಕೋವಿಡ್ ಪ್ರಕರಣಗಳು ಹೆಚ್ಚಳ

ಹಾಂಗ್‌ಕಾಂಗ್ (ರಾಯಿಟರ್ಸ್): ನಗರದಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಳದ ಹಿನ್ನೆಲೆ ಮಾರ್ಚ್‌ನಲ್ಲಿ ನಡೆಯ ಬೇಕಿದ್ದ ಚೀಫ್ ಎಕ್ಸಿಕ್ಯುಟಿವ್ ಆಯ್ಕೆ ಚುನಾವಣೆಯನ್ನುಮೇ ತಿಂಗಳಿಗೆ ಮುಂದೂಡಲಾಗಿದೆ ಎಂದು ನಗರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕ್ಯಾರಿ ಲ್ಯಾಮ್ ಶುಕ್ರವಾರ ಹೇಳಿದ್ದಾರೆ.

ಚುನಾವಣೆಯ ನಾಮನಿರ್ದೇಶನ ಅವಧಿಯು ಏಪ್ರಿಲ್ 3-16 ರವರೆಗೆ ನಡೆಯಲಿದೆ. ಇದರಿಂದ ಚುನಾವಣೆಯು ಮೇ 8 ರವರೆಗೂ ತಡವಾಗಲಿದೆ ಎಂದು ಅವರು ಸುದ್ದಿಗಾರರಿಗೆ ಹೇಳಿದರು.

'ಬೀಜಿಂಗ್ ಸರ್ಕಾರದ ಒಪ್ಪಿಗೆಯ ಮೇರೆಗೆ ತುರ್ತು ಅಧಿಕಾರವನ್ನು ಉಪಯೋಗಿಸಿ ಚುನಾವಣೆಯನ್ನು ಮುಂದೂಡಲಾಗಿದೆ. ಇದರಿಂದ ಸಾರ್ವಜನಿಕ ಆರೋಗ್ಯ ಬಿಕ್ಕಟ್ಟನ್ನು ನಾವು ಎದುರಿಸಲು ಸಾಧ್ಯವಾಗುತ್ತದೆ ಎಂದು ಆಶಿಸುತ್ತೇನೆ. ಒಂದು ವೇಳೆ ಆರೋಗ್ಯ ಬಿಕ್ಕಟ್ಟು ಮತ್ತೆ ಬಿಗಡಾಯಿಸಿದರೆ ಚುನಾವಣೆಯನ್ನು ಮತ್ತೊಮ್ಮೆ ಮುಂದೂಡುವ ಸಾಧ್ಯತೆ ಇದೆ' ಎಂದು ಅವರು ಸುದ್ದಿಗಾರರಿಗೆ ಹೇಳಿದರು. ಹಾಂಗ್‌ಕಾಂಗ್‌ನಲ್ಲಿ ಸೋಂಕು ಹೆಚ್ಚಳದಿಂದ ಕ್ವಾರಂಟೈನ್ ಸೌಲಭ್ಯಗಳನ್ನೆಲ್ಲಾ ಬಳಸಿಕೊಳ್ಳಲಾಗುತ್ತಿದೆ.

ಬ್ರಿಟನ್‌ನಲ್ಲಿ ಡೆಲ್ಟಾಕ್ರಾನ್ ತಳಿ ಪತ್ತೆ

ಲಂಡನ್: ಕೊರೊನಾ ವೈರಸ್‌ನ ಡೆಲ್ಟಾ ಹಾಗೂ ಓಮೈಕ್ರಾನ್ ತಳಿಗಳ ಗುಣಲಕ್ಷಣಗಳನ್ನು ಹೊಂದಿರುವ ಹೈಬ್ರಿಡ್ ತಳಿ 'ಡೆಲ್ಟಾಕ್ರಾನ್' ಸೋಂಕಿನ ಪ್ರಕರಣಗಳು ಬ್ರಿಟನ್‌ನಲ್ಲಿ ವರದಿಯಾಗಿದೆ. ಇದು 'ಕಳವಳಕಾರಿ ತಳಿ' ಎಂದು ವಿಶ್ವದ ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ.
'ಪರೀಕ್ಷೆಗೆ ಒಳಪಡಿಸಿದ ಮಾದರಿಗಳಲ್ಲಿ ರೂಪಾಂತರಿ ಹೈಬ್ರಿಡ್ ತಳಿ ಡೆಲ್ಟಾಕ್ರಾನ್ ಸೋಂಕು ಇರುವುದು ಪತ್ತೆಯಾಗಿದೆ. ಈ ಸೋಂಕು ಪ್ರಸರಣದ ಬಗ್ಗೆ ಕಣ್ಗಾವಲಿರಿಸಲಾಗಿದೆ' ಎಂದು ಬ್ರಿಟನ್‌ನ ಆರೋಗ್ಯ ಸಂಸ್ಥೆ (ಯುಕೆಎಚ್‌ಎಸ್‌ಎ) ಹೇಳಿಕೆಯನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ. ಆದರೆ, ಡೆಲ್ಟಾಕ್ರಾನ್ ತಳಿ ಸೋಂಕಿನ ತೀವ್ರತೆ ಎಷ್ಟು, ಸೋಂಕಿತ ವ್ಯಕ್ತಿಯಲ್ಲಿ ಕಂಡುಬರುವ ಲಕ್ಷಣಗಳ ಬಗ್ಗೆ ಸಂಸ್ಥೆಯು ಹೆಚ್ಚಿನ ವಿವರಗಳನ್ನು ನೀಡಿಲ್ಲ.

ಸನ್‌ರೈಸರ್ಸ್‌ಗೆ ಕ್ಯಾಟಿಚ್ ರಾಜೀನಾಮೆ

ಸೈಮನ್ ಕ್ಯಾಟಿಚ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವ ತಂಡ ಸನ್‌ರೈಸರ್ಸ್ ಹೈದರಾಬಾದ್‌ನ ಸಹಾಯಕ ಕೋಚ್ ಸೈಮನ್ ಕ್ಯಾಟಿಚ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈಚೆಗೆ ನಡೆದ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಕೆಲವು ಅಟಗಾರರ ಖರೀದಿಗೆ ಸಂಬಂಧಿಸಿ ಅಸಮಾಧಾನ ವ್ಯಕ್ತಪಡಿಸಿ ಅವರು ಈ ತೀರ್ಮಾನ ಕೈಗೊಂಡಿದ್ದಾರೆ ಎಂದು ಹೇಳಲಾಗಿದೆ. ಕಾವ್ಯ ಮಾರನ್ ಮುಖ್ಯಸ್ಥರಾಗಿರುವ ಸನ್‌ರೈಸರ್ಸ್ ಫ್ರಾಂಚೈಸ್ ಈ ವರೆಗೆ ಕ್ಯಾಟಿಚ್ ಅವರ ರಾಜೀನಾಮೆ ಕುರಿತು ಅಧಿಕೃತ ಪ್ರಕಟಣೆ ನೀಡಲಿಲ್ಲ. ಆದರೆ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದ್ದು ಸೈಮನ್ ಹೆಲ್ಮಾಟ್ ಅವರನ್ನು ಆ ಸ್ಥಾನಕ್ಕೆ ನೇಮಕ ಮಾಡಲಾಗಿದೆ ಎನ್ನಲಾಗಿದೆ. ಹೆಲ್ಮಾಟ್ ಈ ಹಿಂದೆ ಸನ್‌ರೈಸರ್ಸ್ ಫ್ರಾಂಚೈಸ್ ಜೊತೆ ಇದ್ದರು.

ಬಿಎಫ್‌ಸಿ ಕನಸಿಗೆ ತಣ್ಣೀರು ಸುರಿದ ಎನ್‌ಇಯು

ಫಟೋರ್ಡಾ: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ನಾಕೌಟ್ ಹಂತ ಪ್ರವೇಶಿಸುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡದ ಕನಸು ಭಗ್ನಗೊಂಡಿತು.

ಶುಕ್ರವಾರ, ಗೆಲ್ಲಲೇಬೇಕಾದ ಪಂದ್ಯದಲ್ಲಿ ತಂಡ ನಾರ್ತ್ ಈಸ್ಟ್ ಯುನೈಟೆಡ್ ಎದುರು 1-2ರಲ್ಲಿ ಸೋತಿತು. 66ನೇ ನಿಮಿಷದಲ್ಲಿ ಕ್ಲೀಟನ್ ಸಿಲ್ವಾ ಗಳಿಸಿದ ಗೋಲಿನೊಂದಿಗೆ ಬಿಎಫ್‌ಸಿ ಪಾಳಯದಲ್ಲಿ ಭರವಸೆ ಮೂಡಿತು. ಆದರೆ 74ನೇ ನಿಮಿಷ ಬ್ರೌನ್ ಮತ್ತು 80ನೇ ನಿಮಿಷ ದನ್ಮಾವಿಯ ಗಳಿಸಿದ ಗೋಲು ನಾರ್ತ್‌ಈಸ್ಟ್‌ಗೆ ಜಯ ತಂದಿತು.

ಸಂದರ್ಶನ ಅಂಕ 25 ಕ್ಕೆ ಇಳಿಕೆ

ಒಂದನೇ ಪುಟದಿಂದ..

ಯುಪಿಎಸ್‌ಸಿ ಮಾದರಿಯಲ್ಲಿ ಕೆಪಿಎಸ್‌ಸಿಯಲ್ಲಿ ಸುಧಾರಣೆಗಳನ್ನು ತರಲು ರಾಜ್ಯ ಸರ್ಕಾರ ನೇಮಿಸಿದ್ದ ಪಿ.ಸಿ.ಹೋಟಾ ಸಮಿತಿಯು ತನ್ನ ವರದಿಯಲ್ಲಿ ಹಲವು ಶಿಫಾರಸುಗಳನ್ನು ಮಾಡಿತ್ತು. ಆ ಶಿಫಾರಸ್ಸಿನ ಅನ್ವಯ ಮುಖ್ಯ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಅಂಕಗಳನ್ನು ಕಡಿಮೆ ಮಾಡಲಾಗಿದೆ.

ಸಂದರ್ಶನಕ್ಕೆ ಮಾರ್ಗಸೂಚಿಯನ್ನು ರೂಪಿಸಲೂ ಸೂಚಿಸಲಾಗಿತ್ತು.

ಮಂಡನೆಯಾಗಿರುವ ಮಸೂದೆಯಲ್ಲಿ ಏನಿದೆ?

- 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ಆಯ್ಕೆಯು ಕಾನೂನಿನ ಅನುಸಾರ ಸಿಂಧುವಾಗಿರಬೇಕು.
- 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ ಪ್ರಕ್ರಿಯೆಯನ್ನು ಹಿಂಪಡೆದು ರಾಜ್ಯ ಸರ್ಕಾರವು 2013ರ ಅಕ್ಟೋಬರ್ 15 ಹಾಗೂ 2014ರ ಆಗಸ್ಟ್ 14ರಂದು ಹೊರಡಿಸಿರುವ ಎಲ್ಲ ಆದೇಶಗಳು ರದ್ದುಗೊಳ್ಳಲಿವೆ.
- ನೇಮಕಾತಿ ಆದೇಶಗಳನ್ನು ಹೊರಡಿಸಲು ರಾಜ್ಯ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು.
- ಎಲ್ಲ ನೇಮಕಾತಿಗಳು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ 18ನೇ ನಿಯಮದ ಉಪಬಂಧಗಳ ವ್ಯಾಪ್ತಿಗೊಳಗೆ ಇರಬೇಕು. 362 ಅಧಿಕಾರಿಗಳ ಜೇಷ್ಠತೆಯು ಸೇವೆಗೆ ವರದಿ ಮಾಡಿಕೊಂಡ ದಿನದಿಂದ ಜಾರಿಗೆ ಬರಲಿದೆ. ಅವರು ಯಾವುದೇ ಸಮಯದಲ್ಲಿ ಪೂರ್ವಾನ್ವಯವಾಗಿ ಜೇಷ್ಠತೆಗೆ ಅರ್ಹರಾಗಿರುವುದಿಲ್ಲ. ಜೇಷ್ಠತೆಯನ್ನು ಪೂರ್ವಾನ್ವಯವಾಗಿ ನೀಡುವಂತೆ ಹಕ್ಕು ಸ್ಥಾಪಿಸುವಂತಿಲ್ಲ.
- ನೇಮಕಾತಿಯ ಪುನರಾವಲೋಕನಕ್ಕಾಗಿ ಯಾವುದೇ ನ್ಯಾಯಾಲಯ ಅಥವಾ ನ್ಯಾಯಮಂಡಳಿ ಅಥವಾ ಪ್ರಾಧಿಕಾರದಲ್ಲಿ ದಾವೆ ಅಥವಾ ಇತರ ವ್ಯವಹಾರಗಳನ್ನು ನಡೆಸುವಂತಿಲ್ಲ.
- ಈ ಮಸೂದೆಯ ಉಪಬಂಧಗಳಿಗೆ ವಿರುದ್ಧವಾದ ಯಾವುದೇ ಪ್ರಕರಣಗಳನ್ನು ಪುನರ್ ಪರಿಶೀಲಿಸಲು ನಿರ್ದೇಶಿಸುವ ಯಾವುದೇ ಆದೇಶವನ್ನು ನ್ಯಾಯಾಲಯಗಳು ಜಾರಿಗೊಳಿಸುವಂತಿಲ್ಲ.

'ಕುಖ್ಯಾತ ಮಾರುಕಟ್ಟೆ'ಗಳ ಪಟ್ಟಿಯಲ್ಲಿ ಇಂಡಿಯಾಮಾರ್ಟ್ ಡಾಟ್ ಕಾಂ ಹೆಸರು

ವಾಷಿಂಗ್ಟನ್: ಅಮೆರಿಕ ಟ್ರೇಡ್ ರೆಪ್ರೆಸೆಂಟೇಟಿವ್ (ಯುಎಸ್‌ಟಿಆರ್) ಸಂಸ್ಥೆ ಬಿಡುಗಡೆ ಮಾಡಿರುವ ವಿಶ್ವದ 'ಕುಖ್ಯಾತ ಮಾರುಕಟ್ಟೆ'ಗಳ ವಾರ್ಷಿಕ ಪಟ್ಟಿಯಲ್ಲಿ, ಜನಪ್ರಿಯ ಇ-ಕಾಮರ್ಸ್ ಉದ್ಯಮ ಇಂಡಿಯಾಮಾರ್ಟ್ ಡಾಟ್ ಕಾಮ್ ಸೇರಿದಂತೆ ಭಾರತದ ಐದು ಮಾರುಕಟ್ಟೆಗಳನ್ನು ಹೆಸರಿಸಲಾಗಿದೆ.

ನವದೆಹಲಿಯ ಪ್ರಸಿದ್ಧ ಪಾಲಿಕಾ ಬಜಾರ್, ಟ್ಯಾಂಕ್ ರೋಡ್, ಮುಂಬೈನ ಹೀರಾ ಪನ್ನಾ, ಕೋಲ್ಕತ್ತದ ಕಿಡ್ಡರಪುರ ಮಾರುಕಟ್ಟೆಗಳನ್ನು ಸಹ ಈ ಪಟ್ಟಿಯಲ್ಲಿ ಹೆಸರಿಸಲಾಗಿದೆ.

ನಕಲಿ ಟ್ರೇಡ್‌ಮಾರ್ಕ್ ಸೃಷ್ಟಿ ಅಥವಾ ಹಕ್ಕುಸ್ವಾಮ್ಯಚೌರ್ಯದಲ್ಲಿ ತೊಡಗಿರುವ ಮಾರುಕಟ್ಟೆಗಳ ಪಟ್ಟಿಯನ್ನು ಯುಎಸ್‌ಟಿಆರ್ ಪ್ರತಿ ವರ್ಷ ಬಿಡುಗಡೆ ಮಾಡುತ್ತದೆ.

2021ರ 'ಕುಖ್ಯಾತ ಮಾರುಕಟ್ಟೆಗಳ ಪಟ್ಟಿ'ಯನ್ನು ಗುರುವಾರ ಬಿಡುಗಡೆ ಮಾಡಲಾಗಿದೆ.ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವ ಯುಎಸ್‌ಟಿಆರ್, ಉದ್ಯಮ– ವ್ಯಾಪಾರಕ್ಕೆ ಸಂಬಂಧಿಸಿ ಅಮೆರಿಕದ ನೀತಿಯ ಅಭಿವೃದ್ಧಿ ಹಾಗೂ ಪ್ರಚಾರದ ಹೊಣೆ ಹೊತ್ತಿದೆ.

ಪಾಲಿಕಾ ಬಜಾರ್ ಖಂಡನೆ

ನವದೆಹಲಿ (ಪಿಟಿಐ): ಅಮೆರಿಕ ಟ್ರೇಡ್ ರೆಪ್ರೆಸೆಂಟೇಟಿವ್ (ಯುಎಸ್‌ಟಿಆರ್) ಬಿಡುಗಡೆ ಮಾಡಿರುವ 'ಕುಖ್ಯಾತ ಮಾರುಕಟ್ಟೆ'ಗಳ ಪಟ್ಟಿಯಲ್ಲಿ 'ಪಾಲಿಕಾ ಬಜಾರ್' ಹೆಸರು ಉಲ್ಲೇಖಿಸಿರುವುದಕ್ಕೆ ಸ್ಥಳೀಯ ವ್ಯಾಪಾರಿಗಳ ಸಂಘಟನೆ ಆಕ್ಷೇಪ ವ್ಯಕ್ತಪಡಿಸಿದೆ.

ಪಟ್ಟಿಯಲ್ಲಿ ಭಾರತದ ಹೆಸರಾಂತ ಇ–ಕಾಮರ್ಸ್ ವೆಬ್‌ಸೈಟ್ ಇಂಡಿಯಾಮಾರ್ಟ್ ಡಾಟ್ ಕಾಂ, ದೆಹಲಿಯ ಹೆಸರಾಂತ ಪಾಲಿಕಾ ಬಜಾರ್ ಸೇರಿ ಐದು ಮಾರುಕಟ್ಟೆಗಳ ಹೆಸರಿದೆ.

'ಪಾಲಿಕಾ ಬಜಾರ್ ಹೆಸರು ಸೇರಿರುವುದು ನಮಗೆ ದಿಗ್ಭ್ರಮೆ ಮೂಡಿಸಿದೆ. ಪಟ್ಟಿ ಪ್ರಕಾರ, ಪಾಲಿಕಾ ಬಜಾರ್‌ನಲ್ಲಿ ಮೊಬೈಲ್ ಬಿಡಿಭಾಗಗಳು, ಪ್ರಸಾದನ ಪರಿಕರಗಳು, ವಾಚ್‌ಗಳು ಸೇರಿದಂತೆ ನಕಲಿ ಉತ್ಪನ್ನಗಳು ಮಾರಾಟವಾಗಲಿವೆ. ಈ ಆರೋಪವನ್ನು ನಾವು ಖಂಡಿಸುತ್ತೇವೆ' ಎಂದು ಪಾಲಿಕಾ ಬಜಾರ್ ಅಸೋಸಿಯೇಷನ್ ಅಧ್ಯಕ್ಷ ದರ್ಶನ್ ಲಾಲ್ ಕಕ್ಕರ್ ಅವರು ಪ್ರತಿಕ್ರಿಯಿಸಿದ್ದಾರೆ.

ಎಲ್ಗಾರ್ ಪ್ರಕರಣ: ಆರೋಪಿಗಳಿಗೆ ಜಾಮೀನು ನಿರಾಕರಣೆ

ಮುಂಬೈ (ಪಿಟಿಐ): ಎಲ್ಗಾರ್ ಪರಿಷತ್ ಪ್ರಕರಣದ ಮೂವರು ಆರೋಪಿಗಳಿಗೆ ಇಲ್ಲಿನ ವಿಶೇಷ ನ್ಯಾಯಾಲಯವು ಜಾಮೀನು ನಿರಾಕರಿಸಿದೆ.

ಕಬೀರ್ ಕಲಾ ಮಂಚ್‌ಗೆ ಸೇರಿದ ಮೂವರು ಆರೋಪಿಗಳಾದ ಸಾಗರ್ ಗೋರ್ಖೆ, ರಮೇಶ್ ಗೈಚೋರ್ ಮತ್ತು ಜ್ಯೋತಿ ಜಗತಾಪ್ ಅವರಿಗೆ ವಿಶೇಷ ಎನ್‌ಐಎ ನ್ಯಾಯಾಲಯದ ನ್ಯಾಯಾಧೀಶ ಡಿ.ಇ. ಕೊತಾಲಿಕರ್ ಸೋಮವಾರ ಜಾಮೀನು ನಿರಾಕರಿಸಿದರು. ವಿವರವಾದ ಆದೇಶ ಗುರುವಾರ ಹೊರಬಿದ್ದಿದೆ.

ಈ ಮೂವರು ನಿಷೇಧಿತ ಸಂಘಟನೆ ಸಿಪಿಐನ (ಮಾವೋವಾದಿ) ಇತರ ಸದಸ್ಯರೊಡಗೂಡಿ ದೇಶದಲ್ಲಿ ಅಶಾಂತಿ ಸೃಷ್ಟಿಸಲು ಮತ್ತು ಮೋದಿ ಸರ್ಕಾರ ಉರುಳಿಸಲು ಗಂಭೀರ ಸಂಚು ರೂಪಿಸಿರುವುದನ್ನು ಸ್ಥಳದಲ್ಲಿ ದೊರೆತ ದಾಖಲೆಯಲ್ಲಿರುವ ವಿಷಯವು ಸೂಚಿಸುತ್ತದೆ ಎಂದು ನ್ಯಾಯಾಲಯ ಹೇಳಿದೆ.

'ಉಕ್ರೇನ್ ಗಡಿಯಿಂದ ಸೇನೆ ಹಿಂದಕ್ಕೆ'

ಮಾಸ್ಕೊ (ಎಎಫ್‌ಪಿ): ಉಕ್ರೇನ್‌ಗೆ ಹೊಂದಿದ ಗಡಿಯಲ್ಲಿ ತಾಲೀಮು ಮುಕ್ತಾಯಗೊಂಡಿರುವ ಪ್ರದೇಶಗಳಿಂದ ಯುದ್ಧಟ್ಯಾಂಕ್, ಶಸ್ತ್ರಾಸ್ತ್ರ ಹೊತ್ತ ವಾಹನಗಳನ್ನು ಹಿಂದಕ್ಕೆ ಕರೆಸಿಕೊಳ್ಳಲಾಗುತ್ತಿದೆ ಎಂದು ರಷ್ಯಾ ಶುಕ್ರವಾರ ಹೇಳಿದೆ.

ಉಕ್ರೇನ್ ಗಡಿಯಲ್ಲಿ ಯೋಧರ ಜಮಾವಣೆ ಮಾಡಿದ ರಷ್ಯಾದ ನಡೆಯಿಂದ ಉಭಯ ದೇಶಗಳ ನಡುವೆ ಯುದ್ಧದ ಆತಂಕ ಸೃಷ್ಟಿಯಾಗಿತ್ತು. ಗಡಿಯಲ್ಲಿನ ಉದ್ವಿಗ್ನ ಸ್ಥಿತಿ ಕುರಿತು ಪಾಶ್ಚಿಮಾತ್ಯ ರಾಷ್ಟ್ರಗಳು ಕಳವಳ ವ್ಯಕ್ತಪಡಿಸುತ್ತಿರುವ ನಡುವೆಯೇ, ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುತ್ತಿರುವ ಕುರಿತು ರಷ್ಯಾದಿಂದ ಮತ್ತೊಮ್ಮೆ ಇಂಥ ಹೇಳಿಕೆ ಹೊರಬಿದ್ದಿದೆ.

ಸೇನೆಯ ಪಶ್ಚಿಮ ಘಟಕದ ಯೋಧರು, ಯುದ್ಧಸಾಮಗ್ರಿಗಳನ್ನು ಹೊತ್ತ ವಾಹನಗಳು ತಮ್ಮ ಮೂಲ ನೆಲೆಗೆ ಮರಳಿವೆ. ಕ್ರಿಮಿಯಾ ದ್ವೀಪಕಲ್ಪದಲ್ಲಿ ನಿಯೋಜಿಸಲಾಗಿದ್ದ 10 ಎಸ್‌ಯು–24 ಯುದ್ಧ ವಿಮಾನಗಳನ್ನು ಸಹ ಇತರ ಕಡೆಗಳಲ್ಲಿನ ವಾಯುನೆಲೆಗಳಿಗೆ ಮರುನಿಯೋಜನೆ ಮಾಡಲಾಗುತ್ತಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಪ್ರಕಟಣೆ ತಿಳಿಸಿದೆ.

ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿ

ಫೈನಲ್‌ಗೆ ಸಾಕೇತ್–ರಾಮ್ ಜೋಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಸಾಕೇತ್ ಮೈನೇನಿ ಮತ್ತು ರಾಮ್‌ಕುಮಾರ್ ರಾಮನಾಥನ್ ಜೋಡಿ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿ–2ರ ಡಬಲ್ಸ್ ವಿಭಾಗದ ಪ್ರಶಸ್ತಿ ಸುತ್ತು ಪ್ರವೇಶಿಸಿತು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್‌ನಲ್ಲಿ ಸಾಕೇತ್–ರಾಮ್‌ಕುಮಾರ್ ಜೋಡಿ ಶುಕ್ರವಾರ ಫ್ರಾನ್ಸ್‌ನ ಎನ್ಜೊ ಕಾಕಾರ್ಡ್ ಮತ್ತು ಆಸ್ಟ್ರೇಲಿಯಾದ ಆ್ಯಂಡ್ರ್ಯೂ ಹ್ಯಾರಿಸ್ ಜೋಡಿಯನ್ನು 6–1, 7–6 (3)ರಲ್ಲಿ ಮಣಿಸಿತು. ಫೈನಲ್‌ನಲ್ಲಿ ಅವರಿಗೆ ಭಾರತದ ಅರ್ಜುನ್ ಖಾಡೆ ಮತ್ತು ಆಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್ ಎದುರಾಳಿಗಳು.

ಅಗ್ರ ಶ್ರೇಯಾಂಕದ ಅರ್ಜುನ್ ಮತ್ತು ಎರ್ಲರ್ ಜೋಡಿ ಭಾರತದವರೇ ಆದ ಶ್ರೀರಾಮ್ ಬಾಲಾಜಿ ಮತ್ತು ವಿಷ್ಣುವರ್ಧನ್ ವಿರುದ್ಧ 6-4, 4-6, 10-3ರಲ್ಲಿ ಜಯ ಗಳಿಸಿದರು.

ವುಕಿಚ್–ಬೋರ್ನಾ ಗೋಜೊ ನಾಲ್ಕರ ಘಟ್ಟಕ್ಕೆ: ಸಿಂಗಲ್ಸ್ ವಿಭಾಗದಲ್ಲಿ ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್ ಮತ್ತು ಕ್ರೊವೇಷ್ಯಾದ ಬೋರ್ನಾ ಗೋಜೊ ಸೆಮಿಫೈನಲ್ ಪ್ರವೇಶಿಸಿದರು. ಫ್ರಾನ್ಸ್‌ನ ಎನ್ಜೊ ಕಾಕಾರ್ಡ್ ಹಾಗೂ ಬಲ್ಗೇರಿಯಾದ ದಿಮಿತರ್ ಕುಜ್ಮನೊವ್ ಕೂಡ ನಾಲ್ಕರ ಘಟ್ಟಕ್ಕೆ ಲಗ್ಗೆ ಇರಿಸಿದರು.

ತಮ್ಮದೇ ದೇಶದ ಮ್ಯಾಕ್ಸ್ ಪರ್ಸೆಲ್ ಎದುರಿನ ಪಂದ್ಯದಲ್ಲಿ ಅಲೆಕ್ಸಾಂಡರ್ ವುಕಿಚ್ 6-4, 2-6, 6-4ರಲ್ಲಿ ಜಯ ಸಾಧಿಸಿದರು. ಕಳೆದ ವಾರ ನಡೆದ ಮೊದಲನೇ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದ್ದ ಬೋರ್ನಾ ಗೋಜೊ ಸ್ವಿಟ್ಜರ್ಲೆಂಡ್‌ನ ಆ್ಯಂಟೊನಿ ಬೆಲಿಯರ್ ಎದುರು 6-4, 7-6 (3)ರಲ್ಲಿ ಗೆಲುವು ಸಾಧಿಸಿದರು. ಮೂರನೇ ಶ್ರೇಯಾಂಕದ ಎನ್ಜೊ ಸ್ವಿಟ್ಜರ್ಲೆಂಡ್‌ನ ಜೊಹಾನ್ ನಿಕಲ್ಸ್ ಎದುರು 6-1, 6-2ರಲ್ಲಿ ಜಯ ಗಳಿಸಿದರೆ ಕುಜ್ಮನೊವ್ 6-4, 6-2ರಲ್ಲಿ ಗೆದ್ದರು.

ಭಾರತದ ರಾಮ್‌ಕುಮಾರ್ ರಾಮನಾಥನ್ (ಎಡ) ಮತ್ತು ಸಾಕೇತ್ ಮೈನೇನಿ ಆಟದ ವೈಖರಿ– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಫಲಿತಾಂಶಗಳು: ಸಿಂಗಲ್ಸ್ ಕ್ವಾರ್ಟರ್ ಫೈನಲ್: ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್‌ಗೆ ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಎದುರು 6-4, 2-6, 6-4ರಲ್ಲಿ ಜಯ; ಬಲ್ಗೇರಿಯಾದ ದಿಮಿತರ್ ಕುಜ್ಮನೊವ್‌ಗೆ ಫ್ರಾನ್ಸ್‌ನ ಮಥಿಯಾಸ್ ಬಾರ್ಗ್ ವಿರುದ್ಧ 6-4, 6-2ರಲ್ಲಿ ಜಯ; ಫ್ರಾನ್ಸ್‌ನ ಎನ್ಜೊ ಕಾಕಾರ್ಡ್‌ಗೆ ಸ್ವಿಟ್ಜರ್ಲೆಂಡ್‌ನ ಜೊಹಾನ್ ನಿಕಲ್ಸ್ ಎದುರು 6-1, 6-2ರಲ್ಲಿ ಗೆಲುವು; ಕ್ರೊವೇಷ್ಯಾದ ಬೋರ್ನಾ ಗೋಜೊಗೆ ಸ್ವಿಟ್ಜರ್ಲೆಂಡ್‌ನ ಆ್ಯಂಟಾಯ್ನ್ ಬೆಲಿಯರ್ ಎದುರು 6-4, 7-6 (3)ರಲ್ಲಿ ಗೆಲುವು.

ಡಬಲ್ಸ್: ಆಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್–ಭಾರತದ ಅರ್ಜುನ್ ಖಾಡೆಗೆ ಶ್ರೀರಾಮ್ ಬಾಲಾಜಿ–ವಿಷ್ಣುವರ್ಧನ್ ವಿರುದ್ಧ 6-4, 4-6, 10-3ರಲ್ಲಿ ಜಯ; ಭಾರತದ ಸಾಕೇತ್ ಮೈನೇನಿ–ರಾಮ್‌ಕುಮಾರ್ ರಾಮನಾಥನ್‌ಗೆ ಫ್ರಾನ್ಸ್‌ನ ಎನ್ಜೊ ಕಾಕಾರ್ಡ್–ಆಸ್ಟ್ರೇಲಿಯದ ಆ್ಯಂಡ್ರ್ಯೂ ಹ್ಯಾರಿಸ್ ವಿರುದ್ಧ 6-1, 7-6 (3)ರಲ್ಲಿ ಜಯ.

ಬೆಂಗಳೂರು ರೇಸ್

ಬ್ಲ್ಯಾಕ್ ಕಾಫಿ ಗೆಲ್ಲುವ ನಿರೀಕ್ಷೆ

ಕಿಟ್ಟಿ ಬ್ಯಾಂಕ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಬ್ಲ್ಯಾಕ್ ಕಾಫಿ ಈ ರೇಸ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅನ್ ಈಲ್ಡಿಂಗ್ 5, ಟ್ವಿಂಕಲ್ ಫೀಟ್ 6, ಒಂಬುಡ್ಸ್‌ಮ್ಯಾನ್ 3
2ನೇ ರೇಸ್: ಗೋಲ್ಡನ್ ಮೆಮರಿ 7, ಲಿವಿಸಿಲ್ಲಾ 3, ಐಕಾನಿಕ್ ಪ್ರಿನ್ಸೆಸ್ 10
3ನೇ ರೇಸ್: ಫಾರ್ಚುನೇಟಸ್ 2, ಸ್ಲೇಪ್ನೀರ್ 3, ಟ್ರಿಯಾಫಂಟ್ 4
4ನೇ ರೇಸ್: ಬ್ಲ್ಯಾಕ್ ಕಾಫಿ 3, ಗ್ರೀನ್ ಚಾನೆಲ್ 1, ಪೆಲುಷೆ 2
5ನೇ ರೇಸ್: ಅನಲೆಕ್ಟ್ 4, ಪರ್ಫೆಕ್ಟ್ ಜಸ್ಟೀಸ್ 5, ವಿಂಡ್‌ಸ್ಟಾರ್ಮ್ 6
6ನೇ ರೇಸ್: ಮೆಗೆಲ್ಲನ್ 5, ಅಲ್ಟಿಮೇಟ್ ಸ್ಪೀಡ್ 3, ಬ್ಯೂಟಫುಲ್ ಆಬ್ಲಿವಿಯನ್ 9

ಉತ್ತಮ ಬೆಟ್: ಅನ್ ಈಲ್ಡಿಂಗ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಪೌಷ್ಟಿಕ ಆಹಾರ ಸೇವಿಸಿ

ನಾಕೌಟ್ ಹಂತ ತಲುಪಲು ಭಾರತ ವಿಫಲ

ಷಾ ಆಲಂ, ಮಲೇಷ್ಯಾ (ಪಿಟಿಐ): ಭಾರತದ ಪುರುಷ ಮತ್ತು ಮಹಿಳಾ ತಂಡಗಳು ನಾಕೌಟ್ ಹಂತ ತಲುಪಲು ವಿಫಲವಾಗುವುದರೊಂದಿಗೆ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ದೇಶದ ಅಭಿಯಾನ ಅಂತ್ಯಗೊಂಡಿದೆ.

ಶುಕ್ರವಾರದ ಹಣಾಹಣಿಗಳಲ್ಲಿ ಪುರುಷರ ತಂಡವು 2–3ರಿಂದ ಹಾಲಿ ಚಾಂಪಿಯನ್ ಇಂಡೊನೇಷ್ಯಾ ಎದುರು ಎಡವಿದರೆ, ಮಹಿಳಾ ತಂಡವು 1–4ರಿಂದ ಜಪಾನ್ ಎದುರು ಮುಗ್ಗರಿಸಿತು. ಭಾರತ ಪುರುಷರ ತಂಡದವರು ಗುಂಪು ಹಂತದಲ್ಲಿ ಮೂರನೇ ಸ್ಥಾನದೊಂದಿಗೆ ಅಭಿಯಾನ ಕೊನೆಗೊಳಿಸಿತು.

ಚಳಿಗಾಲದ ಒಲಿಂಪಿಕ್ಸ್: ನಾರ್ವೆಗೆ ದಾಖಲೆ ಚಿನ್ನ

ಜಾಂಗ್‌ಜಿಯಾಕೊ, ಚೀನಾ (ರಾಯಿಟರ್ಸ್): ಜೋಹಾನ್ನಸ್ ಥಿಂಗ್ನೆಸ್ ಬೋ, ಬಯಾಥ್ಲಾನ್‌ನ 15 ಕಿ.ಮೀ. ಮಾಸ್ ಸ್ಟಾರ್ಟ್ ವಿಭಾಗದಲ್ಲಿ ಶುಕ್ರವಾರ ಅಗ್ರಸ್ಥಾನ ಗಳಿಸುವ ಮೂಲಕ ಬೀಜಿಂಗ್ ಕ್ರೀಡಾಕೂಟದಲ್ಲಿ ನಾರ್ವೆಗೆ 15ನೇ ಚಿನ್ನದ ಪದಕ ಗೆದ್ದುಕೊಟ್ಟರು. ಇದರೊಂದಿಗೆ ಆ ದೇಶವು ಚಳಿಗಾಲದ ಒಲಿಂಪಿಕ್ ಕೂಟವೊಂದರಲ್ಲಿ ಅತಿ ಹೆಚ್ಚು ಚಿನ್ನ ಗೆದ್ದ ದಾಖಲೆ ಬರೆಯಿತು.

ಇನ್ನೂ ಎರಡು ಕ್ರಾಸ್‌ಕಂಟ್ರಿ ಸ್ಕೀಯಿಂಗ್ ರೇಸ್‌ಗಳು ಉಳಿದಿರುವಂತೆಯೇ ನಾರ್ವೆ ದೇಶದವರು ಬಯಾಥ್ಲಾನ್, ಸ್ಕಿ ಜಂಪಿಂಗ್, ನಾರ್ಡಿಕ್ ಕಂಬೈನ್ಡ್, ಸ್ಪೀಡ್ ಸ್ಕೇಟಿಂಗ್, ಕ್ರಾಸ್ ಕಂಟ್ರಿ ಮತ್ತು ಫ್ರೀಸ್ಟೈಲ್ ಸ್ಕೀಯಿಂಗ್‌ಗಳಲ್ಲಿ ಪದಕಗಳ ಬೇಟೆಯಾಡಿದ್ದಾರೆ.

2018ರ ಪೆಂಗ್‌ಚಾಂಗ್ ಕ್ರೀಡಾಕೂಟದಲ್ಲಿ ಜರ್ಮನಿ ಮತ್ತು ನಾರ್ವೆ ತಂಡಗಳು ತಲಾ 14 ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದವು. 2010ರಲ್ಲಿ ವ್ಯಾಂಕೊವರ್‌ನಲ್ಲಿ ಕೆನಡಾ ಕೂಡ ಇಷ್ಟೇ ಚಿನ್ನದ ಪದಕ ತನ್ನದಾಗಿಸಿಕೊಂಡಿತ್ತು.

ಫುಟ್‌ಬಾಲ್: ಕೋಲ್ಕತ್ತದಲ್ಲಿ ಏಷ್ಯಾಕಪ್ ಅರ್ಹತಾ ಪಂದ್ಯಗಳು

ನವದೆಹಲಿ (ಪಿಟಿಐ): 2023ರ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಗಾಗಿ ಭಾರತ ಆಡುವ ಮೂರನೇ ಸುತ್ತಿನ ಅರ್ಹತಾ ಪಂದ್ಯಗಳು ಈ ವರ್ಷದ ಜೂನ್‌ನಲ್ಲಿ ಕೋಲ್ಕತ್ತದಲ್ಲಿ ನಡೆಯಲಿವೆ.

ಏಷ್ಯಾಕಪ್ ಟೂರ್ನಿಯ ಮೂರನೇ ಸುತ್ತಿನ ಅರ್ಹತಾ ಪಂದ್ಯಗಳು ಆರು ತಾಣಗಳಲ್ಲಿ ನಿಗದಿಯಾಗಿದ್ದು, ಭಾರತ ತಂಡವನ್ನು ಒಳಗೊಂಡಿರುವ ಗುಂಪು ಹಂತದ ಪಂದ್ಯಗಳು ಜೂನ್ 8, 11 ಮತ್ತು 14ರಂದು ಕೋಲ್ಕತ್ತದ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ನಡೆಯಲಿವೆ.

ಇತರ ಐದು ಗುಂಪಿನ ಪಂದ್ಯಗಳು ಕುವೈತ್, ಕಿರ್ಗಿಸ್ ಗಣರಾಜ್ಯ, ಮಲೇಷ್ಯಾ, ಮಂಗೋಲಿಯಾ ಮತ್ತು ಉಜ್ಬೆಕಿಸ್ತಾನದಲ್ಲಿ ನಡೆಯಲಿವೆ. ಆರು ಗುಂಪುಗಳ ವಿಜೇತರು ಮತ್ತು ಎರಡನೇ ಸ್ಥಾನ ಪಡೆದ ಅತ್ಯುತ್ತಮ ಐದು ತಂಡಗಳು ಮುಂದಿನ ವರ್ಷ ಜೂನ್ 16ರಂದು ಚೀನಾದಲ್ಲಿ ನಡೆಯಲಿರುವ ಏಷ್ಯಾಕಪ್‌ಗೆ ಟಿಕೆಟ್ ಗಳಿಸಲಿವೆ.

'ಅರ್ಹತಾ ಪಂದ್ಯಗಳನ್ನು ಆಡಲು ನಮ್ಮ ತಂಡವು ಉತ್ಸುಕವಾಗಿದೆ. ಆ ವೇಳೆಗೆ ಕ್ರೀಡಾಂಗಣಕ್ಕೆ ಪ್ರೇಕ್ಷಕರು ಬರಲಿ ಎಂದು ಆಶಿಸುತ್ತೇನೆ. ನಮ್ಮ ಗೆಲುವಿಗೆ ಅವರು ಹುರಿದುಂಬಿಸಬೇಕು' ಎಂದು ಭಾರತ ಫುಟ್‌ಬಾಲ್ ತಂಡದ ಕೋಚ್ ಇಗರ್ ಸ್ಟಿಮ್ಯಾಚ್ ಹೇಳಿದ್ದಾರೆ.